# ಕನ್ನಡ

# ಯುವಭಾರತಿ

## ಹನ್ನೊಂದನೆಯ ಇಯತ್ತೆ



# ಭಾರತದ ಸಂವಿಧಾನ

## ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

ಸರಕಾರ ನಿರ್ಣಯ ಕ್ರಮಾಂಕ: ಅಭ್ಯಾಸ-2116 (ಪ್ರ. ಕ್ರ. 43/16) ಎಸ್.ಡಿ-4 ದಿನಾಂಕ: 25.4.2016 ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯ ದಿನಾಂಕ 20.6.2019 ರಂದು ನಡೆದ ಸಭೆಯಲ್ಲಿ ಈ ಪಠ್ಯಪುಸ್ತಕವನ್ನು ಇ.ಸ. 2019-20 ಈ ಶೈಕ್ಷಣಿಕ ವರ್ಷದಿಂದ ನಿರ್ಧರಿಸಲು ಮಾನ್ಯತೆ ನೀಡಲಾಗಿದೆ.

# ಕನ್ನಡ
# ಪ್ರಥಮ ಭಾಷೆ
# ಯುವಭಾರತಿ
## ಹನ್ನೊಂದನೆಯ ಇಯತ್ತೆ

**ಮಹಾರಾಷ್ಟ್ರ ರಾಜ್ಯ, ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.**

Q5B6M3

ತಮ್ಮ ಸ್ಮಾರ್ಟಫೋನದ ಮೇಲೆ DIKSHA App ಮೂಲಕ ಪಠ್ಯಪುಸ್ತಕದ ಈ ಪುಟದ ಮೇಲಿನ Q.R. Code ಡಿಜಿಟಲ ಪಠ್ಯಪುಸ್ತಕದ ಮೂಲಕ ಆ ಪಾಠಕ್ಕೆ ಸಂಬಂಧಿಸಿದಂತೆ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

**ಪ್ರಥಮಾವೃತ್ತಿ : 2019**
**ಪುನರ್ಮುದ್ರಣ : 2022**

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 4.

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

| | | |
|---|---|---|
| **ಕನ್ನಡ ಭಾಷಾ ಸಮಿತಿ** | : | ಡಾ. ಬಿ. ಬಿ. ಪೂಜಾರಿ, ಅಧ್ಯಕ್ಷ |
| | | ಡಾ. ಕೆ. ರಘುನಾಥ, ಸದಸ್ಯ |
| | | ಶ್ರೀ. ಎನ್. ಎಂ. ಕುಲಕರ್ಣಿ, ಸದಸ್ಯ |
| | | ಶ್ರೀ. ಬಿ. ಎಸ್. ಕಾಪಸೆ, ಸದಸ್ಯ |
| | | ಶ್ರೀ. ಸಂಗೊಂಡಾ ಚ. ಮಾಳಿ, ಸದಸ್ಯ |
| | | ಡಾ. ಸದಾನಂದ ಎಂ. ಬಿಳ್ಳೂರ, ಸದಸ್ಯ - ಸಚಿವ |
| **ಕನ್ನಡ ಅಭ್ಯಾಸಗಟ ಸದಸ್ಯರು** | : | ಶ್ರೀ. ಚಂದ್ರಶೇಖರಯ್ಯ ಜಂ. ಬನ್ನಿಮಠ |
| | | ಶ್ರೀಮತಿ. ಶೈಲಜಾ ಜಿ. ದೇಶಪಾಂಡೆ |
| **ಸಂಯೋಜನ ಪ್ರಮುಖರು** | : | ಡಾ. ಸದಾನಂದ ಎಂ. ಬಿಳ್ಳೂರ, ವಿಶೇಷಾಧಿಕಾರಿ |
| | | ಶ್ರೀ. ಆರ್. ಎಮ್. ಗಣಾಚಾರಿ, ಸಹಾಯಕ ವಿಶೇಷಾಧಿಕಾರಿ |
| **ಮುಖಪುಟ** | : | ಶ್ರೀ. ವಿವೇಕಾನಂದ ಶಿವಶಂಕರ ಪಾಟೀಲ |
| **ಅಕ್ಷರ ಜೋಡಣೆ** | : | ಪಿ. ಸಿ. ಗ್ರಾಫಿಕ್ಸ್, ಮುಂಬಯಿ |
| **ನಿರ್ಮಿತಿ** | : | ಶ್ರೀ. ಸಚ್ಚಿತಾನಂದ ಆಫಳೆ, ಮುಖ್ಯ ನಿರ್ಮಿತಿ ಅಧಿಕಾರಿ |
| | | ಶ್ರೀ. ರಾಜೇಂದ್ರ ಚಿಂದರಕರ, ನಿರ್ಮಿತಿ ಅಧಿಕಾರಿ |
| | | ಶ್ರೀ. ರಾಜೇಂದ್ರ ಪಾಂಡಲೋಸಕರ, ಸಹಾಯಕ ನಿರ್ಮಿತಿ ಅಧಿಕಾರಿ |
| **ಕಾಗದ** | : | 70 ಜಿ.ಎಸ್.ಎಮ್. ಕ್ರೀಮ್‌ವೋವ್ಹ್ |
| **ಮುದ್ರಾಣಾದೇಶ** | : | |
| **ಮುದ್ರಕ** | : | |
| **ಪ್ರಕಾಶಕ** | : | **ಶ್ರೀ ವಿವೇಕ ಉತ್ತಮ ಗೋಸಾವಿ,** ನಿಯಂತ್ರಕ |
| | | ಪಾಠ್ಯಪುಸ್ತಕ ನಿರ್ಮಿತಿ ಮಂಡಳ, ಪ್ರಭಾದೇವಿ, ಮುಂಬಯಿ - 25. |

# ಭಾರತದ ಸಂವಿಧಾನ

## ಪೀಠಿಕೆ

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು

ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪ್ರಸ್ತಾವನೆ

ಪ್ರಿಯ ವಿದ್ಯಾರ್ಥಿಗಳೆ,

ಹನ್ನೊಂದನೆಯ ಇಯತ್ತೆಯ ವರ್ಗದಲ್ಲಿ ನಿಮಗೆಲ್ಲರಿಗೂ ಪುನಃಪೂರ್ವಕ ಸ್ವಾಗತ.ಹನ್ನೊಂದನೆಯ ಇಯತ್ತೆಯ ಕನ್ನಡ ಯುವಕಭಾರತಿ ಈ ಪಠ್ಯಪುಸ್ತಕವನ್ನು ತಮ್ಮ ಕೈಯಲ್ಲಿಡಲು ನಮಗೆ ವಿಶೇಷ ಆನಂದವಾಗುತ್ತದೆ. ಹೊಸ ಅಭ್ಯಾಸಕ್ರಮದಂತೆ ವಿದ್ಯಾರ್ಥಿಗಳ ವಯೋಮಾನ ಹಾಗೂ ಆಕಲನದ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ತಯಾರಿಸಲಾಗಿದೆ.

ಗದ್ಯ-ಪದ್ಯಗಳನ್ನು ಆಯ್ಕೆ ಮಾಡುವಾಗ ವಿದ್ಯಾರ್ಥಿಗಳ ಭಾವನೆ, ಕಲ್ಪನೆ, ಜೀವನದೃಷ್ಟಿ ಮತ್ತು ವಿಚಾರಶಕ್ತಿಗಳು ಬೆಳೆಯಬೇಕೆಂಬ ಉದ್ದೇಶವನ್ನು ಲಕ್ಷ್ಯದಲ್ಲಿಟ್ಟುಕೊಂಡು ಪಠ್ಯಪುಸ್ತಕವನ್ನು ತಯಾರಿಸಲಾಗಿದೆ. ವಿದ್ಯಾರ್ಥಿಗಳಲ್ಲಿ ಸಾಹಿತ್ಯದ ಬಗ್ಗೆ ಒಲವು ಮೂಡಬೇಕು, ಸಾಮಾಜಿಕ ಪ್ರಜ್ಞೆ ಬೆಳೆದು ಪ್ರಜ್ಞಾವಂತ ನಾಗರಿಕರಾಗಿ ರೂಪುಗೊಳ್ಳಬೇಕು ಎಂಬ ಅಪೇಕ್ಷೆ ಇದೆ. ಪ್ರಸ್ತುತ ಪಠ್ಯಪುಸ್ತಕದಲ್ಲಿ ಮಾನವೀಯ ಮೌಲ್ಯಗಳು, ಸಹಬಾಳ್ವೆ, ಸತ್ಯನಿಷ್ಠೆ, ಸಮಕಾಲೀನ ಪ್ರಜ್ಞೆ, ರಾಷ್ಟ್ರೀಯ ಏಕತೆ, ಪರಿಸರ ಸಂರಕ್ಷಣೆ, ವೈಜ್ಞಾನಿಕ ದೃಷ್ಟಿಕೋನ, ದೇಶಭಕ್ತಿ, ಅಂತರರಾಷ್ಟ್ರೀಯ ಜ್ಞಾನ, ಸಮಾಜಸೇವೆ, ಜಾಗತೀಕರಣ ಮುಂತಾದ ಸಂಗತಿಗಳನ್ನು ಸಮಾವೇಶ ಮಾಡಲಾಗಿದೆ. ಅದರ ಜೊತೆಗೆ ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ತಿಳಿಸಿಕೊಡುವಲ್ಲಿ ಈ ಪುಸ್ತಕವು ಸಹಾಯ ಮಾಡುತ್ತದೆ. ಪಠ್ಯಕ್ರಮವನ್ನು ಲಕ್ಷ್ಯದಲ್ಲಿಟ್ಟುಕೊಂಡು ಕೃತಿ, ವ್ಯಾಕರಣ, ಲೇಖನಕೌಶಲ್ಯಗಳನ್ನು ಸಿದ್ಧಪಡಿಸಲಾಗಿದೆ.

ಈ ಪಠ್ಯಪುಸ್ತಕವು ಅತೀ ಹೆಚ್ಚು ನಿರ್ದೋಷವು ಮತ್ತು ಉತ್ತಮ ಗುಣಮಟ್ಟದ್ದು ಆಗಬೇಕೆಂಬ ದೃಷ್ಟಿಕೋನದಿಂದ ಮಹಾರಾಷ್ಟ್ರದ ಎಲ್ಲ ಭಾಗಗಳಲ್ಲಿಯ ಆಯ್ದ ಶಿಕ್ಷಕರ/ತಜ್ಞರ ಕಡೆಯಿಂದ ಸಮೀಕ್ಷಣೆ ಮಾಡಿಸಲಾಗಿದೆ. ಅವರಿಂದ ಬಂದ ಸೂಚನೆ ಹಾಗೂ ಅಭಿಪ್ರಾಯಗಳನ್ನು ಸಮಿತಿಯು ಯೋಗ್ಯ ವಿಚಾರಮಾಡಿ ಈ ಪುಸ್ತಕಕ್ಕೆ ಅಂತಿಮ ಸ್ವರೂಪ ಕೊಟ್ಟಿದೆ. ಮೊದಲನೆಯ ಪುಟದ ಮೇಲೆ ಕ್ಯೂ. ಆರ್. ಕೋಡ್ ಕೊಡಲಾಗಿದೆ. ಕ್ಯೂ.ಆರ್. ರೋಡ್ ಮೂಲಕ ದೊರಕಿಸಿಕೋಡ ಮಾಹಿತಿ ನಿಮಗೆ ಬಹಳ ಇಷ್ಟವಾಗಬಹುದು.

ಕನ್ನಡ ಭಾಷಾ ಸಮಿತಿ ಮತ್ತು ಅಭ್ಯಾಸಗಟ ಸದಸ್ಯರು ಅವರ ವಿಶೇಷ ಪರಿಶ್ರಮದಿಂದ ಈ ಪಠ್ಯಪುಸ್ತಕವು ತಯಾರಾಗಿದೆ. ಮಂಡಳವು ಅವರೆಲ್ಲರಿಗೂ ಮನಃಪೂರ್ವಕ ಆಭಾರಿಯಾಗಿದೆ.

ವಿದ್ಯಾರ್ಥಿ, ಶಿಕ್ಷಕರು ಹಾಗೂ ಪಾಲಕರು ಈ ಪುಸ್ತಕವವನ್ನು ಸ್ವಾಗತಿಸುವರೆಂಬ ಅಪೇಕ್ಷೆ ಇದೆ.

**(ಡಾ. ಸುನಿಲ ಮಗರ)**
ಸಂಚಾಲಕ
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ
ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ-4.

ಪುಣೆ :
ದಿನಾಂಕ: 20 ಜೂನ್ 2019
ಭಾರತೀಯ ಸೌರದಿನಾಂಕ: 30 ಜ್ಯೇಷ್ಠ 1941

# ಕ್ಷಮತಾ ವಿಧಾನಗಳು

## ಕ್ಷಮತೆಗಳು

### ಶ್ರವಣ

- ಶ್ರಾವ್ಯ ಮಾಧ್ಯಮಗಳಲ್ಲಿಯ ಚರ್ಚೆ, ಪರಿಸಂವಾದ, ನಿವೇದನೆ, ಜಾಹೀರಾತು, ವಾರ್ತೆಗಳು, ಸೂತ್ರ ಸಂಚಾಲನೆ ಇತ್ಯಾದಿಗಳಲ್ಲಿಯ ಭಾಷಿಕ ವೈಶಿಷ್ಟ್ಯಗಳನ್ನು ಲಕ್ಷ್ಯದಲ್ಲಿಕೊಂಡು ಅವುಗಳಲ್ಲಿಯ ವಿಚಾರಗಳನ್ನು ತಿಳಿಯುವುದು.
- ಸಾರ್ವಜನಿಕ ಸ್ಥಳಗಳಲ್ಲಿ ನೀಡಲಾಗುವ ಸೂಚನೆಗಳಲ್ಲಿಯ ಶಬ್ದ ಯೋಜನೆಯನ್ನು ತಿಳಿದು ಅದಕ್ಕೆ ಯೋಗ್ಯ ಪ್ರತಿಕ್ರಿಯೆ ನೀಡುವುದು.
- ಔಪಚಾರಿಕ ಮತ್ತು ಅನೌಪಚಾರಿಕ ಸ್ಥಳಗಳಲ್ಲಿ ನಡೆಯುವ ವ್ಯಾಖ್ಯಾನಗಳು, ಸಂವಾದ - ಸಂಭಾಷಣೆಗಳಲ್ಲಿಯ ಸಂದರ್ಭಗಳನ್ನು ಚಿಕಿತ್ಸಕವಾಗಿ ಅರ್ಥೈಸಲು ಬರುವುದು.
- ಭಾಷಿಕ ಕೌಶಲ್ಯಗಳ ವಿಕಾಸಕ್ಕಾಗಿ ವಿವಿಧ ಶ್ರಾವ್ಯ ಮಾಧ್ಯಮಗಳನ್ನು ಮಾಹಿತಿಯ ಮೂಲವೆಂದು ಉಪಯೋಗ ಮಾಡಲು ಬರುವುದು.
- ಅಂತರಜಾಲದ (ಇಂಟರ್ನೆಟ್) ಮೇಲಿಂದ ಲಿಂಕ್ಸ್, ಕ್ಯೂ. ಆರ್. ಕೋಡ, ವ್ಹಿಡಿಯೊ, ಯೂ ಟ್ಯೂಬ ಮತ್ತು ಪ್ರಸಾರ ಮಾಧ್ಯಮಗಳು, ದೃಶ್ಯ - ಶ್ರಾವ್ಯ ಮುಂತಾದ ಮಾಧ್ಯಮಗಳಿಂದ ಅಪೇಕ್ಷಿತ ಮತ್ತು ಅಧ್ಯಯನಪೂರಕ ಸಂದರ್ಭವನ್ನು ವಿಕಸಿತಗೊಳಿಸುವುದು.

### ಭಾಷಣ-ಸಂಭಾಷಣ

- ವಿವಿಧ ಸಾಹಿತ್ಯ ಕೃತಿಗಳ ಮೇಲೆ ಆಧಾರಿತವಾದ ಚರ್ಚೆಯಲ್ಲಿ ಭಾಗವಹಿಸುವಾಗ, ಸಾಧಕ-ಬಾಧಕ, ವಿಚಾರಗಳ ರಚನೆಗಾಗಿ ವಿಷಯಕ್ಕೆ ಅನುರೂಪವಾದ ಭಾಷೆಯನ್ನು ಬಳಸಲು ಬರುವುದು.
- ಸಾಹಿತ್ಯ ಪ್ರಕಾರಗಳ ಸರ್ವಸಾಧಾರಣ ವೈಶಿಷ್ಟ್ಯಗಳನ್ನು ಹೇಳಲು ಬರುವುದು.
- ಸೂತ್ರ ಸಂಚಾಲನೆ - ಈ ಘಟಕವನ್ನು ಸಾದರ ಪಡಿಸಲು ಬರುವುದು.
- ವಿಷಯಕ್ಕೆ ಅನುಸಾರವಾಗಿ ಸ್ವಂತದ ಸ್ವತಂತ್ರ ವಿಚಾರಗಳನ್ನು ಸಂದರ್ಭಸಹಿತ ಮಂಡಿಸಲು ಬರುವುದು.
- ಭಾಷಣ-ಸಂಭಾಷಣ ಕೌಶಲ್ಯದ ವೈಶಿಷ್ಟ್ಯಗಳನ್ನು ಕರಗತ ಮಾಡಿಕೊಂಡು ವ್ಯಕ್ತಿತ್ವ ವಿಕಾಸದ ದೃಷ್ಟಿಯಿಂದ ಅವುಗಳನ್ನು ಆತ್ಮವಿಶ್ವಾಸಪೂರ್ವಕವಾಗಿ ಉಪಯೋಗ ಮಾಡಲು ಬರುವುದು.

### ವಾಚನ

- ನಾಟಕ, ಕಥೆ, ಕಾವ್ಯ ಮತ್ತು ಇತರ ಸಾಹಿತ್ಯ ಕೃತಿಗಳನ್ನು ಓದುವುದು.
- ಸಂಕೇತಸ್ಥಳ (ವೆಬ್‌ಸೈಟ್)ಗಳ ಮೇಲಿನ ಇ-ಬುಕ್ಸ್, ಇ-ನ್ಯೂಜ ಮತ್ತು ಇ-ಸಾಹಿತ್ಯವನ್ನು ಹುಡುಕಿ ವಾಚನ ಮಾಡುವುದು.
- ಸ್ಪರ್ಧಾ ಪರೀಕ್ಷೆಗಳ ದೃಷ್ಟಿಯಿಂದ ಕನ್ನಡ ಭಾಷಾ ವಿಷಯಕ್ಕೆ ಸಂಬಂಧಿಸಿದ ಉಪಯುಕ್ತ ಘಟಕಗಳ ಅಭ್ಯಾಸಪೂರ್ಣ ವಾಚನ ಮಾಡುವುದು.
- ಪಾಠಕ್ಕೆ ಸಂಬಂಧಿಸಿದ ಮೂಲ ಸಾಹಿತ್ಯ ಕೃತಿಯ ಮತ್ತು ಸಂದರ್ಭ ಸಾಹಿತ್ಯದ ವಾಚನ ಮಾಡುವುದು.
- 'ಅಭಿರುಚಿಗಾಗಿ' ಸಾಹಿತ್ಯದ ವಾಚನ ಮಾಡುವುದು.

### ಲೇಖನ

- ಪಾಠದ ಆಶಯ ಮತ್ತು ಆ ಪಾಠದಲ್ಲಿಯ ವಿಚಾರ ಇವುಗಳ ವಿಷಯವಾಗಿ ಸ್ವಂತದ ಅಭಿಪ್ರಾಯವನ್ನು ಸ್ವಂತದ ಭಾಷೆಯಲ್ಲಿ ಸಮರ್ಪಕ ಶಬ್ದಗಳಲ್ಲಿ ಬರೆಯಲು ಬರುವುದು.
- ಪಡೆದ ಅನುಭವ, ಮಾಡಿದ ನಿರೀಕ್ಷಣೆಗಳನ್ನು ಕುರಿತು ಮಾಡಿದ ವಿಚಾರಗಳನ್ನು ಲಿಖಿತ ಸ್ವರೂಪದಲ್ಲಿ ವ್ಯಕ್ತಪಡಿಸಲು ಬರುವುದು.
- ಸ್ವಂತದ ಬ್ಲಾಗ್ ಬರೆಯಲು ಬರುವುದು.
- ಅನುವಾದ ಲೇಖನದ ತಂತ್ರವನ್ನು ಪ್ರಾಪ್ತ ಮಾಡುವುದು.

### ಅಧ್ಯಯನ ಕೌಶಲ್ಯ

- ಸಂದರ್ಭಕ್ಕಾಗಿ ಕೋಶವಾಙ್ಮಯವನ್ನು ಅಭ್ಯಸಿಸಲು ಬರುವುದು.
- ಅನುಭವಿಸಿದ ವಿವಿಧ ಘಟನೆಗಳ ಸಂದರ್ಭದಲ್ಲಿ ವ್ಯಾಪಕ ಅರ್ಥದಲ್ಲಿ ಅಭಿವ್ಯಕ್ತವಾಗಲು ಬರುವುದು.
- ಇಂಟರ್ನೆಟ್ (ಅಂತರಜಾಲ) ಬಳಸಿ ವ್ಯವಹಾರ ಮಾಡಲು ಬರುವುದು.
- ಕಂಪ್ಯೂಟರನಲ್ಲಿ ಲಭ್ಯವಿರುವ ವಿವಿಧ ಶೈಕ್ಷಣಿಕ ಆ್ಯಪ್ಲಿಕೇಶನ್‌ಗಳನ್ನು ಉತ್ತಮ ರೀತಿಯಿಂದ ಕೃತಿಯುಕ್ತವಾಗಿ ಉಪಯೋಗಿಸಲು ಬರುವುದು.
- ಪ್ರಸಾರ ಮಾಧ್ಯಮಗಳ ಮೂಲಕ ಮುಂದೆ ಬರುವ ಘಟಕಗಳ ಕೂಲಂಕಷ ಆಕಲನೆ ಮಾಡಿ ಚಿಕಿತ್ಸಕವಾಗಿ ಮಂಡಿಸಲು ಬರುವುದು.
- ವಿವಿಧ ಸಾಮಾಜಿಕ ಆಡೆತಡೆಗಳ ಆಕಲನೆ ಮಾಡಿ ಅದರ ವಿಷಯವಾಗಿ ಸ್ಪಷ್ಟವಾಗಿ ವಿಚಾರ ಮಂಡಿಸುವುದು.
- ಬಹು ಭಾಷೆಗಳ ಪರಿಚಯ ಮಾಡಿಕೊಳ್ಳುವ ಜಿಜ್ಞಾಸೆ ನಿರ್ಮಾಣವಾಗುವುದು.
- ವಾಙ್ಮಯದ ಉಪಕ್ರಮಗಳ ಮೂಲಕ ಅಭಿರುಚಿ ನಿರ್ಮಾಣವಾಗುವುದು ಮತ್ತು ಸಹಭಾಗಿತ್ವದಿಂದ ವೃದ್ಧಿಂಗತವಾಗುವುದು.
- ತಂತ್ರಜ್ಞಾನ ಮತ್ತು ಇಂಟರ್ನೆಟ್‌ಗಳ ಉಪಯೋಗ ಮಾಡಿಕೊಂಡು ಸ್ವತ: ತನ್ನನ್ನು ಅಭಿವ್ಯಕ್ತಗೊಳಿಸಿ ವಿಕಸಿತ ಮಾಡಲು ಬರುವುದು.

### ಭಾಷಾಭ್ಯಾಸ

- ಭಾಷಾಭ್ಯಾಸ - ರೂಪ ನಿಷ್ಪತ್ತಿ, ಕಾವ್ಯಗುಣ, ವಾಕ್ಯ ಪ್ರಕಾರಗಳು, ಕಾಲದ ಪ್ರಕಾರಗಳು, ಪಡೆನುಡಿಗಳು ಮತ್ತು ಗಾದೆಗಳು.
- ಭಾಷಾ ಸೌಂದರ್ಯ - ಪಾರಿಭಾಷಿಕ ಶಬ್ದಗಳು, ಗುಂಪಿಗೆ ಸೇರದ ಶಬ್ದಗಳು, ಶಬ್ದ ರಚನೆ, ಪದಬಂಧ.

ಈ ಎಲ್ಲ ಕಲ್ಪನೆಗಳ ಆಕಲನೆ ಮಾಡಿ ಸ್ವಂತದ ಭಾಷೆಯಲ್ಲಿ ಅದರ ಅನ್ವಯವನ್ನು ಕೌಶಲ್ಯಪೂರ್ಣ ರೀತಿಯಿಂದ ಮಾಡಲು ಬರುವುದು.

# ಪರಿವಿಡಿ

## ಪದ್ಯ ವಿಭಾಗ


| ಅ.ಕ್ರ. | ಪದ್ಯಗಳು | ಕವಿಗಳು | ಪುಟಸಂಖ್ಯೆ |
|---|---|---|---|
| 1. | ರಂಜನಾ | ಚೆನ್ನವೀರ ಕಣವಿ | 1 |
| 2. | ಜನರು | ಜಿ. ಎಸ್. ಶಿವರುದ್ರಪ್ಪ | 5 |
| 3. | ಪುಸ್ತಕಗಳು | ಸರಜೂ ಕಾಟ್ಕರ | 8 |
| 4. | ಜನಪದ ತ್ರಿಪದಿಗಳು | ಜನಪದರು | 11 |
| 5. | ನಿನ್ನ ಗಳಿಸುವವರಿಲ್ಲ | ಮೊಹಮ್ಮದ ಸಾಹೇಬ ಮುಲ್ಲಾ | 14 |
| 6. | ವಚನಗಳು | ವಚನಕಾರರು | 16 |
| 7. | ಹರಿಶ್ಚಂದ್ರನ ಕನಸು | ರಾಘವಾಂಕ | 19 |


## ಗದ್ಯ ವಿಭಾಗ


| ಅ.ಕ್ರ. | ಪಾಠಗಳು | ಲೇಖಕರು | ಪುಟಸಂಖ್ಯೆ |
|---|---|---|---|
| 1. | ಯಶಸ್ಸು | ರಾ. ಯ. ಧಾರವಾಡಕರ | 23 |
| 2. | ಒಂಟಿ ಹಾಯಿ | ಅನುಪಮಾ ನಿರಂಜನ | 30 |
| 3. | ಕುವೈಟ್ | ಸುನೀತಾ ಎಂ. ಶೆಟ್ಟಿ | 37 |
| 4. | ಮೊದಲ ದೀಪಾವಳಿ ಹೊಸ ಮಾವ | ಎಂ. ಎಸ್. ನರಸಿಂಹ ಮೂರ್ತಿ | 43 |
| 5. | ಕರ್ಮಯೋಗಿ ಅಪ್ಪಾಸಾಹೇಬ ಕಾಡಾದಿ | ಮಧುಮಾಲಾ ಲಿಗಾಡೆ | 49 |
| 6. | ಜೀವಂತ ಮಣ್ಣು | ಟಿ. ಎಸ್. ಚನ್ನೇಶ | 54 |
| 7. | ಒಂದು ಚೀಟಿ | ಭಾಷಾ ಸಮಿತಿ | 59 |
| 8. | ನಗೆಗೀಡಾದುದು | ದುರ್ಗಸಿಂಹ | 72 |


## ಸ್ಥೂಲ ಅಭ್ಯಾಸ


| ಅ.ಕ್ರ. | | ಪುಟಸಂಖ್ಯೆ |
|---|---|---|
| 1. | ಕನ್ನಡ ಸಾಹಿತ್ಯದ ವಿವಿಧ ಮುಖಗಳು | 78 |

# ವ್ಯಾಕರಣ ವಿಭಾಗ


| ಅ.ಕ್ರ. | | ಪುಟಸಂಖ್ಯೆ |
|---|---|---|
| 1. | ಸಂಧಿಗಳು | 93 |
| 2. | ಸಮಾಸಗಳು | 97 |
| 3. | ನುಡಿಗಟ್ಟುಗಳು | 98 |
| 4. | ಗಾದೆಮಾತುಗಳು | 98 |
| 5. | ಕೃದಂತಗಳು | 98 |
| 6. | ತದ್ಧಿಂತಾಂತಗಳು | 99 |
| 7. | ಉಪಸರ್ಗಯುಕ್ತಪದ | 99 |
| 8. | ಛಂದಸ್ಸು | 100 |


# ಲೇಖನ ಕೌಶಲ್ಯ ವಿಭಾಗ


| ಅ.ಕ್ರ. | | ಪುಟಸಂಖ್ಯೆ |
|---|---|---|
| 1. | ಬ್ಲಾಗ್ ಲೇಖನ | 102 |
| | i) ಪತ್ರ ಲೇಖನ | 103 |
| | ii) ಸಾರ ಸಂಗ್ರಹ-ವಿಸ್ತರಣೆ | 105 |
| | iii) ಭಾಷಣ ತಯಾರಿಕೆ | 106 |
| | iv) ವರದಿ ಲೇಖನ | 108 |
| | v) ಸ್ವ-ಪರಿಚಯ ಪತ್ರ | 109 |
| 2. | ನಿಬಂಧ ಲೇಖನ | 109 |
| 3. | ಪ್ರಶ್ನೆ ನಿರ್ಮಿತಿಯ ಕೌಶಲ್ಯ | 110 |
| 4. | ಕಾರ್ಯಕ್ರಮ ನಿರೂಪಣೆ | 111 |
| 5. | ಅನುವಾದ | 112 |

# 1 1. ರಂಜನಾ

- ಚೆನ್ನವೀರ ಕಣವಿ

ಚೆನ್ನವೀರ ಕಣವಿಯವರು ನವ್ಯ, ನವೋದಯ ಕನ್ನಡ ಕಾವ್ಯದ 'ಸಮನ್ವಯ ಕವಿ' ಎಂದು ಪ್ರಸಿದ್ಧರಾಗಿದ್ದಾರೆ. ನಯ, ವಿನಯ, ಸೌಜನ್ಯಗಳಿಗೆ ಹೆಸರಾದ ಕಣವಿಯವರು ಭಾವಜೀವಿ, ಆಕಾಶಬುಟ್ಟಿ, ದೀಪಧಾರಿ, - ನೆಲಮುಗಿಲು, ಎರಡುದಡ, ಜೀವಧ್ವನಿ ಮುಂತಾದ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಜೀವಧ್ವನಿ ಸಂಕಲನಕ್ಕೆ ಕೇಂದ್ರಸಾಹಿತ್ಯ ಅಕಾಡಮಿ ಪ್ರಶಸ್ತಿ ಬಂದಿದೆ. ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯ ನಾಡೋಜ ಪದವಿ ನೀಡಿ ಗೌರವಿಸಿವೆ.

ಪ್ರಸ್ತುತ ಕವಿತೆಯಲ್ಲಿ ಮಗುವಿನ ತುಂಟಾಟಗಳನ್ನು ಮನಮುಟ್ಟುವಂತೆ ಬಣ್ಣಿಸಲಾಗಿದೆ. ಇದನ್ನು 'ಶತಮಾನದ ಕಾವ್ಯ' ಸಂಗ್ರಹದಿಂದ ಆರಿಸಿಕೊಳ್ಳಲಾಗಿದೆ.

---

ಎಲ್ಲಿ ಕುಳಿತರು ಬಂದು ಕಿವಿಗೆ ಝೇಂಕರಿಸುವುದು
ಮನೆ ತುಂಬ ಹರಿದಾಡಿ ಮರಿದುಂಬಿ ಗುಂಜನ:
ಕಣ್ಣು ನೀಲಾಂಜನ, ಕರಗಿಸಿದ ನಕ್ಷತ್ರ
ಮೂಗು ಹಟಮಾರಿತನಕೊಡೆದ ಮೊಗ್ಗು -
ಗೋಣು ಹೊರಳಿಸಿ ಸೋಗು ಮಾಡಿ ಕುಣಿವೀ ನವಿಲು
ಎತ್ತಿಕೊಂಡರೆ ಮುಗಿಲತನಕ ಹಿಗ್ಗು !

ದಿನದಿನದ ಬೆಳಗು ಹೊಂಗಿರಣದ ಕಿರೀಟ-
ನೂರು ಬಣ್ಣದ ಹೂವ ನರುಗಂಪನೊಮ್ಮೆಲೇ ಚಿಮ್ಮಿಸುವ ತೋಟ.
ಇದು ಯಾವ ಹಕ್ಕಿ - ಹಾಡಿನ ಮಧುರ ಸಂಪುಟ?
ಎಲ್ಲ ಸಂತೋಷಕ್ಕೂ ಕನ್ನಡಿಯ ಹಿಡಿಯುವುದು ಈ ಮುಖದ ಮುದ್ದು ಮಾಟ.

ಆನಂದ ಬಂದರಿವಳಾಡಿಸುವನು
ಚಂದ್ರ ಒಂದೇ ಸಮನೆ ಕಾಡಿಸುವನು
ಮೂವರೂ ಕೂಡಿದರೆ ಮೂರು ಲೋಕಕು ದಾಳಿ
ಯಾವ ದೇವರು ಬಂದು ಬಿಡಿಸುವವನು?

ಮೂರು ಸಲ ಒಪ್ಪಂದ, ನೂರು ಸಲ ಯುದ್ಧ
ಅವರಿವರ ಸಂಧಾನ ಮೊದಲೇ ನಿಷಿದ್ಧ !
ಪಡುವಣಕೆ ಸಂದ ರವಿ ಮೂಡಣದಿ ಎದ್ದ
ರಂಗ ಭೂಮಿಗೆ ಮತ್ತೆ ರಥ ಕುದುರೆ ಸಿದ್ಧ.

ರಂಜನಾ
ಇವಳ ದೀರ್ಘಸ್ವರದ ನಡುವೆ ಅವರಿಬ್ಬರೂ ಬರಿ ವ್ಯಂಜನ,
ಸೆಡವು ಬಂದರೆ ಸುತ್ತಿ ಬೀಸುವ ಪ್ರಭಂಜನ!
ತಕ್ಷಣವೆ ಕೇಳುವದು ಗುಡುಗು ಮಿಂಚಿನ ತಾನ

ಮರುಚಣದಿ ಮಳೆಬರುವ ಮೇಳಗಾನ,
ಸುತ್ತಿ ಸುಳಿವುದು ಮತ್ತೆ ಮಂದ ಪವನ,
ಮುಗಿಲು ತೆರೆವುದು ತನ್ನ ಕಲೆಯ ಭವನ.

ನೀರಿನೊಳು ಆಡುವುವು ಮೂರು ಮೀನ.
ದೇವಲೋಕದ ಸರಕು ಹೊತ್ತು ತಂದಿಹ ಹಡಗು
ಈ ದಡವ ತುಂಬಿರುವುದಿವರ ಬೆಡಗು;
ಕ್ಷಿತಿಜದಂಚಿನವರೆಗೆ ತೆರೆ-ನೊರೆಯ ಕೌತುಕವು
ತೆರೆಯುವದು ದಿನಕೊಂದಮೌಲ್ಯವಸ್ತು

ಇರುಳ ಮೌನಕೆ ಬೆಳಗು ತೊದಲು ನುಡಿದು,
ಮೂಡ ಪಡುವಣದಲ್ಲಿ ಜೀವ ಒಡನುಡಿದು;
ಬೆಳಕು-ಬಯಕೆಯ ಬಳ್ಳಿ ನಾಲ್ದೆಸೆಗು ಹಬ್ಬಿ

(ಮರ ಮರವನಾಡಿಸಿವೆ ತರತರದ ಗುಬ್ಬಿ)
ಹೂವ ಸೂಸಿದೆ ಸುತ್ತ ಪಾರಿಜಾತ
ಹಸುಳೆ ನಗೆ, ಹೂ ಬಿಸಿಲು ಓ ಎಂಥ ಚಿತ್ರ !

ರಂಜನಾ
ರಂಜನಾ
ಕುಹೂ ಕುಹೂ ಕೂಜನ
ವಾತ್ಸಲ್ಯದ ಕೇತನ
ಇಲ್ಲಿ ಬಾ, ಹೆಜ್ಜೆಗಳ ಕುಣಿಸಿ ತೋರಿಸು, ಜಾಣೆ
ನೋಡೋಣ, ಕಾರಂಜಿ ಬೃಂದಾವನ!

ಈ ಸೃಷ್ಟಿ ನೂತನ
ನೀನೆಮ್ಮ ಚೇತನ
ತೃಣಮಪಿ ನ ಚಲತಿ ನಿನ್ನ ವಿನಾ, ನಿನ್ನ ವಿನಾ, ನಿನ್ನ ವಿನಾ.

---

**ಶಬ್ದಾರ್ಥ:-** **ಝೇಂಕರಿಸು** - ಗುಂಯಿಗುಡು, **ಗುಂಜನ** - ಝೇಂಕಾರ, **ನರುಗಂಪು** - ಸುಗಂಧ, ನಿಷಿದ್ಧ - ತಿರಸ್ಕೃತ, **ಮೂಡಣ** - ಪೂರ್ವ, **ಪಡುವಣ** - ಪಶ್ಚಿಮ, **ಪ್ರಭಂಜನ** -ಬಿರುಗಾಳಿ, **ಕೂಜನ** - ಕೋಗಿಲೆಯ ಧ್ವನಿ, **ಕೇತನ** - ಧ್ವಜ, ವಿನಾ-ಬಿಟ್ಟು.

**ವಿಶೇಷವಿಚಾರ :-** ತೃಣಮಪಿ ನ ಚಲತಿ - ಹುಲ್ಲು ಕಡ್ಡಿಯೂ ಅಲುಗಲಾರದು. (ಮಗುವಿಗೆ ಅನ್ವಯಿಸಿ ಬಳಸಲಾಗಿದೆ)

## ಪದ್ಯವನ್ನು ಓದಿಕೊಂಡು ಕೊಟ್ಟ ಕೃತಿಗಳನ್ನು ಬಿಡಿಸಿರಿ.

**ಕೃತಿ 1. ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**

ಮಗು ರಂಜನಾಳನ್ನು ಹೀಗೆ ವರ್ಣಿಸಲಾಗಿದೆ

**ಕೃತಿ 2. ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**

ನೀರಿನಲ್ಲಿ ಆಡುವ ಎರಡು ಮೀನುಗಳು

**ಕೃತಿ 3. ಪಠ್ಯದ ಪದ್ಯಭಾಗವನ್ನು ಓದಿಕೊಂಡು ಕೊಟ್ಟ ಕೃತಿಗಳನ್ನು ಪೂರ್ಣಗೊಳಿಸಿರಿ.**

(i) ಮೂರು ಸಲ ಒಪ್ಪಂದ

(ii) ಪಡುವಣಕೆ ಸಂದ ರವಿ

(iii) ರಂಗ ಭೂಮಿಗೆ ಮತ್ತೆ

(iv) ತೃಣಮಪಿ ನ ಚಲತಿ

**ಕೃತಿ 4. ಕೆಳಗಿನ ಶಬ್ದಗಳ ಅರ್ಥವನ್ನು ವರ್ತುಳದಲ್ಲಿ ಕೊಟ್ಟ ಶಬ್ದ ಸಮೂಹದಿಂದ ಆಯ್ದು ಚೌಕಟ್ಟಿನಲ್ಲಿ ಬರೆಯಿರಿ.**

(i) ನಕ್ಷತ್ರ

(ii) ನವಿಲು

(iii) ಪಡುವಣ

(iv) ಪವನ

ಕೋಗಿಲೆ, ಬಿಸಿಲು, ಪಶ್ಚಿಮ, ಮಯೂರ, ದಕ್ಷಿಣ, ಗಾಳಿ, ಪೂರ್ವ, ತಾರೆ.

**ಕೃತಿ 5.** **ವಿರುದ್ಧಾರ್ಥಕ ಪದ ಬರೆಯಿರಿ.**

(i) ಮೂಡಣ x

(ii) ಸಂತೋಷ x

(iii) ಬೆಳಕು x

(iv) ಹಿಗ್ಗು x

**ಕೃತಿ 6.** **ಬಿಟ್ಟ ಸ್ಥಳಗಳಲ್ಲಿ ಯೋಗ್ಯ ಶಬ್ದ ತುಂಬಿ ವಾಕ್ಯ ಪೂರ್ಣ ಮಾಡಿರಿ.**

(i) ಕಣ್ಣು ನೀಲಾಂಜನ ಕರಗಿಸಿದ ------------

(ii) ದೇವ ಲೋಕದ ಸರಕು ಹೊತ್ತು ತಂದಿಹ ------------

(iii) ನೀರಿನೊಳು ಆಡುವವು ------------

(iv) ಅವರಿವರ ಸಂಧಾನ ಮೊದಲೆ ------------

**ಕೃತಿ 7.** **ಸಮಾಸ ವಿಗ್ರಹಿಸಿ ಬರೆಯಿರಿ.**

(i) ಮರಿದುಂಬಿ (ii) ಹೊಂಗಿರಣ (iii) ದೀರ್ಘಸ್ವರ

(iv) ದೇವಲೋಕ (v) ನಾಲ್ದೆಸೆ

**ಕೃತಿ 8** **ಕೆಳಗಿನವುಗಳಿಗೆ ತತ್ಸಮ/ತದ್ಭವಗಳನ್ನು ಬರೆಯಿರಿ.**

(i) ಯುದ್ಧ (ii) ಸಂತೋಷ

(iii) ಸ್ವರ (iv) ಚಣ

**ಕೃತಿ 9** **ನಿಮ್ಮ ಮಾತುಗಳಲ್ಲಿ ಬರೆಯಿರಿ :**

(i) ಮಗು ರಂಜನಾಳ ವರ್ಣನೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

(ii) ಮಗುವಿನ ತುಂಟಾಟಗಳನ್ನು ನಿಮ್ಮ ಮಾತುಗಳಲ್ಲಿ ನಿರೂಪಿಸಿರಿ.

(iii) ಮಗು ತನ್ನ ನೆರೆಹೊರೆಯವರೊಂದಿಗೆ ಹೇಗೆ ಆಡುವುದು? ನಿಮ್ಮ ಮಾತುಗಳಲ್ಲಿ ವಿವರಿಸಿರಿ.

* * * * *

# 2 ಜನರು

- ಜಿ. ಎಸ್. ಶಿವರುದ್ರಪ್ಪ

ನವೋದಯ ಹಾಗೂ ನವ್ಯ ಸಾಹಿತ್ಯದ ಕೊಂಡಿಯಂತಿರುವ ಜಿ. ಎಸ್. ಶಿವರುದ್ರಪ್ಪನವರು 'ಸಮನ್ವಯ ಕವಿ' ಎನಿಸಿದ್ದಾರೆ. ಕವಿಯಾಗಿ, ವಿಮರ್ಶಕರಾಗಿ ಪ್ರಸಿದ್ಧಿಯನ್ನು ಪಡೆದಿರುವ ಇವರು ಸಾಮಗಾನ, ಅನಾವರಣ, ಕಾರ್ತಿಕ ಮುಂತಾದ ಕವನ ಸಂಕಲನಗಳನ್ನೂ, ಕಾವ್ಯಾರ್ಥ ಚಿಂತನ, ಸೌಂದರ್ಯಸಮೀಕ್ಷೆ ಮುಂತಾದ ಮೀಮಾಂಸೆ ಕೃತಿಗಳನ್ನೂ ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡಮಿಯ ಪುರಸ್ಕಾರ ಪಡೆದಿರುವ ಇವರಿಗೆ ಕರ್ನಾಟಕ ಸರಕಾರವು 'ರಾಷ್ಟ್ರಕವಿ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಮನುಷ್ಯರು ಅನಂತಕಾಲದಿಂದ ದುಃಖಿಗಳಾಗಿಯೇ ಬದುಕುತ್ತಿದ್ದಾರೆ. ಒಳ್ಳೆಯದನ್ನು ಬಿಟ್ಟು ಕೆಟ್ಟದರ ಕಡೆಗೇ ಓಡುತ್ತಿದ್ದಾರೆ. ಬೆಳಕನ್ನು ಬಿಟ್ಟು ಕತ್ತಲೆಗೇ ತೆರಳುತ್ತಿದ್ದಾರೆ. ಇದನ್ನು ಬಿಟ್ಟು ಎಲ್ಲರೂ ವಿಶ್ವಬಂಧುತ್ವದ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕೆಂದು ಕವಿ ಕರೆಕೊಡುತ್ತಾರೆ.

---

ಎಂಥ ಹುಚ್ಚು ಜನರು ಇವರು
ಕೊಚ್ಚೆಯನೇ ಕಾಂಬರು !
ಕೊಚ್ಚೆಯುಂಡು ದಡದಿ ಬೆಳೆದ
ಹಚ್ಚ ಹಸುರ ಕಾಣರು !
ಹಚ್ಚ ಹಸಿರ ಬಣ್ಣಿಸಿದರೆ ಅದು ಕಲ್ಪನೆ ಎಂಬರು
ನಾರುತಿರುವ ಕೊಚ್ಚೆ ಮಾತ್ರ ಪರಮ ಸತ್ಯವೆಂಬರು!

ಎಂಥ ಮರುಳು ಜನರು ಇವರು
ಬಡತನವನೆ ಕಾಂಬರು !
ಬಡವನೆದೆಯೊಳಿನ್ನು ತುಡಿವ
ಭರವಸೆಯನೆ ಕಾಣರು !
ಬಡವರ ನೆಪದಲ್ಲಿ ಇವರೆ ಬರಿದೆ ಹುಯ್ಯಲಿಡುವರು
ದಿಟದ ಬಡವರೀಕೂಗಿನೊಳೆಲ್ಲೊ ನರಳುತಿರುವರು !

ಎಂಥ ಪೆದ್ದ ಜನರು ಇವರು
ದಿವದ ಬೆಳಕ ಕಾಣರು !
ಮನೆಯ ಮುಂದೆ ಹರಿದರೂ
ಕಣ್ಣ ಮುಂದೆ ಕುಣಿದರೂ
ಎದೆಗೆ ಬಿರಡೆಯಿಡುವರು !
ಅದೂ ಸತ್ಯ ಇದೂ ಸತ್ಯ ಎಂಬ ದೃಷ್ಟಿಯಿಲ್ಲದೆ
ಬಾಳು ಬೆಳೆಯಬಲ್ಲುದೆ ?

ಎಂಥ ನಿಸ್ಸತ್ವ ಜನರು
ವಿಫಲತೆಯನೆ ಕಾಂಬರು !
ವಿಫಲತೆಯೊಳು ಸಫಲತೆ ಚಿಗು–
ರಿಡುವುದನೇ ಕಾಣರು !
ಅಳಿವಿನಲ್ಲು ಉಳಿವು ಮೊಳೆವ ಚೋದ್ಯವನ್ನು ಈ ಜಗ
ನೂರು ಚೈತ್ರದಲ್ಲಿ ಮಾಡಿ ತೋರಿದರೂ ಉಬ್ಬೆಗ !

ಬಿಸಿಲನುಂಡು ಬೆಳದಿಂಗಳ
ಕೊಡುವ ಚಂದ್ರನಂದದಿ,
ನೋವ ನುಂಗಿ ನಗೆಯನೀವ
ಆತ್ಮ ಶಕ್ತಿ ಬರುವುದೆ ?
ಅಡಿ ನೆಲದಲಿ ಕಣ್ ಮುಗಿಲಲಿ ರೆಕ್ಕೆಯೊಳಗೆ ವಿಶ್ವವ
ತಬ್ಬುವಂಥ ಗರುಡಶಕ್ತಿ ಬರುವವರೆಗು ರೌರವ !

---

**ಶಬಾರ್ಥ:** **ಕೊಚ್ಚೆ** – ಕೆಸರು, **ಕಾಂಬರು** – ಕಾಣುವರು, **ನಾರು** – ದುರ್ಗಂಧಬೀರು, **ಹುಯ್ಯಲಿಡುವ** – ಕೂಗುತಿರುವ, **ಬಿರಡೆ** – ಮುಚ್ಚಳಿಕೆ. **ಚೋದ್ಯ** – ಆಶ್ಚರ್ಯ, **ದಿಟ** – ಸತ್ಯ, **ಉಬ್ಬೆಗ** – ಉದ್ವೇಗ.

**ಕೃತಿ 1. ಕೆಳಗಿನ ಜಾಲಗಳನ್ನು ಪೂರ್ಣ ಮಾಡಿರಿ.**

(i) ಹುಚ್ಚು ಜನರು ಏನನ್ನು ಕಾಂಬರು

(ii) ಹುಚ್ಚು ಜನರು ಏನನ್ನು ಕಾಣಲಾರರು

**ಕೃತಿ 2. ಚೆಂಡಿನಲ್ಲಿ ಕೊಟ್ಟ ಶಬ್ದಗಳನ್ನು ಆರಿಸಿ ಸಮಾನಾರ್ಥ ಶಬ್ದಗಳನ್ನು ಪೂರ್ಣ ಮಾಡಿರಿ.**

(i) ಕೊಚ್ಚೆ
(ii) ದಿಟ
(iii) ಆಶ್ಚರ್ಯ
(iv) ಹುಯ್ಯಲಿಡುವ
(v) ಬಿರಡೆ

**ನಾರುತಿರುವ,**
**ಸತ್ಯ**
**ಚೋದ್ಯ ಕೆಸರು**
**ಮುಚ್ಚಳಿಕೆ**
**ಕೂಗುತಿರುವ**

**ಕೃತಿ 3. ಕೆಳಗೆ ಕೊಟ್ಟ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

(i) ಹಚ್ಚ ಹಸಿರ ಬಣ್ಣಿಸಿದರೆ ಜನರು ಏನೆಂದುಕೊಳ್ಳುವರು ?
(ii) ವಿಫಲತೆಯನ್ನೆ ಕಾಣುವವರು ಎಂಥ ಜನರು?
(iii) ಪೆದ್ದ ಜನರು ಏನನ್ನು ಕಾಣರು?
(iv) ನಿಸ್ಸತ್ವ ಜನರು ಯಾವುದನ್ನು ಕಾಣುವುದಿಲ್ಲ?

**ಕೃತಿ 4. ಹೊಂದಿಸಿ ಬರೆಯಿರಿ :**

| 'ಅ' ಗುಂಪು | 'ಬ' ಗುಂಪು |
|---|---|
| (i) ನಿಸ್ಸತ್ವ ಜನರು | ಅ) ಗರುಡ ಶಕ್ತಿ |
| (ii) ಬಿಸಿಲನುಂಡು | ಬ) ಬಿರಡೆಯಿಡುವವರು |
| (iii) ವಿಶ್ವ ತಬ್ಬುವಂಥ | ಕ) ಬೆಳದಿಂಗಳ |
| (iv) ಎದೆಗೆ | ಡ) ವಿಫಲತೆಯನೆ ಕಾಂಬರು |

**ಕೃತಿ 5. ಕೆಳಗೆ ಕೊಟ್ಟ ಶಬ್ದಗಳಿಗೆ ವಿರುದ್ಧಾರ್ಥಕ ಶಬ್ದಗಳನ್ನು ಬರೆಯಿರಿ.**

(i) ಸತ್ವ X

(ii) ವಿಫಲ X

(iii) ಬಿಸಿಲು X

(iv) ಸತ್ಯ X

ಪಾಠವನ್ನು ಓದಿ ಕೆಳಗಿನ ಚಟುವಟಿಕೆಗಳನ್ನು ನಿಯಮಗಳಿಗನುಸಾರವಾಗಿ ಕೃತಿ ರೂಪದಲ್ಲಿ ಪೂರ್ಣಮಾಡಿರಿ.

**ಕೃತಿ 6. ಕೆಳಗೆ ಕೊಟ್ಟ ವಾಕ್ಯಗಳನ್ನು ಪೂರ್ಣಗೊಳಿಸಿರಿ.**

(i) ಕೊಚ್ಚೆಯುಂಡು ದಡದಿ ಬೆಳೆದ ______

(ii) ಬಡವನೆದೆಯೊಳಿನ್ನು ತುಡಿವ ______

(iii) ನೋವ ನುಂಗಿ ನಗೆಯನೀವ ______

(iv) ಹಚ್ಚ ಹಸಿರ ಬಣ್ಣಿಸಿದರೆ ಅದು ______

**ಕೃತಿ 7. ಸರಿಯಾದ ಉತ್ತರವನ್ನು ಆಯ್ದು ಬರೆಯಿರಿ.**

**(1) ಹುಚ್ಚು ಜನರು** ______

(i) ಹಚ್ಚ ಹಸುರ ಕಾಣರು : (ii) ಕೊಚ್ಚೆಯನೆ ಕಾಂಬರು

(iii) ಕಲ್ಪನೆ ಎಂದು ಕಾಣುವರು (iv) ನಿಜವೆಂದು ಕಾಣುವರು

**(2) ಮರುಳು ಜನರು –** ______

(i) ಬಡತನವನೆ ಕಾಂಬರು (ii) ಶ್ರೀಮಂತನನ್ನೆ ಕಾಣುವರು

(iii) ಭರವಸೆಯನ್ನೆ ಕಾಣುವರು (iv) ರಾಜನನ್ನು ಕಾಣುವರು

**(3) ನಿಸ್ಸತ್ವ ಜನರು** ______

(i) ಸಫಲತೆಯನ್ನು ಕಾಣುವರು (ii) ವಿಫಲತೆಯನೆ ಕಾಂಬರು

(iii) ಅಳಿವನ್ನು ಕಾಣುವರು (iv) ಉಳಿವನ್ನು ಕಾಣುವರು

**ಕೃತಿ 8. ಕೆಳಗಿನ ಪದಗಳನ್ನು ವಾಕ್ಯದಲ್ಲಿ ಉಪಯೋಗಿಸಿ ಬರೆಯಿರಿ.**

(i) ಗರುಡ ಶಕ್ತಿ ______

(ii) ಭರವಸೆ ______

(iii) ವಿಫಲತೆ ______

(iv) ಗೌರವ ______

**ಕೃತಿ 9. ಯಾವ ರೀತಿ ಜನರು ಪ್ರತಿಯೊಂದರಲ್ಲಿ ತಪ್ಪನ್ನು ಕಾಣುತ್ತಿದ್ದಾರೆ ? ಕವಿತೆಯ ಹಿನ್ನೆಲೆಯಲ್ಲಿ ವಿವರಿಸಿರಿ.**

# 3. ಪುಸ್ತಕಗಳು

**– ಸರಜೂ ಕಾಟ್ಕರ**

**ಸರಜೂ ಕಾಟ್ಕರ :** ಮರಾಠಿ ಮಾತೃಭಾಷೆಯ ಲೇಖಕರು ಕನ್ನಡಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. ಅವರಲ್ಲಿ ಸರಜೂ ಕಾಟ್ಕರ ಒಬ್ಬರು. ಇವರು ಕವಿಯಾಗಿ, ಪತ್ರಕರ್ತರಾಗಿ, ಅನುವಾದಕರಾಗಿ ಮತ್ತು ಕಾದಂಬರಿಕಾರರಾಗಿ ಪ್ರಸಿದ್ಧರಾಗಿದ್ದಾರೆ. ಇವರ **ಕವನ ಸಂಕಲನಗಳು :** ಹಸಿದ ನೆಲ, ಸೂರ್ಯ, ಏಕಾಂತದ ಮನುಷ್ಯ, ಗಜಲ್ ಇತ್ಯಾದಿ. ಮರಾಠಿ ದಲಿತ ಕಾವ್ಯಗಳನ್ನು ಇವರು ಅನುವಾದಿಸಿದ್ದಾರೆ. ಇವರ ಕಾದಂಬರಿ 'ದೇವರಾಯ' ಜನಪ್ರಿಯವಾಗಿದೆ. ಮಾನವೀಯ ಕಾಳಜಿ ಇವರ ಸಾಹಿತ್ಯದಲ್ಲಿ ಎದ್ದುಕಾಣುತ್ತದೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಮೊದಲುಗೊಂಡು ಹಲವು ಪ್ರಶಸ್ತಿಗಳು ಇವರಿಗೆ ದೊರಕಿವೆ.

ಪುಸ್ತಕಗಳು ಮನುಷ್ಯನ ಜೀವನವನ್ನು ಸಮೃದ್ಧಗೊಳಿಸುತ್ತವೆ. ಒಂಟಿತನವನ್ನು ದೂರಗೊಳಿಸುತ್ತವೆ. ಪ್ರಪಂಚದ ಅರಿವನ್ನು ಕಣ್ಣಮುಂದೆ ತಂದು ನಿಲ್ಲಿಸುತ್ತವೆ. ಅಂತರಂಗವನ್ನು ಬಹಿರಂಗದಲ್ಲಿ ತಂದು ತೋರಿಸುತ್ತವೆ. ಅಂತೆಯೇ ಕೈಯ್ಯಲ್ಲಿ ಒಂದು ಪುಸ್ತಕ, ಮನೆಯಲ್ಲಿ ಒಂದು ಗ್ರಂಥ ಭಂಡಾರ ಇರಬೇಕೆಂದು ಜ್ಞಾನಿಗಳು ಹೇಳಿದ್ದಾರೆ.

ಪ್ರಸ್ತುತ ಕವಿತೆಯನ್ನು ಇವರ 'ಉತ್ಖನನ' ಎಂಬ ಕವನ ಸಂಕಲನದಿಂದ ಸಂಪಾದಿಸಿಕೊಳ್ಳಲಾಗಿದೆ.

---

ಪುಸ್ತಕಗಳು ಏನನ್ನೋ ಹೇಳಬೇಕೆನ್ನುತ್ತವೆ
ನಿಮ್ಮ ನೆರಳಿನಲ್ಲಿ ಅವು ಇರಬೇಕೆನ್ನುತ್ತವೆ

ಪುಸ್ತಕಗಳು ಕಥೆಗಳನ್ನು ಹೇಳುತ್ತವೆ :
ಕಳೆದು ಹೋದ ದಿನಗಳದ್ದು
ಯುಗ ಯುಗಗಳ ಕಾಲದ್ದು

ಹಸಿರು ತುಂಬಿ ತೊನೆದಾಡುತ್ತಿರುವ ಸುಖಗಳದ್ದು
ನಿಷ್ಪರ್ಣ ಟೊಂಗೆ ಅನುಭವಿಸುತ್ತಿರುವ
ಏಕಾಂತತೆಯ ದುಃಖಗಳದ್ದು
ಗಾಳಿ ಜೊತೆಗೆ ಓಲಾಡುವ ಹೂವುಗಳದ್ದು
ಯುದ್ಧದಲ್ಲಿ ಅಪ್ಪ ಅಮ್ಮಂದಿರನ್ನು ಕಳೆದುಕೊಂಡ ಮಗುವಿನದ್ದು
ಗೆದ್ದ ವೀರರದ್ದು
ಸೋತ ಮನಸ್ಸುಗಳದ್ದು
ಪ್ರೀತಿಯದ್ದು ದ್ವೇಷದ್ದು
ಶ್ವಾಸಗಳದ್ದು3

ಪುಸ್ತಕದಲ್ಲಿ ಹಕ್ಕಿಗಳು ಮಾತಾಡುತ್ತವೆ
ಪುಸ್ತಕದಲ್ಲಿ ಸೂರ್ಯ ಚಂದ್ರರು ಮಿನುಗುತ್ತಿರುತ್ತಾರೆ
ಪುಸ್ತಕದಲ್ಲಿರುತ್ತದೆ ಜುಳು ಜುಳು ಹರಿಯುವ ನೀರಿನ ಝರಿ
ಪುಸ್ತಕದಲ್ಲಿ ಯಕ್ಷ ಯಕ್ಷಿಯರು ಪ್ರೀತಿಯ ಆಟ ಆಡುತ್ತಿರುತ್ತಾರೆ
ಪುಸ್ತಕದಲ್ಲಿರುತ್ತದೆ ವಿಧ್ವಂಸಕ ಕ್ಷೇಪಣಾಸ್ತ್ರಗಳು
ಪುಸ್ತಕದಲ್ಲಿ ಧ್ಯಾನಾಸಕ್ತ ಬುದ್ಧ ನಗುತ್ತಿರುತ್ತಾನೆ
ಪುಸ್ತಕದ ಶಬ್ದಗಳಲ್ಲಿ ಕರುಣೆಯ ಕರೆ ಇದೆ
ಪುಸ್ತಕಗಳೆಂದರೆ ವಸುಧೈವ ಕುಟುಂಬಕಂ
ಪುಸ್ತಕಗಳೆಂದರೆ ಕತ್ತಲೆಯಲ್ಲಿಯ ಹೊಸ ಬೆಳಕು.

ಬರುತ್ತೀರಲ್ಲ ನೀವು ಬೆಳಕಿನ ಈ ಹಾದಿ ತುಳಿಯಲು?
ಹಾದಿ ಎಳ್ಳಷ್ಟೂ ಕಠಿಣವಾಗಿಲ್ಲ
ರಸ್ತೆ ಮೇಲೆ ನಡೆದಾಡುತ್ತಿರುವಾಗ
ಅಂಗಡಿ ಮೇಲಿರುವ ಬೋರ್ಡ್‌ಗಳನ್ನು ಓದುವಷ್ಟೇ
ಸಹಜವಾಗಿ, ಸುಲಭವಾಗಿ
ನಾವು ಪುಸ್ತಕಗಳನ್ನು ಓದಬೇಕಾಗಿದೆ
ಓದುತ್ತ ಓದುತ್ತ ಹೊಸ ಹೊಸ
ಹಾದಿಗಳನ್ನು ನಿರ್ಮಿಸಬೇಕಾಗಿದೆ.........

ಕೇಳುವಿರಲ್ಲವೆ ನೀವು ಪುಸ್ತಕ ಹೇಳುವ ಕತೆಗಳನ್ನು ?


---

**'ಶಬ್ದಾರ್ಥ' :** **ನಿಷ್ಪರ್ಣ** – ಎಲೆ ಇಲ್ಲದ, **ವಿಧ್ವಂಸಕ** – ನಾಶಮಾಡುವ, **ಕ್ಷೇಪಣಾಸ್ತ್ರ** – ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶದ ಮೇಲೆ ದಾಳಿ ಮಾಡುವ ಅಸ್ತ್ರ.


**ವಿಶೇಷ ವಿಚಾರ :** ವಸುಧೈವ ಕುಟುಂಬಕಂ – ವಿಶ್ವವನ್ನೆ ತನ್ನ ಕುಟುಂಬ ಎಂದು ತಿಳಿದುಕೊಳ್ಳುವದು.

**ಪದ್ಯವನ್ನು ಓದಿಕೊಂಡು ಕೆಳಗೆ ಕೊಟ್ಟಿರುವ ಕೃತಿಗಳನ್ನು ಸೂಚನೆಗನುಗುಣವಾಗಿ ಪೂರ್ಣ ಮಾಡಿರಿ.**


**ಕೃತಿ 1 ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ**




**ಕೃತಿ 2 ಕೆಳಗಿನ ಜಾಲವನ್ನು ಶಿಕ್ಷಕರ ಸಹಾಯದಿಂದ ಪೂರ್ಣಗೊಳಿಸಿರಿ.**



**ಕೃತಿ 3.** **ದ್ವಿರುಕ್ತಿ ಪದಗಳನ್ನು ತುಂಬಿರಿ.**




**ಕೃತಿ 4.** **ಕೆಳಗಿನ ಶಬ್ದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಉಪಯೋಗಿಸಿರಿ.**

(i) ಏಕಾಂತ

(ii) ವಿಧ್ವಂಸಕ

(iii) ನಿರ್ಮಿಸು

(iv) ಧ್ಯಾನಾಸಕ್ತ

**ಕೃತಿ 5.** **ಕೆಳಗಿನ ಕೃತಿಗಳನ್ನು ಹತ್ತು - ಹನ್ನೆರಡು ವಾಕ್ಯಗಳಲ್ಲಿ ಬರೆಯಿರಿ :**

(i) ಪುಸ್ತಕಗಳ ಪ್ರಯೋಜನಗಳು

(ii) ಪುಸ್ತಕದ ಆತ್ಮಕಥೆ

(iii) ಗ್ರಂಥಾಲಯದ ಮಹತ್ವ

(iv) ದಿನಚರಿಯಲ್ಲಿ ನಿಮ್ಮ ಅನುಭವಗಳು

**ಕೃತಿ 6.** **ಓದುವ ಅಭಿರುಚಿಯನ್ನು ರೂಢಿಸಿಕೊಳ್ಳಿರಿ.**

* * * * *

# 4 ಜನಪದ ತ್ರಿಪದಿಗಳು

**- ಜನಪದರು**

ಜನಪದ ಹಾಡುಗಳಿಗೆ ಜನರೇ ಕವಿಗಳು. ಸಾವಿರಾರು ವರ್ಷಗಳಿಂದ ಈ ಹಾಡುಗಳು ಪ್ರಮುಖವಾಗಿ ಹಾಡಲಿಕ್ಕೆಂದೇ ರಚಿತವಾಗಿವೆ. ಇವುಗಳಲ್ಲಿ ಜೀವನದ ವಿವಿಧ ಮುಖಗಳ ಚಿತ್ರಣವಿದ್ದು ಬದುಕಿನ ಉಸಿರಿನಂತೆ ಕಳೆಕಟ್ಟಿರುತ್ತವೆ. ಕರ್ನಾಟಕ ವಿಶಾಲವಾದ ನಾಡು. ಇದರ ಬೇರೆ ಬೇರೆ ಪ್ರದೇಶಗಳಲ್ಲಿ, ಅಲ್ಲಿಯ ಮಾತಿನ ಸರಣಿಯನ್ನನುಸರಿಸಿ ಈ ಹಾಡುಗಳು ಹುಟ್ಟಿಕೊಂಡಿವೆ.

ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿ ಮುಂತಾದ ಕರುಳುಬಳ್ಳಿಯ ಸಂಬಂಧಗಳನ್ನು ಜನಪದರು, ತಮ್ಮ ಹಾಡುಗಳಲ್ಲಿ ಹೃದಯತುಂಬಿ ಹಾಡಿದ್ದಾರೆ. ಇಲ್ಲಿ ಕಾಣುವ ಧನ್ಯತೆ, ಹಾರೈಕೆ, ನೆನಪುಗಳು ಮನಸ್ಸಿಗೆ ಮುಟ್ಟುತ್ತವೆ.

---

ತಾವರಿಯ ಗಿಡ ಹುಟ್ಟಿ ದೇವರಿಗೆ ನೆರಳಾಗಿ ।
ನಾ ಹುಟ್ಟಿ ಮನೆಗೆ ಎರವಾದೆ । ಹಡದವ್ವ ।
ನೀ ಕೊಟ್ಟ ಮನೆಗೆ ಹೆಸರಾದೆ ॥

ಬ್ಯಾಸಗಿ ದಿವಸಕ ಬೇವಿನ ಮರ ತಂಪ ।
ಭೀಮರತಿಯೆಂಬ ಹೊಳಿ ತಂಪ । ಹಡದವ್ವ ।
ನೀ ತಂಪ ನನ್ನ ತವರೀಗಿ ॥

ಕಡಗ ಇಲ್ಲದ ಕೈಯ ಕರುಣ ಇಲ್ಲದ ಪುರುಷ ।
ಹಡೆದವ್ವನಿಲ್ದ ತವರೀಗಿ । ಹೋದಾರ ।
ಅಡವ್ಯಾಗ ವಸ್ತಿ ಇಳಿದಾಂಗ ॥

ಬಂಗಾರ ಬಳೆಯವರು ತಿಂಗಳ ಹಾದೆವರು ।
ನನ್ನ ಕೊಟ್ಟ್ಯಾಕ ಮರತಾರ । ಮಾವೀನ ।
ಹಣ್ಣು ಉಣುವಾಗ ನೆನಸ್ಯಾರ ॥

ದೇವರ ನೆನೆದರ ತಂಗಳ ಬಿಸಿಯಾಯ್ತು ।
ಗಂಗಾ-ದೇವಿ ನನ್ನ ಹಡೆದವ್ನ । ನೆನೆದರ ।
ಮಾಸೀದ ತಲೆಯು ಮಡಿಯಾಯ್ತು ॥

ಹಾಲುಂಡ ತವರೀಗಿ ಏನೆಂದು ಹಾಡಲೆ ।
ಹೊಳೆದಂಡಿಲಿರುವ ಕರಕೀಯ । ಕುಡಿಯಂಗ ।
ಹಬ್ಬಲಿ ಅವರ ರಸಬಳ್ಳಿ ॥

ತೊಟ್ಟಿಲ ಹೊತ್ಕೊಂಡು ತವರುಬಣ್ಣ ಉಟ್ಕೊಂಡು
ಅಪ್ಪ ಕೊಟ್ಟೆಮ್ಮಿ ಹೊಡಕೊಂಡು । ತೌರೂರ ।
ತಿಟ್ಹತ್ತಿ ನಿಂದು ನೋಡ್ಯಾಳೋ ॥

ಸೊಲ್ಲಾಪುರದಣ್ಣಗ ನಿಲ್ಲದಲೆ ಬರಹೇಳ ।
ಸೀರ್‍ಯೊಲ್ಲೆ ಆವನ ಕುಬಸೊಲ್ಲೆ । ಅಣ್ಣನ ।
ಮಾರಿ ನೋಡಂಥ ಮನವಾಗಿ ॥

ಅಣ್ಣ ಬರತಾನಂತ ಅಂಗಳಕ ಥಳಿ ಕೊಟ್ಟು ।
ರನ್ನಬಚ್ಚಲಕ ಮಣಿ ಹಾಕಿ । ಕೇಳೇನ ।
ಥಣ್ಣಗ್ಹಾರಿಲ್ಲ ತವರವರು ॥

ಅಕ್ಕ ಇದ್ದರೆ ಭಾವ ರೊಕ್ಕ ಇದ್ದರೆ ಸಂತೆ ।
ಮಕ್ಕಳಿದ್ದರೆ ಮನಿಮಾರ । ಹಡೆದಪ್ಪ ।
ನೀ ಇದ್ದರೆ ನಮಗ ಸಂವರಾಜ್ಯ ॥

ಹೆಣ್ಣುಮಕ್ಕಳ ನ್ಯಾಯ ಉಣ್ಣೊಲ್ದೆ ಮಾಡ್ಯಾನ ।
ಪುನ್ನುಳ್ಳ ದೊರೆಯು ಹಡೆದಪ್ಪ । ನಿದರೀಗ ।
ಹೊನ್ನಿನ ಮಳೆಯು ಸುರಿಯಾಲೆ ॥

---

**ಶಬ್ದಾರ್ಥ :** **ತಾವರೆ** – ಕಮಲ, **ಭೀಮರತಿ** – ಭೀಮಾ ನದಿ, **ಕುಬಸ** – ರವಿಕೆ, **ಪುನ್ನುಳ್ಳ** – ಪುಣ್ಯವುಳ್ಳ, **ತಿಂಗಳ** – ಚಂದ್ರ, **ಸಂವರಾಜ್ಯ** – ಸಾಮ್ರಾಜ್ಯ.

**ಪದ್ಯವನ್ನು ಓದಿಕೊಂಡು ಕೃತಿಗಳನ್ನು ಮಾಡಿರಿ.**

**ಕೃತಿ 1. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

(i) ತವರಿಗೆ ಯಾರು ತಂಪಾಗಿದ್ದಾರೆ ?

(ii) ದೇವರಿಗೆ ಯಾವ ಗಿಡ ನೆರಳು ಕೊಡುತ್ತದೆ ?

(iii) ಯಾರ ಎದುರಿಗೆ ಹೊನ್ನಿನ ಮಳೆ ಸುರಿಯಲಿ ?

(iv) ಸೊಲ್ಲಾಪುರದ ಅಣ್ಣನಿಗೆ ಯಾಕೆ ಬರಲು ಹೇಳುವಳು ?

**ಕೃತಿ 2. ಪದ್ಯ ಭಾಗವನ್ನು ಓದಿಕೊಂಡು ಕೊಟ್ಟ ಕೃತಿಗಳನ್ನು ಬಿಡಿಸಿರಿ**

(i) ತಾವರಿಯ ಗಿಡ ಹುಟ್ಟಿ – ______

(ii) ಬ್ಯಾಸಗಿ ದಿವಸಕ – ______

(iii) ಹೆಣ್ಣು ಮಕ್ಕಳ ನ್ಯಾಯ – ______

(iv) ತೊಟ್ಟಿಲ ಹೊತ್ಕೊಂಡು – ______

**ಕೃತಿ 3. ಪದ್ಯದಲ್ಲಿ ಬಂದಿರುವ ಗ್ರಾಮ್ಯ ಶಬ್ದಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.**

(i) ಬ್ಯಾಸಗಿ (ii) ತಂಪ (iii) ಹೊಳಿ (iv) ಪುನ್ನುಳ್ಳ

(v) ಮಾರಿ (vi) ಮರತಾರ (vii) ಉಣುವಾಗ (viii) ಹೊತ್ಕೊಂಡು

**ಕೃತಿ 4.** **ಒಂದಕ್ಕೊಂದು ಹೊಂದಿಕೆಯಾಗುವ ಶಬ್ದಗಳನ್ನು ಬರೆಯಿರಿ.**

| ಅಕ್ಕ | ರೊಕ್ಕ | ಹಾಲುಂಡ | ಮಕ್ಕಳಿದ್ದರೆ |
|---|---|---|---|
| | | | |

**ಕೃತಿ 5.** **ಕೆಳಗಿನ ಕೃತಿಗಳನ್ನು ಹತ್ತು-ಹನ್ನೆರಡು ವಾಕ್ಯಗಳಲ್ಲಿ ಬರೆಯಿರಿ.**

(i) ತಂದೆ - ತಾಯಿಯರ ಮಹತ್ವವನ್ನು ಪದ್ಯದ ಸಹಾಯದಿಂದ ನಿಮ್ಮ ಮಾತುಗಳಲ್ಲಿ ಬರೆಯಿರಿ.

(ii) ಬೇಕಾದ ಪದ್ಯಗಳ ಭಾವಾರ್ಥವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಕೃತಿ 6.** **ಮಾನವ ಸಂಬಂಧದ ಜೋಡು ಶಬ್ದಗಳನ್ನು ಬರೆಯಿರಿ. ಉದಾಹರಣೆಗೆ - ತಂದೆ - ತಾಯಿ.**

**ಕೃತಿ 7.** **ಕೆಳಗಿನ ಶಬ್ದಗಳಿಗೆ ತತ್ಸಮ - ತದ್ಭವ ಬರೆಯಿರಿ.**

(i) ಜನ್ಮ (ii) ಸಾವಿರ (iii) ಮುಖ (iv) ಬೇಸಿಗೆ

**ಕೃತಿ 8.** **ಕೆಳಗಿನ ಜಾಲವನ್ನು ಪೂರ್ತಿಗೊಳಿಸಿರಿ :**

| | | | | | |
|---|---|---|---|---|---|
| **ಅ) ತಂಪಾಗಿರುವಂಥವು** | ಬೇ | | | | |
| | ಭೀ | | | | |
| **ಬ) ಮಕ್ಕಳಿದ್ದರೆ** | ಮ | | | | |

* * * * *

# 5. ನಿನ್ನ ಗಳಿಸುವವರಿಲ್ಲ

**- ಮೊಹಮ್ಮದ ಸಾಹೇಬ ಮುಲ್ಲಾ**

**ಮೊಹಮ್ಮದ ಸಾಹೇಬ ಮುಲ್ಲಾ** ಅವರು ಸಿಂದಗಿ ತಾಲೂಕಿನ ಯಂಕಂಚಿ ಗ್ರಾಮದವರು. ಬ್ರಹ್ಮಚಾರಿಗಳಾಗಿದ್ದು ಆ ಭಾಗದ ಪ್ರಸಿದ್ಧ ಯೋಗಿಗಳಾದ **ಶ್ರೀ ಭೀಮಾಶಂಕರ ಮಹಾರಾಜರ** ಶಿಷ್ಯರಾಗಿದ್ದರು. ಅವರು ನೂರಾರು ತತ್ವಪದಗಳನ್ನು ರಚಿಸಿದ್ದಾರೆ. ಅವರ ತತ್ವಪದಗಳನ್ನು ಆ ಭಾಗದ ಭಕ್ತರು ದೇವಸ್ಥಾನಗಳಲ್ಲಿ, ಉತ್ಸವಗಳಲ್ಲಿ, ಹಬ್ಬಹರಿದಿನಗಳಲ್ಲಿ ಹಾಡುತ್ತಾರೆ.

ಈ ಹಾಡುಗಳನ್ನು **ಎಸ್.ಎಸ್. ಧನಶೆಟ್ಟಿ** ಅವರು ಸಂಗ್ರಹಿಸಿ ಸಂಪಾದಿಸಿ ಪ್ರಕಟಿಸಿದ್ದಾರೆ. ಪ್ರಸ್ತುತ ತತ್ವಪದದಲ್ಲಿ ಮನುಷ್ಯನ ಅಜ್ಞಾನ ಲೋಭ, ಅತಿ ಆಸೆಗಳನ್ನು ಕುರಿತು ವಿವರಿಸಲಾಗಿದೆ. ಮನುಷ್ಯನಿಗೆ ಜ್ಞಾನವೇ ಅಗತ್ಯ ಎಂಬುದನ್ನು ಕವಿ ಹೇಳುತ್ತಾನೆ.

---

ಧನವುಗಳಿಸುವರು ಬಹು ಜನರೋ
ಗುರು ನಿನ್ನ ಗಳಿಸುವವರಿಲ್ಲಾರು ॥

ತನ್ನ ಬಣ್ಣಿಸಿ ಅನ್ಯರ ಹಳಿಯುತ
ಅನ್ನದಾಸಿಯಾಗಿ ಆದಿ ಜನ್ಮವನರಿಯರು ॥3॥

ಸತಿಸುತಾದಿ ಜತೆಗಾರರೆಂದು ಅತಿ ಲೋಭದಿ
ದುಡಿದು ದುಡಿದು । ಕಥಿಸುವೆ ರೋಗ ಭಾಧೆಯು
ಬಂದು ಬಡಿವಾಗ ಯಾರೂ ಬಿಡಿಸಲಾರರು ॥

ಸಿರಿ ಸಂಪತ್ತು ಆಪತ್ತು ಧನವೆಂದು ಗಳಿಸಿ
ಗರ್ವದಿ ತಿರುಗುವರಿಂದು ಮರೆತು ಮಾನವರು
ಮಹಾತ್ಮರ ವಾಕ್ಯವು ಸಿರಿಗಧಿಕ ಸಿರಿವಂತನ ಜರಿದು ॥

ಅನ್ನವೆ ಆತ್ಮರಕ್ಷಣವಲ್ಲ ಬಣ್ಣಿಸಿ ಹೇಳುವ
ಮಾತೇನಲ್ಲ ಮಹಾ ಜ್ಞಾನಿ ಗುರು ಭೀಮನೆ ಬಲ್ಲ
ಅನ್ನದ ಹಂಗಿನೊಳಗಾತ್ಮನು ಇಲ್ಲ ॥

---

**ಶಬ್ದಾರ್ಥ :** **ಧನ** – ಸಂಪತ್ತು, **ಹಳಿ** – ಹೀಯಾಳಿಸು, **ದಾಸಿ** –ಗುಲಾಮ, **ಆದಿ** – ಮೊದಲ, **ಲೋಭ** – ಅತಿ ಆಸೆ, **ಬಾಧೆ** – ಸಂಕಟ, **ಆಪತ್‌ಧನ** – ಸಂಕಟ ಕಾಲದಲ್ಲಿ ಬಳಸುವ ಧನ, **ಜರಿದು** – ತೆಗಳಿ, **ಹಂಗು** – ಆಶ್ರಯ, **ಕಥಿಸು** – ಹೇಳು.

## ಕೃತಿ 1. ಕೆಳಗಿನ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿರಿ :

i) ಧನವು ☐

ii) ನಿನ್ನ ☐

iii) ಜತೆಗಾರರು ☐ ☐

**ಕೃತಿ 1.** **ಚೆಂಡಿನಲ್ಲಿ ಕೊಟ್ಟಿರುವ ಆದಿ, ಅಂತ್ಯ ಉಕಾರಾಂತ ಶಬ್ದಗಳನ್ನು ಆರಿಸಿ ಬರೆಯಿರಿ :**

ವಾಕ್ಯ
ಅನ್ನವೆ ಗುರು
ಗಳಿಸಿ ಮರೆತು
ಅರಿಯರು
ದುಡಿದು ಅನ್ನವು ಆದಿ
ಭಾಧೆಯು ಅತಿ
ಅನ್ನದ

i.

ii.

iii.

iv.

**ಕೃತಿ 2.** **ಒಂದು ವಾಕ್ಯದಲ್ಲಿ ಬರೆಯಿರಿ :**

i. ಜನರು ಏನನ್ನು ಗಳಿಸುವರು ?

ii. ಯಾರ ಬಾಧೆ ಬಂದು ಬಡಿಯುವದು ?

iii. ಆತ್ಮನು ಯಾವ ಹಂಗಿನಲ್ಲಿ ಇಲ್ಲ ?

**ಕೃತಿ 3.** **ಶಿಕ್ಷಕರ ಸಹಾಯದಿಂದ ನಿಮ್ಮ ಭಾಗದ ತತ್ವಪದಗಳನ್ನು ಸಂಗ್ರಹಿಸಿರಿ.**

**ಕೃತಿ 4.** **ಹಿಂದೂ - ಮುಸ್ಲಿಂ ಬಾಂಧವ್ಯದ ಬಗ್ಗೆ ತಿಳಿದುಕೊಳ್ಳಿರಿ.**

* * * * *

# 6 ವಚನಗಳು

**ಅಕ್ಕಮ್ಮ :** ದಾರ್ಶನಿಕ ಅನುಭವಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಬರೆದ ಕನ್ನಡದ ವಚನಕಾರ್ತಿಯರಲ್ಲಿ ಅಕ್ಕಮ್ಮಳು ಒಬ್ಬರು. ಸಾಮಾಜಿಕ ಸಾಮರಸ್ಯ, ಕಾಯಕದ ಮಹತ್ವ ಮುಂತಾದವು ಇವರ ವಚನಗಳ ವೈಶಿಷ್ಟ್ಯ. ಅವರ ಅನುಭಾವದ ನುಡಿಮುತ್ತುಗಳೇ ವಚನಗಳಾಗಿ ಹೊರಹೊಮ್ಮಿದ್ದನ್ನು ನಾವು ಕಾಣಬಹುದು.

ಪ್ರಸ್ತುತ ಅವರ ಎರಡು ವಚನಗಳಲ್ಲಿ ವ್ರತ, ನಿಯಮ, ಕಾಯಕ, ಶುದ್ಧ ಆಚಾರ ಮುಂತಾದವುಗಳನ್ನು ಕಾಣಬಹುದು. **ರಾಮೇಶ್ವರಲಿಂಗವು** – ಅವರ ಅಂಕಿತನಾಮ.

**ಅಲ್ಲಮಪ್ರಭು :** ಅವರು ಬಸವಣ್ಣನವರ ಕಾಲದ ಹಿರಿಯ ವಚನಕಾರ. ಯೌವ್ವನದಲ್ಲಿಯೇ ವಿರಕ್ತಿ ಹೊಂದಿ ದೇಶದ ಪರ್ಯಟನೆ ಮಾಡುತ್ತಾ ಸಿದ್ಧರಾಮ, ಗೋರಕ್ಷ, ಗೊಗ್ಗಯ್ಯರನ್ನು ಉದ್ಧರಿಸಿದ. ಕಲ್ಯಾಣದಲ್ಲಿ ಸ್ಥಾಪನೆಯಾದ ಅನುಭವ ಮಂಟಪದ ಶೂನ್ಯ ಸಿಂಹಾಸನದ ಅಧ್ಯಕ್ಷರಾಗಿ ಶಿವಶರಣರ ಅನುಭಾವ ಗೋಷ್ಠಿಯನ್ನು ಯಶಸ್ವಿಯಾಗಿ ನಡೆಸಿಕೊಟ್ಟವರು. **ಗುಹೇಶ್ವರ** ಇವರ ಅಂಕಿತ.

ಹೊನ್ನು ಹೆಣ್ಣು ಮಣ್ಣು ಇವು ಮಾಯೆ ಎಂದು ಹಿಂದಿನ ಸಂಪ್ರದಾಯ ನಂಬಿಕೊಂಡು ಬಂದಿದೆ. ಆದರೆ ಅಲ್ಲಮ ಪ್ರಭು ಇದನ್ನು ತಿರಸ್ಕರಿಸಿ ಮನಸ್ಸಿನ ಆಸೆಗಳೇ ಮಾಯೆ ಎಂದು ನಿರೂಪಿಸುತ್ತಾರೆ. ಪ್ರಪಂಚದಲ್ಲಿ ಪ್ರತಿಯೊಂದು ವಸ್ತು – ವ್ಯಕ್ತಿ – ಪರಿಸರ ಒಂದಕ್ಕೊಂದು ಸಂಬಂಧಿಸಿವೆ. ಈ ಸಂಬಂಧವನ್ನು ನಿರಾಕರಿಸಿ ನಾವು ಬದುಕಲು ಸಾಧ್ಯವಿಲ್ಲ ಎಂಬುದನ್ನು ಅಲ್ಲಮ ಇಲ್ಲಿ ಹೇಳುತ್ತಾರೆ.

## ಅಕ್ಕಮ್ಮ

ಅಸಿ ಮಸಿ ಕೃಷಿ ವಾಣಿಜ್ಯ ಮುಂತಾದ ಕಾಯಕವ ಮಾಡಿ,
ಭಕ್ತರ ಪಡುಗ ಪಾದತ್ರಾಣ ಪಹರಿ ಬಾಗಿಲು ಬೊಕ್ಕಸ ಬಿಯಗ
ಮುಂತಾದ ಕಾಯಕವಂ ಮಾಡಿಕೊಂಡು
ವ್ರತಕ್ಕೆ ಊಣೆಯವಿಲ್ಲದೆ ಮಾಡುವ ಕೃತ್ಯಕ್ಕೆ ಕಡೆಯಾಗದೆ
ಈ ಭಕ್ತನ ಅಂಗಳ ಅವಿಮುಕ್ತಿಕ್ಷೇತ್ರ, ಆತನ ಮನೆಯೆ ಆಚಾರವೆ ಪ್ರಾಣವಾದ
ರಾಮೇಶ್ವರಲಿಂಗದಾಶ್ರಯ.

ಬೆಳ್ಳೆ ಭಂಗಿ ನುಗ್ಗಿ ಉಳ್ಳೆ ಮೊದಲಾದವನೆಲ್ಲವ ಬಿಡಬೇಕು
ಬೆಳ್ಳೆಯಲ್ಲಿ ದೋಷ ಭಂಗಿ ನುಗ್ಗಿಯಲ್ಲಿ ಲಹರಿ ಉಳ್ಳೆಯಲ್ಲಿ ದುರ್ಗುಣ
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಲ್ಲಿ ವ್ರತಕ್ಕೆ ಅಹುದಲ್ಲ
ಅಂಬುದನರಿಯಬೇಕು.

## ಅಲ್ಲಮ ಪ್ರಭು

ಹೊನ್ನು ಮಾಯೆ ಎಂಬರು ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆ ಎಂಬರು ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆ ಎಂಬರು ಮಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೆ ಮಾಯೆ ಕಾಣಾ ಗುಹೇಶ್ವರ.

ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯ
ಬೆಟ್ಟದ ನೆಲ್ಲಿಯ ಕಾಯಿ ಸಮುದ್ರದ ಉಪ್ಪು
ಎತ್ತಣಿಂದೆತ್ತ ಸಂಬಂಧವಯ್ಯ ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯ.

**ಶಬ್ದಾರ್ಥ :** **ಹೊನ್ನು** - ಬಂಗಾರ, **ಮುಂದಣ** - ಮುಂದಿನ, **ಮಾಮರ** - ಮಾವಿನ ಮರ, **ಅಸಿ** - ಖಡ್ಗ, **ಮಸಿ** - ಶಾಯಿ, **ಪಡುಗ** - ಪಾತ್ರೆ; **ಪಾದತ್ರಾಣ** - ಪಾದರಕ್ಷೆ, **ಪಹರಿ** - ಕಾಯುವವ, **ಬಿಯಗ** - ಲೆಕ್ಕಿಗ, **ಉಳ್ಳಿ** - ಈರುಳ್ಳಿ. **ನುಗ್ಗಿ** - ನುಗ್ಗೆಕಾಯಿ.

**ಕೆಳಗಿನ ಕೃತಿಗಳನ್ನು ನಿಯಮಗಳಿಗನುಸಾರವಾಗಿ ತಯಾರಿಸಿರಿ.**

**ಕೃತಿ 1 ಪದ್ಯ ಓದಿ ಜಾಲಾಕೃತಿಯನ್ನು ಬಿಡಿಸಿರಿ.**

| | | |
|---|---|---|
| | ಅಲ್ಲಮನ ಪ್ರಕಾರ ಇವು ಮಾಯೆ ಅಲ್ಲ | |

**ಕೃತಿ 2 ಯಾವ ಯಾವುದಕ್ಕೆ ಪರಸ್ಪರ ಸಂಬಂಧವಿದೆ.**

ಮಾಮರ ———— [ ]

ಸಮುದ್ರದ ಉಪ್ಪು ———— [ ]

**ಕೃತಿ 3 ಚೆಂಡಿನಲ್ಲಿ ಕೊಟ್ಟಿರುವ ಅಕ್ಷರಗಳನ್ನು ಜೋಡಿಸಿ ಬಂದ ಕಾಯಕಗಳನ್ನು ಬರೆಯಿರಿ.**

i. ____________________

ii. ____________________

iii. ____________________

iv. ____________________

v. ____________________

ಸಿಮಣಿದಯ
ಅಸುಕ್ತಭಕೃಪಾ
ವಾಗರತ್ರಾಬಾದ್ಯ
ಪಡುಪಯಾ
ಹರಿಕ್ಕಬಿಗ
ಉಸಿಗಿಷಿ

**ಕೃತಿ 4 ಪದ್ಯವನ್ನು ಓದಿ ಜಾಲಾಕೃತಿಯನ್ನು ಬಿಡಿಸಿರಿ.**

| ಯಾವ ಯಾವ ಪದಾರ್ಥಗಳನ್ನು ಬಿಡಬೇಕು. | |
|---|---|
| | |
| | |
| | |
| | |
| | |
| | |
| | |
| | |

**ಕೃ 5 ಗುಂಪಿಗೆ ಸೇರದ ಪದ ಬರೆಯಿರಿ.**

| | | | | |
|---|---|---|---|---|
| 1. | (i) ವ್ರತ | (ii) ನಿಯಮ | (iii) ಕಟ್ಟಳೆ | (iv) ನೆಲ್ಲಿಕಾಯಿ |
| 2. | (i) ಹೊನ್ನು | (ii) ಚಿನ್ನ | (iii) ರಜತ | (iv) ಸುವರ್ಣ |
| 3. | (i) ಕೃಷಿ | (ii) ಒಕ್ಕಲುತನ | (iii) ಬೇಸಾಯ | (iv) ವ್ಯವಹಾರ |

**ಕೃತಿ 6 ಕೆಳಗಿನ ಜಾಲಾಕೃತಿಗಳನ್ನು ಪೂರ್ಣಗೊಳಿಸಿರಿ. ಸರಿಯಾದ ಅಂಕಿತ ನಾಮಗಳನ್ನು ಚೌಕೋನದಲ್ಲಿ ಬರೆಯಿರಿ.**

| | |
|---|---|
| ಬಸವಣ್ಣ | |
| ಅಲ್ಲಮ ಪ್ರಭು | |
| ಅಕ್ಕಮ್ಮ | |
| ಅಕ್ಕ ಮಹಾ -ದೇವಿ | |

**ಕೃತಿ 7 ಕೆಳಗಿನ ಚೌಕಟ್ಟಿನಲ್ಲಿಯ ತತ್ಸಮ/ತದ್ಭವಗಳನ್ನು ಜೋಡಿಸಿ ಬರೆಯಿರಿ**

| | | | |
|---|---|---|---|
| ಮಷಿ | ಆಶಾ | ವ್ಯಯ | ಅಂಗಣ |
| ಅಂಗಳ | ಬಿಯ | ಆಸೆ | ಮಸಿ |

**ಕೃತಿ 8 ಕಾಯಕದ ಮಹತ್ವವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

* * * * *

# 7 ಹರಿಶ್ಚಂದ್ರನ ಕನಸು

- ರಾಘವಾಂಕ

**ರಾಘವಾಂಕ :** ಹರಿಶ್ಚಂದ್ರ ಕಾವ್ಯವನ್ನು ಬರೆದ ರಾಘವಾಂಕನು ಕನ್ನಡದ ಕೆಚ್ಚಿನ ಕವಿ. ಇವನು ಹರಿಹರನ ಸೋದರಳಿಯ ಮತ್ತು ಅವನ ಶಿಷ್ಯ. ಸಿದ್ಧರಾಮ ಪುರಾಣ, ಸೋಮನಾಥ ಚರಿತೆ, ಹರಿಶ್ಚಂದ್ರ ಕಾವ್ಯ ಮುಂತಾದವುಗಳನ್ನು ಬರೆದಿರುವನು. ಇವನು ವಾರ್ಧಕ ಷಟ್ಪದಿಯಲ್ಲಿ ಕಾವ್ಯವನ್ನು ರಚಿಸಿದುದು ಒಂದು ಮಹತ್ವದ ಸಂಗತಿ.

ಹರಿಶ್ಚಂದ್ರ ಕಾವ್ಯದಲ್ಲಿ ಕವಿಯು, **''ಸತ್ಯವೇ ಹರನು''**, ಹರನೇ ಸತ್ಯ ಎಂಬ ಘನತತ್ವವನ್ನು ಮಂಡಿಸಿದ್ದಾನೆ. ಕಾವ್ಯದಲ್ಲಿ ಉಚಿತವಾದ ರೀತಿಯಲ್ಲಿ ಸಂಭಾಷಣೆಗಳು ಬರುವುದರಿಂದಲೂ ಕನ್ನಡದ ನಾಣ್ನುಡಿಗಳನ್ನು ಹದವರಿತು ಬಳಸುವುದರಿಂದಲೂ ಈತನ ಹರಿಶ್ಚಂದ್ರ ಕಾವ್ಯವು ತುಂಬಾ ಜನಪ್ರಿಯವಾಗಿದೆ. ಈ ಪದ್ಯದಲ್ಲಿ ಹರಿಶ್ಚಂದ್ರನು ಕಂಡ ಕನಸನ್ನು ವರ್ಣಿಸಲಾಗಿದೆ. ತಾನು ಕಂಡ ಕೆಟ್ಟ ಕನಸನ್ನು ವರ್ಣಿಸಿದಾಗ – ''ಎಂತಹ ಕಠಿಣ ಪ್ರಸಂಗಗಳು ಬಂದರೂ ಸತ್ಯವನ್ನು ಬಿಟ್ಟು ಕೆಡದಿರು'' ಎಂಬ ಸಲಹೆಯನ್ನು ಚಂದ್ರಮತಿಯು ಹರಿಶ್ಚಂದ್ರನಿಗೆ ನೀಡುತ್ತಾಳೆ. ಇದನ್ನು 'ಹರಿಶ್ಚಂದ್ರ ಕಾವ್ಯ' ದಿಂದ ಆಯ್ದುಕೊಳ್ಳಲಾಗಿದೆ.

---

ಹೊಗಳುತ್ತ ಹಾರಯಿಸುತುಬ್ಬುತ್ತಕೊಬ್ಬುತ್ತ
ನಗುತ ನಲಿಯುತ್ತ ಹಾಡುತ್ತಾಡುತಾನಂದ
ವೊಗೆಯುತಿರಲೊಬ್ಬ ಮುನಿಯಂ ಕಂಡಿದಾವನಾ ಶ್ರಮವೆಂದು ಬೆಸಗೊಂಡಡೆ
ವಿಗಡ ವಿಶ್ವಾಮಿತ್ರ ಮುನಿಯ ಬನವೆನೆ ಸುಖಂ
ಸುಗಿದು ಪೊಯ್ವಡದಂತೆ ಹಾವಗಿದು ಬಿಟ್ಟಂತೆ
ಬಗೆಬೆದರಿ ಗುರುವಾಜ್ಞೆಯಳಿದು ದಿನ್ನೇವೆನೆಂದನು ಹರಿಶ್ಚಂದ್ರ ನೃಪನು ||1||

ಹೊಳೆವ ಮೇರುವ ಸುತ್ತಿ ಬೆಂಡಾದ ರವಿಚಂದ್ರ
ಕಳೆಯ ತೊಡೆಯೆಡೆಯೊಳೊಯ್ಯನೆ ಮಲಗುವಂತೆ ರವಿ
ಕುಲಲಲಾಮಂ ವರಾಹನ ಹಿಂದೆ ಹತ್ತಿದಾ ಸರಮೇಲೆ ಗುರುವಾಜ್ಞೆಯ
ಕಳೆದ ಕೌಶಿಕನಾಶ್ರಮಂಬೊಕ್ಕ ಚಿಂತೆಯಿಂ
ಮುಳುಗುತ್ತ ನಿಜಸತಿಯ ತೋರದೊಡೆಗಳ ಮೇಲೆ
ಲಲಿತ ಮಣಿ ಮುಕುಟಮಂಡಿತ ಮಸ್ತಕವನಿಕ್ಕಿ ಮಗ್ಗು ಲಿಕ್ಕಿದನಾಗಳು ||2||

ಸತಿಮಡಿಸಿ ನೀಡುವೆಲೆ ವಿಡಿದ ಕೈ ಬಸವಳಿವು
ತತಿ ಚಿಂತೆಯೊಳು ಮರೆದ ತನು ಜೊಮ್ಮುವಿಡಿದ ಪು
ಱ್ಱತಿ ಭಾರಮಾಗಿ ಕಣ್ ಮುಚ್ಚಿ ತೋಳ್ ತೊಡೆ ಮಿಡುಕೆ ಸುಯ್ ಸೂಸೆ ನಿದ್ರೆ ಕವಿದ
ವಿತತ ಸುಖದಿಂದಿರುತಿರಲ್ಕೆ ನಾನಾ ದುಃಖ
ಯುತವಪ್ಪುದೊಂದು ಕನಸಂ ಕಂಡು ನೊಂದು ಭೂ
ಪತಿ ಬೆದರಿದಂತೆ ಭೋಂಕೆನಲೆದ್ದು ಬೆಬ್ಬಳಿಸಿ ನಾಲ್ದೆಸೆಯನಾರಯ್ದನು ||3||

ಧುರದೊಳರಿಭೂಭುಜರನಂಜಿಸುವ ನಡುಗಿಸುವ
ಕೊರಗಿಸುವ ಕೋಡಿಸುವ ಬಳುಕಿಸುವ ಜಳಕಿಸುವ
ಬಿರುದಂಕಮಲ್ಲ ನೀ ನಡುಗಲೇತಕ್ಕೆ ಹೇಳೆಂದು ಮೆಲ್ಲನೆ ನುಡಿಸಲು
ತರುಣಿ ಕೇಳೊಂದು ಕನಸಂ ಕಂಡೆನಾ ಕನಸು
ನಿರುತವೆಂದೇ ಕಣ್ಣ ತೆರೆದೆ ನೀನಿಂತಿದರ
ಪರಿಯಂ ವಿಚಾರಿಸೆಂದವನೀಶ ನುಡಿಯಲಾನುಡಿಗೆ ಸತಿ ಹೂಂಕೊಂಡಳು ||4||

ಘುಡು ಘುಡಿಸು ತೊಬ್ಬ ಮುನಿ ಬಂದು ನಾನೋಲಗಂ
ಗೊಡುವ ಮಣಿ ಮಂಟಪದ ಕಂಭವೆಲ್ಲವನು ತಡೆ
ಗಡಿದು ಹೊಂಗಳಸಂಗಳಂ ಮಾಣದೊಡೆಬಡಿದು ನೆರೆದ ಸಭೆಯೊಳಗೆನ್ನನು
ಕೆಡಹಿ ಸಿಂಹಾಸನವ ನೊಯ್ವಾಗಳೆನ್ನೆದೆಯ
ನಡರ್ದೊಂದು ಕಾಗೆ ಕರೆದುದು ಬಳಿಕ್ಕಾಂ ಗಿರಿಯ
ನಡರ್ದು ಶಿಖರದೊಳೆಸೆವ ಮಣಿಗೃಹಂಬೊಕ್ಕೆನಿದ ರಂತಸ್ಥವೇನೆಂದನು ||5||

ಬಗೆವಡೀ ಕನಸು ಗುರುವಾಜ್ಞೆಯಂ ಮೀರಿತ
ಕ್ಕೊಗೆವ ಕೇಡಿಂಗೆ ಸೂಚನೆ ಮುನಿಯ ಬೇಡಮಂ
ತ್ರಿಗೆ ಮಗಂಗೆನಗೆ ರಾಜ್ಯಕ್ಕೆ ಚತುರಂಗ ಸೇನೆಗೆ ಸಕಲಭಂಡಾರಕೆ ।
ನಗರಕ್ಕೆ ಸರ್ವ ಪರಿವಾರಕ್ಕೆ ತೇಜದೇ
ಳ್ಗೆಗೆ ನಿನ್ನ ಹರಣಕ್ಕೆ ಕೇಡು ಬಂದಡೆ ಬರಲಿ
ಮಿಗೆ ಸತ್ಯವಂ ಬಿಟ್ಟು ಕೆಡದಿರವನೀಶಕ್ಕೈ ಮುಗಿದು ಬೇಡಿದೆನೆಂದಳು ||6||

**ಶಬ್ದಾರ್ಥ :** **ಹಾರಯಿಸು** – ಶುಭಕೋರು, **ಉಬ್ಬುತ್ತ** – ಹಿಗ್ಗಿನಿಂದ, **ಕೊಬ್ಬುತ್ತ** – ಉತ್ಸಾಹದಿಂದ, **ಒಗೆ** – ಹೊರ ಸೂಸು, **ಬೆಸಗೊಳ್ಳು** – ಕೇಳು, **ಬೆಂಡಾಗು** – ದಣಿ, **ವಿಗಡ** – ಸಮರ್ಥ/ಮಹಾನ್, **ಬಗೆಬೆದರಿ**–ಗಾಬರಿಗೊಂಡು, **ಒಯ್ಯನೆ** – ನೇರವಾಗಿ / ನೆಟ್ಟಗೆ, **ಲಲಾಮ** – ತಿಲಕ, **ವರಾಹ** – ಹಂದಿ, **ಲಲಿತ** – ಸುಂದರವಾದ, **ಮಸ್ತಕ** – ತಲೆ, **ಬಸವಳಿ** – ದಣಿ, **ಜೊಮ್ಮುವಿಡಿದ** – ಮೈಮರೆತ, **ಮಿಡುಕು** – ಮರುಗು / ಚಿಂತಿಸು, **ವಿತತ** – ಶ್ರೇಷ್ಠವಾದ, **ಬೆಬ್ಬಳಿಸು** – ಹೌಹಾರು, **ಭೂಭುಜ** – ರಾಜ / ಅರಸ, **ಆರಯ್ಯು** – ಹುಡುಕು, **ಧುರ** – ಯುದ್ಧ, **ಕೋಡಿಸು** – ಅಂಜಿಸು, ಜಳಕಿಸು – ನಡುಗಿಸು, ಬಿರುದಂಕಮಲ್ಲ – ಬಿರುದು ಪಡೆದ ವೀರ, ನಿರುತ – ಸತ್ಯ, ಓಲಗ – ದರ್ಬಾರು, **ತಡೆಗಡಿ** – ಕೆಡಹು, **ಮಾಣದೆ** – ಬಿಡದೆ, **ಒಡೆಬಡಿ** – ಬೀಳಿಸು / ಕೆಡಹು, **ಅಡರ್ದು** – ಏರಿ/ಹತ್ತಿ, **ಎಸೆವ** – ಶೋಭಿಸುವ, **ಅಂತಸ್ಥ** – ಹುದುಗಿದ ಅರ್ಥ, **ಅವನಿ** – ಭೂಮಿ, **ಹರಣ** – ಪ್ರಾಣ.


**ವಿಶೇಷ ವಿಚಾರ :**

ಚತುರಂಗ ಸೇನೆ – ಹಿಂದಿನ ಕಾಲದಲ್ಲಿ ರಾಜರಬಳಿ ನಾಲ್ಕು ಪ್ರಕಾರದ ಸೈನ್ಯವಿರುತ್ತಿತ್ತು. ಆನೆ ಕುದುರೆ, ರಥ ಮತ್ತು ಕಾಲಾಳು. ಇದಕ್ಕೆ ಒಟ್ಟಿಗೆ 'ಚತುರಂಗ ಸೇನೆ' ಎನ್ನಲಾಗುತ್ತಿತ್ತು.


**ಕೃತಿ 1 ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**



**ಕೃತಿ 2** ಕೆಳಗಿನ ಜಾಲಾಕೃತಿಯನ್ನು ಪೂರ್ಣಮಾಡಿರಿ.




**ಕೃತಿ 3** 'ರಾಜ' ಎಂಬ ಪದಕ್ಕೆ ಬಳಸಿದ ಪರ್ಯಾಯ ಪದಗಳನ್ನು ಹುಡುಕಿ ಬರೆಯಿರಿ.




**ಕೃತಿ 4** ಕೆಳಗಿನ ಶಬ್ದಗಳಿಗೆ ಸಮಾನಾರ್ಥಕ ಶಬ್ದಗಳನ್ನು ಬರೆಯಿರಿ.

i) ಹರಣ (i) ______ (ii) ______

ii) ಧುರ (i) ______ (ii) ______

iii) ಓಲಗ (i) ______ (ii) ______

**ಕೃತಿ 5 ಪದ್ಯವನ್ನು ಓದಿ ಕೊಟ್ಟ ಕೃತಿಗಳನ್ನು ಬಿಡಿಸಿರಿ.**

(i) ಹರಿಶ್ಚಂದ್ರನು ಯಾರ ಆಶ್ರಮಕ್ಕೆ ಬರುತ್ತಾನೆ ? ______

(ii) ಹರಿಶ್ಚಂದ್ರನು ಎಂಥ ಕನಸನ್ನು ಕಾಣುತ್ತಾನೆ ? ______

(iii) ಹರಿಶ್ಚಂದ್ರನ ಕನಸಿನಲ್ಲಿ ಮುನಿಯು ಹೇಗೆ ಬರುವನು ? ______

(iv) ಚಂದ್ರಮತಿಯು ಹರಿಶ್ಚಂದ್ರನಿಗೆ ಏನೆಂದು ಬೇಡಿಕೊಳ್ಳುವಳು ?______

**ಕೃತಿ 6 ಕೆಳಗಿನ ಪದಗಳ ತತ್ಸಮ - ತದ್ಭವಗಳನ್ನು ಬರೆಯಿರಿ.**

(i) ಬನ

(ii) ಕಳಸ

(iii) ವಿಕಟ

(iv) ಸ್ತಂಭ

**ಕೃತಿ 7 ಕೆಳಗಿನ ಪದಗಳ ಸಮಾಸ ವಿಗ್ರಹಿಸಿ ಹೆಸರಿಸಿರಿ.**

(i) ಕಣ್ಮುಚ್ಚಿ

(ii) ನಾಲ್ದೆಸೆ

(iii) ಎಲೆವಿಡಿದ

(iv) ಗುರುವಾಜ್ಞೆ

**ಕೃತಿ 8 ಕೆಳಗಿನ ಪದ್ಯಕ್ಕೆ ಪ್ರಸ್ತಾರ ಹಾಕಿ ಛಂದಸ್ಸು ಗುರುತಿಸಿರಿ :**

ಹೊಗಳುತ್ತ ಹಾರಯಿಸುತುಬ್ಬುತ್ತ ಕೊಬ್ಬುತ್ತ
ನಗುತ ನಲಿಯುತ್ತ ಹಾಡುತ್ತಾಡು ತಾನಂದ
ವೊಗೆಯುತಿರಲೊಬ್ಬ ಮುನಿಯಂ ಕಂಡಿದಾವನಾ ಶ್ರಮವೆಂದು ಬೆಸಗೊಂಡಡೆ ।

**ಕೃತಿ 9 ನೀವು ಕಂಡ ಭಯಾನಕ ಕನಸನ್ನು 10-12 ಸಾಲುಗಳಲ್ಲಿ ನಿಮ್ಮ ಮಾತುಗಳಲ್ಲಿ ಬರೆಯಿರಿ.**

★ ★ ★ ★ ★

# 1. ಯಶಸ್ಸು

- ರಾ.ಯ. ಧಾರವಾಡಕರ

**ರಾ. ಯ. ಧಾರವಾಡಕರ (1919-1991) :** ಕನ್ನಡ ಪ್ರಾಧ್ಯಾಪಕರಾಗಿ, ಪ್ರಬಂಧಕಾರರಾಗಿ, ಭಾಷಾ ಶಾಸ್ತ್ರಜ್ಞರಾಗಿ, ಪ್ರಾಚಾರ್ಯರಾಗಿ, ಅದ್ವಿತೀಯ ವಾಗ್ಮಿಗಳಾಗಿ ಖ್ಯಾತರಾದವರು. ಸಾಹಿತ್ಯ ಸಮೀಕ್ಷೆ, ಕನ್ನಡ ಭಾಷಾಶಾಸ್ತ್ರ, ಹೊಸಗನ್ನಡ ಸಾಹಿತ್ಯದ ಉದಯಕಾಲ, ಧೂಮ್ರ ವಲಯಗಳು, ನಾನು ಕಂಡ ಅಮೇರಿಕಾ ಮುಂತಾದವು ಅವರ ಸುಪ್ರಸಿದ್ಧ ಕೃತಿಗಳು.

ಯಶಸ್ಸನ್ನು ಸಾಧಿಸಬೇಕೆನ್ನುವುದು ಪ್ರತಿಯೊಬ್ಬನ ಜೀವನದ ಧ್ಯೇಯ. 'ಬುದ್ಧಿವಂತಿಕೆಯಿಂದ, ವಿನಯ ಪ್ರಾಮಾಣಿಕತೆಯಿಂದ ಸತತ ಪರಿಶ್ರಮದಿಂದ ಯಶಸ್ಸನ್ನು ಸಾಧಿಸಿ; ಯಶಸ್ಸಿಗೆ ಕಾರಣರಾದವರ ಬಗ್ಗೆ ಕೃತಜ್ಞತೆಯನ್ನು ತಾಳಬೇಕು' ಎಂದು ಲೇಖಕರು ವಿನೋದಪೂರ್ಣವಾಗಿ, ವಿಚಾರಪೂರ್ಣವಾಗಿ ಇಲ್ಲಿ ನಿರೂಪಿಸಿದ್ದಾರೆ.

ಇದನ್ನು ಅವರ 'ತೂರಿದ ಚಿಂತನೆಗಳು' ಎಂಬ ಗ್ರಂಥದಿಂದ ಆರಿಸಿ - ಸಂಪಾದಿಸಲಾಗಿದೆ.

---

ಈ ಪ್ರಪಂಚದಲ್ಲಿ ಎಲ್ಲರೂ ಯಶಃಕಾಮಿಗಳೇ. ಅಪಯಶಸ್ಸನ್ನು, ಸೋಲನ್ನು ಅಪೇಕ್ಷಿಸುವವರೇ ಇಲ್ಲ. ಯಶಸ್ಸಿಗೆ ತಂದೆಂದಿರು ಬಹಳ; ಸೋಲು ಪಾಪ ಅನಾಥ. ಯಾರೇ ಯಾವುದೇ ಕೆಲಸದಲ್ಲಿ ಗೆದ್ದರೆ, ಆ ಯಶಸ್ಸಿಗೆ ತಾವು ಕಾರಣ ರೆಂದು ಶಿಲ್ಪಿಗಳೆಂದು ಹೇಳಿಕೊಳ್ಳಲು ಸಾವಿರ ಜನ ಮುಂದೆ ಬರುತ್ತಾರೆ. ಆದರೆ, ಯಾವುದೇ ಕಾರ್ಯದಲ್ಲಿ ಅಪಯಶಸ್ಸು ಬಂದರೆ, ತಮಗೆ ಸಂಬಂಧವೇ ಇಲ್ಲ ಎಂಬಂತೆ ಎಲ್ಲರೂ ಹಿಂದೆ ಸರಿಯುತ್ತಾರೆ. ಆಗ ಎಲ್ಲರೂ ವಿಶ್ವಾಮಿತ್ರರೇ. ಕಾವ್ಯದ ಪ್ರಯೋಜನಗಳನ್ನು ಹೇಳುವಾಗ ಅಲಂಕಾರಿಕನಾದ ಮಮ್ಮಟನು :

ಕಾವ್ಯಂ ಯಶಸೇ ಅರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ ಸಧ್ಯ: ಪರನಿರ್ವೃತಯೇ ಕಾಂತಾ - ಸಮ್ಮಿತತಯೋಪದೇಶಯುಜೇ ॥ ಎಂದು ಯಶಸ್ಸನ್ನು ಮೊದಲಿಗೆ ಹೇಳಿದ್ದಾನೆ. ಅದಾದನಂತರ ಹಣ, ವ್ಯವಹಾರ, ದುಃಖನಿವಾರಣೆ, ಉಪದೇಶ ಇತ್ಯಾದಿ ಬರುತ್ತವೆ. ಒಳ್ಳೆಯದಕ್ಕೆ ಜನ ಹೇಗೆ ಯಶಸ್ಸನ್ನು ಕೋರುತ್ತಾರೋ ಹಾಗೆಯೇ ಕೆಟ್ಟದರಲ್ಲಿಯೂ ಸಹ ಜನ ದೇವರಲ್ಲಿ ಯಶಸ್ಸನ್ನು ಪ್ರಾರ್ಥಿಸುತ್ತಾರೆ. ಕೊಲೆಗಡಕರು, ಕಳ್ಳರು, ವಂಚಕರು ಸಹ ದೇವರಲ್ಲಿ ಕೇಳಿಕೊಳ್ಳುವುದು ತಮ್ಮ ಕಸುಬಿನ ಯಶಸ್ಸನ್ನೇ. ಹಂಸನೂರ ಕಳ್ಳರು ದೀಪಾವಳಿಯ ಅಮಾವಾಸ್ಯೆಯ ದಿವಸ ದೇವರ ಪೂಜೆ ಮಾಡಿ ಅಂದಿನ ದಿವಸ ಕಳ್ಳತನಕ್ಕೆ ಕೈಹಾಕುತ್ತಿದ್ದರಂತೆ. ಮನುಷ್ಯ ಒಳ್ಳೆಯದಕ್ಕಾಗಿ ಯಶಸ್ಸನ್ನು ಅಪೇಕ್ಷಿಸಬೇಕೇ ವಿನಾ ಕೆಟ್ಟದ್ದಕ್ಕಾಗಿ ಅಲ್ಲ.

ಆದರೆ ಯಶಸ್ಸು ಸರಳವಾಗಿ ಲಭಿಸುವುದಿಲ್ಲ. ಯಶಸ್ಸನ್ನು ಪಡೆಯಲು ಯಾವ ಮಾಯಾದಂಡವೂ ಇಲ್ಲ. ಯಾವ ಎಸ್ಕೆಲೇಟರೂ (ಯಂತ್ರಚಾಲಿತ ಮೆಟ್ಟಲು) ನಮ್ಮನ್ನು ಸುಂಯ್ ಎಂದು ಯಶಸ್ಸಿನ ಶಿಖರಕ್ಕೆ ಒಯ್ದು ನಿಲ್ಲಿಸು ವುದಿಲ್ಲ. ಯಶಸ್ಸಿನ ಬಗ್ಗೆ ಬಿ.ಸಿ. ಫೊರ್ಬ್ಸ್ ಎನ್ನುವವರು ಹೀಗೆ ಹೇಳುತ್ತಾರೆ, 'ಯಶಸ್ಸಿನ ಸೌಧದ ಪ್ರತಿಯೊಂದು ಮೆಟ್ಟಲನ್ನೂ ನಾವು ನಿಧಾನವಾಗಿ, ಪರಿಶ್ರಮಪೂರ್ವಕವಾಗಿ ಹತ್ತಬೇಕಾಗುತ್ತದೆ. ಯಶಃಕಾಮಿಯಾದವನಿಗೆ ವಿರಾಮವೆಂಬುದಿಲ್ಲ.' ಹಲ ಕೆಲವು ಸಲ ಕೆಲವು ದೇವ ಪಿತೃಗಳು ಕೆಲವರಿಗೆ ಯಶಸ್ಸನ್ನು ದೊರಕಿಸಿಕೊಡಬಹು ದೇನೋ ನಿಜ. ಆದರೆ ಅದು ಸತ್ವಯುತವಾದುದಲ್ಲ, ಚಿರಂತನವಾದುದಲ್ಲ. ಮೈಗೆ ಬಂದ ಬಾವು ಆರೋಗ್ಯದ ಲಕ್ಷಣವಲ್ಲ. ಮತ್ತೊಬ್ಬರ ಹೆಗಲ ಮೇಲೆ ಕುಳಿತು ನಾವು ಬಹಳ ದೂರ ಸಾಗಲಾರೆವು. ನಮ್ಮ ದಾರಿಯಲ್ಲಿ ನಾವೇ ನಡೆಯಬೇಕಾತ್ತದೆ. ಕಟ್ಟಿದ ಬುತ್ತಿ, ಮತ್ತೊಬ್ಬರಿಂದ ಬಂದ ಯಶಸ್ಸು ಬಹಳ ದಿನ ತಡೆಯುವುದಿಲ್ಲ. ಅವು ಅಚಿರಪ್ರಭೆ. ಆದ್ದರಿಂದ, ನಾವು ಇದಕ್ಕಾಗಿ ಬಿಟ್ಟೂಬಿಡದ ಪರಿಶ್ರಮ ಮಾಡಬೇಕಾಗುತ್ತದೆ. ಇಂಗ್ಲೀಷಿನಲ್ಲಿ ಒಂದು ಹೇಳಿಕೆಯುಂಟು "The heights by great men reached and kept were not attained by sudden flight, but they, while their companions slept they were toiling upward in the night," ದೊಡ್ಡವರು

ಯಶಸ್ಸನ್ನು ಸಾಧಿಸಿದ ರೀತಿ ಇದು. ಅವರ ಮಿತ್ರರೆಲ್ಲ ರಾತ್ರಿ ನಿದ್ದೆ ಮಾಡುವಾಗ, ಅವರು ಮಾತ್ರ ಸತತವಾಗಿ ತಮ್ಮ ಗುರಿ ಸಾಧನೆಗಾಗಿ ಪ್ರಯತ್ನ ಮಾಡುತ್ತಲೇ ಇದ್ದರು.

ಯಶಸ್ಸನ್ನು ಸಾಧಿಸಬೇಕೆನ್ನುವವರಿಗೆ ಸೋಲು, ಅವಮಾನ, ನಿಂದನೆ ಕಾಯ್ದಿಟ್ಟದ್ದೇ. ಹೀಗಾಗಿ ಇದರಲ್ಲಿಯೇ ಹುಟ್ಟಿದ ಬಡ ಕುಟುಂಬದವರು ಶ್ರೀಮಂತ ಕುಟುಂಬದವರಿಗಿಂತ ಹೆಚ್ಚು ಪ್ರಯತ್ನಶೀಲರಾಗಿರುತ್ತಾರೆ. ಹದಿನೆಂಟನೆಯ ಶತಮಾನದ ಎಲ್ಲ ಇಂಗ್ಲೀಷ್ ಬರಹಗಾರರು ಈ ಬಡತನದಲ್ಲಿ ಮುಳು ಮುಳುಗಿ ಎದ್ದೇ ಯಶಸ್ಸನ್ನು ಪಡೆದವರು. ಖ್ಯಾತ ಡಾ. ಜಾನ್ಸನ್‌ರಿಗೆ ಬದಲಿಸಲು ಮತ್ತೊಂದು ಕೊಟ್ಟಿರಲಿಲ್ಲ. ಅವರ ಬೂಟುಗಳು ಹರಿದು ಕಿಂಡಿ ಕಾಣುತ್ತಿದ್ದವು. ಅವರು ತಲೆಗೆ ಧರಿಸುವ ಹ್ಯಾಟು ಅರ್ಧಮಾತ್ರ ತಲೆಯನ್ನು ಆವರಿಸಿರುತ್ತಿತ್ತು. ಅವರ ಕೋಟಿನ ಹಿತ್ತಾಳೆಯ ಬಿರಡೆಗಳು ತಮ್ಮ ಬಣ್ಣವನ್ನು ಕಳೆದುಕೊಂಡು ಕಪ್ಪಾಗಿದ್ದವು. ಇಂಥವರು ಏಕಾಂಗಿಯಾಗಿ, ಸತತ ಪರಿಶ್ರಮದ ಮೂಲಕ ಇಂಗ್ಲೀಷ್ ಭಾಷೆಯಲ್ಲಿಯ ಪ್ರಥಮ ನಿಘಂಟನ್ನು ಸಿದ್ಧಪಡಿಸುವಾಗ ಅದರ ಪ್ರಕಾಶನಕ್ಕೆ ಯಾರದಾದರೂ ನೆರವೀಯಲು ಲಾರ್ಡ್ ಚೆಸ್ಟರ್‌ಫಿಲ್ಡ್ ಅವರನ್ನು ಅನೇಕ ಸಲ ಯಾಚಿಸಿದರೆ, ಲಾರ್ಡ್ ಚೆಸ್ಟರ್‌ಫಿಲ್ಡ್ ಅದಕ್ಕೆ ಉತ್ತರವನ್ನೇ ಕೊಡಲಿಲ್ಲ. ಆದರೆ ನಿಘಂಟಿನ ಕೆಲಸವೆಲ್ಲ ಸಂಪೂರ್ಣವಾಗಿ ಇನ್ನೇನು ಅಚ್ಚಿನ ಮನೆ ಕಾಣುವುದರಲ್ಲಿದೆ ಎಂದಾಗ ಲಾರ್ಡ ಚೆಸ್ಟರ್‌ಫೀಲ್ಡರಿಗೆ ಒಮ್ಮೆಲೇ ಅಂತಃಕರಣ ಉಕ್ಕಿಬಂತು. ಆಗ ಅವರು ಡಾ. ಜಾನ್ಸನ್ನರಿಗೆ ನಿಘಂಟನ್ನು ತಮಗೆ ಸಮರ್ಪಿಸುವರೆಂದು ಆಶಿಸಿ ಸಹಾಯವನ್ನು ಕೊಡಮಾಡಿ ಪತ್ರ ಬರೆದರು. ಅದಕ್ಕೆ ಪ್ರತಿಯಾಗಿ ಡಾ. ಜಾನ್ಸನ್ ಅವರು ಲಾರ್ಡ್ ಚೆಸ್ಟರ ಫೀಲ್ಡರಿಗೆ ಬರೆದ ಉತ್ತರ ಇಂಗ್ಲೀಷ್ ಸಾಹಿತ್ಯದಲ್ಲಿಯೇ ಅಪ್ರತಿಮ ಹಾಗೂ ಚಿರಂತನವಾಗಿದೆ.

''ಪ್ರಭು, ನಿಮ್ಮ ಮನೆಯ ಹೊರಕೋಣೆಗಳಲ್ಲಿ ದಾರಿಕಾಯ್ದು, ನಿಮ್ಮ ಮನೆಯ ಬಾಗಿಲಿನಿಂದ ಹೊರಹಾಕಲ್ಪಟ್ಟು, ಇಂದಿಗೆ ಏಳು ವರ್ಷಗಳು ಸಂದವು. ಈ ಅವಧಿಯಲ್ಲಿ ಯಾರ ಉತ್ತೇಜನವಿಲ್ಲದೆ ಕಷ್ಟ ಪರಂಪರೆಗಳಲ್ಲಿ ನನ್ನ ಕೆಲ ಸವನ್ನು ಸಾಗಿಸಿಕೊಂಡು ಬಂದಿದ್ದೇನೆ. ನಾನು ನನ್ನ ಪ್ರಯತ್ನದ ಸಮುದ್ರದಲ್ಲಿ ಕೈಸೋತು ಈಜುತ್ತ ಒದ್ದಾಡುತ್ತಿದ್ದಾಗ ನೀವು ನನ್ನ ಕಡೆಗೆ ಕಣ್ಣೆತ್ತಿಯೂ ಸಹ ನೋಡಲಿಲ್ಲ. ನನ್ನ ಹೊಲಸು ಬೂಟಿನಿಂದ ನಿಮ್ಮ ಮನೆಯ ಪರ್ಶಿಯನ್ ಜಮ ಖಾನೆಗಳು ಹೊಲಸಾಗುತ್ತಿವೆಯೆಂದು ಆಗ ನೀವು ನನ್ನನ್ನು ಹತ್ತಿರ ಸಹ ಸೇರಿಸಿಕೊಳ್ಳಲಿಲ್ಲ. ಈಗ ನಾನು ಅಂತೂ ಇಂತೂ ಈಜಿ, ದಂಡೆಯ ಸಮೀಪಕ್ಕೆ ಬಂದಾಗ, ನೀವು ನಿಮ್ಮ ಹೆಸರಿಗಾಗಿ ಉದಾರವಾಗಿ ಸಹಾಯ ಮಾಡಲು ಮುಂದೆ ಬಂದಿದ್ದೀರಿ. ಇಂಥ ಸಹಾಯ ನನಗೆ ತುಚ್ಛವಾದುದು.'' ಎಂದು ಡಾ. ಜಾನ್ಸನ್ ಖಡಾಖಂಡಿತವಾಗಿ ಹೇಳಿದರು.

ಹಾಗೆಯೇ ಪಾಪ ಆಲಿವರ್ ಗೋಲ್ಡ್‌ಸ್ಮಿಥ್ ಕೂಡ. ಗೋಲ್ಡ್‌ಸ್ಮಿಥ್ ಬರೆದ ಕಾದಂಬರಿಗಳನ್ನು ಓದದ ಇಂಗ್ಲೀಷ್ ವಾಚಕರು ಯಾರಿದ್ದಾರೆ? ಇಂಥ ಹಿರಿಯ ಸಾಹಿತಿ ಚರ್ಚದ ಎದುರು ಭಿಕ್ಷುಕರ ಜತೆ ಕುಳಿತು ಭಿಕ್ಷೆ ಬೇಡಬೇಕಾಯಿತು. ಆದರೆ ಎಂಥ ತೊಂದರೆಗಳು ಬಂದರೂ ಗೋಲ್ಡ್‌ಸ್ಮಿಥ್ ಬರೆಯುವುದನ್ನು ಬಿಡಲಿಲ್ಲ. ಹೀಗಾಗಿ ಅವರು ಬರೆದದ್ದೆಲ್ಲ ಬಂಗಾರವಾಯಿತು, ಮುಟ್ಟಿದ್ದೆಲ್ಲ ವೈಡೂರ್ಯವಾಯಿತು.

ಸಾಮನ್ ಝೂರ್ ಎಂಬ ಗಣಿತಜ್ಞನಿಗೆ ಗಣಿತ ಬಿಡಿಸಲು ಕಾಗದಗಳಿರಲಿಲ್ಲ. ಅವನು ವೃತ್ತಿಯಿಂದ ಸಿಂಪಿಗನಾಗಿದ್ದ. ಜನರು ಹೊಲಿಯಲು ಕೊಟ್ಟ ಬಟ್ಟೆಯ ಮೇಲೆ ಗಣಿತವನ್ನು ಬಿಡಿಸುತ್ತಿದ್ದ. 'ಸ್ಕೂಲ್ ಫಾರ್ ಸ್ಕ್ಯಾಂಡಲ್'ದ ಫೆರಿಡನ್‌ನಿಗೆ ಧರಿಸಲು ಎರಡನೆಯ ಸೂಟು ಇರಲಿಲ್ಲ. ಅವರು ತಾವು ಹೊದ್ದುಕೊಳ್ಳುವ ರಗ್ಗಿನಲ್ಲಿ ಎರಡು ಕಿಂಡಿ ಮಾಡಿ, ಅದನ್ನು ಹೊದ್ದುಕೊಂಡು ಅದರ ಮುಖಾಂತರವೇ ಬಂದವರನ್ನು ನೋಡುತ್ತಿದ್ದರು. ಸಾಲ ಮರುಪಾವತಿ ಮಾಡದ್ದಕ್ಕಾಗಿ ಇವರಿಗೆ ಜೈಲುವಾಸವೂ ಆಯಿತು. ಆದರೆ ಇವರೆಲ್ಲ ಗೈದ ಕೃತಿ ಅದ್ಭುತ !! ಅದರಂತೆಯೇ ಮದ್ರಾಸದ ಗವರ್ನರರಾಗಿದ್ದ ಸಾರ್ ಥಾಮಸ್ ಮನ್ರೊ ಅವರೂ ಭಾರತಕ್ಕೆ ಮೊದಲು ಹಡಗದಲ್ಲಿ ಓಡಿ ಬಂದವರು. ತದನಂತರ ಸತತ ಪರಿಶ್ರಮದ ಮೂಲಕ ಬಳ್ಳಾರಿಯ ಕಲೆಕ್ಟರರಾದರು. ಕೊನೆಗೆ ಮದ್ರಾಸ ಪ್ರಾಂತದ ಗವರ್ನರರಾದರು.

ಬ್ರಿಟನ್ನಿನ ಅತ್ಯಂತ ಶ್ರೇಷ್ಠ ಪ್ರಧಾನಮಂತ್ರಿಯಾಗಿದ್ದ ಡಿಸರೆಲಿ ಅವರು ಜ್ಯೂ ಜನಾಂಗಕ್ಕೆ ಸೇರಿದವರು ಎಂಬ ಕಾರಣದಿಂದ ಚಿಕ್ಕಂದಿನಿಂದಲೂ ಅನೇಕ ಅವಮಾನಗಳನ್ನು ಸಹಿಸಬೇಕಾಯಿತು. ಅವರು ಚಿಕ್ಕವರಿದ್ದಾಗ ಶಾಲೆಗೆ ಹೋಗುತ್ತಿದ್ದಾಗ ಉಳಿದ ಆಂಗ್ಲ ವಿದ್ಯಾರ್ಥಿಗಳು ಹಿಂದಿನಿಂದ ಅವರನ್ನು ತಿವಿಯುತ್ತಿದ್ದರು, ಮೂದಲಿಸುತ್ತಿದ್ದರು. ಯಾವ ಆಟಪಾಟಗಳಲ್ಲಿಯೂ ಅವರಿಗೆ ಪ್ರವೇಶವನ್ನೇ ಕೊಡುತ್ತಿದ್ದಿಲ್ಲ. ಮಾತುಮಾತಿಗೆ 'ಏ ಜ್ಯೂ' ಎಂದು ಅವರನ್ನು

ಹೀಯಾಳಿಸುತ್ತಿದ್ದರು. ಒಂದು ಸಲವಂತೂ ತುಂಬಾ ಮಳೆಬಿದ್ದು ಗಟಾರುಗಳಲ್ಲೆಲ್ಲ ನೀರು ಹರಿಯುತ್ತಿದ್ದಾಗ 5–10 ಜನ ಪುಂಡ ಹುಡುಗರು ಈ ಚಿಕ್ಕ ಬಾಲಕನನ್ನು ಒದ್ದು ಕೆಳಗೆ ಕೆಡವಿ, ಹರಿಯುವ ನೀರಿನ ಗಟಾರದಲ್ಲಿ ಹಾಕಿಬಿಟ್ಟರು. ಡಿಸರೆಲಿ ಕಣ್ಣಲ್ಲಿ ನೀರು ತುಂಬಿ ಅಳಹತ್ತಿದರು. ಆಗ, ಆ ಪುಂಡರು ಅವರಿಗೆ, ''ಹೋಗು, ಹೋಗಿ ನಿಮ್ಮ ಜ್ಯೂ ಜನರ ಗುಡಿಯಲ್ಲಿ ಕೂತು ಅಳು'' ಎಂದು ಮೂದಲಿಸಿದರು. ಇಂಥ ಅವಮಾನ ಪರಂಪರೆಗಳನ್ನೇ ಈ ಅದ್ಭುತ ವ್ಯಕ್ತಿ ಪಡೆದುಕೊಳ್ಳಬೇಕಾಗುತ್ತಿತ್ತು.

ಒಂದು ಸಲ ನಾಲ್ಕಾರು ಆಂಗ್ಲ ವಿದ್ಯಾರ್ಥಿಗಳು ಇವರ ಮೇಲೆ ಒಮ್ಮೆಲೇ ಮುಗಿಬಿದ್ದಾಗ, ಏನೇನೂ ಧೃತಿಗೆಡದ ಬಾಲಕ ಡಿಸರೆಲಿ ಅವರಲ್ಲಿ ಒಬ್ಬನನ್ನು ನೆಲಕ್ಕೆ ಹಾಕಿ ಅದುಮಿದಾಗ, ಇಡೀ ಆಂಗ್ಲ ಜನಾಂಗದ ಪತನವನ್ನೇ ಜನ ಗಾಬರಿಯಾಗಿ ವೀಕ್ಷಿಸಿದರು. ಒಬ್ಬ ಜ್ಯೂ ಆಂಗ್ಲನನ್ನು ನೆಲಕ್ಕೆ ಕೆಡವಬಹುದೆಂಬುದನ್ನು ಡಿಸರೆಲಿ ತೋರಿಸಿಕೊಟ್ಟರು. ಅಂದಿನಿಂದ ಯಾವ ಆಂಗ್ಲ ಬಾಲಕನೂ ಈ ಜ್ಯೂ ಬಾಲಕನ ತಂಟೆಗೆ ಬರಲಿಲ್ಲ. ಧೈರ್ಯ, ಸಾಹಸ, ಬುದ್ಧಿವಂತಿಕೆ, ಸತತ ಪರಿಶ್ರಮಗಳು ಡಿಸರೆಲಿಯವರನ್ನು ಪ್ರಪಂಚದಲ್ಲಿಯ ಅತ್ಯಂತ ಮೇಧಾವಿಗಳಲ್ಲಿ ಒಬ್ಬರನ್ನಾಗಿ ಮಾಡಿದವು. ಆಗ ಇಂಗ್ಲಂಡದಿಂದ ಭಾರತಕ್ಕೆ ಬರಬೇಕಾದರೆ, ಆಫ್ರಿಕಾ ಖಂಡವನ್ನು ಸುತ್ತು ಹಾಕಿ ಬರಬೇಕಾಗುತ್ತಿತ್ತು. ಅಲ್ಲದೆ ಆಫ್ರಿಕೆಯ ಕೊನೆಯ ತುದಿಗೆ ಗಾಳಿ ಒಮ್ಮೆಲೇ ವಿರುದ್ಧವಾಗಿ ಬೀಸುತ್ತಿದ್ದುದರಿಂದ ಅನೇಕ ಹಡಗುಗಳು ಒಡೆದು ಅಲ್ಲಿ ನುಚ್ಚುನೂರಾಗುತ್ತಿದ್ದವು. ಈ ದುರ್ದೈವೀ ಘಟನೆಯನ್ನು ತಪ್ಪಿಸುವುದಕ್ಕಾಗಿಯೂ ಹಾಗೂ ಪ್ರಯಾಣದ ವೇಳೆಯನ್ನು ಕಡಿಮೆ ಮಾಡುವುದಕ್ಕಾಗಿಯೂ ಸುಯೇಜ್ ಕಾಲುವೆಯನ್ನು ನಿರ್ಮಾಣ ಮಾಡಿಸಿದ ಶ್ರೇಯಸ್ಸು ಈ ಮುತ್ಸದ್ದಿ ಡಿಸರೆಲಿ ಅವರಿಗೆ ಸಲ್ಲುತ್ತದೆ. ಇಂಥ ಮಹಾ ಮೇಧಾವಿ ಎದುರಿಸಬೇಕಾಗಿ ಬಂದ ವಿಘ್ನಗಳಿಗೆ ಕೊರತೆಯೇನೂ ಇಲ್ಲ. ಜ್ಯೂ ಎಂಬ ಶಾಪ, ಭೂತ ಬೆನ್ನು ಹತ್ತಿದ ಹಾಗೆ ಯಾವಾಗಲೂ ಅವರ ಬೆನ್ನು ಹತ್ತಿಯೇ ಇತ್ತು. ಅವರು ಬ್ರಿಟಿಷ ಪಾರ್ಲಿಮೆಂಟಿನ ಸದಸ್ಯರಾಗಿ ಮೊದಲ ಸಲ ಭಾಷಣ ಮಾಡಲು ಎದ್ದಾಗ, ಸಭಾಪತಿಗಳು ಅವರಿಗೆ ಮಾತನಾಡಲು ಅವಕಾಶವನ್ನೇ ಕೊಡಲಿಲ್ಲ. ಕೂಡು ಕೂಡು ಎಂದು ಅವರನ್ನು ಕೂಡಿಸಿಯೇ ಬಿಟ್ಟರು. ಆದರೆ ಕೂಡುವ ಮೊದಲು ಡಿಸರೆಲಿ ಸಭಾಪತಿಗಳಿಗೆ ಒಂದು ಮಾತನ್ನು ಹೇಳಿದರು. ''ಮುಂದಿನ ಸಲ ನಾನು ಪಾರ್ಲಿಮೆಂಟಿನಲ್ಲಿ ಮಾತಾಡಲು ಎದ್ದಾಗ ಎಲ್ಲ ಸದಸ್ಯರಿಂದ ಮೆಚ್ಚುಗೆಯ ಹರ್ಷೋದ್ಗಾರಗಳನ್ನು ಪಡೆಯದೆ ಹಾಗೆಯೇ ಕೂಡುವುದಿಲ್ಲ.'' ಅವರು ಈ ಹರ್ಷೋದ್ಗಾರಗಳನ್ನು ಪಡೆದರಷ್ಟೇ ಅಲ್ಲದೆ, ಬ್ರಿಟನ್ನಿನ ಸುಪ್ರಸಿದ್ಧ ಪ್ರಧಾನಮಂತ್ರಿಗಳೂ ಆದರು. ಅವರ ಈ ಯಶಸ್ಸಿಗೆ ಕಾರಣವೇನು? ಡಿಸರೆಲಿ ಹೇಳುತ್ತಿದ್ದರು – ಜೀವನ ಲಘುವೆಂದು ತಿಳಿದುಕೊಳ್ಳದಷ್ಟು ಚಿಕ್ಕದಾಗಿದೆ. ''ಸಾಹಸಿಗರಿಗೆ ಮಾತ್ರ ಸಾಹಸಗಳಿವೆ.'' ಅಳುಬುರುಕರ ಕೈಯಲ್ಲಿ ಹೊನ್ನಿನ ಕೊಪ್ಪರಿಗೆಯನ್ನು ಕೊಟ್ಟರೂ ಅದನ್ನು ಯಾವನಾದರೂ ಕಸಿದುಕೊಂಡು ಹೋಗುತ್ತಾನೆ. ಬಲಾಢ್ಯ ಮತ್ತೊಬ್ಬರ ಕೈಯಿಂದ ಅವಕಾಶಗಳನ್ನು ಕಸಿದುಕೊಳ್ಳುತ್ತಾನೆ. ಸಿಂಬಳಬುರುಕನಿಗೆ ಅಳುವುದೇ ಜೀವನಮಾರ್ಗ.

ನಮ್ಮಲ್ಲಿಯ ದೊಡ್ಡ ಮನುಷ್ಯರ ಜೀವನ ಚರಿತ್ರೆಯನ್ನೇ ನೋಡಿದರೆ, ಸರ್ ಎಂ. ವಿಶ್ವೇಶ್ವರಯ್ಯ, ಡೆಪ್ಯುಟಿ ಚೆನ್ನಬಸಪ್ಪ, ರೊದ್ದ ಶ್ರೀನಿವಾಸರಾಯರು ಮೊದಲಾದವರು ಸಾರ್ವಜನಿಕ ದೀಪದ ಬೆಳಕಿನಲ್ಲಿ ಓದಿಯೇ ಮುಂದಾದವರು. ರೊದ್ದ ಶ್ರೀನಿವಾಸರಾಯರಂತೂ ಪ್ರತಿ ದಿವಸ ಧಾರವಾಡದಿಂದ ಹುಬ್ಬಳ್ಳಿಗೆ ಇಪ್ಪತ್ತು ನಾಲ್ಕು ಮೈಲು ನಡೆದು ಹೋಗಿ ಬರುತ್ತಿದ್ದರು. ಇಂದು ಸುಪ್ರಸಿದ್ಧ ಕಿರ್ಲೋಸ್ಕರ ಸಂಸ್ಥೆಗಳ ಮೂಲ ಪ್ರವರ್ತಕರಾದ ಲಕ್ಷ್ಮಣರಾವ್ ಕಿರ್ಲೋಸ್ಕರ ಅವರು ಧಾರವಾಡದ ಮದಿಹಾಳದ ಆಲದ ಮರದ ಕೆಳಗೆ ಸೈಕಲ್ ರಿಪೇರಿ ಚಪ್ಪರ ಹಾಕಿಕೊಂಡು ಯಂತ್ರ ವಿದ್ಯೆಯನ್ನು ಪ್ರಾರಂಭಿಸಿದರು. ಸೇಠ್ ರಾಮಕೃಷ್ಣ ಡಾಲ್ಮಿಯಾ ಮುಂಬಯಿಯಲ್ಲಿ ಅಂಗಡಿಯ ಹೊರಕಟ್ಟೆಯ ಮೇಲೆ ಮಲಗಿಕೊಳ್ಳುತ್ತಿದ್ದರು. ಅವರು ಕೋಟ್ಯಾಧೀಶರಾದರು. ಹೀಗೆ ಸಾವಿರಾರು ಉದಾಹರಣೆಗಳು.

ಹಾಗಿದ್ದರೆ ಜೀವನದಲ್ಲಿ ಯಶಸ್ಸನ್ನು ಪಡೆಯಲು ಸಾಧನಗಳಾವುವು ? ಬುದ್ಧಿವಂತಿಕೆ, ವಿನಯ, ಪ್ರಾಮಾಣಿಕತೆ, ಸತತ ಪರಿಶ್ರಮಗಳೇ ಈ ಯಶೋಧೇನುವಿನ ನಾಲ್ಕು ಕಾಲುಗಳು. ಬುದ್ಧಿವಂತಿಕೆ ಎಷ್ಟೋ ಸಲ ಅವರವರು ಬೇಡಿಬಂದಷ್ಟೇ ಇರುತ್ತದೆ. ಆದರೆ ವಿನಯವು ಬೇಡಿಬರುವ ಕಾರಣವಿಲ್ಲ. ಅದನ್ನು ಮನುಷ್ಯ ತಾನಾಗಿಯೇ ಬೆಳೆಸಿಕೊಳ್ಳಬೇಕಾಗುತ್ತದೆ.

ದುಗ್ಗಾಣಿಯ ಬೆಲೆಯಿಲ್ಲದವರ ದರ್ಪ ಎಷ್ಟೋ ಸಲ ಹೇಳತೀರದು. ನಾವು ವಿನಯಶಾಲಿಯಾಗಿದ್ದರೆ ಯಾರಾದರೂ ನಮ್ಮನ್ನು ಮುಂದೆ ಕರೆದು ಮಾತನಾಡಿಸುತ್ತಾರೆ. "Humility is young ambition's ladder"

ಎಂದು ಷೇಕ್ಸಪಿಯರ್ ಮಹಾಕವಿ ಹೇಳಿದ. ವಿನಯ, ತರುಣ ಮಹತ್ವಾಕಾಂಕ್ಷಿಯ ಪ್ರಥಮ ಏಣಿಯೆಂದು ಇದರರ್ಥ. ಈ ವಿನಯದ ಜತೆಗೆ ಪ್ರಾಮಾಣಿಕತೆ ಮತ್ತು ಪರಿಶ್ರಮಗಳನ್ನು ಅಳವಡಿಸಿಕೊಳ್ಳಬೇಕು. ಮನುಷ್ಯ ತಾನು ಮಾಡುವ ಕೆಲಸದಲ್ಲಿ, ತಾನು ಸೇವೆಗೈದಿರುವ ಸಂಸ್ಥೆಯಲ್ಲಿ, ತುಂಬಾ ಪ್ರಾಮಾಣಿಕನಾಗಿ ಇರಬೇಕು. ಅಪ್ರಾಮಾಣಿಕನಿಗೆ ಸದ್ಗತಿಯಿಲ್ಲ. ಅಪ್ರಾಮಾಣಿಕ ಕೆಲಕಾಲ ಗೆದ್ದಂತೆ ಕಂಡರೂ, ಆ ಗೆಲುವು ಸೋಲಿನ ಸಂಚಕಾರ, ಇಂಥವರ ಯಶಸ್ಸು ಮತಾಪಿನ ಬೆಳಕು. ಕ್ಷಣಿಕ, ಕ್ಷಣ ಭಂಗುರ – ಮನುಷ್ಯನ ಯಶಸ್ಸು ರತ್ನಶಿಖೆಯ ಹಾಗೆ ಅಲ್ಲಾಡದೆ ಉಳಿಯಬೇಕಾದರೆ, ಅವ ಪ್ರಾಮಾಣಿಕನಾಗಿರಬೇಕು. ಸತತ ಪರಿಶ್ರಮದ ಬಗ್ಗೆಯಂತೂ ಮೇಲೆ ಹೇಳಿಯೇ ಆಗಿದೆ.

ಹೀಗೆ ಯಶಸ್ಸನ್ನು ಪಡೆದ ವ್ಯಕ್ತಿ ತನ್ನ ಯಶಸ್ಸಿಗೆ ಯಾರು ಯಾರು ಕಾರಣರೋ ಅವರ ಬಗ್ಗೆ ತುಂಬಾ ಕೃತಜ್ಞನಾಗಿರಬೇಕು, ಹೀಗೆ ಕಾರಣರಾದವರನ್ನು ಮುದ್ದಾಂ ಮರೆಯಲು ಯತ್ನಿಸುವವರೇ ಹೆಚ್ಚು. ಇದು ಅತ್ಯಂತ ಹೇಯವಾದ ಕೃತಘ್ನತೆ. ಈ ಗುಣ ಉಳಿದವರಿಗಿಂತ ಇಂದಿನ ರಾಜಕಾರಣಿಗಳಲ್ಲಿ ಕಂಡು ಬರುತ್ತದೆ. ಚುನಾವಣೆಗಳಲ್ಲಿ ಸಾವಿರಾರು ಜನರಿಂದ ಸಹಾಯ ಪಡೆದ ಈ ಜನ ಒಮ್ಮೆ ಆಯ್ಕೆಯಾದರೆಂದರೆ ತಮ್ಮ ಸ್ಥಾನದ ವೃಕ್ಷದ ಟೊಂಗೆಗೇ ಜೋತುಬಿದ್ದ ಈ ಜನರ ಕೈ ಸೋತಾಗ, ಇವರಿಗೆ ಕಾಲೂರಲು ಬೇಗ ನೆಲವೇ ಸಿಗುವುದಿಲ್ಲ. ಕೃತಘ್ನತೆಗಿಂತ ಹೆಚ್ಚಿನ ದುರ್ಗುಣ ಮತ್ತೊಂದಿಲ್ಲ. "Blow blow thou winter wind, thou art not so unkind or men's ingratitude" ಎಂದು ಷೇಕ್ಸಪಿಯರ್ ಹೇಳಿದ. 'ಮೈ ಕೊರೆಯುವ ಎಲೌ ಹಿಮಗಾಳಿಯೇ ನೀನು ಬೀಸು ಬೀಸು, ನಿನ್ನ ಬಾಧೆಯನ್ನು ತಡೆದುಕೊಳ್ಳಬಹುದು, ಯಾಕೆಂದರೆ ಮಾನವನ ಕೃತಘ್ನತೆಯಷ್ಟು ನೀನು ನಿಷ್ಕರುಣಿಯಾಗಿರುವುದಿಲ್ಲ' ಎಂದು ಇದರರ್ಥ.

ಅವಿಚ್ಛಿನ್ನವಾದ ಸುಖವು ದುಃಖದ ಮೂಲ ಎಂದು ಶರಚ್ಚಂದ್ರ ಚಟರ್ಜಿಯವರು ಹೇಳಿದರು. ಸುಖ ಒಂದರ ಮೇಲೊಂದು ಹಿಂಡುಗಟ್ಟಿ ಬಂದರೆ, ಮಾನವ ಜೀವನಕ್ಕೆ ದೃಷ್ಟಿ ತಾಕುತ್ತದೆ. ಇದೇ ಮಾತು ಯಶಸ್ಸಿಗೂ ಅನ್ವಯಿಸುತ್ತದೆಂದು ಹೇಳಬಹುದು. ಬಿಟ್ಟೂ ಬಿಡದೆ ಯಶಸ್ವಿಯಾದವನ ಬಗ್ಗೆ ಅನೇಕ ಸಲ ಅಸೂಯೆ ಮೂಡುವುದುಂಟು. ಅಂಥವ ಎಲ್ಲಿಯಾದರೂ ಮುಗ್ಗರಿಸಲಿ ಎಂದೇ ಎಷ್ಟೋ ಸಲ ಜನ ಅಪೇಕ್ಷಿಸುತ್ತಾರೆ. ಜೀವನದಲ್ಲಿ ಗೆದ್ದೆತ್ತಿನ ಬಾಲ ಹಿಡಿಯು ವವರೇ ಹೆಚ್ಚಾದರೆ ಸಾಹಿತ್ಯದಲ್ಲಿ ಸೋತೆತ್ತಿನ ಕೊಂಬು ಎತ್ತುವವರು ಬಹಳ ಜನ ಎಂದು ವರಕವಿ ಬೇಂದ್ರೆ ಅವರು ಒಂದು ಸಲ ಹೇಳಿದರು. ಇದು ಬಹುಮಟ್ಟಿಗೆ ನಿಜವಾದರೂ ಗೆದ್ದೆತ್ತು ಒಮ್ಮೆಯಾದರೂ ಮುಗ್ಗರಿಸಲಿ ಎಂದು ಬಯಸುವವರೂ ಉಂಟು. "It is better to deserve success than succeed" ಎಂದು ಒಬ್ಬ ಮೇಧಾವಿ ಹೇಳಿದ್ದಾನೆ. 'ನಾವು ಗೆಲ್ಲುವುದಕ್ಕಿಂತ ಗೆಲ್ಲುವ ಅರ್ಹತೆಯನ್ನು ಪಡೆಯುವುದು ಒಳಿತು.' ಹೀಗಿದ್ದರೆ, ಇಂಥವನಿಗೆ ಯಶಸ್ಸು ಸಿಗಬೇಕಾಗಿತ್ತು ಎಂದು ಅವನ ಬಗ್ಗೆ ಅನುಕಂಪ ತಾಳುವವರು ಸಾಕಷ್ಟು ಜನ.

ಒಟ್ಟಾರೆ ಯಶೋಕಾಮಿಯಾದ ಮನುಷ್ಯ ಬುದ್ಧಿವಂತಿಕೆ, ವಿನಯ, ಪ್ರಾಮಾಣಿಕತೆ, ಸತತ ಪರಿಶ್ರಮಗಳ ಮೂಲಕ ಯಶಸ್ಸನ್ನು ಸಾಧಿಸಿ, ತನ್ನ ಯಶಸ್ಸಿಗೆ ಕಾರಣರಾದವರ ಬಗ್ಗೆ ಕೃತಜ್ಞತಾಭಾವವನ್ನು ತಾಳಿದರೆ ಅವನ ಬಗ್ಗೆ ಯಾರಿಗಾದರೂ ಗೌರವವುಂಟಾಗುತ್ತದೆ.


---

**ಶಬ್ದಾರ್ಥ :-**


**ಯಶಃಕಾಮಿ** – ಯಶಸ್ಸನ್ನು ಬಯಸುವವ, **ಕೋರು** – ಬಯಸು, **ಮುತ್ಸದ್ದಿ** – ಬುದ್ಧಿವಂತ, **ಲಘು** – ಸಣ್ಣ, **ಸಂಚಕಾರ** – ಹಾನಿ, **ಮತಾಪು** – ಒಂದು ಬಗೆಯ ಸುಡುಮದ್ದು, **ಪ್ರಯೋಜನ** – ಲಾಭ, **ಧೃತಿಗೆಡು** – ಧೈರ್ಯಗೆಡು, **ಬಿರಡಿ** – ಗುಂಡಿ, **ಕ್ಷಣಭಂಗುರ** – ಅಲ್ಪಕಾಲದಲ್ಲಿ ನಾಶವಾಗುವ, **ಗೆದ್ದೆತ್ತಿನ ಬಾಲ ಹಿಡಿ** – (ಪ.ನು) – ಗೆದ್ದವರ ಪಕ್ಷವಹಿಸು, ಸೋತೆತ್ತಿನ ಕೊಂಬು ಎತ್ತು (ಪ.ನು) – ಹೀಯಾಳಿಸು, **ಕೈಹಾಕು** – (ಪ.ನು) ಆರಂಭಿಸು, **ನುಚ್ಚು ನೂರಾಗು** – (ಪ.ನು) ಹಾಳಾಗು, ನಾಶವಾಗು, **ಅಚಿರ ಪ್ರಭೆ** – ಕ್ಷಣಿಕವಾದ ಬೆಳಕು.

**ವಿಶೇಷ ವಿಚಾರ :** ಜ್ಯೂ, ಯುರೋಪಿನ ಒಂದು ಪ್ರಾಚೀನ ಜನಾಂಗ, ಈಗ ಇಸ್ರೇಲ ಅವರ ದೇಶವಾಗಿದೆ.

**ಕೃತಿ 1 ಯಶಸ್ಸನ್ನು ಪಡೆಯಲು ಬೇಕಾಗುವ ಅಂಶಗಳನ್ನು ಕೆಳಗಿನ ಜಾಲಾಕೃತಿಯಲ್ಲಿ ಪೂರ್ಣಗೊಳಿಸಿರಿ.**




**ಕೃತಿ 2 ದ್ವಿರುಕ್ತಿ ಪದಗಳನ್ನು ಪಾಠದ ಸಹಾಯದಿಂದ ಆಯ್ದು ಕೆಳಗಿನ ಚೌಕೋನಗಳನ್ನು ಪೂರ್ಣ ಗೊಳಿಸಿರಿ.**




**ಕೃತಿ 3 ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

i) ಮನುಷ್ಯನು ಯಾವುದಕ್ಕಾಗಿ ಯಶಸ್ಸನ್ನು ಅಪೇಕ್ಷಿಸಬೇಕು ?

ii) ಎಂಥ ಯಶಸ್ಸು ಬಹಳ ದಿನ ತಡೆಯುವದಿಲ್ಲ ?

iii) ಆಲಿವರ್ ಗೋಲ್ಡ್‌ಸ್ಮಿಥ್ ಬರೆದ ಸಾಹಿತ್ಯ ಪ್ರಕಾರ ಯಾವುದು ?

iv) ಸುಯೇಜ್ ಕಾಲುವೆಯನ್ನು ನಿರ್ಮಾಣ ಮಾಡಿಸಿದ ಶ್ರೇಯಸ್ಸು ಯಾರಿಗೆ ಸಲ್ಲುತ್ತದೆ ?

**ಕೃತಿ 4 ಕೆಳಗಿನ ಚೌಕಟ್ಟಿನಲ್ಲಿಯ ತತ್ಸಮ - ತದ್ಭವಗಳನ್ನು ಹುಡುಕಿ ಬರೆಯಿರಿ**

| | | | | | |
|---|---|---|---|---|---|
| ವರ್ಷ | ಕಾವ್ಯ | ವಿದ್ಯಾ | ದೃತಿ | ಸ್ಥಾನ | ಹರ್ಷ |
| ಚರಿತೆ | ಸಾವಿರ | ಅಮೃತ | ದಿಟ್ಟಿ | ಸ್ನೇಹ | ರನ್ನ |
| ಧೈರ್ಯ | ತಾಣ | ನೇಹ | ದೃಷ್ಟಿ | ಅಮರ್ದು | ಕಬ್ಬ |
| ಬಿಕ್ಕೆ | ಹರುಷ | ಬಿಜ್ಜೆ | ವರುಷ | ಸಹಸ್ರ | ಚರಿತ್ರೆ |

**ಕೃತಿ 5 ಕೆಳಗಿನ ಪರ್ಯಾಯಗಳಲ್ಲಿ ಸರಿ ಹೊಂದದ ಪದಗಳನ್ನು ಹುಡುಕಿ ಬರೆಯಿರಿ.**

(i) ಪ್ರಯೋಜನ

(ಅ) ಲಾಭ (ಬ) ಉಪಯೋಗ (ಕ) ಅನುಕೂಲತೆ (ಡ) ಪ್ರಯಾಣ

(i) ವಿರಾಮ

(ಅ) ಆನಂದ (ಬ) ವಿಶ್ರಾಂತಿ (ಕ) ಬಿಡುವು (ಡ) ಕೊನೆ

(iii) ಆವರಿಸು

(ಅ) ವ್ಯಾಪಿಸು (ಬ) ಕಾಪಾಡು (ಕ) ಹರಡು (ಡ) ಪಸರಿಸು

(iv) ಪತನ

(ಅ) ಅವನತಿ (ಬ) ನಾಶ (ಕ) ಪಟ್ಟಣ (ಡ) ಹಾಳಾಗುವಿಕೆ

**ಕೃತಿ 6 ವಿರುದ್ಧಾರ್ಥಕ ಶಬ್ದಗಳನ್ನು ಬರೆಯಿರಿ.**

i) ಸದ್ಗತಿ x ______ ii) ಕೃತಘ್ನ x ______

iii) ಅರ್ಹತೆ x ______ iv) ದುರ್ಗುಣ x ______


**ಕೃತಿ 7 'ಪರಿಶ್ರಮಪೂರ್ವಕವಾಗಿ' ಈ ಶಬ್ದಸಮೂಹದಲ್ಲಿಯ ಅಕ್ಷರಗಳನ್ನಾಯ್ದು ನಾಲ್ಕು ಅರ್ಥಪೂರ್ಣ ಶಬ್ದಗಳನ್ನು ತಯಾರಿಸಿರಿ.**

(i) ______ (ii) ______ (iii) ______ (iv) ______


**ಕೃತಿ 8 ಕೆಳಗಿನ ಸಮಾಸ ಪದಗಳನ್ನು ವಿಗ್ರಹಿಸಿ ಬರೆದು ಸಮಾಸದ ಹೆಸರು ಹೇಳಿರಿ.**

| ಪದಗಳು | ವಿಗ್ರಹ ರೂಪ | ಸಮಾಸದ ಹೆಸರು |
|---|---|---|
| ಕೈಹಾಕು | | |
| ಹರ್ಷೋದ್ಗಾರ | | |
| ಜೈಲುವಾಸ | | |
| ಆಟಪಾಟ | | |


**ಕೃತಿ 9. ಡಿಸರೆಲಿಯವರನ್ನು ಮೇಧಾವಿಯನ್ನಾಗಿ ಮಾಡಿದ ಗುಣಗಳನ್ನು ಕೆಳಗಿನ ಜಾಲಾಕೃತಿಯಲ್ಲಿ ಬರೆಯಿರಿ.**



**ಕೃತಿ 10.** **ಕೆಳಗಿನ ಜಾಲಾಕೃತಿಯನ್ನು ಪೂರ್ಣ ಮಾಡಿರಿ.**




**ಕೃತಿ 11.** **ಇವರು ಕಸಬಿನ ಯಶಸ್ಸನ್ನು ದೇವರಲ್ಲಿ ಕೇಳಿಕೊಳ್ಳುತ್ತಾರೆ.**



**ಕೃತಿ 12.** **ಹೊಂದಿಸಿ ಬರೆಯಿರಿ.**

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| i) ಸಾಮನ್ ಝೂರ | ಇಂಗ್ಲೀಷಿನ ಮಹಾಕವಿ |
| ii) ಡಿಸರೆಲಿ | ಗಣಿತಜ್ಞ |
| iii) ಡಾ. ಜಾನ್ಸನ್ | ಬ್ರಿಟನ್ನಿನ ಪ್ರಧಾನಿ |
| iv) ಷೇಕ್ಸಪಿಯರ್ | ಇಂಗ್ಲಿಷಿನ ಪ್ರಥಮ ನಿಘಂಟುಕಾರ, ತತ್ವಜ್ಞಾನಿ |

**ಕೃತಿ 13.**

(i) **ಯಶಸ್ಸನ್ನು ಸಾಧಿಸಲು ಮಾಡಬೇಕಾದ ಶ್ರಮವನ್ನು ಕುರಿತು 10-12 ವಾಕ್ಯಗಳಿಗೆ ಮೀರದಂತೆ ನಿಮ್ಮ ಸ್ವಂತ ಅಭಿಪ್ರಾಯ ಬರೆಯಿರಿ.**

(ii) **ಪಾಠದಲ್ಲಿ ಬಂದ ಇಂಗ್ಲೀಷ ಲೇಖಕರ ಪರಿಚಯವನ್ನು ನಿಮ್ಮ ಶಿಕ್ಷಕರಿಂದ ಕೇಳಿ ತಿಳಿದು ಕೊಳ್ಳಿರಿ.**

★ ★ ★ ★ ★

# 2 ಒಂಟಿ ಹಾಯಿ

– ಅನುಪಮಾ ನಿರಂಜನ

**ಅನುಪಮಾ ನಿರಂಜನ :** ಕನ್ನಡದ ಪ್ರಖ್ಯಾತ ಲೇಖಕಿ. ಸುಲಲಿತವಾಗಿ ಕಥೆ ಹೆಣೆಯುವ ಕಲೆ ಇವರಿಗೆ ಸಹಜವಾಗಿದೆ. ಕಥೆ, ಕಾದಂಬರಿ, ನಾಟಕ, ಶಿಶು ಸಾಹಿತ್ಯ, ಮನೆಯ ಆರೋಗ್ಯ, ದಾಂಪತ್ಯ ವಿಜ್ಞಾನಗಳನ್ನು ಕುರಿತು ಮೌಲಿಕ ಗ್ರಂಥಗಳು ರಚನೆ ಮಾಡಿದ್ದಾರೆ. ಇವರ ಕೆಲವು ಕೃತಿಗಳು : 'ಕಣ್ಮಣಿ', 'ಏಳುಸುತ್ತಿನ ಮಲ್ಲಿಗೆ', 'ಅನಂತ ಗೀತ', 'ಸ್ನೇಹ ಪಲ್ಲವಿ', 'ದಿನಕ್ಕೊಂದು ಕಥೆ', 'ಕೆಂಪಮ್ಮನ ಮಗು', 'ದಾಂಪತ್ಯ ದೀಪಿಕೆ' ಇತ್ಯಾದಿ.

**'ಒಂಟಿ ಹಾಯಿ' ಕಥೆಯಲ್ಲಿ** ಬೆಸ್ತರ ಕುಟುಂಬವೊಂದರ ಕಷ್ಟಮಯ ಜೀವನದ ಚಿತ್ರಣವಿದೆ. ಹಾಗೆಯೆ ಆ ಕುಟುಂಬದ ಒಲವಿನ ಶ್ರುತಿಯೂ ಉಂಟು. ಮಳೆಗಾಲದ ಒಂದು ಹಗಲು ಕಡಲ ಕರೆಯಲ್ಲಿ ನೆಲಸಿದ್ದ ರಾಮನು ತನ್ನ ಹೆಂಡತಿಯಾದ ಗಂಗೆಯಿಂದ ವಿದಾಯ ಪಡೆದು,ಮೀನು ಸಂಗ್ರಹಿಸಲು ದೋಣಿ ನಡೆಸುತ್ತ ಸಮುದ್ರದೊಳಗೆ ಸಾಗಿದನು. ಇರುಳು ಏರುತ್ತ ಬಂದರೂ ಅವನು ಮರಳಲಿಲ್ಲ, ಉಳಿದ ದೋಣಿಯವರು ತಿರುಗಿ ಬಂದರು. ಅವನು ಕಡಲ ಪಾಲಾದನೋ ಎಂಬ ಕಳವಳ ಗಂಗೆಯನ್ನು ಆಕ್ರಮಿಸಿ ಭೀತಿ ಭುಗಿಲ್ಲೆಂದು ಕಾಡುತ್ತದೆ........ ಇದನ್ನು **'ರೂವಾರಿಯ ಲಕ್ಷ್ಮಿ' ಎಂಬ ಕಥಾ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.**

---

''ಬಲೆ ಬೀಸಲಿಕ್ಕೆ ಹೋಗುತ್ತೀಯಾ ?''

ಸಂಶಯ, ಭಯ, ಕಾತರಗಳು ತುಂಬಿ ತುಳುಕುತ್ತಾ ಭಾರವಾಗಿದ್ದ ಧ್ವನಿ. ರಾಮ ಹೊರಳಿ ಅವಳೆಡೆಗೆ ನೋಡಿದ. ಬಲೆ ಅವನ ಕಣ್ಣು ಸೆಳೆಯಿತು.

ಮರು ಮಾತಾಡಲಿಲ್ಲ ಅವನು. ಅವನ ಕೈ ಬಲೆಯೆತ್ತಿಕೊಳ್ಳಲು ಮುಂದೆ ಬಂದಾಗ ಮೃದುವಾದ ಗಂಗೆಯ ಕೈಗಳು, ಬಲಿಷ್ಠವಾದ ಆ ಬಾಹುಗಳನ್ನು ಹಿಡಿದುವು. ''ಬೇಡ, ಹೋಗಬೇಡ'' ಎಂದವಳ ಕಣ್ಣುಗಳು ಬೇಡಿದುವು.

ಆಗಲೇ ಅಲ್ಲಿಗೆ ಬಂದರು ನೆರೆಹೊರೆಯ ನಾಲ್ಕಾರು ಗೆಳೆಯರು.

''ಕಡಲು ನೋಡಿ ಬರೋಣ, ಬರ್ತೀಯೇನೋ ?''

ಅವರೆಲ್ಲಾ ನಡೆದರು. ಗಾಳಿ ಮರಗಳ ಮಧ್ಯದೊಂದು ಕಾಲು ಹಾದಿಯಲ್ಲೇ ಅವರ ನಡಿಗೆ ಸಾಗಿತು. ಆಗೊಂದು ಈಗೊಂದು ಮಾತು. ಆದರೆ ಆ ಮರಗಳ ಸುಂಯ್‌ಗುಡುವ ಸಂಗೀತದಲ್ಲಿ ಆ ಮಾತುಗಳು ಮುಳುಗಿ ಹೋಗುತ್ತಿದ್ದವು.

ಮರಗಳ ಮೇಲೆ ನಿಂತು ಅವರೆಲ್ಲ ಕಡಲತ್ತ ನೋಡಿದರು. ರುದ್ರರೂಪಿಣಿಯಾಗಿದ್ದಳು ಕಡಲಕನ್ನೆ. ಡುಬ್ ಡುಬಾಲ್ ಸುಯ್-ಡುಬ್ ಡುಬಾಲ್ ಸುಯ್....

ಕಡಲಕನ್ನೆಯ ಈ ರುದ್ರನಾಟ್ಯಕ್ಕೆ ಹಿಮ್ಮೇಳ ಒದಗಿಸುವ ಹಾಗೆ ಬೀಸುತ್ತಿತ್ತು ಬಿರುಗಾಳಿ.

ಅವರಲ್ಲಿದ್ದ ಹಿರಿಯನೊಬ್ಬ ತಲೆಯಾಡಿಸಿದ.

''ಈಗ ಕಡಲಿಗೆ ಹೋಗೋದು ಹುಚ್ಚು ಮಾತು !''

ಹಾಗೆಂದೇ ಉಳಿದವರೂ ಯೋಚಿಸುತ್ತಿದ್ದರು. ಕಡಲ ಕಂದರಾಗಿಯೇ ಬೆಳೆದ ಅವರಿಗೆ ಅದರ ಪ್ರವೃತ್ತಿ ತಿಳಿಯದೆ?

ಕಡಲಂಚಿನಿಂದ ಅವರೆಲ್ಲರೂ ಮನೆಗೆ ಮರಳಿದರು. ಕೋಳಿಗಳು ಕೂಗಿದುವು. ಹೊತ್ತಾಯಿತೆಂದು ಚಡಪಡಿಸುತ್ತ ಗಂಗೆ ಎದ್ದಳು. ಆದರೆ ಇನ್ನೂ ನಸುಕು. ಆಕಾಶವೇನೋ ಮುಖ ಗಂಟಿಕ್ಕಿಕೊಂಡೇ ಇತ್ತು. ಕಣ್ಣು ಹೊರಳಿಸಿ ನೋಡಿದಳಾಕೆ. ಮಗು ಮುಗುಳು ನಗುತ್ತಾ ಮಲಗಿತ್ತು. ಅದರ ಇನ್ನೊಂದು ಬದಿಯಲ್ಲೇ ಗಂಡ ನಿದ್ರಿಸುತ್ತಿದ್ದ. ಅವನ ಮುಖದ ಮೇಲೆ ಯೋಚನೆಯ ಗೆರೆಗಳು ಕಾಣುತ್ತಿದ್ದವು.

ಕೂದಲು ಹಿಂದೆ ಸರಿಸಿ ಗಂಟು ಹಾಕಿ ಮೇಲೆದ್ದಳು. ರಾಮ ಏಳುವ ಹೊತ್ತಿಗೆ ಒಂದಿಷ್ಟು ಗಂಜಿ ಕಾಯಿಸಿದರೆ, ಬೆಳಗಿನ ಮೊದಲ ಕೆಲಸ ಮುಗಿದಂತೆಯೇ.

ತರಗೆಲೆ ತಂದು ಹಟ್ಟಿಯಲ್ಲೇ ಇದ್ದ ಒಲೆಗೆ ಉರಿಮಾಡಿ, ಮಡಕೆಯನ್ನಿಟ್ಟಳು. ಹೊಗೆ ಜಾಗವನ್ನು ಆಕ್ರಮಿಸಿತು. ಉಫ್ ಉಫ್ ಎಂದು ಊದುತ್ತಲೇ ಆ ಹೊಗೆಯೊಂದಿಗೆ ಗಂಗೆ ಹೋರಾಡಿದಳು. ಇನ್ನು ಮುಂದಿನ ಕೆಲಸದ ಚಿಂತೆ.

''ತೆಂಕಣಗಾಳಿಯೇನೋ ಈಗ ಇಳಿಮುಖವಾಗಿದೆ. ಗಂಡ ಮೀನಿನ ಬೇಟೆಗೆ ಹೊರಟರೂ ಹೊರಟಾನು. ಅವನು ಬರುವುದಂತೂ ಸಂಜೆಯೇ. ಒಮ್ಮೆ ಸಾಗರಕ್ಕಿಳಿದ ಮೇಲೆ ಮೀನು ಸಿಗಲಿ, ಸಿಗದಿರಲಿ ಸಂಜೆಯವರೆಗೂ ಹೋರಾಟವಂತೂ ಇದ್ದೇ ಇದೆ.''

ಆಕೆ ಗಂಜಿ ಕಾಯಿಸುವ ಹೊತ್ತಿಗೆ ರಾಮ ಮೇಲೆದ್ದ. ಮುಖಕ್ಕೆ ನೀರು ಹನಿಸಿ, ಗಂಜಿ ಕುಡಿದುದೂ ಆಯಿತು.

ಅಷ್ಟು ಹೊತ್ತಿಗೆ ಸುತ್ತಲಿನ ಮನೆಗಳೆಲ್ಲಾ ಎಚ್ಚರಗೊಂಡಿದ್ದುವು. ಬೌ ಬೌ ಎಂದು ನಾಯಿಗಳ ಬಗುಳಾಟ. ಕೊಕ್ ಕೊಕ್ ಎಂದು ಸದ್ದು ಮಾಡುತ್ತಾ ಹಟ್ಟಿಯ ತುಂಬಾ ಕೋಳಿಗಳು ಸಡಗರದಿಂದ ಓಡಾಡುತ್ತಿದ್ದುವು. ನಾಲ್ಕಾರು ಮನೆಯಂಗಳದಿಂದ ಮೇಲೆದ್ದಿತು ಹೊಗೆ, ಮಂಜಿನಾಕಾರವಾಗಿ.

ಆಗ ಅಲ್ಲಿಗೆ ಬಂದ, ಆ ಪ್ರದೇಶದ ಏಕಾಕಿ ಜೀವವಾದ ಬೆಸ್ತನೊಬ್ಬ, ರಾಮನ ಗೆಳೆಯ. ಪರಿಚಯದ, ವಿಶ್ವಾಸದ ನಗು ನಗುತ್ತ ಆತ ಕೇಳಿದ : ''ಗಾಳಿ ಕಮ್ಮಿ ಆಗಿದೆ, ನಡಿ ಹೋಗೋಣ.''

ಬಲೆ ಹೊತ್ತು, ಅವರು ದೋಣಿ ಕರೆಗಿಳಿಸುವ ಹೊತ್ತಿಗೆ, ಇನ್ನೂ ಹತ್ತಾರು ಜನ ಆಗಲೇ ದೋಣಿಯನ್ನು ಮರಳಿನೆಡೆಯಿಂದ ಕಡಲಿಗೆ ತರುವ ಪ್ರಯತ್ನ ಮಾಡುತ್ತಿದ್ದರು. ಗಂಗೆ ಮಳಲದಿನ್ನೆಯಲ್ಲಿ ನಿಂತು ಕೆರಳಿದ ಕಡಲನ್ನೇ ನೋಡುತ್ತಿದ್ದಳು. ಗಂಡನಿಗೆ ''ಬೇಗ ಬನ್ನಿ'' ಎಂದು ಅಲ್ಲಿಂದಲೆ ಹೇಳುವ ಆಸೆ. ಆದರೆ ಹಾಗೆ ಹೇಳಿ ಯಾವ ಪ್ರಯೋಜನವೂ ಇಲ್ಲವೆಂದು ಅವಳಿಗೆ ತಿಳಿಯದೆ? ಕಡಲಿಗೆ ಹೊರಟ ಮೇಲೆ ಇಷ್ಟ ಬಂದಾಗ ಹಿಂದಿರುಗಿ ಬರಲು ಸಾಧ್ಯವೆ? ಅದೊಂದು ಪ್ರಕೃತಿಯ ಆಟ. ಸಾಗರದಲೆಗಳು ಮೇಲೇರಿ, ಗಾಳಿ ಬೀಸಿದಾಗ, ದೋಣಿ ಸುಗಮವಾಗಿ ದಡ ಸೇರುವುದೆಂದು ಅವಳಿಗೆ ಗೊತ್ತು.

ಗೆಳೆಯನಾಗಲೇ ಏರಿದ್ದ ದೋಣಿಯೊಳಗೆ ತಾನೂ ಧುಮುಕಿ, ಚುಕ್ಕಾಣಿ ತಿರುವಿದ ರಾಮ. ಬಲು ನಿಧಾನ ವಾಗಿ ದೋಣಿ ಮುಂದೆ ಮುಂದೆ ಸಾಗತೊಡಗಿತು. ಗಂಗೆ ಮೃದುವಾಗಿ ನಕ್ಕಳು. ಅವನ ಜೊತೆಗೆ ಬೇರೆಯೂ ಆರು ದೋಣಿಗಳು ಹೊರಟವು. ಸಮುದ್ರದ ತೆರೆಗಳ ಹಾವಳಿ ಜಾಸ್ತಿಯಾದಾಗ ವಿಸ್ತಾರವಾದ ಆ ಸಾಗರದ ಮೇಲೆ ಹೊರಟ ಆ ದೋಣಿಗಳೆಡೆಯಿಂದ ಹಾಡಿನ ಸುಸ್ವರ ಹೊರಟಿತು.

''ಓ... ಲಾಲಿ... ಲೇ... ಲೇ''

ಅದನ್ನು ಕೇಳುತ್ತಾ ಗಂಗೆಯ ಹೃದಯ ಹಿಗ್ಗಿತು.

''ಲೇ ಅಕ್ಕಾ, ಮಗೂನ ನೋಡೇ!'' ಎಂದು ಆಗಲೆ ನಾಗು ಕೂಗಿದಳು. ನಾಲ್ಕು ಮನೆಯಾಚೆಯಿದ್ದ ಯುವತಿ ಅವಳು. ಗಾಬರಿಯಾಗಿ ಗಂಗೆ ತನ್ನ ಮಗನ ಕಡೆ ನೋಡಿದಳು. ಆ ತುಂಟ ಮರಳಿನ ರುಚಿ ನೋಡುತ್ತಾ ನಗುತ್ತಿದ್ದ. ಮೈಯೆಲ್ಲಾ ಮರಳು ಅಂಟಿಕೊಂಡಿತ್ತು.

''ನೋಡೇ ನಾಗೂ– ಈ ಪೋರ ಎಷ್ಟೊಂದು ಮರಳು ಮುಕ್ಕಿದಾನೇ–''

''ಆಯಿತು.......... ನೀನು ಗಂಡನನ್ನೇ ನೋಡುತ್ತಾ ನಿಂತುಬಿಟ್ರೆ ಮುಕ್ಕದೆ ಇರ್‍ತಾನೇನು?'''

ನಾಗು ನಕ್ಕಳು, ಆ ಮಾತು ಕೇಳಿ, ಮದುವೆಯಾಗಿ ನಾಲ್ಕು ವರ್ಷ ಕಳೆದಿದ್ದರೂ ಗಂಗೆಯ ಮುಖ ಕೆಂಪೇ ರಿತು. ನಾಚಿಕೆಯಾಯಿತು.

ಮಧ್ಯಾಹ್ನದ ಹೊತ್ತಿಗೆ ಆಕಾಶದಲ್ಲಿ ಮೋಡಗಳು ಕಾಣಿಸಿಕೊಂಡವು. ಅವಳಿಗೆ ಚಿಂತೆಯಾಯಿತು. ಕಡಲಿನ ಕಡೆಗೆ ಕಣ್ಣು ಹೊರಳಿಸಿದಳು. ಬೆಳಿಗ್ಗೆ ಇರದಿದ್ದ ಗಾಳಿ ಈಗ ಸ್ವಲ್ಪ ಭೀಕರವಾಗಿ ಬೀಸತೊಡಗಿತ್ತು.

ಅಡುಗೆ ಮುಗಿಸುವ ಹೊತ್ತಿಗೆ ಗಾಳಿ ಜೋರಾಯಿತು.

''ಇದೇನೇ ಗಂಗೆ!'' ಎಂದಳು ಆ ಕಡೆಗೆ ಬಂದ ನಾಗು–ಹೆದರುತ್ತಾ. ಅವಳಾಸರೆಗೆ ಉಳಿದವನೊಬ್ಬನೇ ಅಣ್ಣ. ಅವನೂ ಕಡಲಿಗೆ ಹೋಗಿದ್ದ.

ಮಧ್ಯಾಹ್ನ ಕಳೆದ ಹಾಗೆ ಗುಡುಗು ಮಿಂಚು ಕಾಣಿಸಿಕೊಂಡುವು. ಮಳೆಯೂ ಬಂತು. ಗಾಳಿಗೆ ಸಿಕ್ಕಿದ ದೀಪದ ಹಾಗೆ ಗಂಗೆಯ ಮನಸ್ಸು ತಲ್ಲಣಿಸಿತು. ಸುತ್ತಲಿನ ಮನೆಯ ಹೆಂಗಳೆಯರ ಮುಖಗಳು ಕಾತರದಿಂದ ಕಡಲನ್ನೇ ದಿಟ್ಟಿಸಿದುವು.

ಮಗು ಅಳಹತ್ತಿತು, ದೊಡ್ಡ ಧ್ವನಿ ತೆಗೆದು. ಅಸಹನೆಯಿಂದ ಗಂಗೆ ಅದಕ್ಕೆ ಒಂದೇಟು ಹಾಕಿದಳು.

ಸಂಜೆಯಾಯಿತು. ದೋಣಿಗಳ ಸುಳಿವಿಲ್ಲ. ಮಳೆಯೂ ನಿಂತಿತು. ಕಡಲಿನ ರೌದ್ರ – ಸೊಕ್ಕು ಹಾಗೆಯೇ ಇತ್ತು. ಎಲ್ಲರ ಮನದಲ್ಲೂ ಭೀತಿ ಮನೆ ಮಾಡಿತು.

ಮಬ್ಬುಗತ್ತಲೆ ಆವರಿಸತೊಡಗಿದಾಗ ದೂರದಿಂದ ನಾಲ್ಕಾರು ಹಾಯಿಗಳು ಕಾಣಿಸಿದುವು. ಗಂಗೆಯ ಮನ ಕಾತರದಿಂದಲೂ ಆನಂದದಿಂದಲೂ ತುಯ್ದಾಡಿತು. ಮಗನೊಡನೆ ಅವರೆಲ್ಲರೊಂದಿಗೆ ಕಡಲಿನ ತಡಿಗೆ ಧಾವಿಸಿ ಬಂದಳು.

ಕಡಲಿನ ಅಲೆಗಳೊಂದಿಗೆ ಮೇಲೇಳುತ್ತ ಇಳಿಯುತ್ತ ಆ ದೋಣಿಗಳು ದಡಕ್ಕಭಿಮುಖವಾಗಿ ಬರುತ್ತಿದ್ದವು.

**ಒಂದರ ಬದಿಯಲ್ಲೊಂದು, ಸಾಲು ಚಿಕ್ಕೆಗಳ ಹಾಗೆ ಅವು ಹತ್ತಿರ ಹತ್ತಿರ ಬಂದಂತೆ ಗಂಗೆ ಎಣಿಸಿದಳು: ಒಂದು, ಎರಡು, ಮೂರು, ನಾಲ್ಕು... ಐದು... ಆರು... ಏಳನೆ ಹಾಯಿ? ಏಳು ದೋಣಿಗಳಲ್ಲವೇ ಮುಂಜಾನೆ ಹೊರಟದ್ದು? ಮತ್ತೆ ಸಂಕಟ. ಆ ಏಳನೆಯ ದೋಣಿಯ ಒಡೆಯ ಯಾರಾಗಿರಬಹುದು? ನಾಗುವೂ ಎಣಿಸಿದಳು ಮನಸ್ಸಿನಲ್ಲೇ: ಯಾರಾಗಿರಬಹುದು?**

**''ಆರೇ ಹಾಯಿ ಉಂಟಲ್ಲೇ ಅಕ್ಕಾ!?''**

**ಅದನ್ನು ಬಾಯಿ ಬಿಟ್ಟು ಹೇಳಬೇಕಾಗಿತ್ತೆ? ಎಲ್ಲರ ಮನಸ್ಸಿನಲ್ಲೂ ಅದೇ ಪ್ರಶ್ನೆ ಆಗ ಸುಳಿದಿರಲಿಲ್ಲವೆ?**

ದೋಣಿಗಳು ಹತ್ತಿರಕ್ಕೆ ಬಂದುವು. ತಮ್ಮ ತಮ್ಮ ದೋಣಿಯನ್ನು ಗುರುತಿಸಿದವರು ಸಮಾಧಾನದ ನಿಟ್ಟುಸಿರುಬಿಟ್ಟರು. ಗಂಗೆಯ ಕಣ್ಣು ಮಿಂಚಿನಂತೆ ಚಲಿಸಿತು. ರಾಮನನ್ನು ಕಾಣದೆ ಹೃದಯ ಗೋಳಾಡಿತು. ಏಳನೆಯ ದೋಣಿ ರಾಮನದೇ ಆಗಬೇಕೇ? ಅಯ್ಯೋ ದೇವರೆ !

ಮಗುವನ್ನು ಬಿಗಿದಪ್ಪುತ್ತಾ ಕಂಬನಿಯನ್ನು ಆಕೆ ತಡೆಹಿಡಿದಳು. ಎತ್ತ ನೋಡಿದರೂ ಆ ಸಾಗರವೇ. ಹಾಯಿಯ ಸುಳಿವಿಲ್ಲ. ತನ್ನ ಹಾಯಿ, ತನ್ನ ಜೀವನದ ಹಾಯಿ.....

ಸುತ್ತಲೂ ಸಂತಸದ ಕೂಗು. ತನ್ನ ಸಂಭ್ರಮದಲ್ಲೆ ಮೈಮರೆತಿದ್ದ ನಾಗು ಕೂಗಿದಳು :

''ಇಲ್ನೋಡೇ... ಅಣ್ಣ ಎಷ್ಟೊಂದು ಮೀನು ತಂದಿದ್ದಾನೆ....!''

ಉತ್ತರ ಬರಲಿಲ್ಲವೆಂದು ನಾಗು ತಿರುಗಿ ನೋಡಿದಳು. ಅವಳಿಗೆ ಸಂಕಟವಾಯಿತು. ನಾಗುವಿನ ಅಣ್ಣ ಮೆಲುದನಿಯಲ್ಲಿ ಹೇಳಿದ:

''ಹೋದಾಗೇನೋ ಜತೆಯಾಗೇ ಇದ್ವಿ. ಮಳೆ ಜೋರಾದಾಗ ಬೇರೆ ಬೇರೆಯಾಗಿ ಬಿಟ್ವಿ. ಬಹಳ ಹೊತ್ತು ರಾಮನಿಗೆಂತ ಹುಡುಕಾಡಿದ್ವಿ..... ಅವ ಸಿಕ್ಕಲೇ ಇಲ್ಲ. ಬೆಳಿಗ್ಗೆ ಬಂದಾನು.''

'ತನ್ನ ಸಮಾಧಾನಕ್ಕಾಗಿ ಆ ಕೊನೆಯ ಮಾತು ಹೇಳಿದುದೆಂದು ಅವಳಿಗೆ ತಿಳಿಯದೆ?

ಹಟ್ಟಿ ಬರಿದಾಗಿತ್ತು, ಆಯ್ದ ತರಗೆಲೆ ರಾಶಿ ರಾಶಿಯಾಗಿ ಬಿದ್ದಿತ್ತು. ರಾಮ ಬಂದೊಡನೆಯೇ ನೀರು ಕಾಯಿಸಲೆಂದು ತಂದು ಹಾಕಿದ್ದಳು. ಗಂಗೆ ಅದನ್ನು ನೋಡುತ್ತಾ ಅದುವರೆಗೆ ಹತ್ತಿಟ್ಟಿದ್ದ ಕಂಬನಿ ಒಸರಿತು. ಬಿಕ್ಕಿ ಬಿಕ್ಕಿ ಅತ್ತಳು.

ಕತ್ತಲೆಯಾಗಿ ಸುತ್ತಲ ಮನೆಯವರೆಲ್ಲಾ ಮಲಗಿದರೂ ಆಕೆಗೆ ಮಾತ್ರ ನಿದ್ದೆ ಬರಲಿಲ್ಲ. ರಾತ್ರಿಯ ಹೊತ್ತು ರಾಮ ದಡಕ್ಕೆ ಬಂದರೆ ಹಾದಿ ತಿಳಿಯಲೆಂದು ಕಂದೀಲು ಹಚ್ಚಿಟ್ಟಿದ್ದಳು. ದೀಪ ಉರಿದುದೇ ಬಂತು. ರಾಮ ಬರಲಿಲ್ಲ.

ತರಗೆಲೆಗಳ ಸದ್ದಾದಾಗ, ನಾಯಿಗಳು ಬಗುಳಿದಾಗ, ಯಾರೋ ಕೆಮ್ಮಿದಾಗಲೆಲ್ಲಾ, ಗಡಬಡಿಸಿ ಗಂಗೆ ಏಳುತ್ತಿದ್ದಳು. ಅವಳ ಪಾಲಿಗೆ ಪ್ರತಿಸಾರೆಯೂ ಆಗುತ್ತಿದ್ದುದು ನಿರಾಸೆಯೊಂದೇ.

ಮಗು ಚಾಪೆಯ ಮೇಲೆ ಸುಖವಾಗಿ ನಿದ್ರಿಸುತ್ತಿತ್ತು. ಅದಕ್ಕೆ ಯಾವ ಚಿಂತೆಯ ಅರಿವೂ ಇರಲಿಲ್ಲ. ತನ್ನ ಮಗು, ತನ್ನ ರಾಮನ ಮಗು–

ಆ ಹಿಂದಿನ ಕತೆ:

–ಅವಳನ್ನು ಮದುವೆಯಾಗಬಾರದೆಂದಿದ್ದರು ರಾಮನ ತಂದೆ ತಾಯಿ. ಆದರೆ ಹಟ ಹಿಡಿದ ರಾಮ ಕಡಲ ತೀರದಲ್ಲಿ ಒಮ್ಮೆ ಗುಟ್ಟಾಗಿ ಅಂದಿದ್ದ:

''ಗಂಗೆ, ಮದ್ವೆ ಆದ್ರೆ ನಿನ್ನ. ಇಲ್ದಿದ್ರೆ ನಾನು ಸೇರೋದು ಕಡಲನ್ನ, ನೋಡ್ಕೋ!''

ಗಂಗೆಗೆ ಒಮ್ಮೆ ಜ್ವರ ಬಂತು. ವಾರ ಕಳೆದರೂ ಇಳಿಮುಖವಾಗಲಿಲ್ಲ. ರಾಮ ಹೆದರಿದ್ದ, ಪಂಡಿತರಿಂದ ಔಷಧಿ ಮಾಡಿಸಿದುದೂ ಆಯಿತು.

ಆಗ ಅವನು ಹೊರ ಹೋಗದೆಯೇ ಸದಾ ಅವಳ ಬದಿಯಲ್ಲೇ ಉಳಿದಿದ್ದ. ಗೆಳೆಯರು ಮೀನಿಗಾಗಿ ಕಡಲಿಗೆ ಹೋದಾಗ, ಮನೆಯಲ್ಲಿ ಏನೂ ಇಲ್ಲವೆಂದು ತಿಳಿದಿದ್ದ ಗಂಗೆ ಹೇಳಿದ್ದಳು:

''ಹೋಗ್ಬನ್ನಿ!''

''ನಿನ್ನ ಬಿಟ್ಟು ನಾ ಹೋದೇನಾ?'' ಎಂದಿದ್ದ ರಾಮ.

ಅವನ ಪ್ರೀತಿ ಕಂಡು ಅವಳ ಹೃದಯ ಉಕ್ಕಿ ಬಂದಿತ್ತು. ಆಗ ಎಷ್ಟು ಇಳಿದು ಹೋಗಿದ್ದ, ತನ್ನ ರಾಮ! ಅವನು ತನ್ನ ಸ್ವಂತದ ಬಗೆಗೆ ಯೋಚಿಸುತ್ತಿದ್ದುದೇ ಕಡಿಮೆ. ಸದಾ ಕಾಲವೂ ಒಂದೇ ರಾಗ; 'ಗಂಗೆ ನಿನಗೇನು ಬೇಕೆ?'

ಒಮ್ಮೆ ಅವರೆಲ್ಲಾ ''ಕಂತ ಬಲೆ''ಗೆ ಹೋಗಿದ್ದರು. ಬೀಸಿ ಬಂತು ದೊಡ್ಡ ಬಿರುಗಾಳಿ. ರಾತ್ರಿಯಾದರೂ ದೋಣಿಗಳ ಸುಳಿವೇ ಇಲ್ಲ. ಮರುದಿನ ಬೆಳಿಗ್ಗೆ ರಾಮ ಮತ್ತಿತರರು ಹಿಂದಿರುಗಿ ಬಂದಿದ್ದರು. ಒಂದು ದೋಣಿ ಕಡಿಮೆಯಾಗಿತ್ತು, ನೆರೆಮನೆಯದು. ಮತ್ತೆ ಇಡೀ ದಿನ, ದೋಣಿಗಾಗಿ ಕಾದರು. ಅದು ಬರದೇ ಹೋದಾಗ, ನೆರೆಮನೆಯ ತಾಯಿಯ ರೋದನ ಕೇಳಿ ಗಂಗೆ ತಾನೂ ಅತ್ತಿದ್ದಳು. ''ನಂಗೇ ಅಂಗಾದ್ರೆ ಏನ್ಮಾಡ್ತೀಯೇ'' ಎಂದಿದ್ದ ರಾಮ. ಅವಳ ದುಃಖ ಉಮ್ಮಳಿಸಿತ್ತು. ಅವನ ಬಾಯ್ಮುಚ್ಚಿ ಗಂಗೆ ಅಂದಿದ್ದಳು. ''ಅಂಥಾ ಮಾತಾಡ್ಬೇಡಿ, ನನ್ನಾಣೆ!''

ಈಗ.........

'ಬೆಳಿಗ್ಗೆ ಬಂದಾನು!' ಎಂದು ನಾಗುವಿನ ಅಣ್ಣ ಹೇಳಿದ್ದ. ಆ ಬೆಳಿಗ್ಗೆ ಬಂದಿತ್ತು. ಆದರೆ ರಾಮನ ದೋಣಿ ಬರಲಿಲ್ಲ. ಅವಳ ಹೃದಯ ಡವಡವನೆ ಹೊಡೆದುಕೊಂಡಿತು, ಅಶುಭವೇನನ್ನೋ ನೆನೆದು. ಚೀರುವ ಹಾಗಾಯಿತು ಅವಳಿಗೆ. ದುಃಖ ಉಮ್ಮಳಿಸಿತು.

ಗಂಗೆ ಓಡುತ್ತಾ ಕಡಲ ತಡಿಗೆ ಬಂದಳು. ರಾಶಿ ರಾಶಿಯಾಗಿ ಬಿದ್ದಿದ್ದ ಮರಳನ್ನು ಹತ್ತಿ ಕೆಳಗಿಳಿದಳು. ದಡದ ವರೆಗೂ ಅವಳ ಪಾದಗಳು ಚಲಿಸಿದುವು. ಕಡಲಿನ ತೆರೆ ಒಂದು ಅವಳ ಮೃದು ಪಾದಗಳನ್ನು ತೋಯಿಸಿ ಮತ್ತೆ ಹಿಂದಕ್ಕೆ ಹೋಯಿತು.

ನಿರ್ಜನವಾಗಿತ್ತು ಸಾಗರ. ಶಾಂತವಾಗಿ ಏರಿಳಿಯುತ್ತಿದ್ದ ಅಲೆಗಳು. ತಿಳಿಯಾಗಿದ್ದ ಆಕಾಶ. ಮೆಲ್ಲನೆ ಬೀಸಿ ಬಂದ ಗಾಳಿಗೆ ಅವಳ ಸೆರಗು ಪಟಪಟನೆ ಬಡಿದು ಹಾರಾಡಿತು. ಅವಳರಿವಿಲ್ಲ ದಂತೆಯೆ ಕೈಗಳು ಕೊರಳೊಳಗಿನ ಮಾಂಗಲ್ಯದೆಡೆಗೆ ಧಾವಿಸಿದುವು. ತಡೆಯಲಾರದೆ ಗಂಗೆ ಗೋಳೋ ಎಂದು ಅತ್ತಳು.

ತೀಕ್ಷ್ಣವಾದ ಸೂರ್ಯರಶ್ಮಿ ಮೈಯಿರಿದಾಗ ಆಕೆ ಎಚ್ಚತ್ತು ಕಣ್ಣೀರು ಒರೆಸಿಕೊಂಡಳು. ಭವಿಷತ್ತಿನ ಬಗೆಗೆ ಶೂನ್ಯ ತುಂಬಿಕೊಂಡು ಹಿಂದಡಿಯಿಡುತ್ತಾ ಕಡಲ ಕಡೆಗೆ ಕಣ್ಣು ಹೊರಳಿಸಿದಳು.


ಕಣ್ಣೀರ ಮಂಜಿನ ತೆರೆಯ ಹಿಂದೆ ಕಡಲಂಚಿನಲ್ಲೊಂದು ಬಿಳಿಯ ಚುಕ್ಕೆ ಕಾಣಿಸಿತು. ಚುಕ್ಕೆ ಹಿರಿದಾಗತೊಡಗಿದಾಗ ಮೋಡವೇನೋ ಎಂಬ ಭ್ರಮೆಯಿಂದ ಆಕೆ ಕಣ್ಣುಗಳನ್ನು ಉಜ್ಜಿ ನೋಡಿದಳು.

ಅದು ಮೋಡವಾಗಿರಲಿಲ್ಲ.ಅವಳ ಹೃದಯ ಹಿಗ್ಗಿನಿಂದ ಹಾಡಿತು, ಆನಂದಾತಿರೇಕದಿಂದ. ಕಣ್ಣಿನಂಚಿನಲ್ಲಿ ತುಂಬಿದ ನೀರು ತುಳುಕಿ, ಕೆನ್ನೆಯ ಮೇಲೆ ಜಾರಿತು.

ಹತ್ತಿರ ಹತ್ತಿರಕ್ಕೆ ಬರುತ್ತಿತ್ತು ಒಂಟಿ ಹಾಯಿ.

**ಶಬ್ದಾರ್ಥ :** **ಬೆಸ್ತ** – ಮೀನುಗಾರ, **ಬಾಹುಗಳು** – ತೋಳುಗಳು, **ನೆರೆಹೊರೆ** – ಅಕ್ಕಪಕ್ಕ, **ಕಡಲಂಚು** – ಕಡಲತೀರ, **ಪ್ರವೃತ್ತಿ** – ಹವ್ಯಾಸ, **ಚಡಪಡಿಸುತ್ತ** – ಅವಸರದಿಂದ, **ತರಗೆಲೆ** – ಒಣಗಿದ ಎಲೆ, **ತೆಂಕಣ** – ದಕ್ಷಿಣ ದಿಕ್ಕು, **ಬಗುಳಾಟ** – ಕೂಗಾಟ, **ಮಂಜು** – ಇಬ್ಬನಿ, **ಗಾಬರಿಯಾಗು** – ಬೆಚ್ಚಿಬೀಳು, **ಸುಸ್ವರ** – ಇಂಪಾದ ಧ್ವನಿ, **ಭೀತಿ** – ಹೆದರಿಕೆ, ಭಯ, **ಸಂತಸ** – ಸಂತೋಷ, **ಬಿರುಗಾಳಿ** – ರಭಸವಾದ ಗಾಳಿ, **ಮಾಂಗಲ್ಯ** – ತಾಳಿ, ಮಂಗಳಸೂತ್ರ.

**ಕೃತಿ-1 ಅನುಪಮಾ ನಿರಂಜನರ ಕೃತಿಗಳನ್ನು ಕೆಳಗಿನ ಜಾಲಾಕೃತಿಯಲ್ಲಿ ಬರೆಯಿರಿ.**




**ಕೃತಿ-2 ಕೆಳಗಿನವುಗಳನ್ನು ಅನುಕ್ರಮವಾಗಿ ಬರೆಯಿರಿ.**

(i) ಅವಳ ಹೃದಯ ಹಿಗ್ಗಿನಿಂದ ಹಾಡಿತು, ಆನಂದಾತಿರೇಕದಿಂದ.

(ii) ರಾಮನನ್ನು ಕಾಣದೆ ಹೃದಯ ಗೋಳಾಡಿತು.

(iii) ಕಣ್ಣೀರ ಮಂಜಿನ ತೆರೆಯ ಹಿಂದೆ ಕಡಲಂಚಿನಲ್ಲೊಂದು ಬಿಳಿಯ ಚುಕ್ಕೆ ಕಾಣಿಸಿತು.

(iv) ಗೆಳೆಯನಾಗಲೇ ಏರಿದ್ದ ದೋಣಿಯೊಳಗೆ ತಾನೂ ಧುಮುಕಿ, ಚುಕ್ಕಾಣಿ ತಿರುವಿದ ರಾಮು.

**ಕೃತಿ-3 ಕೆಳಗಿನ ಪಡೆನುಡಿಗಳ ಅರ್ಥ ಹೇಳಿ ವಾಕ್ಯದಲ್ಲಿ ಪ್ರಯೋಗಿಸಿರಿ.**

(i) **ಮತ್ತೇರು –** ಅರ್ಥ

ವಾಕ್ಯ

(ii) **ಮುಖ ಗಂಟಿಕ್ಕು–** ಅರ್ಥ

ವಾಕ್ಯ

(iii) **ಮುಖ ಕೆಂಪೇರು–** ಅರ್ಥ

ವಾಕ್ಯ

(iv) **ನಿಟ್ಟುಸಿರು ಬಿಡು** ಅರ್ಥ

ವಾಕ್ಯ

**ಕೃತಿ-4 ಕೆಳಗಿನ ವಾಕ್ಯಗಳು ಸರಿಯೋ ತಪ್ಪೋ ಎಂಬುದನ್ನು ಹೇಳಿರಿ.**

(i) ಮಗು ಚಾಪೆಯ ಮೇಲೆ ಸುಖವಾಗಿ ನಿದ್ರಿಸುತ್ತಿತ್ತು.


(ii) ರಾಮನ ಜೊತೆಗೆ ಬೇರೆ ಯಾವ ದೋಣಿಯೂ ಹೊರಡಲಿಲ್ಲ.

(iii) ಗಾಳಿಗೆ ಸಿಕ್ಕಿದ ದೀಪದ ಹಾಗೆ ಗಂಗೆಯ ಮನಸ್ಸು ಹರುಷಗೊಂಡಿತು.


(iv) ರಾಮನು ಎಲ್ಲರ ಜೊತೆ ಕಡಲಿನಿಂದ ಮರಳಿ ಬಂದನು.

(v) ಅದು ಮೋಡವಾಗಿರಲಿಲ್ಲ.

**ಕೃತಿ-5 ಕೆಳಗಿನ ಜಾಲಾಕೃತಿಯನ್ನು ಪೂರ್ಣಮಾಡಿರಿ (ಶಿಕ್ಷಕರ ಸಹಾಯ ಪಡೆಯಿರಿ)**




**ಕೃತಿ-6 ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ. (ಶಿಕ್ಷಕರ ಸಹಾಯ ಪಡೆಯಿರಿ)**





**ಕೃತಿ-7 ಕೆಳಗಿನ ಸುಳಿವುಗಳಿಗೆ ಹೊಂದುವ ಸರಿಯಾದ ಅಕ್ಷರಗಳನ್ನು ಖಾಲಿ ಚೌಕೋನಗಳಲ್ಲಿ ತುಂಬಿರಿ.**

(i) ಕಡಲಕನ್ನೆಯ ರುದ್ರನಾಟ್ಯಕ್ಕೆ ಇದು ಹಿಮ್ಮೇಳ ಒದಗಿಸುತ್ತಿತ್ತು.

(ii) ಇವಳು ರುದ್ರರೂಪಿಣಿಯಾಗಿದ್ದಳು.

(iii) ಆಕಾಶದಲ್ಲಿ ಇವು ಕಾಣಿಸಿದಾಗ ಗಂಗೆಗೆ ಚಿಂತೆಯಾಯಿತು.

(iv) ಇದು ಹತ್ತಿರ ಹತ್ತಿರಕ್ಕೆ ಬರುತ್ತಿತ್ತು.



**ಕೃತಿ-8 ಕೆಳಗಿನ ಕೋಷ್ಟಕದಲ್ಲಿ ಲಿಂಗ, ವಚನ, ವಿಭಕ್ತಿ ಪ್ರತ್ಯಯಗಳನ್ನು ಬರೆಯಿರಿ.**

| ಪದಗಳು | ಲಿಂಗ | ವಚನ | ವಿಭಕ್ತಿ ಪ್ರತ್ಯಯ |
|---|---|---|---|
| ನಾಯಿಗಳು | | | |
| ರಾಮನ | | | |
| ಗಂಗೆಗೆ | | | |
| ಮನುಷ್ಯರಲ್ಲಿ | | | |

**ಕೃತಿ-9 ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದವನ್ನು ಆಯ್ದು ಬರೆಯಿರಿ.**

(i) (ಅ) ಬೆಸ್ತ (ಬ) ಬೇಟೆಗಾರ (ಕ) ಬಡಿಗ (ಡ) ಓಟಗಾರ (i) ____

(ii) (ಅ) ರಾಮ (ಬ) ಮಂಡೋದರಿ (ಕ) ಸೀತೆ (ಡ) ಲಕ್ಷ್ಮಣ (ii) ____

(iii) (ಅ) ಸರೋವರ (ಬ) ಗಂಗಾ (ಕ) ಯಮುನಾ (ಡ) ಕಾವೇರಿ (iii) ____

(v) (ಅ) ಕಥೆ (ಬ) ಕಾದಂಬರಿ (ಕ) ನೃತ್ಯ (ಡ) ನಾಟಕ (iv) ____

**ಕೃತಿ-10 ಕೆಳಗಿನ ವಾಕ್ಯಗಳ ಪ್ರಯೋಗ ಬದಲಿಸಿ ಬರೆಯಿರಿ.**

i) ಆಂಜನೇಯನು ಲಂಕೆಯನ್ನು ಶೋಧಿಸಿದನು.

ii) ವಿದ್ಯಾರ್ಥಿಗಳು ಪುಸ್ತಕವನ್ನು ಓದುತ್ತಾರೆ.

**ಕೃತಿ-11 ವಾಕ್ಯಗಳ ಪ್ರಕಾರಗಳನ್ನು ಗುರುತಿಸಿರಿ. (ಸರಳ, ಸಂಯುಕ್ತ, ಸಮ್ಮಿಶ್ರ)**

i) ಭರತನು ರಾಮನನ್ನು ಅಯೋಧ್ಯೆಗೆ ಹಿಂದಿರುಗಬೇಕೆಂದು ಕೇಳಿಕೊಂಡನು. ಆದರೆ ಅವನು ಹಿಂದಿರುಗಲಿಲ್ಲ.

ii) ತಮ್ಮನು ಮಾರುಕಟ್ಟೆಯಿಂದ ಹಣ್ಣುಗಳನ್ನು, ತರಕಾರಿಗಳನ್ನು ತಂದನು.

iii) ತಂದೆಯ ಮಾತನ್ನು ಕೇಳಿದ ಮಗ ಬುದ್ಧಿವಂತನಾದನೆಂಬುದನ್ನು ಊರಿನವರು ಬಲ್ಲರು.

**ಕೃತಿ-12 'ಬಂದದ್ದು ಬರಲಿ, ದೇವರ ದಯೆ ಇರಲಿ' ಎಂಬ ವಿಚಾರವನ್ನು ಕುರಿತು 'ಒಂಟಿ ಹಾಯಿ' ಪಾಠದ ಆಧಾರದಿಂದ 10-12 ವಾಕ್ಯಗಳಲ್ಲಿ ನಿಮ್ಮ ಅಭಿಪ್ರಾಯ ಬರೆಯಿರಿ.**

**ಕೃತಿ-13 'ಒಂಟಿ ಹಾಯಿ' ಪಾಠದಿಂದ ನೀವು ಯಾವ ಗುಣವನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಿರೆಂಬುದನ್ನು ಬರೆಯಿರಿ.**

★ ★ ★ ★ ★ ★

# 3 ಕುವೈಟ್

- ಸುನೀತಾ ಎಂ. ಶೆಟ್ಟಿ

**ಸುನೀತಾ ಎಂ. ಶೆಟ್ಟಿ :** 'ಮುಂಬಯಿ ಕನ್ನಡಿಗರ ಹಿರಿಯಕ್ಕ ಎಂದೇ ಪರಿಚಿತರಾಗಿರುವ ಡಾ. ಸುನೀತಾ ಎಂ. ಶೆಟ್ಟಿಯವರು ಮಹಾರಾಷ್ಟ್ರದ ಕನ್ನಡ ಮತ್ತು ತುಳು ಸಾಹಿತ್ಯ, ಸಾಂಸ್ಕೃತಿಕ ಲೋಕಕ್ಕೆಲ್ಲ ಚಿರಪರಿಚಿತರಾಗಿದ್ದಾರೆ. ನಿನಾದ, ಅಂತರ್ಗಂಗೆ, ಪಯಣ, ಅಕ್ಷಯ ಸಂಪದ ಇವರ ಕನ್ನಡ ಕೃತಿಗಳು. ಪಿಂಗಾರ, ಸಂಕ್ರಾಂತಿ, ನಾಗಸಂಪಿಗೆ ತುಳು ಗ್ರಂಥಗಳು. ಇವರು ಕರ್ನಾಟಕದ ಪ್ರತಿಷ್ಠಿತ 'ಅತ್ತಿಮಬ್ಬೆ' ಪುರಸ್ಕಾರವನ್ನು, ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಮಾತೋಶ್ರೀ ರತ್ನಮ್ಮ ಹೆಗ್ಗಡೆ ಪ್ರಶಸ್ತಿ ಮುಂತಾದವುಗಳನ್ನು ಪಡೆದಿದ್ದಾರೆ.

ಪ್ರಸ್ತುತ ಲೇಖನವನ್ನು 'ಪ್ರವಾಸಿಯ ಹೆಜ್ಜೆಗಳು' ಎಂಬ ಗ್ರಂಥದಿಂದ ಆಯ್ದುಕೊಳ್ಳಲಾಗಿದೆ. ಕುವೈಟ್ ದೇಶದ ಧೀರ ನಡಿಗೆಯನ್ನೂ, ಏಳು ಬೀಳುಗಳನ್ನೂ ಹಳೆ ಸಂಪ್ರದಾಯದೊಂದಿಗೆ ಹೊಸ ವಿಚಾರಗಳ ಸೇರ್ಪಡೆಯನ್ನೂ, ಸತತ ಪ್ರಗತಿಯನ್ನೂ ಲೇಖಕಿ ಇಲ್ಲಿ ಚೆನ್ನಾಗಿ ನಿರೂಪಿಸಿದ್ದಾರೆ.

---

ಕುವೈಟ್ ಈ ಶಬ್ದ 'ಕುಟ್' ಎಂದರೆ 'ಕೋಟೆ' ಎಂಬ ಅರ್ಥವನ್ನು ನೀಡುತ್ತದೆ. ಅಲೆಮಾರಿ ಜನಾಂಗ ಅಲ್ಲಿ ತಳವೂರಿದಂದಿನಿಂದ ಭದ್ರವಾದ ಒಂದು ಕೋಟೆಯನ್ನು ಅಲ್ಲಿ ಕಟ್ಟಿದ್ದರಂತೆ. ಹಲವಾರು ಹೊಡೆತಗಳು ಬಿದ್ದು ಕೋಟೆ ಮುರಿದು ಬಿದ್ದರೂ ಅದನ್ನು ಮತ್ತೆ ಕಟ್ಟಲಾಗಿದೆ. ಅರಬಿ ರಾಷ್ಟ್ರಗಳಲ್ಲೇ ಸಂಪದ್ಭರಿತ ರಾಜ್ಯವಾದ್ದರಿಂದ 'ದೌಲತ್' ಎಂಬ ಅನ್ವರ್ಥಕ ನಾಮವೂ ಅದಕ್ಕೆ ಒಪ್ಪುತ್ತದೆ. ಜಗತ್ತಿನಲ್ಲೆ ಅತಿ ಹೆಚ್ಚು ವಿನಿಮಯ ದರವನ್ನು ಪಡೆಯುವ 'ದಿನಾರ್' ಇಲ್ಲಿಯ ಹಣ. ಮೊದಲಿಗೆ ಒಕ್ಕಲುತನ, ಒಂಟೆ ಸಾಗಾಟ ಮತ್ತು ಮೀನುಗಾರಿಕೆ ಇಷ್ಟಕ್ಕೇ ಸೀಮಿತವಾಗಿದ್ದ ಇಲ್ಲಿಯ ಜನಜೀವನ, 1935 ರಲ್ಲಿ ತೈಲ ಸಂಪತ್ತು ದೊರಕಿದ ಮೇಲೆ ಅಗಾಧ ಸಂಪತ್ತಿಗೆ ದೊರೆ ಎನಿಸಿದೆ.

1775 ರಲ್ಲಿ ಕುವೈಟ್‌ನಲ್ಲಿ ಪ್ಲೇಗ್ ಕಾಣಿಸಿಕೊಂಡಾಗ ಅದು ಬ್ರಿಟಿಷ್ ಈಸ್ಟ ಇಂಡಿಯಾ ಕಂಪನಿಯ ಜೊತೆ ಸ್ನೇಹ ಬೆಳೆಸಿತು. ಪರಿಣಾಮವಾಗಿ ಅರೇಬಿಯನ್ ಗಲ್ಫ್ ತೀರದಲ್ಲಿ ಕಂಪನಿಯ ವ್ಯಾಪಾರೀ ಕೇಂದ್ರಗಳು, ಕಾರ್ಖಾನೆಗಳು ಬೆಳೆದುವು. ಈ ನೆರವಿನಿಂದಾಗಿ ಪರ್ಶಿಯನ್ ಹಿಡಿತದಿಂದ ಆದಷ್ಟು ಸ್ವತಂತ್ರವಾಗಿ ವ್ಯವಹರಿಸಲೂ ಸಾಧ್ಯವಾಯಿತು. ಬ್ರಿಟಿಷ್ ನೌಕಾ ಪಡೆಯಿಂದಾಗಿ ಭದ್ರತೆಯೂ ಒದಗಿ ಬಂತು. 'ಕವಾಸಿಮ್' ಎಂಬ ಕಡಲುಗಳ್ಳರ ದಾಳಿಯನ್ನು ಈ ನೌಕಾ ಪಡೆ ಎದುರಿಸಿ ಮಣ್ಣು ಮುಕ್ಕಿಸಿತು. ಒಡೆದ ಕೋಟೆಯನ್ನು ಕುವೈಟ್ ಪುನರ್ ರಚಿಸಿಕೊಂಡಿತು. ಕೃಷಿ, ಮೀನುಗಾರಿಕೆಯ ಜೊತೆಯಲ್ಲೆ ಕಡಲಾಳದಲ್ಲಿ ದೊರಕಿದ ನೈಸರ್ಗಿಕ ಮುತ್ತುಗಳ ವ್ಯಾಪಾರದಿಂದಾಗಿ ಸಂಪತ್ತು ಕೂಡಿತು.

1935 ರಲ್ಲಿ ಕುವೈಟ್ ತನ್ನ ಸೀಮೆಯಲ್ಲಿ ಪ್ರಥಮ ಬಾರಿಗೆ ತೈಲಬಾವಿ ತೋಡಲು 'ಗಲ್ಫ್ ಆಯಿಲ್' ಎಂಬ ಅಮೆರಿಕನ್ ಕಂಪನಿಯೊಡನೆ ಒಪ್ಪಂದ ಮಾಡಿಕೊಂಡಿತು. ಗಲ್ಫ್ ಪ್ರದೇಶದಲ್ಲಿ ತೈಲ ಎತ್ತುವ ಉದ್ಯಮ ಕಾಲು ಶತಮಾನದ ಹಿಂದೆಯೇ ಆರಂಭಗೊಂಡಿತ್ತಾದರೂ (ಇರಾನ್) ಕುವೈಟ್‌ನಲ್ಲಿ ಈ ಯೋಜನೆ ಹಾಕಿಕೊಳ್ಳಲು ಇಂಗ್ಲಂಡ್ ಒಪ್ಪಲಿಲ್ಲ. ಮುಂದೆ ಶೇಖ್ ಜಬೇರ್ ಅರಸು, ಈ ಒಪ್ಪಂದ ಮಾಡಿಕೊಂಡನೆಂದು ಹೇಳಲಾಗುತ್ತದೆ. 1938 ರಲ್ಲಿ ಎರಡನೇ ತೈಲ ಬಾವಿ ರಚನೆಗೊಂಡ ಮೇಲೆ ಕುವೈಟಿನ ಅದೃಷ್ಟದ ಬಾಗಿಲು ತೆರೆಯಿತು. 'ಕುವೈಟ್ ಆಯಿಲ್ ಕಂಪನಿ' ಜಗತ್ತಿನಲ್ಲೇ ಅತಿ ದೊಡ್ಡ ತೈಲ ಉತ್ಪಾದನಾ ಕೇಂದ್ರವೆಂಬ ಹೆಗ್ಗಳಿಕೆಗೆ ಪಾತ್ರವಾಯಿತು. (1953).

ಆಧುನಿಕ ಸೌಲಭ್ಯದ ಬಂದರುಗಳು ತೈಲ ಶುದ್ಧೀಕರಣ ಕೇಂದ್ರಗಳು, ಸುರಕ್ಷಿತ ರಸ್ತೆಗಳು, ವಿದ್ಯುತ್ ಕೇಂದ್ರಗಳು, ಕುಡಿಯುವ ನೀರು ಪೂರೈಕೆ, ಅಂತರ್‌ಜಾಲ ಕೇಂದ್ರಗಳು ಹೀಗೆ ಹಲವು ಬೇಡಿಕೆಗಳನ್ನು ಕುವೈಟ್ ಈಡೇರಿಸಿಕೊಂಡಿತು. ಇತ್ತ ವಲಸೆಗಾರರ ಸಂಖ್ಯೆಯೂ ಬೆಳೆಯಿತು. ಕುಳಿತು ಉಣ್ಣುವವರ ಸಂಖ್ಯೆ ಹೆಚ್ಚಿದಂತೆ ಹೊರಗಿನಿಂದ ಕಾರ್ಮಿಕರನ್ನು ಆಮದು ಮಾಡಿಕೊಳ್ಳಬೇಕಾಯಿತು.

ಜೂನ್ 19, 1961 ರಲ್ಲಿ ಕುವೈಟ್ ಬ್ರಿಟಿಷರ ರಕ್ಷಣಾ ಹಿಡಿತದಿಂದ ಕಳಚಿಕೊಂಡು ಸ್ವತಂತ್ರವಾಯಿತು. ಅಲ್-ಸಬಾಹ ರಾಜವಂಶವೇ ಪರಂಪರಾಗತವಾಗಿ ಅಧಿಕಾರಕ್ಕೆ ಬರುವುದೆಂದಾಯಿತು. ಈ ಮೊದಲು ಭಾರತೀಯ ಹಣವೇ ಚಲಾವಣೆಯಲ್ಲಿದ್ದುದು (ರೂಪ್ಯಾ) ಮಾಯವಾಗಿ 'ದೀನಾರ್' ಚಲಾವಣೆಗೆ ಬಂತು.

1990 ರಲ್ಲಿ ಇರಾಕ್, ಕುವೈಟಿನ ಮೇಲೆ ಯುದ್ಧ ಸಾರಿತು. 'ಅಲ್-ಸಬಾಹ' ಆಡಳಿತದಿಂದ ಬೇಸತ್ತ ಕುವೈಟಿನ ಜನರ ರಕ್ಷಣೆಗಾಗಿ ತಾನು ಧಾವಿಸುತ್ತಿರುವುದಾಗಿ ಕ್ಷುಲ್ಲಕ ಕಾರಣ ನೀಡಿದ ಇರಾಕ್, ಕುವೈಟಿನ ದಕ್ಷಿಣ ಭಾಗವನ್ನು ಆಕ್ರಮಿಸಿ ಅದಕ್ಕೆ 'ಕಧೀನಾ' ಎಂದು ಹೆಸರಿಟ್ಟು, ಅದನ್ನು ಇರಾಕಿನ ಒಂದು ಪ್ರದೇಶವೆಂದು ಘೋಷಿಸಿತು.

ಕುವೈಟ್ ಇರಾಕಿನ ವಶವಾಯಿತು. ಅದು ವಿಧ್ವಂಸಕ ಕೃತ್ಯಗಳನ್ನು ನಡೆಸಿ ಕುವೈಟ್‌ನ್ನು ವಿರೂಪಗೊಳಿಸಿತು. ಏಳು ಸಾವಿರ ಕುವೈಟ್ ಸೈನಿಕರು ನಲವತ್ತು ಟ್ಯಾಂಕರ್, ಇತರ ಶಸ್ತ್ರಾಸ್ತ್ರಗಳೊಂದಿಗೆ ಅರಸು ಸಮೇತ ಸೌದಿ ಅರೇಬಿಯಾದಲ್ಲಿ ಆಶ್ರಯ ಪಡೆಯುವಂತಾಯಿತು.

1991 ರಲ್ಲಿ ಸುಮಾರು 34 ಮಿತ್ರ ರಾಷ್ಟ್ರಗಳು ಒಟ್ಟಾಗಿ (ಅಮೆರಿಕ, ಇಂಗ್ಲಂಡ್, ಫ್ರಾನ್ಸ್, ಸೌದಿ ಅರೇಬಿಯಾ, ಬಹೈನ್, ಒಮಾನ್, ಕತಾರ್, ಯು.ಎ.ಇ. ಸಿರಿಯಾ, ಈಜಿಪ್ಟ್ ಇತ್ಯಾದಿ) ಸೈನ್ಯ ಸಹಾಯ ನೀಡಿ ಕುವೈಟನ್ನು ಬಲಗೊಳಿಸಿದ್ದರಿಂದ ಸದ್ದಾಂ ಹುಸೇನ್ ಆಡಳಿತವನ್ನು ಹಿಂತೆಗೆದು, ಇರಾಕ್, ಕುವೈಟ್ ಮೇಲಿನ ಕಪಿ ಮುಷ್ಟಿಯನ್ನು ಸಡಿಲಗೊಳಿಸಿತು. ನಲವತ್ತೆರಡು ದಿನಗಳ ಭೀಕರ ಸಂಗ್ರಾಮ ಕೊನೆಗೊಂಡು 'ಸೀಸ್ ಫಯರ್' ಒಪ್ಪಂದವಾಯಿತು. ಕುವೈಟ್ ಧ್ವಜ ಮೇಲೇರಿತು. 1992 ರಲ್ಲಿ ಸೌದಿ ಅರೇಬಿಯಾದಿಂದ ಅಮೀರನನ್ನು ಕರೆಸಿಕೊಳ್ಳಲಾಯಿತು.

2005ರ ಜನಗಣತಿಯ ಪ್ರಕಾರ ಕುವೈಟ್‌ನ ಜನಸಂಖ್ಯೆ 2.3 ಮಿಲಿಯನ್ ಇದ್ದು ಇದರಲ್ಲಿ ಒಂದೂವರೆ ಮಿಲಿಯನ್ ಜನರು ಅಲ್ಲಿಯ ನಾಗರಿಕರಲ್ಲ. ಹೆಂಗಸರಿಗಿಂತ ಗಂಡಸರ ಸಂಖ್ಯೆ ಹೆಚ್ಚು. ಅರೇಬಿಕ್ ಭಾಷೆ. ಸರಕಾರೀ ಮಾನ್ಯತೆ ಪಡೆದ ಭಾಷೆ. ಆದರೆ, ಎಲ್ಲೆಲ್ಲೂ ಇಂಗ್ಲೀಷ್ ಭಾಷೆ ಸರಾಗವಾಗಿ ವ್ಯವಹರಿಸಲ್ಪಡುತ್ತದೆ.

ಇಸ್ಲಾಂ ಧರ್ಮವೇ ಪ್ರಧಾನ, ಹೆಚ್ಚಿನವರು ಸುನ್ನಿಗಳು. ಶಿಯಾಗಳು ಅಲ್ಪ ಪ್ರಮಾಣದಲ್ಲಿ ಇದ್ದಾರೆ. ಇಲ್ಲಿ ಚರ್ಚುಗಳಿವೆ. ದೇವಾಲಯಗಳಿಲ್ಲ. ಆದರೆ, ಅವರವರ ಧರ್ಮವನ್ನು ಪಾಲಿಸಲು ಯಾವುದೇ ಅಡೆತಡೆಗಳಿಲ್ಲ.

ಇತರ ಅರಬ ರಾಜ್ಯಗಳಿಗೆ ಹೋಲಿಸಿದರೆ ಕುವೈಟ್ ಸರಕಾರವು ಸ್ತ್ರೀಯರಿಗೆ ಹೆಚ್ಚು ಸ್ವಾತಂತ್ರ್ಯ ನೀಡಿದೆ. ಮುಸ್ಲಿಂ ಸಂಪ್ರದಾಯದ ಉಡುಗೆ ಧರಿಸುವವರ ನಡುವೆ ಪಾಶ್ಚಾತ್ಯ ಉಡುಗೆಗೆ ಮಾರುಹೋದ ತರುಣಿಯರೂ ಅಲ್ಲಿದ್ದಾರೆ. ಎಂತಹ ಉಡುಗೆಯಾದರೂ ತಲೆಗೆ ರುಮಾಲು ಕಟ್ಟಿ ಆದಷ್ಟು ಮುಖವನ್ನು ಮುಚ್ಚಿಕೊಳ್ಳುವ ಸಂಪ್ರದಾಯ ಉಳಿ ಸಿಕೊಂಡಿದೆ. ಈಗಲೂ ಹಳೆಯ ಮನೆಗಳನ್ನು ಹಾಗೆಯೇ ಉಳಿಸಿಕೊಂಡಿರುವ ಇಲ್ಲಿಯ ಜನ ಸಂಪ್ರದಾಯವಾದಿ ಗಳೆಂಬುದು ಸ್ಪಷ್ಟ. ಈ ಮನೆಗಳು ಚೌಕಾಕಾರವಾಗಿದ್ದು ನಡುವೆ ಒಳಾಂಗಣವಿದೆ. ಮನೆಯೊಳಗೆ ಹೆಣ್ಣು ಮಕ್ಕಳಿಗೆ ಮತ್ತು ಪುರುಷರಿಗೆ ಪ್ರತ್ಯೇಕ ಕೋಣೆಗಳಿವೆ. ಅತಿಥಿಗಳಿಗೆ ಪ್ರತ್ಯೇಕ ಪ್ರವೇಶ. ಈ ನಡುವೆ ಇಳಿಬಿಟ್ಟ ಪರದೆಗಳು! ಹೀಗೆ ಪ್ರತ್ಯೇಕತೆಯನ್ನು ಕಾಯ್ದುಕೊಂಡರೂ ಸ್ತ್ರೀಯರ ಬಗೆಗೆ ಅವರಿಗೆ ಗೌರವವಿದೆ.

ಕುವೈಟ್ ಮಹಿಳೆ ತನ್ನ ಹೋರಾಟದ ಫಲವಾಗಿ ಗಂಡಸರಂತೆ ಈಗ ಹೊರಗೆ ದುಡಿಯುತ್ತಿದ್ದಾಳೆ. ಹೆಚ್ಚಾಗಿ ಸಮಾಜ ಸೇವೆ, ಕಾರಕೂನ ಕೆಲಸ, ಸಣ್ಣ ಸಣ್ಣ ಉದ್ದಿಮೆಗಳನ್ನು ನಡೆಸುವುದು, ಶಿಕ್ಷಕ ವೃತ್ತಿ, ಇಂಥ ಕ್ಷೇತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾಳೆ. ಕುವೈಟ್ ವಿ. ವಿ. ದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಿದೆಯಂತೆ. ಕುವೈಟ್‌ನಲ್ಲಿ ವಿದೇಶೀಯರು ಸರಕಾರಿ ಕೆಲಸ ಪಡೆಯು ವಂತಿಲ್ಲ. ಆದರೆ ಸು. 1/3 ರಷ್ಟು ಸ್ತ್ರೀಯರು (ಮುಸ್ಲಿಮರು) ಸರಕಾರೀ ನೌಕರಿಯಲ್ಲಿದ್ದಾರೆ. ಇತ್ತೀಚೆಗೆ ಪೊಲೀಸು ಖಾತೆ, ವಿಮಾನ ನಿಲ್ದಾಣದ ರಕ್ಷಣಾ ವ್ಯವಸ್ಥೆಯಲ್ಲೂ ಮುಸ್ಲಿಂ ಮಹಿಳೆಯರ ಸೇರ್ಪಡೆಯಾಗಿದೆ. ಆದರೆ ಅವರು ಮಹಿಳೆಯ ರನ್ನಷ್ಟೇ ನೋಡಿಕೊಳ್ಳಬೇಕು.

ಹೀಗಿದ್ದರೂ ಒಂದು ಸಂತಸದ ವಿಷಯವೆಂದರೆ ಕುವೈಟ್‌ನಲ್ಲಿ ಶತಮಾನಗಳಿಂದ ಮತದಾನದ ಹಕ್ಕೇ ಇಲ್ಲದಿದ್ದ ಕುವೈಟ್‌ನ ಮಹಿಳೆ, 2006 ರಲ್ಲಿ ಪ್ರಥಮ ಬಾರಿಗೆ ಅಲ್ಲಿಯ ಮುನ್ಸಿಪಲ್ ಚುನಾವಣೆಯಲ್ಲಿ ಮತ ಚಲಾಯಿಸಿದ್ದಾಳೆ. ಹಕ್ಕಿಗಾಗಿ ಈಗಲೂ ಹೋರಾಟ ನಡೆಸುತ್ತಲೇ ಇದ್ದಾಳೆ. ಚುನಾವಣೆಗೆ ನಿಲ್ಲುವ ಅಧಿಕಾರವನ್ನೂ ಪಡೆದಿದ್ದಾಳೆ.

ಜಗತ್ತಿನಲ್ಲಿ ಒಂದೇ ಒಂದು ಕೆರೆ ಇಲ್ಲದ ರಾಜ್ಯವೆಂದರೆ ಕುವೈಟ್, ಮರಳು ಮತ್ತು ಜಿಗುಟು ಮಣ್ಣಿನಿಂದ ಹಸಿರು ಸೊಂಪಾಗಿ ಬೆಳೆಯುವುದು ಹೇಗೆ ಸಾಧ್ಯ? ಆದರೂ ಅಲ್ಲಲ್ಲಿ ಚಿಕ್ಕ ಚಿಕ್ಕ ಓಡಾಡುವ ವಿದೇಶೀ ಕಾರುಗಳು, ಮಂಗಳೂರಿನ ಊಟವನ್ನು ತಟ್ಟೆಯಲ್ಲಿ ಪ್ರೀತಿಯಿಂದ ಬಡಿಸುವ ಮಲಬಾರ್ ರೆಸ್ಟೋರೆಂಟ್‌ಗಳು, ಅಲ್ಲಲ್ಲಿ ಎದ್ದು ನಿಂತ ಪಂಚತಾರಾ

ಹೋಟೇಲುಗಳು ಮಾರ್ಕೆಟ್‌ನಲ್ಲಿ ಸ್ವಚ್ಛವಾಗಿ ನಿರಾಳತೆಯಿಂದ ಉಸಿರಾಡುವ ಆಳುದ್ದದ ಮೀನುಗಳು ಇಲ್ಲಿಕಾಣುತ್ತವೆ. ಸಮೀಪದ ಕಡಲ ಕಿನಾರೆಯಲ್ಲಿ ಗುಂಪು ಗುಂಪಾಗಿ ತೇಲುತ್ತಿರುವ ಕುವೈಟ್‌ನ ಜೀವನಾಡಿಯಾಗಿರುವ ಮೀನುಗಾರರ ದೋಣಿಗಳು ಕುವೈಟ್‌ನ ಆತ್ಮವೆನ್ನಬಹುದು. ಬೇರೆ ಕಡೆಯಿಂದ ನೀರನ್ನು ತರಿಸಿಕೊಳ್ಳುವ ದೇಶ ಕುವೈಟ್ ಆದರೂ ಬಂದವರಿಗೆಲ್ಲ ಜೀವ ರಸಧಾರೆ ಎರೆದು, ಆಶ್ರಯ ನೀಡಿ ಬದುಕನ್ನು ಸೊಗಸುಗೊಳಿಸುವ ಮಾರ್ಗಗಳನ್ನು ತೆರೆದಿಟ್ಟದ್ದು ಸಾಮಾನ್ಯ ಸಂಗತಿಯೇನಲ್ಲ.

ಕುವೈಟ್‌ನಲ್ಲಿ ಕೃಷಿ ಕಾರ್ಯ ತೀರ ಅತ್ಯಲ್ಪ. ಸಿಹಿ ನೀರಿನ ಕೊರತೆಯೇ ಇದಕ್ಕೆ ಮುಖ್ಯಕಾರಣ. ಶುದ್ಧೀಕರಿಸಿಕೊಂಡ ನೀರು ಜನರಿಗೆ ಕುಡಿಯಲು ಮತ್ತು ತೈಲಾಗಾರಗಳಿಗೆ ವ್ಯಯವಾಗುವುದರಿಂದ ಜನರು ಕೃಷಿಗೆ ಮನಸ್ಸು ಮಾಡುವುದು ಸಾಧ್ಯವಾಗುವುದಿಲ್ಲ. ಹೀಗಾಗಿ ಆಹಾರ ಪದಾರ್ಥಗಳನ್ನು ಹೊರಗಿನಿಂದಲೇ ಕುವೈಟ್ ಆಮದು ಮಾಡಿಕೊಳ್ಳಬೇಕಾಗಿದೆ.

ಆದರೆ ಈ ಸಣ್ಣ ರಾಜ್ಯದಲ್ಲಿ ಏಳು ವಿಮಾನ ನಿಲ್ದಾಣಗಳಿವೆ ಎಂದರೆ ಆಶ್ಚರ್ಯವಾಗದೇ? ಹೊರ ದೇಶಗಳೊಡನೆ ನಡೆಸುವ ವ್ಯಾಪಾರ ಸಂಬಂಧದಿಂದಾಗಿ ಸುಮಾರು ನಲವತ್ತಕ್ಕೂ ಹೆಚ್ಚು ವ್ಯಾಪಾರೀ ಹಡಗುಗಳು ಇಲ್ಲಿವೆ, ಎಂಬೊಂದು ದಾಖಲೆ ಇದೆ. ದೂರವಾಣಿ ವ್ಯವಸ್ಥೆ ತುಂಬ ಚೆನ್ನಾಗಿದೆ. ಇದಲ್ಲದೆ ಆಕಾಶವಾಣಿ ಕೇಂದ್ರಗಳು, ದೂರದರ್ಶನ ಕೇಂದ್ರಗಳು, ಸೆಟ್‌ಲೈಟ್ ಸಂಪರ್ಕ ಇತ್ಯಾದಿ ಅತ್ಯಾಧುನಿಕ ಸೌಕರ್ಯಗಳನ್ನು ಕುವೈಟ್ ಸಾಧಿಸಿಕೊಂಡಿದೆ. ಜಗತ್ತಿನಲ್ಲೇ ಅತೀ ಹೆಚ್ಚು ಅಂತರ್‌ಜಾಲ ಹೊಂದಿರುವ ದೇಶ ಕುವೈಟ್.

ಅಲ್ಲಿ ಎಲ್ಲರಿಗೂ ಉಚಿತ ಶಿಕ್ಷಣ, ಉಚಿತ ಆರೋಗ್ಯ ಸೇವೆ ಇದೆಯಾದರೂ ವಲಸಿಗರು ಇದರ ಲಾಭ ಪಡೆಯುವಂತಿಲ್ಲ. ಬೌದ್ಧರು, ಹಿಂದೂಗಳು ಮತ್ತು ಸಿಖ್ಖರು ತಮ್ಮ ತಮ್ಮ ಧರ್ಮಗಳನ್ನು ಮನೆಯೊಳಗೇ ಪಾಲಿಸಬೇಕಲ್ಲದೆ ಹೊರಗೆ ಧಾರ್ಮಿಕ ಕಟ್ಟಡಗಳನ್ನು ರಚಿಸುವಂತಿಲ್ಲ. ಕ್ರೈಸ್ತ ಚರ್ಚುಗಳು ಅಲ್ಲಿ ಇವೆಯಾದರೂ ಅವುಗಳ ಮೇಲೆ ಸರಕಾರದ ನಿಗಾ ಹಾಗೂ ನಿಯಂತ್ರಣವಿದೆ, ಎಂಬ ಹೇಳಿಕೆ ಉಂಟು, ತೈಲಾಗಾರಗಳಿಗೆ ಬೇಕಾದ ತಂತ್ರಜ್ಞರನ್ನು ವಿದೇಶಗಳಿಂದಲೇ ಕರೆಸಿಕೊಳ್ಳುತ್ತದೆ.

ಕುವೈಟ್‌ನಲ್ಲಿಯೂ ಜಾನಪದ ನೃತ್ಯ ಪ್ರಕಾರಗಳಿವೆ. ಅವುಗಳಲ್ಲಿ ಯುದ್ಧ ನೃತ್ಯ ಬಹಳ ಜನಪ್ರಿಯವಾದುದು (ಕತ್ತಿ ವರಸೆ). ಹಾಡು ಮುಖ್ಯ. ಜನಪದ ಹಾಡುಗಳಿಗೆ ಒಟ್ಟಾಗಿ 'ಸಾತ್' ಎನ್ನುತ್ತಾರೆ. ಅದರಲ್ಲಿಯೂ ಕೈಯಲ್ಲಿ ಮಣ್ಣಿನ ಮಡಿಕೆಗಳನ್ನು ಹಿಡಿದು ಸಂಗೀತಕ್ಕೆ ಸರಿಯಾಗಿ ಕುಣಿಯುವ ಅಂದದ ನೃತ್ಯವನ್ನು 'ಫಿದ್‌ಗೇರಿ' ಎನ್ನುತ್ತಾರೆ. ಈ ಎಲ್ಲಾ ನೃತ್ಯಗಳಲ್ಲಿ ಗಂಡಸರದೇ ಸಿಂಹಪಾಲು, ಆದರೆ ಬುಡಕಟ್ಟು ಜನಾಂಗದ ಕುಣಿತದಲ್ಲಿ ಹೆಚ್ಚಾಗಿ ಹೆಣ್ಣು ಮಕ್ಕಳು ಸೇರಿ ಕುಣಿಯುತ್ತಾರೆ.

ಮನರಂಜನೆಗಾಗಿ ಪಾರ್ಕುಗಳು, ಚಿತ್ರಕಲೆಯನ್ನು ದರ್ಶಿಸುವ ಕಟ್ಟಡಗಳು, ವಿಸ್ತಾರವಾದ 'ಮಾಲ್'ಗಳು, ಬೀಚುಗಳು, ಸ್ಟಾರ ಹೋಟೇಲುಗಳು, ತಾರಾ ವೀಕ್ಷಣಾ ಗೃಹ ಮೊದಲಾದ ಆಕರ್ಷಣೆಗಳು ಪ್ರವಾಸಿಗಳನ್ನು ಕೈಬೀಸಿ ಕರೆಯುತ್ತವೆ. ದೇಶದ ಇತಿಹಾಸವನ್ನು ಸಾರುವ ವಸ್ತು ಸಂಗ್ರಹಾಲಯವಿದೆ. ಇದರಲ್ಲಿ ಶಸ್ತ್ರಾಸ್ತ್ರಗಳು, ಕೆಲವು ಪ್ರಸಿದ್ಧ ದಾಖಲೆಗಳು, ಪ್ರಾಚೀನ ಆಭರಣ, ದಿರಿಸು, ಮತ್ತು ಕರಕುಶಲ ವಸ್ತುಗಳಿವೆ.

ಕುವೈಟಿನ ಪವಿತ್ರ ಮಸೀದಿಯು ಬೃಹತ್ತಾಗಿದ್ದು ಈ ಪ್ರಾರ್ಥನಾ ಮಂದಿರಕ್ಕೆ ಎಲ್ಲ ಧರ್ಮೀಯರಿಗೂ ಪ್ರವೇಶವಿದೆ. ತಲೆಯನ್ನು ಬಟ್ಟೆಯಿಂದ ಅಥವಾ ಟೋಪಿಯಿಂದ ಮುಚ್ಚಿಕೊಳ್ಳಬೇಕು. ಇಸ್ಲಾಂ ಧರ್ಮದ ಪ್ರಕಾರ, ಪ್ರತಿಯೊಬ್ಬ ಮುಸ್ಲಿಮನೂ ವಾರ್ಷಿಕ ಇಂತಿಷ್ಟು ಹಣವನ್ನು ಶಕ್ಯಾನುಸಾರ ದಾನಕ್ಕಾಗಿಯೇ ಮೀಸಲಿಡಬೇಕು ಇದಕ್ಕೆ 'ಜಕಾತ್' ಎನ್ನುತ್ತಾರೆ. ವಿಶ್ವದೆಲ್ಲೆಡೆ ಈ ನಿಯಮ ಚಾಲ್ತಿಯಲ್ಲಿದೆ. 'ತನ್ನಂತೆ ಪರರು' – ಎಂದು ಭಾವಿಸುವ ರೀತಿಯೇ ಇದು.

ಪ್ರಪಂಚದ ಇತರ ದೇಶಗಳಿಗೆ ಹೋಲಿಸಿದರೆ ಕುವೈಟಿಗಳು ಹೆಚ್ಚು ಆರೋಗ್ಯವಂತರು. ಶಿಶು ಮರಣದ ಸಂಖ್ಯೆಯೂ ಈಗ ಇಳಿದಿದೆ: ಮಾನವ ಪ್ರಗತಿಯ ಪ್ರಮಾಣದಲ್ಲಿ ಕೂಡ ಕುವೈಟ್ ಪ್ರಥಮ ಸ್ಥಾನದಲ್ಲಿದೆ ಎಂದು ಸಂಯುಕ್ತ ರಾಷ್ಟ್ರ ಸಂಘ ವರದಿ ಮಾಡಿದೆ. ಹದಿನಾಲ್ಕು ವರ್ಷದವರೆಗಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣವೆಂಬ ನಿಯಮ ದಿಂದಾಗಿ ಶಾಲೆಗಳ ಸಂಖ್ಯೆಯೂ ಹೆಚ್ಚಿದೆ. ಸಧ್ಯಕ್ಕೆ ಕುವೈಟ್‌ನಲ್ಲಿ ಇಪ್ಪತ್ತೆಂಟು ಸಾವಿರ ಶಿಕ್ಷಕರಿದ್ದಾರೆ, ಎಂದರೆ ಈ ಸಣ್ಣ

ರಾಷ್ಟ್ರದ ಗರಿಮೆಯನ್ನು ನಾವು ಹೊಗಳಲೇಬೇಕು. ಉಚಿತ ಶಿಕ್ಷಣವಲ್ಲದೆ. ಊಟ, ಪುಸ್ತಕಗಳು, ಸಮವಸ್ತ್ರ ಮತ್ತು ಶಾಲೆಗೆ ಬಂದು ಹೋಗಲು ಉಚಿತ ಪ್ರಯಾಣ ಸೌಕರ್ಯ ಇವೆಲ್ಲವೂ ಸರಕಾರದಿಂದಲೇ ನೀಡಲ್ಪಡುತ್ತವೆ. ಕುವೈಟ್ ವಿಶ್ವವಿದ್ಯಾಲಯದಲ್ಲಿ ಅರ್ಧಕ್ಕಿಂತಲೂ ಹೆಚ್ಚು ಹುಡುಗಿಯರೇ ಇದ್ದಾರೆ.

ಇಲ್ಲಿ ಪ್ರತಿಯೊಂದು ಮಗುವಿಗೂ ಬಾಲ್ಯದಿಂದಲೇ ಕುಟುಂಬವನ್ನು ಪ್ರೀತಿಸುವ, ಹಿರಿಯರನ್ನು ಗೌರವಿಸುವ, ವೃದ್ಧರಿಗೆ ಆಶ್ರಯ ನೀಡುವ ನೀತಿಯನ್ನು ಕಲಿಸಲಾಗುತ್ತಿದೆ. ಹೊರ ಜಗತ್ತಿನಲ್ಲಿ ಪರಸ್ಪರ ಸ್ನೇಹ ಸಂಬಂಧವನ್ನು ಇರಿಸಿ ಕೊಳ್ಳುವಂತೆಯೂ ಬೋಧಿಸಲಾಗುತ್ತದೆ. ಓರ್ವ ವಿದ್ಯಾವಂತ ತರುಣ ತರುಣಿಯರ ಮುಖ ಭಾವದಿಂದಲೇ ಅವರ ಸಂಸ್ಕಾರವನ್ನು ಗುರುತಿಸಬಹುದು. ಉದಾರತೆ, ವಿಧೇಯತೆ ಮತ್ತು ಅತಿಥಿ ಸತ್ಕಾರ ಈ ಮೂರು ಗುಣಗಳು ಬದುಕಿನ ಯಶಸ್ಸಿಗೆ ಮೂಲ ಮಂತ್ರಗಳು, ಎಂದು ಅವರು ನಂಬುವುದರಿಂದ ಎಳೆಯರಲ್ಲೂ ಇದನ್ನು ಬಿತ್ತುವ ಕೆಲಸ ಮಾಡುತ್ತಾರೆ.


ಈ ಸಂಗತಿಗಳನ್ನು ಕೇಳಿ, ನೋಡಿ ನನಗೆ ಬಹಳ ಸಂತೋಷವಾಯಿತು. ನಾನು ಕುವೈಟ್ ಪ್ರವಾಸ ಮಾಡಿದ್ದು ಸಾರ್ಥಕವಾಯಿತು.

---


**ಶಬ್ದಾರ್ಥ :** **ತಳವೂರಿದ** – ನೆಲೆನಿಂತ, **ಮಣ್ಣು ಮುಕ್ಕಿಸು** – ಸೋಲಿಸು, **ಧಾವಿಸು** – ಓಡು, **ಕ್ಷುಲ್ಲಕ** – ಸಣ್ಣ, **ಕಪಿಮುಷ್ಟಿ** – ಗಟ್ಟಿಯಾದ ಹಿಡಿತ, **ಭೀಕರ** – ಭಯಂಕರ, **ಅಡೆತಡೆ** – ತೊಂದರೆ, **ವ್ಯಯವಾಗು** – ಖರ್ಚಾಗು, **ಆಮದು** – ಆಯಾತ, **ಆಕರ್ಷಣೆ** – ಸೆಳೆತ, **ಸೀಸ್ ಫೈಯರ್** – ಯುದ್ಧ ವಿರಾಮ.

ಪಾಠವನ್ನು ಓದಿಕೊಂಡು ಕೆಳಗೆ ಕೊಟ್ಟಿರುವ ಕೃತಿಗಳನ್ನು ಸೂಚನೆಗನುಗುಣವಾಗಿ ಪೂರ್ಣ ಮಾಡಿರಿ.


### ಕೃತಿ 1 ಗದ್ಯವನ್ನು ಓದಿ ಕೆಳಗಿನ ಜಾಲಾಕೃತಿಯನ್ನು ಪೂರ್ಣಮಾಡಿರಿ




### ಕೃತಿ 2 ಪಾಠವನ್ನು ಓದಿ ಕೆಳಗಿನ ಜಾಲಾಕೃತಿಯನ್ನು ಪೂರ್ಣಮಾಡಿರಿ.



**ಕೃತಿ 3  ಕೆಳಗಿನ ಜಾಲವನ್ನು ಪೂರ್ಣ ಮಾಡಿರಿ.**




**ಕೃತಿ 4  ಕೆಳಗಿನ ವಾಕ್ಯಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ.**

i) 1935 ರಲ್ಲಿ ಕುವೈಟ್ ತನ್ನ ಸೀಮೆಯಲ್ಲಿ ಪ್ರಥಮ ಬಾರಿಗೆ ತೈಲ ಬಾವಿ ತೋಡಿತು.

ii) 1938 ರಲ್ಲಿ ಎರಡನೆ ತೈಲ ಬಾವಿ ರಚನೆ.

iii) 1775 ರಲ್ಲಿ ಕುವೈಟ್‌ನಲ್ಲಿ ಪ್ಲೇಗ್ ಕಾಣಿಸಿಕೊಂಡಾಗ ಕುವೈಟ್ ಬ್ರಿಟಿಷ್ ಈಸ್ಟ ಇಂಡಿಯಾ ಕಂಪನಿಯ ಜೊತೆ ಸ್ನೇಹ ಬೆಳೆಸಿತು.

iv) 2005 ರ ಜನಗಣತಿಯ ಪ್ರಕಾರ ಕುವೈಟಿನ ಜನಸಂಖ್ಯೆ 2.3 ಮಿಲಿಯನ್.

v) 1990 ರಲ್ಲಿ ಇರಾಕ್ ಕುವೈಟಿನ ಮೇಲೆ ಯುದ್ಧ ಸಾರಿತು

**ಕೃತಿ 5  ಕೊಟ್ಟ ಚೌಕೋನಗಳಲ್ಲಿ ಕರ್ತೃ, ಕರ್ಮ, ಕ್ರಿಯಾಪದಗಳನ್ನು ತುಂಬಿರಿ.**

i) ಕುವೈಟ್ ಮಹಿಳೆ ತನ್ನ ಹೋರಾಟದ ಫಲವಾಗಿ ಗಂಡಸರಂತೆ ಈಗ ಹೊರಗೆ ದುಡಿಯುತ್ತಿದ್ದಾಳೆ.

ii) ಕುವೈಟ್ ವಿದ್ಯಾವಂತರ ಮುಖ ಭಾವದಿಂದ ಅವರ ಸಂಸ್ಕಾರವನ್ನು ಗುರುತಿಸಬಹುದು.

| ಕರ್ತೃ ಪದ | ಕರ್ಮ ಪದ | ಕ್ರಿಯಾ ಪದ |
|---|---|---|
| i) | | |
| ii) | | |

**ಕೃತಿ 6  ಯೋಗ್ಯ ಪರ್ಯಾಯಗಳಿಂದ ಬಿಟ್ಟ ಸ್ಥಳಗಳನ್ನು ತುಂಬಿರಿ.**

i) ಅರಬಿ ರಾಷ್ಟ್ರಗಳಲ್ಲೇ ಸಂಪದ್ಭರಿತ ರಾಜ್ಯವಾದ್ದರಿಂದ ---------- ಎಂಬ ಅನ್ವರ್ಥಕನಾಮ ಒಪ್ಪುತ್ತದೆ.
(ದೌಲತ್, ಕುಟ್, ಕೋಟೆ)

ii) 1775 ರಲ್ಲಿ ಕುವೈಟ್‌ನಲ್ಲಿ ಪ್ಲೇಗ್ ಕಾಣಿಸಿಕೊಂಡಾಗ ಅದು ----------- ಜೊತೆ ಸ್ನೇಹ ಬೆಳೆಸಿತು.
(ರಸಿಯಾ, ಫ್ರಾನ್ಸ್, ಈಸ್ಟ್ ಇಂಡಿಯಾ ಕಂಪನಿ)

iii) ----------- ಎಂಬ ಕಡಲುಗಳ್ಳರ ದಾಳಿಯನ್ನು ಈ ನೌಕಾ ಪಡೆ ಎದುರಿಸಿ ಮಣ್ಣು ಮುಕ್ಕಿಸಿತು.
(ಗಲ್ಫ್ ಆಯಿಲ್, ಕವಾಸಿಮ್, ಪರ್ಶಿಯನ್)

iv) ಜೂನ್ 19, 1961 ರಲ್ಲಿ ----- ಬ್ರಿಟಿಷರ ರಕ್ಷಣಾ ಹಿಡಿತದಿಂದ ಕಳಚಿಕೊಂಡು ಸ್ವತಂತ್ರವಾಯಿತು.
(ಇರಾಕ್, ಕಥೀನಾ, ಫ್ರಾನ್ಸ್)

**ಕೃತಿ 7** **ಗದ್ಯದಲ್ಲಿ ಬರುವ ಈ ಶಬ್ದಗಳನ್ನು ಪೂರ್ಣ ಮಾಡಿರಿ.**

i) – ಖರ್ಜ –

ii) – ಲೆ – ರಿ

iii) ತೈ – – ವಿ

**ಕೃತಿ 8** **(ಅ) ಕೆಳಗಿನ ಕೃತಿಯನ್ನು ಕುರಿತು 10-12 ಸಾಲುಗಳಲ್ಲಿ ನಿಮ್ಮ ಸ್ವಂತ ಅನಿಸಿಕೆಗಳನ್ನು ಬರೆಯಿರಿ.**

i) ಕುವೈಟ್‌ನಲ್ಲಿಯ ಮಹಿಳೆಯರ ಸ್ಥಾನಮಾನಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**(ಬ) ಕೆಳಗಿನ ವಾಕ್ಯಗಳ ಸಹಾಯದಿಂದ ಸುಳಿವುಗಳಿಗೆ ಹೊಂದುವ ಸರಿಯಾದ ಅಕ್ಷರಗಳನ್ನು ತೆರವಾದ ಚೌಕೋನದಲ್ಲಿ ತುಂಬಿರಿ.**

i) ಕುವೈಟಿನ ಜೀವನಾಡಿಯಾಗಿರುವ ಮೀನುಗಾರರ ಸಾಧನ.

ii) ತೈಲವನ್ನು ಸಂಗ್ರಹಿಸುವ ಸ್ಥಳ.

iii) ಇದು ಕುವೈಟಿನ ಭಾಷೆ.

iv) ಮಣ್ಣಿನ ಮಡಿಕೆಗಳನ್ನು ಹಿಡಿದು ಕುಣಿಯುವ ನೃತ್ಯ.

v) ಕಡಲುಗಳ್ಳರ ಗುಂಪಿನ ಹೆಸರು.

| | | | |
|---|---|---|---|
| | ಣಿ | | |
| ತೈ | | | |
| | | | ಕ್ |
| ಫ಼ಿ | | | |
| | ವಾ | | |

**(ಕ) ಕೆಳಗಿನ ಕೃತಿಗಳ ಕುರಿತು 10-12 ಸಾಲುಗಳಲ್ಲಿ ನಿಮ್ಮ ಸ್ವಂತ ಅನಿಸಿಕೆಗಳನ್ನು ಬರೆಯಿರಿ.**

i) ಮುಂದುವರೆದ ಆಧುನಿಕ ಕುವೈಟಿನ ವರ್ಣನೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ii) ಕುವೈಟ್‌ನ ಧರ್ಮಾಚರಣೆಗಳ ಬಗ್ಗೆ ನಿಮ್ಮ ಸ್ವಂತ ಅನಿಸಿಕೆಗಳನ್ನು ನಿರೂಪಿಸಿರಿ.

**ಕೃತಿ 9** **ನೀವು ಮಾಡಿದ ಪ್ರವಾಸದ ಬಗ್ಗೆ ನಿಮ್ಮ ಅನುಭವಗಳನ್ನು 10-12 ಸಾಲುಗಳಲ್ಲಿ ಬಣ್ಣಿಸಿರಿ.**

**ಕೃತಿ 10** **ಗ್ರಂಥಾಲಯಕ್ಕೆ ಹೋಗಿ ಇತರ ಲೇಖಕರ ಪ್ರವಾಸ ಕಥನಗಳನ್ನು ಓದಿ ತಿಳಿದುಕೊಳ್ಳಿರಿ.**

**ಕೃತಿ 11** **ಕುವೈಟಿನ ಇತಿಹಾಸವನ್ನು ಶಿಕ್ಷಕರ ಸಹಾಯದಿಂದ ಸಂಗ್ರಹಿಸಿ ಬರೆಯಿರಿ.**

* * * * * * * * * *

# 4 ಮೊದಲ ದೀಪಾವಳಿ ಹೊಸ ಮಾವ

-ಎಂ.ಎಸ್. ನರಸಿಂಹ ಮೂರ್ತಿ

**ನರಸಿಂಹ ಮೂರ್ತಿ**ಯವರು ಕನ್ನಡದ ಖ್ಯಾತ ನಗೆ ಬರಹಗಾರರು. ಅವರ ಅನೇಕ ನಗೆಬರಹಗಳು ಪತ್ರಿಕೆಗಳ ಮುಖಾಂತರವಲ್ಲದೆ- ಸಂಗ್ರಹ ರೂಪವಾಗಿಯೂ ನಾಡಿನ ಅನೇಕರನ್ನು ನಗೆಮುಖದವರನ್ನಾಗಿ ಮಾಡಿವೆ. ಸ್ವಯಂ ವಧು, ಶ್ರಮದಾನ, ಕಾನಿಷ್ಕೋಪಾಖ್ಯಾನ, ಟೈರ್ ಪ್ರಶಸ್ತಿ ವಿಜೇತ, ಬಾಬ್ಬಿ, ಸರ್ಕಾರಿ ಹನಿಮೂನು ಮುಂತಾದವುಗಳು ಇವರ ಮಹತ್ವದ ಕೃತಿಗಳಾಗಿವೆ. **ಶ್ರೀ ನರಸಿಂಹ ಮೂರ್ತಿ**ಯವರದ್ದು ನೇರ ನಿರೂಪಣಾ ಮಾರ್ಗ; ಸಾಂಪ್ರದಾಯಿಕ ಶೈಲಿಯಿಂದಾಗಿ ವಾಚಕರಿಗೆ ಅವರ ಲೇಖನಗಳು ಸುಲಿದ ಬಾಳೆಯ ಹಣ್ಣಿನಂತಿವೆ.

ಪ್ರಸ್ತುತ ಹಾಸ್ಯಲೇಖನವನ್ನು ಅವರ' 'ಸಮಗ್ರ ಹಾಸ್ಯ' ಗ್ರಂಥದಿಂದ ಆಯ್ದುಕೊಳ್ಳಲಾಗಿದೆ. ತಿಳಿಹಾಸ್ಯದೊಂದಿಗೆ ಬಿಂದುವನ್ನು ಸಿಂಧುವಾಗಿಸಿದಂತಿದೆ.

---

ನಲ್ಲೆ,

ಈ ದೀಪಾವಳಿಗೂ ನೀನು ಅಲ್ಲೆ, ನಾನು ಇಲ್ಲೆ. ತಿಂಗಳ ನೋಟೀಸೂ ಕೊಡದೆ ಥಟ್ಟನೆ ತಪ್ಪಿಸಿಕೊಳ್ಳುತ್ತಿರುವ ಬಗ್ಗೆ ಬೇಸರಗೊಳ್ಳಬೇಡ. ಕಳೆದ ವರ್ಷ ನಮ್ಮ ಮೊದಲ ದೀಪಾವಳಿ. ಆ ನರಕ ಚತುರ್ದಶಿ ದಿನದ ನರಕಯಾತನೆ ನಿನಗೆ ನಾನು ಈ ವರೆಗೆ ತಿಳಿಸಿರಲಿಲ್ಲ. ಹಚ್ಚಿದ ಆಟಂಬಾಂಬ್ ಮೇಲೆ ಮುಚ್ಚಿದ ಡಬ್ಬದ ಗತಿಯಾಗಿತ್ತು ಅಂದು ನನಗೆ. ಹಬ್ಬದ ಅದ್ದೂರಿ ಕಾರ್ಯಕ್ರಮ ಸಿದ್ಧತೆಗೆಂದು ನನಗಿಂತ ತಿಂಗಳ ಮೊದಲೇ ಅಮ್ಮನ ಮನೆಸೇರಿ ಹಬ್ಬದ ದಿನ ನನಗಾಗಿ ನೀನು ಎದುರು ನೋಡಿದೆ. ನಾನು ಬರಲೇ ಇಲ್ಲ. ಯಾರಿಗೂ ತಿಳಿಸದೆ ದಿಢೀರನೆ ಮನೆ ಬದಲಿಸಿದರೆ ನಿಮ್ಮ ಹೊಸ ಮನೆ ಹುಡುಕಿಕೊಂಡು ಬರಲು ಪೋಲಿಸ್ ನಾಯಿಗೂ ಸಾಧ್ಯವಿಲ್ಲ ಬಿಡು.

ರಾತ್ರಿ ಎಂಟರ ವೇಳೆಯಲ್ಲಿ ಬೆಂಗಳೂರಿಗೆ ಬಂದು ಇಳಿದ ನಾನು ಲಗ್ಗೇಜ್ ಹೊತ್ತುಕೊಂಡು ಬಸ್ಸುಗಳಿಗೆ ಜೋತುಬಿದ್ದು ಹನುಮಂತ ನಗರದ ನಿಮ್ಮ ಮನೆಗೆ ಬಂದೆ. ಸಮಯಕ್ಕೆ ಸರಿಯಾಗಿ ಬಂದ ನನ್ನನ್ನು ಮುಗುಳ್ನಕ್ಕು ಸ್ವಾಗತಿಸಲು ನೀನು ಗೇಟಿನ ಬಳಿ ಕಾಣಲೇ ಇಲ್ಲ. ಸೀದಾ ಒಳ ಬಂದು ಸೋಫಾ ಮೇಲೆ ಕುಳಿತೆ. ಮನೆಯಲ್ಲಿ ಕಂಡ ಒಂದೆರಡು ಹೊಸ ಮುಖಗಳನ್ನು ನಿನ್ನ ಬಂಧುಗಳೆಂದು ತಿಳಿದೆ. ಒಂದು ಸಂಜೆಯ ಮದುವೆಗೆ ಬಂದಿದ್ದ ಎಲ್ಲರನ್ನೂ ನೆನಪಿಟ್ಟುಕೊಳ್ಳುವಷ್ಟು ದೊಡ್ಡದಿಲ್ಲ ನನ್ನ ತಲೆ. ಅವರು ನಕ್ಕರು. ನಾನೂ ನಕ್ಕೆ.

ಈಗ್ತಾನೇ ಮೈಸೂರಿನಿಂದ ಬಂದೆ ಎಂದೆ. ಹೌದಾ ನಮ್ಮ ಸೋಮು ಹೇಳ್ತಿದ್ದ. ನೀವು ಇಷ್ಟರಲ್ಲೇ ಬರ್ತೀರ ಎಂದು ಹೇಳಿದವರು ರಿಟೈರ್ಡ್ ಪೋಲಿಸ್ ದಫೇದಾರ್ ಒಬ್ಬರು. ಅವರು ನಿಮ್ಮ ಸೋದರ ಮಾವ ಇರಬಹುದು ಎಂದುಕೊಂಡೆ. ಪೋಲಿಸ್ ಮಾವನ ಹೆಂಡತಿ 'ಬಹಳ ಸಂತೋಷಾಪ್ಪ. ಹಬ್ಬಕ್ಕೇ ಬಂದ್ಯಲ್ಲ. ನಮ್ಮ ಅದೃಷ್ಟ, ಎಂದು ಉಬ್ಬಿಸಿದರು.

ನಾನು ತಂದಿದ್ದ ಮೂರು ಮಾರು ಮಲ್ಲಿಗೆ ಹೂವು, ಎರಡು ಕೇಜಿ ಸಿಮ್ಲಾ ಸೇಬು, ಒಂದು ಡಜನ್ ರಸಬಾಳೆ ತೆಗೆದಿರಿಸಿದೆ. ಗಬಕ್ಕನೆ ತೆಗೆದುಕೊಂಡ ಅವರು ಇದೆಲ್ಲಾ ಯಾಕಪ್ಪ ಎಂದುಕೊಂಡು

ಒಳಹೋದರು. ನೀನು ಕಾಣಲಿಲ್ಲ. ಸುತ್ತ ನೋಡಿದೆ. ಕೆಲವು ಪೋಲಿಸರ ಫೋಟೋಗಳಿದ್ದವು. ಒಂದು ನಾಯಿಯ ಚಿತ್ರ ಇದ್ದಿತು. ಮೂಲೆಯಲ್ಲಿ ಒಂದೆರಡು ಲಾಠಿಗಳು ಇದ್ದವು.

'ಎಲ್ಲಿ ನರ್ಮದಾ ಕಾಣ್ತಾ ಇಲ್ಲ?' ಎಂಬ ನನ್ನ ಪ್ರಶ್ನೆಗೆ 'ಟೈಲರ್ ಹತ್ರ ಹೋಗಿದ್ದಾಳೆ. ಬರ್ತಾಳೆ' ಎಂದರು ಆ ಪೋಲಿಸ್ ಅತ್ತೆ. ನಾನು ಬರುವುದು ತಿಳಿದೂ ಇವಳೇಕೆ ಟೈಲರ್ ಹತ್ರ ಹೋಗಬೇಕು? ಬಂದಮೇಲೆ ಇವಳ ಟೈಲ್ ಕತ್ತರಿಸಬೇಕು ಎಂದುಕೊಂಡೆ. ಅನಂತರ ತಿಳಿಯಿತು. ನನ್ನ ಗ್ರಹಚಾರಕ್ಕೆ ಅವರ ಮನೆಯಲ್ಲಿರುವ ಹುಡುಗಿಯ ಹೆಸರೂ ನಿನ್ನ ಹೆಸರೇ ಎಂದು. ನೀನು ಮದುವೆಯಾದವಳಾದರೆ ಅವಳು ಮದುವೆಗಾಗಿ ಕಾದವಳು. ತಲೆಮಾಸಿದ ಯಾವೋನೋ ಬಂದಿದ್ದಾನೆ. ಎಣ್ಣೆ ಒತ್ತಿ ಅಭ್ಯಂಜನ ಮಾಡಿಸಿ, ರಿಬೇಟಿನ ರೇಟಿನಲ್ಲಿ ಆ ನರ್ಮದೆಯನ್ನು ನನ್ನ ತಲೆಗೆ ಕಟ್ಟಿಬಿಡಬೇಕೆಂಬ

ಅಂದಾಜು ಅವರದು.

ಚಿನಕುರುಳಿಗಳು ಕಾಣಿಸಿಕೊಂಡರು. ನಿನ್ನ ತಮ್ಮಂದಿರ ಮುಖ ನೆಟ್ಟಗೆ ನೋಡಿ ನೆನಪಿಲ್ಲದ ನನಗೆ, ಅವರೆಲ್ಲ ನಿನ್ನವರೇ ಇರಬೇಕೆಂದುಕೊಂಡೆ.

'ಬನ್ರೋ, ನಿಂಭಾವನ್ನ ಮರೆತಿರಾ' ಎಂದು ನಾನೆ ಕೇಳಿದ್ದು ನನ್ನ ತಪ್ಪು. ಅವರು ಹೊಸಭಾವ ಬಂತು ಎನ್ನುತ್ತಾ ನನ್ನನ್ನು ಮುತ್ತಿ, ನಾ ತಂದಿದ್ದ ಕಿಟ್ಟಿಗೇ ಕೈ ಇಟ್ಟು ಪಟಾಕಿಗಳನ್ನು ಹೊರಗೆಳೆದು, ಓಹ್ ಮತಾಪು, ಆಹಾ ಕುದುರೆ ಪಟಾಕಿ, ವಾವ್ಹಾ ರಾಕೆಟ್ಟು, ಟಿಂಗ್‌ಟಿಂಗ್ ಸುರ್‌ಸುರ್ ಬತ್ತಿ ಎಂದು ಒಂದೊಂದು ಐಟಮ್ಮಿಗೂ ಮ್ಯೂಸಿಕ್ ಕೊಟ್ಟು ಮಾತಾಡಿ 'ಥ್ಯಾಂಕ್ಯೂ ಭಾವ' ಎಂದು ಪಟಾಕಿಗಳ ಸಹಿತ ಹೊರಗೋಡಿದರು. ನಾನು ಕಾಫಿ ಬಾಯಿ ಬಳಿ ಇಟ್ಟುಕೊಳ್ಳುತ್ತಿದ್ದಂತೆಯೇ 'ಢಂ! ಎಂದು ಆಟಂಬಾಂಬ್ ಒಂದು ಕಿಟಕಿಯ ಬಳಿ ಸಿಡಿದು ಕಾಫಿಯನ್ನು ಪ್ಯಾಂಟಿನ ಮೇಲೆ ಚೆಲ್ಲಿಕೊಂಡೆ. ಬಿಳೀಪ್ಯಾಂಟು ಖಾಕೀ ಆಯ್ತಲ್ಲ ಎಂದು ನಕ್ಕ ಮಾವ ಪಂಚೆ ನನಗೆ ಕೊಟ್ಟು ಸಹಕರಿಸಿದರು.

ಅಷ್ಟರಲ್ಲಿ ಈಚೆಗೆ ಬಂದಿದ್ದು ಒಂದು ಕೆಂಪು ಸೀರೆಯ ಅಜ್ಜಿ. ಎಲ್ಲ ಅಜ್ಜಿಗಳೂ ನನ್ನ ಕಣ್ಣಿಗೆ ಒಂದೇ ಬಗೆ ಕಾಣುತ್ತಾರೆ. ಈ ಮೊದಲು ನೋಡಿದ್ದ ನಿಮ್ಮ ಅಜ್ಜಿಯೂ ಥೇಟ್ ಹಾಗೇ ಇದ್ದಿದ್ದು. ಅದೇ ಕೆಂಪುಸೀರೆ, ಅದೇ ಊರುಗೋಲು. ಅದೇ ಬಿಳೀ ವೆಲ್ವೆಟ್‌ತಲೆ, ಮೂವತ್ತು ಡಿಗ್ರಿಯಲ್ಲಿ ಬಾಗಿದ ಬೆನ್ನು! ಒಂದೇ ಕಂಪನಿಯ ಒಂದೇ ಬಣ್ಣದ ಸೀರೆಯಿಂದಲೋ ನಾಮ ಬೇರೆಯಾದರೂ ಅಜ್ಜಿಗಳು ಒಂದೇ.

ಹತ್ತಿರ ಬಂದ ಆ ನನ್ನನ್ನು ಚೂಪಾಗಿ ನೋಡಿ, ಯಾರು, ಸುಬ್ರಾಯಾನಾ ಎಂದಳು. ಅಲ್ಲ ಸುರೇಶ ಎಂದೆ. ನಮ್ಮ ಸುಬ್ರಾಯನ ಹಾಗೆ ಲಕ್ಷಣವಾಗಿದ್ದೀಯ, ಮೈಸೂರಿಂದಾನಾ ಎಂದಳು. ಹೌದು, ಎಕ್ಸಪ್ರೆಸ್ ಬಸ್ನಲ್ಲಿ ಎಂದೆ. ಪರ್ವಾಗಿಲ್ಲ ನನಗೆ ಒಪ್ಪಿಗೆ ಆಯ್ತು ಎಂದು ಸಂತೋಷಿಸಿ ಆಕೆ ಒಳಹೋದಾಗ ನನಗೆ ಧಿಗಿಲಾಯಿತು. ನನ್ನ ಒಪ್ಪಿಗೆ ಕೇಳದೆ ಇವರು ಯಾವುದಾದರೂ ನಿರ್ಧಾರಕ್ಕೆ ಬಂದರೆ ಹೇಗೆ ಎನ್ನಿಸಿತು.

ಕಾಲು ಶತಮಾನ ಕಳೆದ ಕನ್ನೆಯೊಬ್ಬಳು ಕೈಲಿ ವ್ಯಾನಿಟಿ ಬ್ಯಾಗ್ ಹಿಡಿದು ಅಲ್ಲಾಡಿಸುತ್ತಾ ವೈಯಾರದ ನಡಿಗೆಯಲ್ಲಿ ಒಳ ಬಂದವಳೇ ಯಾವನಿವನು ಎಂಬಂತೆ ನನ್ನನ್ನೇ ನೋಡಿದಳು.

'ಇವಳೇ ನರ್ಮದಾ, ನಮ್ಮ ಸೋಮು ನಿಮ್ಮ ಹತ್ರ ಹೇಳ್ತಿದ್ರಲ್ಲ. ಇವಳೇ' ಅತ್ತೆ ಹೇಳಿದ್ದು.

ಅವಳು ಹಾಯ್ ಎಂದಳು, ನಾನೂ ಹಾಯ್ ಅಂದೆ.

'ನನ್ನ ಮಗ ಸೋಮು ಮೈಸೂರಿಂದ ಬರೆದಿದ್ದ. ನನ್ನ ಸ್ನೇಹಿತ ಒಬ್ಬ ಡಿಸೆಂಬರ್‌ನಲ್ಲಿ ಬೆಂಗಳೂರಿಗೆ ಪೇಪರ್ ತಿದ್ದೋಕೆ ಬರ್ತಾ ಇದ್ದಾನೆ.ಬಂದ್ರೆ ನಮ್ಮ ಮನೇಲೇ ಇಳ್ಕೋತಾನೆ ಅಂತ. ಆದ್ರೆ ನೀವು ಒಂದು ತಿಂಗಳ ಮುಂಚೆಯೇ ಬಂದಿದ್ದು ಸಂತೋಷ ಆಯ್ತು. ಇದೂ ನಿಮ್ಮ ಮನೇನೇ, ಸಂಕೋಚ್ ಇಲ್ದೆ ಆರಾಮವಾಗಿದ್ದು ಹೋಗಿ, ಪೋಲಿಸ್ ಅತ್ತೆ ಹಾಲ್ಟ್ ಬೋರ್ಡ್ ಇಲ್ಲದ ಒನ್‌ವೇಲಿ ಮಾತಾಡಿದಳು. 'ನರ್ಮದಾ, ಇವರಿಗೆ ಟವೆಲ್ ಕೊಟ್ಟು, ಬಾತ್‌ರೂಂ ತೋರಿಸಮ್ಮ, ಟರ್ಕಿಟವೆಲ್ ಕೊಡು, ಚೌಕಳೀದು ಬೇಡ' ಎಂದಾಗ ನರ್ಮದಾ ಟವೆಲ್ ತಂದಳು.

ನನಗೂ ಅರ್ಜೆಂಟಾಗಿ ಬಾತ್‌ರೂಮಿಗೆ ಹೋಗಬೇಕಿತ್ತು. ಬೇಡ ಎನ್ನಲಾಗಲಿಲ್ಲ.

ಕೈಕಾಲು ತೊಳೆದು ಬಂದ ಮೇಲೆ ಪೋಲಿಸ್ ಮಾವನ ಜತೆ ಊಟವಾಯಿತು. ಪ್ರಾರಂಭದಲ್ಲೇ ನಾನು ತಪ್ಪಿಬಿಟ್ಟೆ. ತಡವಾಗಿ ನನ್ನ ಪರಿಚಯ ಹೇಳಿಕೊಂಡರೆ ಕಷ್ಟ ಈಗ. ದಾರಿತಪ್ಪಿ ಬಂದಿದ್ದು ತಿಳಿದರೆ ಈ ಖಾಕಿ ಮಾವ ಒದ್ದು ಲಾಕಪ್‌ಗೆ ಕಳಿಸುವುದು ಖಚಿತ. ಅಲ್ಲದೆ ಈ ವೇಳೆಯಲ್ಲಿ ಎಲ್ಲೂ ಹೋಗುವಂತಿಲ್ಲ ಎಂದು ಕೊಂಡು ಸುಮ್ಮನಿದ್ದೆ. ಅದರೂ ಕೇಳಿದೆ ನಿಮ್ಮ ಅಪ್ಪ ಅಮ್ಮನ ಬಗ್ಗೆ. 'ಈ ಮನೇಲಿ ವಿಶ್ವನಾಥಪ್ನೋರು, ವಿಶಾಲಾಕ್ಷಮ್ಮನವರು ಅಂತ.......'

ಹೌದು. ಬೇರುಬಿಟ್ಟು ಇದು ಅಯೋಗ್ಯ ಮಂದಿ, ರಿಟೈರ್ಡ್ ಆದರೂ ನಮ್ಮ ಮನೆಯೇ ನಮಗೆ ಅವರು ಬಿಡಲಿಲ್ಲ. ಮೊನ್ನೆ ಸಂಜೆ ಹತ್ತು ಪೇದೆಗಳನ್ನು ಕರೆಸಿ ಮನೆ ಖಾಲಿ ಮಾಡಿಸಿದೆ. ನಾನು ಸರ್ವೀಸ್‌ನಲ್ಲಿ ಇದ್ದಿದ್ರೆ ವಿಶ್ವನಾಥನ್ನ ಒದೀತಿದ್ದೆ ಎಂದು ಕೆಂಡ ಕಾರಿದರು.

'ಅವರು ಎಲ್ಲಿಗೆ ಹೋದ್ರು? ಹೊಸಮನೆ ವಿಳಾಸ ಗೊತ್ತೆ?'

'ಎಲ್ಲೋ ಕೋರಮಂಗಲದಾಚೆ ಹಾಳಾಗಿ ಹೋದ್ರು ಅವರ ವಿಳಾಸ ಯಾರಿಗ್ಗೊತ್ತು? ಹಬ್ಬದ ದಿನ ಅನಿಷ್ಟ. ಅವರ ನೆನಪು ಯಾಕೆ? ಎಂದ ಪೋಲಿಸ್ ಮಾವ.

ವಿಳಾಸ ಇಲ್ಲದೆ ನಿಮ್ಮ ಮನೆಗೆ ಹೇಗೆ ಬರಲು ಸಾಧ್ಯ?

ಊಟ ಮುಗಿದ ಮೇಲೆ ಜಗುಲಿಯ ಮೇಲೆ ಬಂದು ಕುಳಿತು ನಾನು ಅಲ್ಲಿಂದ ತಪ್ಪಿಸಿಕೊಳ್ಳುವ ಬಗ್ಗೆ ಯೋಚಿಸಿದೆ. ಹೊಳೆಯಲಿಲ್ಲ. ತಾಂಬೂಲದ ತಟ್ಟೆ ಹಿಡಿದ ನರ್ಮದಾ ನನ್ನ ಬಳಿ ಕುಳಿತು ನೋಡಿ ಮಿಸ್ಟರ್ ಸತೀಶ್ ಎಂದಳು. ಅಲ್ಲ, ನಾನು ಸುರೇಶ್ ಎಂದೆ.

'ಮತ್ತೆ ನಮ್ಮಣ್ಣ ಸತೀಶ್ ಅಂತ ಹೇಳಿದ್ರು?'

'ನಿಮಗೆ ಇಷ್ಟ ಬಂದ ಹೆಸರು ಆಗಬಹುದು, ಎಂದೆ.

'ನಮ್ಮ ಅಜ್ಜಿ ಹತ್ರ ಹೀಗೆ ಹೇಳಬೇಡಿ, ಆಕೆ ಸುಬ್ರಾಯ ಅಂತ ಹೆಸರಿಡ್ತಾಳೆ' ಎಂದಾಗ ನಾನು ಗಟ್ಟಿಯಾಗಿ ನಕ್ಕುಬಿಟ್ಟೆ, ತಾಂಬೂಲ ಮಡಚಿ ಕೈಲಿ ಹಿಡಿದಿದ್ದ ಆಕೆ ಅತ್ತಿತ್ತ ನೋಡಿ ಚಕ್ಕನೆ ನನ್ನ ತೆರೆದ ಬಾಯಿ ಒಳಗೆ ತಾಂಬೂಲ ಸೇರಿಸಿಬಿಟ್ಟು 'ಸಾರಿ' ಎಂದಳು. ಒನ್ಸ್‌ಮೋರ್ ಎಂದೆ. ನಿಮ್ಮನ್ನು ಕೇಳದೇನೆ ಇಟ್ಟುಬಿಟ್ಟೆ ಎಂದಳು. ಪರವಾಗಿಲ್ಲ' ಬಾಯಿ ಇರೋದೇ ಏನಾದ್ರೂ ಇಡೋಕೆ ಅಲ್ವಾ ಎಂದು ಜೋಕ್ ಮಾಡಿದೆ.

ಅವಳು ಕೆಂಪಾಗಿಬಿಟ್ಟಳು, ನನಗೆ ಕೆ. ಎಸ್. ನರಸಿಂಹಸ್ವಾಮಿಯವರ ಹಾಡುಗಳು ತುಂಬಾ ಇಷ್ಟ ಎಂದಳು. ನನಗೂ ಅಷ್ಟೇ ಎಂದೆ. ಆಕೆ ನನ್ನ ಕೆನ್ನೆ, ತಟ್ಟಿ.

'ಯೂ ನಾಟೀ ಬಾಯ್' ಎಂದು ಹೇಳುತ್ತಾ ತಟ್ಟೆ ಹಿಡಿದು ಒಳ ಓಡಿದಳು. ನಾನು ನಾಟಿಯೋ ಜಾತಿಯೋ ನನಗೆ ತಿಳಿಯಲಿಲ್ಲ.

ಈಗೇನು ಮಾಡಲಿ ಎಂದು ಮತ್ತೆ ಮತ್ತೆ ಯೋಚಿಸಿದೆ. ಅರ್ಧರಾತ್ರಿಯಲ್ಲಿ ಸತ್ಯ ಸಂಗತಿ ತಿಳಿಸುವಂತಿಲ್ಲ. ತಪ್ಪಿಸಿಕೊಂಡು ಹೋಗೋಣವೆಂದರೆ ನಮ್ಮ ದಫೇದಾರ್ ಮಾವ ಅವರ ಪಂಚೆ ನನಗೆ ನೀಡಿ, ನನ್ನ ಪ್ಯಾಂಟು ಅವರು ಭದ್ರ ಮಾಡಿದ್ದಾರೆ. ಆಫೀಸಿನ ಬೀಗದ ಕೈಗೊಂಚಲು, ಹಣದ ಪರ್ಸು ಎಲ್ಲವೂ ಪ್ಯಾಂಟಿನಲ್ಲಿದೆ. ಪ್ಯಾಂಟಿಲ್ಲದೆ ಮನೆ ಬಿಡುವಂತಿಲ್ಲ. ಆ ವೇಳೆಯಲ್ಲಿ ಪ್ಯಾಂಟು ಕೇಳುವಂತಿಲ್ಲ. ಒಂದು ವೇಳೆ ನಾನು ಓಡಿಹೋಗಿ 'ಪಂಚೆಯೊಡನೆ ನಾಪತ್ತೆ' ಎಂದಾತ ಕಂಪ್ಲೇಂಟ್ ಕೊಟ್ಟರೆ ಗತಿ?

ನೀನು ನನಗಾಗಿ ಎಷ್ಟು ಕಾದಿರಬಹುದೆಂದು ಚಿತ್ರಿಸಿಕೊಂಡೆ ಚಿನ್ನ, ನಿನ್ನ ನೆನಪಲ್ಲೇ ಮುಳುಗಿದೆ. ನಿನ್ನೊಡನೆ ಈ ಮನೆಯ ಮೂಲೆ ಮೂಲೆಯಲ್ಲಿ ಕಳೆದ ರಸನಿಮಿಷಗಳನ್ನು ನೆನಪಿಸಿಕೊಂಡೆ. ಅಷ್ಟರಲ್ಲಿ ಬಂದ ನರ್ಮದಾ, 'ಬನ್ನಿ', ಎಂದಳು. ನನಗೆ ಗಾಬರಿಯಾಯ್ತು. ಇಲ್ಲಿ ನೀವು ಮಲಗಿಕೊಳ್ಳಿ, ಕಿಟಕಿಯಿಂದ ತಣ್ಣಗೆ ಗಾಳಿ ಬರುತ್ತೆ ಎಂದಳು. ನೋಡಿ ಇಲ್ಲಿ, ಒಂದು ಲೋಟದಲ್ಲಿ ನೀರು ಇಟ್ಟಿದ್ದೀನಿ. ಎಂದಳು. ರಾತ್ರಿ ಎಚ್ಚರ ಆದ್ರೆ ಸ್ವಿಚ್ಚು ಇಲ್ಲೇ ಇದೆ ಎಂದು ನಕ್ಕಳು.

ನಾನು ಲೈಟಾರಿಸಿ ಮಲಗಿದೆ. ಯಾರು ಈ ನರ್ಮದೆ ಎಂದು ಯೋಚಿಸಿದೆ. ಸ್ವಲ್ಪ ಸಮಯದಲ್ಲೇ ಎಷ್ಟೆಲ್ಲಾ ಆಟ ಆಡಿಬಿಟ್ಟಳಲ್ಲ ಎಂದು ಕೆನ್ನೆ ಸವರಿಕೊಂಡೆ. ಹಾಲ್‌ನಲ್ಲಿ ಮಲಗಿದ್ದ ನನ್ನ ದಫೇದಾರ್ ಮಾವ ದಫೇದಾರ್ ಅತ್ತೆಯೊಡನೆ ಪಿಸುಗುಟ್ಟುತ್ತಿದ್ದರು. 'ಪರ್ವಾಗಿಲ್ಲ ಹುಡುಗ, ಸರಳ ಸ್ವಭಾವ', 'ಪೇಪರ್ ತಿದ್ದೋಕೆ ಅಂತ ಬಂದಿದಾನಲ್ಲ, ಏನು ಹಾಗಂದ್ರೆ?' 'ತಿದ್ದೋದಲ್ಲ, ಪೇಪರ ಮೌಲ್ಯಮಾಪನ.' ಪಾಸು ಫೈಲು ಹೇಳೋ ಕೆಲಸಾನಾ? ಅಲ್ಲಿಗೆ ಕಾಲೇಜಲ್ಲಿ ಮೇಷ್ಟ್ರೋ ಇಲ್ಲ ಮೇಡಮ್ಮೋ ಆಗಿರ್ತಾನೆ. ಪರ್ವಾಗಿಲ್ಲ.

'ನಾಳೆ ಪ್ರಸ್ತಾಪ ಮಾಡಲಾ ವಿಷಯ, ಕಜ್ಜಾಯ ತಿಂತಿರೋವಾಗ?' 'ತುಂಬಿದ ಅಮಾವಾಸ್ಯೆ, ಬೇಡಕಣ್ರೆ, ಅದೂ ಕಜ್ಜಾಯ ತಿನ್ನೋವಾಗ ಮದುವೆ ವಿಷಯ ಮಾತಾಡಲೇಬಾರದು'. ಆಮೇಲಿನ ಮಾತುಗಳು ಅಸ್ಪಷ್ಟ, ನನಗೇನೋ ಗಂಡಾಂತರ ಕಾದಿದೆ ಎನ್ನಿಸಿತು. ರಾತ್ರಿಯಿಡೀ ನಿದ್ದೆ ಬರಲಿಲ್ಲ. ಬೆಳಗಾಯ್ತು. ಕಾಫಿ ಕೊಟ್ಟ ಅತ್ತೆ' 'ಎಣ್ಣೆ

ನೀರು ಹಾಕ್ಕೊಳ್ಳಿ' ಎಂದಳು.' 'ಬೇಡ ಬೇಡ' ಎಂದೆ. ವರ್ಷಕ್ಕೊಂದು ಹಬ್ಬ. ಹಾಕ್ಕೊಳ್ಳಿ, ಯಾಕೆ ತಲೇಲಿ ಇರೋ ಕೊಳೆಯೆಲ್ಲಾ ಹೊರಟುಹೋಗುತ್ತೆ ಅಂತ ಭಯಾನಾ? ಅಷ್ಟರಲ್ಲಿ ಎಣ್ಣೆಸೀಸೆ ಹಿಡಿದು ನರ್ಮದಾ ಬಂದಳು. ಪ್ರತಿಯೊಂದು ಪೂರ್ವಯೋಜಿತ.

'ನರ್ಮದಾ, ಎಣ್ಣೆ ಒತ್ತು' ಎನ್ನುತ್ತಿದ್ದಂತೆಯೇ ತಲೆಯ ಮೇಲೆ ಪಟಪಟನೆ ಏಟುಗಳು. ಲಯಬದ್ಧವಾದ ಪಟ ಪಟಗಳು ಖಂಡಚಾಪಕ ತಾಳದಲ್ಲಿದ್ದವು. ನನ್ನ ನೆಟ್ ಬನಿಯನ್ ತೆಗೆಸಿ ಬೆನ್ನಿಗೂ ಹಿತವಾಗಿ ಮಸಾಜ್ ಮಾಡಿದಳು. ರೆಪ್ಪೆ ಎಳೆದು ಕಣ್ಣಿಗೆ ಎಣ್ಣೆ ಬಿಟ್ಟಳು, ತಲೆ ಸೊಟ್ಟ ಮಾಡಿ ಕಿವಿಗೆ ಒಂದೆರಡು ಹನಿ ಕಳಿಸಿದಳು. ಅಷ್ಟು ಹಿಂಸೆ ನೀನೆಂದೂ ಮಾಡಿರಲಿಲ್ಲ ಚಿನ್ನ.

'ಬನ್ನಿ, ಬಿಸಿನೀರು ಸಿದ್ದವಿದೆ' ಎಂದು ನನ್ನನ್ನು ಬಾತ್‌ರೂಮಿಗೆ ಕರೆದುಕೊಂಡು ಹೋಗಿ ಸೀರೆಯ ಸೆರಗನ್ನು ಬಿಗಿದಳು. ನಿರಿಗೆಗಳನ್ನು ಸೊಂಟಕ್ಕೆ ಸಿಕ್ಕಿಸಿಕೊಂಡಳು. ಇಂಥ ಕ್ಲೈಮ್ಯಾಕ್ಸ್ ದೃಶ್ಯದಲ್ಲಿ ಸೆನ್ಸಾರ್ ಮಾಡುತ್ತಿದ್ದೇನೆ ಚಿನ್ನ. ನಾನು ವಾರ ಭವಿಷ್ಯ ಓದಲು ಅಂದಿನಿಂದಲೇ ಪ್ರಾರಂಭಿಸಿದ್ದು. ಏಕೆಂದರೆ ಆ ವಾರದ ಭವಿಷ್ಯ ನಿಜವಾಗಿತ್ತು. 'ಅಪರಿಚಿತ ತರುಣಿಯಿಂದ ಭಾರೀ ಔತಣ, ಅನಿರೀಕ್ಷಿತ ಆತಿಥ್ಯ, ನನ್ನನ್ನು ಕ್ಷಮಿಸು ಚಿನ್ನ, ಕಳೆದ ವರ್ಷದ ಕತೆ ಮತ್ತಷ್ಟು ಬರೆದು ನಿನ್ನನ್ನು ಗೋಳಾಡಿಸುವುದಿಲ್ಲ. ತುರ್ತು ಕೆಲಸವಿದೆಯೆಂದು ಆ ಹಬ್ಬದ ಸಂಜೆ ಪೋಲಿಸ್ ಮುಷ್ಟಿಯಿಂದ ತಪ್ಪಿಸಿಕೊಂಡ ನಾನು ಬೆಂಗಳೂರು ಮತ್ತೆ ನೆನಪು ಮಾಡಿಕೊಳ್ಳಲಿಲ್ಲ.

ಈ ಸಲದ ವಿಳಾಸ ನೀನು ಕೊಟ್ಟಿದ್ದೀಯ ನಿಜ. ನನಗಿಂತ ವಾರ ಮೊದಲೇ ನೀನು ತೌರು ಸೇರಿ ನನ್ನನ್ನು ಎದುರು ನೋಡುತ್ತಿದ್ದೀಯ ನಿಜ. ನಾ ಬರುವಷ್ಟರಲ್ಲಿ ನೀವು ಮತ್ತೆ ಮನೆ ಬದಲಿಸಿದರೆ ಮತ್ತೊಬ್ಬ ನರ್ಮದೆಯ ಕೈಗೆ ನಾನು ಸಿಕ್ಕಿಕೊಳ್ಳುವುದು ಗ್ಯಾರಂಟಿ. ಅಲ್ಲದೆ ಕಳೆದ ವರ್ಷ ಆದ ಅನಾಹುತಗಳಿಂದ ನಿಮ್ಮ ಮನೆಗೆ ಮತ್ತೆಂದೂ ಬರಬಾರದೆಂದು ನಾನು ಪ್ರತಿಜ್ಞೆ ಮಾಡಿರುವೆ. ನಿನ್ನ ಕ್ಷೇಮಕ್ಕಾಗಿ ಈ ಪ್ರತಿಜ್ಞೆ. ಬೇಕಿದ್ದರೆ ನಿಮ್ಮಪ್ಪ ಅಮ್ಮನನ್ನು ಕರೆದು ಕೊಂಡು ದೀಪಾವಳಿಗೆ ನೀನು ಇಲ್ಲಿಗೆ ಬಂದುಬಿಡು. ಇಲ್ಲವಾದಲ್ಲಿ ಎಲ್ಲ ದೀಪಾವಳಿಗಳಿಗೂ ನೀನು ಅಲ್ಲೇ, ನಾನು ಇಲ್ಲೇ! ಸಿಟ್ಟಾಗಬೇಡ ನಲ್ಲೆ.

ದೀಪಾವಳಿ ಶುಭಾಶಯಗಳೊಡನೆ, ನಿನ್ನ ರಾಜ.

---

**ಶಬ್ದಾರ್ಥ :**

**ಯಾತನೆ** – ಕಷ್ಟ, ತೊಂದರೆ, **ಅಭ್ಯಂಜನ** – ಎಣ್ಣೆ ನೀರಿನ ಸ್ನಾನ, **ಮತಾಪು** – ಸಿಡಿಮದ್ದು, **ತಾಂಬೂಲ** – ವೀಳ್ಯದೆಲೆ ಅಡಕೆ, **ಇನಿಯ** – ಗಂಡ, **ಪ್ರಸ್ತಾಪ ಮಾಡು** – ವಿಷಯವನ್ನು ಪ್ರಾರಂಭಿಸು, ಮಾತಿಗೆ ಆರಂಭಮಾಡು, **ಕಜ್ಜಾಯ** – ಸಿಹಿತಿನಿಸು, **ಔತಣ** – ಆಮಂತ್ರಣ.

**ಕೃತಿ-1) ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**

| | | |
|---|---|---|
| | | |
| | ಅಳಿಯ ತಂದಿರುವ ವಸ್ತುಗಳು | |
| | | |

**ಕೃತಿ-2) ಕೆಳಗಿನ ಸಂಧಿಗಳನ್ನು ಬಿಡಿಸಿ ಸಂಧಿಯ ಹೆಸರು ಹೇಳಿರಿ**

| ಪದಗಳು | ವಿಗ್ರಹರೂಪ | ಸಂಧಿಯ ಹೆಸರು |
|---|---|---|
| ಊರುಗೋಲು | | |
| ಅತ್ಯಂತ | | |

**ಕೃತಿ-3) ಕೆಳಗಿನ ಪದಗಳಿಗೆ ಉಪಸರ್ಗ ಸೇರಿಸಿ ಬರೆಯಿರಿ.**

i)

| | | | | |
|---|---|---|---|---|
| | ನಿ | ರೀ | ಕ್ಷಿ | ತ |

ii)

| | | |
|---|---|---|
| | ಸಾ | ಧ್ಯ |

i)

| | | |
|---|---|---|
| | ಕ್ಷೇ | ಮ |

ii)

| | | |
|---|---|---|
| | ದಿ | ನ |

**ಕೃತಿ-4) ಕೆಳಗಿನ ವಾಕ್ಯಗಳ ಕಾಲಗಳನ್ನು ಗುರುತಿಸಿ ಬರೆಯಿರಿ.**

i) ಅಳಿಯನು ಮೊದಲ ಸಲ ಮಾವನ ಮನೆಗೆ ಬಂದಿದ್ದನು.

ಕಾಲ ______

ii) ದೀಪಾವಳಿಯು ಬೆಳಕಿನ ಹಬ್ಬವಾಗಿದೆ.

ಕಾಲ ______

iii) ಒಳಗಡೆಯಿಂದ ಹಾಡೊಂದು ಕೇಳಿ ಬರಬಹುದು.

ಕಾಲ ______

iv) ಹಬ್ಬ ಹರಿದಿನಗಳು ಸಮಾಜದಲ್ಲಿಯ ಕೊಳೆಯನ್ನು ದೂರ ಮಾಡುತ್ತವೆ.

ಕಾಲ ______

**ಕೃತಿ-5) ಕೆಳಗಿನ ಪದಬಂಧವನ್ನು ಪೂರ್ಣಮಾಡಿರಿ.**

**ಎಡದಿಂದ ಬಲಕ್ಕೆ** i) ಇದು ಬೆಳಕಿನ ಹಬ್ಬ-4

**ಮೇಲಿನಿಂದ ಕೆಳಕ್ಕೆ** ii) ದೀಪಕ್ಕಿರುವ ಇನ್ನೊಂದು ಹೆಸರು-3

iii) ಪೇಪರ ತಿದ್ದೋದು ಎಂದರೆ-4

| | 1 | 2 | | |
|---|---|---|---|---|
| 1 | X | ತ | X | X |
| 2 | ದೀ | | | |
| | | | | |
| | | | | |

**ಕೃತಿ-6) ಕೆಳಗಿನ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ.**

i) ಹಬ್ಬವನ್ನು ದೀಪಾವಳಿ ಸಂಭ್ರಮದಿಂದ ಭಾರತದಲ್ಲಿ ಆಚರಿಸುತ್ತಾರೆ.

ii) ಮದುವೆಯಾದ ಹೊಸದಾಗಿ ಅಳಿಯನು ಮನೆಗೆ ಮಾವನ ಬಂದನು.

iii) ಪಂಚಪ್ರಾಣ ಸ್ತ್ರೀಯರಿಗೆ ಭಾರತೀಯ ಸೀರೆಗಳೆಂದರೆ.


iv) ಸುಖವಿಲ್ಲ ಸತ್ಯಕ್ಕೆ ಸುಳ್ಳಿಗೆ ಸಾವಿಲ್ಲ.

**ಕೃತಿ-7) ಕೆಳಗಿನ ಪದಗಳನ್ನು ವಿಗ್ರಹಿಸಿ ಸಮಾಸದ ಹೆಸರು ಬರೆಯಿರಿ.**

| ಪದಗಳು | ವಿಗ್ರಹರೂಪ | ಸಮಾಸದ ಹೆಸರು |
|---|---|---|
| ಕೆಂಪುಸೀರೆ | | |
| ಕಿಬ್ಬೊಟ್ಟೆ | | |
| ಹೂಗಿಡಬಳ್ಳಿಗಳು | | |

**ಕೃತಿ-8) ಪಾಠದಲ್ಲಿ ಬಂದಿರುವ ದ್ವಿರುಕ್ತಿ ಪದಗಳನ್ನು ಬರೆಯಿರಿ.**

ಉದಾ : ಪಟಪಟ




**ಕೃತಿ-9) ಸ್ವಂತ ಅಭಿಪ್ರಾಯದ ಕೃತಿ ರಚಿಸಿರಿ.**

i) ಭಾರತೀಯ ಹಬ್ಬಹರಿದಿನಗಳ ಆಚರಣೆಯ ಹಿನ್ನೆಲೆಯ ಮಹತ್ವದ ಬಗ್ಗೆ 10-12 ವಾಕ್ಯಗಳಲ್ಲಿ ನಿಮ್ಮ ಅನಿಸಿಕೆಗಳನ್ನು ಬರೆಯಿರಿ.

ii) ನೀವು ಆಚರಿಸುವ ಯಾವುದಾದರೊಂದು ಹಬ್ಬದ ಕುರಿತು 10-12 ವಾಕ್ಯಗಳಲ್ಲಿ ಬರೆಯಿರಿ.

iii) ''ಮೊದಲ ದೀಪಾವಳಿ ಹೊಸ ಮಾವ'' ಈ ಪಾಠದ ಹಾಸ್ಯ ಪ್ರಸಂಗಗಳನ್ನು 10-12 ವಾಕ್ಯಗಳಲ್ಲಿ ಹೇಳಿರಿ.

* * * * * * * * * *

# 5 ಕರ್ಮಯೋಗಿ ಅಪ್ಪಾಸಾಹೇಬ ಕಾಡಾದಿ

- ಮಧುಮಾಲಾ ಲಿಗಾಡೆ

**ಮಧುಮಾಲಾ ಲಿಗಾಡೆ :** ಅವರು ಸೊಲ್ಲಾಪುರದ ಪ್ರಸಿದ್ಧ ಸಾಹಿತಿ ಜಯದೇವಿತಾಯಿ ಲಿಗಾಡೆ ಅವರ ಸೊಸೆ. ಕಥೆ ಕಾದಂಬರಿ, ರೂಪಕ, ಕಾವ್ಯಗಳಿಂದ ಸಾಹಿತ್ಯ ಲೋಕದಲ್ಲಿ ಪರಿಚಿತರಾಗಿದ್ದಾರೆ. ಬಿಪ್ಲವದಾಚೆ, ಕವಲುದಾರಿ, ನೀಲಾಂಬರದಲ್ಲಿ ಲೀನ ಇವು ಅವರ ಕೆಲವು ಕೃತಿಗಳು.

ಕರ್ಮಯೋಗಿ ಅಪ್ಪಾಸಾಹೇಬ ಕಾಡಾದಿ ಅವರು ಸೊಲ್ಲಾಪುರದ ರೂವಾರಿಗಳಲ್ಲಿ ಒಬ್ಬರು. ಕಾಯಕವೇ ಕೈಲಾಸವೆಂದು ಜೀವನವಿಡೀ ದುಡಿಯುತ್ತ ಬಂದವರು. ದುಡಿಯುವದನ್ನೂ ಕಲಿಸಿದವರು. ಅವರ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಔದ್ಯೋಗಿಕ ಸೇವೆಗಳು ಇಂದಿನ ಯುವಕರಿಗೆ ಪ್ರೇರಣೆ ನೀಡುವಂತಿವೆ. ಇದನ್ನು ಮಧುಮಾಲಾ ಲಿಗಾಡೆ ಅವರು ಬರೆದು ಸಂಪಾದಿಸಿಕೊಟ್ಟಿದ್ದಾರೆ.

---

ಅಪ್ಪಾಸಾಹೇಬ ಎಂಬ ಹೆಸರಿನಿಂದ ಪ್ರಸಿದ್ಧರಾದ ಶ್ರೀಮಡಿವಾಳಪ್ಪ ಬಂಡಪ್ಪ ಕಾಡಾದಿ ಅವರು ಸೊಲ್ಲಾಪುರದ ಚಿರಪರಿಚಿತ ವ್ಯಕ್ತಿ ಹಾಗೂ ಶಕ್ತಿ. ಸೊಲ್ಲಾಪುರದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ, ಧಾರ್ಮಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಪ್ರಗತಿಯ ದಾರಿಯನ್ನು ನಿರ್ಮಿಸಿದರು. ಶಿಸ್ತು, ಸಂಯಮ, ಸಮಯ ಪ್ರಜ್ಞೆ, ಸಹಕಾರ ಹಾಗೂ ಪ್ರಗತಿಯ ಇನ್ನೊಂದು ಹೆಸರೆಂದರೆ ಅಪ್ಪಾಸಾಹೇಬ ಎಂದು ಹೇಳಬಹುದು.

ಅಪ್ಪಾಸಾಹೇಬರು ಶ್ರೀ ಬಂಡೆಪ್ಪ ಹಾಗೂ ಗಂಗಮ್ಮನವರ ಪುತ್ರರಾಗಿ 15-9-1909 ರಲ್ಲಿ ಜನಿಸಿದರು. ದೊಡ್ಡ ಮನೆತನ. ವ್ಯಾಪಾರ ಉದ್ಯೋಗಗಳಲ್ಲಿ ರಾಜ್ಯದಲ್ಲಿಯೆ ಹೆಸರುಗಳಿಸಿದ ಮನೆತನ. ಮನೆಯಲ್ಲಿ ಧಾರ್ಮಿಕ ವಾತಾವ ರಣ... ಗುರುಗಳು, ಜಂಗಮರು, ಪಂಡಿತರು, ವಿದ್ಯಾರ್ಥಿಗಳು - ರಾಜಕಾರಣಿಗಳು, ಬಂಧು ಬಳಗದವರಿಗೆ ಲೆಕ್ಕವಿಲ್ಲ. ಎಲ್ಲರಿಗೂ ಆದರಾತಿಥ್ಯ. ಇದರಿಂದ ಅಪ್ಪಾಸಾಹೇಬರಿಗೆ ಅನೇಕ ಅನುಭವಗಳು ಸಿಗುತ್ತಿದ್ದವು. ಸಾಮಾಜಿಕ ಜೀವನದ ಪರಿಚಯವೂ ಆಗುತ್ತಿತ್ತು.

ಬಾಲ್ಯಸಹಜವಾದ ಸ್ವಭಾವದೊಂದಿಗೆ ಅಪ್ಪಾಸಾಹೇಬರು ಬೆಳೆದರು. ಗೆಳೆಯರೊಂದಿಗೆ ಆಟಪಾಟಗಳಲ್ಲಿಯೂ ಕಳೆಯುತ್ತಿದ್ದರು. ಅವರಿಗೆ ಪ್ರಿಯವಾದ ಆಟ ಕ್ರಿಕೆಟ್. ಓರಗೆಯ ಗೆಳೆಯರೊಂದಿಗೆ ಅವರು ಟೀಮ್‌ಗಳನ್ನು ಕಟ್ಟಿ ಕ್ರಿಕೆಟ್ ಸ್ಪರ್ಧೆಗಳನ್ನು ನಡೆಸುತ್ತಿದ್ದರು. ಸ್ವತಃ ಆಟವನ್ನೂ ಆಡುತ್ತಿದ್ದರು. ಬಾಲ್ಯವು ದೇವರು ನೀಡಿದ ಒಂದು ವರ. ಅದನ್ನು ಯಾರು ತಿಳಿದುಕೊಂಡಿದ್ದಾರೋ ಅವರ ಜೀವನ ತಿಳಿನೀರಿನ ಹೊಳೆಯಾಗಿದೆ. ತಂದೆತಾಯಿಗಳ ಸಂಸ್ಕಾರ ಬಾಲ್ಯದ ಅನುಭವ, ಆಚಾರ, ವಿಚಾರ, ರೂಢಿ, ಪರಂಪರೆ ಮಕ್ಕಳ ಮೇಲೆ ಅಪಾರ ಪ್ರಭಾವ ಬೀರುತ್ತವೆ. ಇಂಥ ಪ್ರಭಾವದಿಂದ ಅಪ್ಪಾಸಾಹೇಬರು ಬೆಳೆದುಬಂದರು.

ಅಪ್ಪಾಸಾಹೇಬರ ಪ್ರಾಥಮಿಕ ಶಿಕ್ಷಣ ಸೊಲ್ಲಾಪುರ ಮುನಿಸಿಪಾಲಿಟಿ ಶಾಲೆ ನಂಬರ್ 1ರಲ್ಲಿ ಆಯಿತು. ಹೈಸ್ಕೂಲ್ ಶಿಕ್ಷಣ ನಾರ್ಥ್‌ಕೋಟ ಟೆಕ್ನಿಕಲ್ ಹೈಸ್ಕೂಲ್‌ನಲ್ಲಿ ಆಯಿತು. ನಂತರ 1928 ರಲ್ಲಿ ಹರಿಭಾಯಿ ದೇವಕರಣ ಶಾಲೆಯಲ್ಲಿ ಮೆಟ್ರಿಕ್ ಮುಗಿಸಿದರು. ಮುಂದಿನ ಅಭ್ಯಾಸಕ್ಕಾಗಿ ಅವರು ಪುಣೆಯ ಡೆಕ್ಕನ್ ಕಾಲೇಜಿಗೆ ಪ್ರವೇಶ ಪಡೆದರು. ಆದರೆ ಮನೆತನದ ವ್ಯಾಪಾರ - ವ್ಯವಹಾರ - ಉದ್ದಿಮೆ - ಆಸ್ತಿ - ಸಂಬಂಧ - ಸಂಪರ್ಕಗಳು - ವಿಸ್ತಾರವಾಗಿ ಬೆಳೆದುದರಿಂದ ಅವುಗಳನ್ನು ನೋಡಿಕೊಳ್ಳಲು ಅಣ್ಣ ಶ್ರೀ ನಾಗಪ್ಪಣ್ಣ ಕಾಡಾದಿ ಅವರಿಗೆ ಕಷ್ಟಸಾಧ್ಯವಾಗತೊಡಗಿತು. ಆದ್ದರಿಂದ ಅವರು ಅಪ್ಪಾಸಾಹೇಬರನ್ನು ಸೊಲ್ಲಾಪುರಕ್ಕೆ ಕರೆಸಿಕೊಂಡರು. ಹೆಚ್ಚಿನ ಅಧ್ಯಯನ ಮಾಡಿಯೂ ಮನೆತನದ ಉದ್ಯೋಗ ಮಾಡಬೇಕಲ್ಲ ಎಂಬ ಸಮಾಧಾನದೊಂದಿಗೆ ಅಪ್ಪಾಸಾಹೇಬರು ಪುಣೆಯ ಶಿಕ್ಷಣವನ್ನು ಮೊಟಕುಗೊಳಿಸಿ ಸೊಲ್ಲಾಪುರಕ್ಕೆ ಬಂದರು.

ಅವರು 17-18ರ ಹರೆಯದಲ್ಲಿಯೇ ದೊಡ್ಡ ದೊಡ್ಡ ಜವಾಬ್ದಾರಿಗಳನ್ನು ನಿರ್ವಹಿಸಬೇಕಾದ ಪ್ರಸಂಗಗಳು ಬಂದವು. ಹೆದರದೆ, ಹಿಂದೆಗೆಯದೆ ಧೈರ್ಯದಿಂದ ಅವರು ಕರ್ತವ್ಯ ಎಂಬಂತೆ ಜವಾಬ್ದಾರಿಗಳನ್ನು ನಿಭಾಯಿಸಿದರು. ಒಕ್ಕಲುತನ, ವ್ಯಾಪಾರ, ಉದ್ದಿಮೆಗಳನ್ನು ಜಾಣತನದಿಂದ ನಡೆಸಿಕೊಂಡು ಬಂದರು.

ಅಪ್ಪಾಸಾಹೇಬರ ವಿವಾಹ **1929**ರಲ್ಲಿ ಆಯಿತು - ಫುಟಾಣೆ ಮನೆತನದ ರುದ್ರಮ್ಮನವರು ಸತಿಯಾಗಿ ಬಂದರು. ವೈವಾಹಿಕ ಜೀವನ ಹಾಲು ಜೇನಿನಂತೆ ಸುಮಧುರವಾಗಿ ಸಾಗಿತು. ಸತಿ ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಎಂಬಂತೆ ಅವರ ಜೀವನವಾಗಿತ್ತು. ಮನೆ, ಬಂಧು, ಬಳಗ, ಮಕ್ಕಳಿಂದ ತುಂಬಿತು. ಆದರೆ ದುರ್ದೈವದಿಂದ ರುದ್ರಮ್ಮನವರು 1952ರಲ್ಲಿ ನಿಧನರಾದರು. ಆಗ ಅಪ್ಪಾಸಾಹೇಬರಿಗೆ ಕೇವಲ 42 ವರ್ಷ ವಯಸ್ಸು. ಅವರು ಮಕ್ಕಳ ಮೇಲಿನ ಪ್ರೀತಿಯಿಂದ ಇನ್ನೊಂದು ಮದುವೆ ಆಗಲಿಲ್ಲ. ತಂದೆಯಾಗಿ ತಾಯಿಯಾಗಿ ಅವರೇ ಮಕ್ಕಳನ್ನು ಬೆಳೆಸಿದರು. ಮಕ್ಕಳು ದೊಡ್ಡವರಾದಂತೆ ಅವರಿಗೆ ಉದ್ಯೋಗ, ಕೃಷಿ, ಸಂಚಾರ ಪತ್ರಿಕೆ, ಮಿಲ್ ಹೀಗೆ ಜವಾಬ್ದಾರಿಗಳನ್ನು ವಹಿಸಿಕೊಟ್ಟರು. ಅವರ ಬಾಳು ಬಂಗಾರವಾಯಿತು.

**ರಾಜಕೀಯ ಪ್ರವೇಶ :**

ಅಪ್ಪಾಸಾಹೇಬರು 1939ರಲ್ಲಿ ಕಿರಿವಯಸ್ಸಿನಲ್ಲೇ ನಗರಾಧ್ಯಕ್ಷರಾಗಿ ಆಯ್ಕೆಯಾದರು. ಇದರಿಂದ ಸಾಮಾಜಿಕ ಸಮಸ್ಯೆಗಳ ಅನುಭವ ದೊರೆಯಿತು. ಅಡಚಣೆಗಳನ್ನು ಬಿಡಿಸುವ ಜಾಣತನ ಅವರಲ್ಲಿ ಬೆಳೆಯಿತು. ನಗರ ಪಾಲಿಕೆಯಲ್ಲಿ ಮಹಾತ್ಮಾಗಾಂಧಿ ಅವರ ಭಾವಚಿತ್ರವನ್ನು ಸರದಾರ ವಲ್ಲಭಭಾಯಿ ಪಟೇಲ ಅವರಿಂದ ಮೊದಲಿಗೆ ಹಚ್ಚಿಸಿದರು. ಪಾಲಿಕೆಯ ವತಿಯಿಂದ ಪಟ್ಟಣದಲ್ಲಿ ಆರೋಗ್ಯ ಸಪ್ತಾಹವನ್ನು ದೊಡ್ಡ ಪ್ರಮಾಣದಲ್ಲಿ ನಡೆಸಿದರು.

**1952-1957**ರ ಸಾರ್ವಜನಿಕ ಚುನಾವಣೆಯಲ್ಲಿ ಅಪ್ಪಾಸಾಹೇಬರು ಅಕ್ಕಲಕೋಟ ಮತದಾರ ಸಂಘದಿಂದ ವಿಧಾನಸಭೆಗೆ ಭಾರಿ ಬಹುಮತದಿಂದ ಆರಿಸಿಬಂದರು.

**1962**ರ ಚುನಾವಣೆಯಲ್ಲಿ ಅಪ್ಪಾಸಾಹೇಬರು ಲೋಕಸಭೆಗೆ ಆರಿಸಿಬಂದರು. ಈ ಕಾಲದಲ್ಲಿ ಅವರು ಸೊಲ್ಲಾಪುರದ ಗ್ರಾಮೀಣ ಭಾಗಗಳಲ್ಲಿ ಸಂಚರಿಸಿ ಈ ಭಾಗದಲ್ಲಿ ಒಂದು ಸಕ್ಕರೆ ಕಾರ್ಖಾನೆ ಆಗಬೇಕೆಂಬ ಚಿಂತನ ನಡೆಸಿದರು. ಸತತ ಪ್ರಯತ್ನದಿಂದ ಶ್ರೀ ಸಿದ್ಧೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ 1969ರಲ್ಲಿ ಆರಂಭವಾಯಿತು. ಅದಕ್ಕೆ ಅವರು ಅಧ್ಯಕ್ಷರಾಗಿ ಆಯ್ಕೆಯಾದರು.

**1963-64ರಲ್ಲಿ** ಸೊಲ್ಲಾಪುರದಲ್ಲಿ ಭಯಂಕರ ಬರಗಾಲ ಪರಿಸ್ಥಿತಿ ಉಂಟಾಯಿತು. ಬಡವರಿಗೆ ಒಂದು ಹೊತ್ತಿನ ಊಟಕ್ಕೂ ಗತಿಯಿಲ್ಲದಂತಾಯಿತು. ಧಾನ್ಯಗಳ ಬೆಲೆ ಗಗನಕ್ಕೇರಿತು. ಈ ಸಂದರ್ಭದಲ್ಲಿ ಅಪ್ಪಾಸಾಹೇಬರು ಒಂದು ಹೊಸ ಯೋಜನೆಯನ್ನು ರೂಪಿಸಿದರು. ಲಾಭವೂ ಅಲ್ಲದ ಹಾನಿಯೂ ಅಲ್ಲದ ತತ್ವದಂತೆ ಬಡ ಜನರಿಗೆ ದವಸಧಾನ್ಯ ದೊರೆಯುವಂತೆ ಗ್ರಾಹಕ ಭಾಂಡಾರಗಳನ್ನು ತೆರೆದರು. ಇದನ್ನು ಆರಂಭಿಸಲು ಅವರೇ ಮೊದಲಿಗೆ ಬಂಡವಾಳವನ್ನು ಹಾಕಿದರು. ಈ ಯೋಜನೆಗೆ ''ರಯತ ಸಿಂಡಿಕೇಟ್'' ಎಂದು ಕರೆದರು. ಇದೇ ಯೋಜನೆ ಮುಂದೆ ಸಹಕಾರಿ ಗ್ರಾಹಕ ಭಂಡಾರದ ಉದಯಕ್ಕೆ ಕಾರಣವಾಯಿತು. ಇದರಿಂದ ಬಡವರಿಗೆ ಬಹಳ ಉಪಕಾರವಾಯಿತು.

ಸೊಲ್ಲಾಪುರ ನೂಲಿನ ಗಿರಣಿ ಮುಚ್ಚುವ ಹಂತಕ್ಕೆ ಬಂದಿತ್ತು. ಆಗ ಅಪ್ಪಾಸಾಹೇಬರು 'ಮಿಕ್ಸ್ ಪ್ಯಾಟರ್ನ್' ಬಳಸಿ ಹತ್ತಿ ಬೆಳೆಗಾರರಿಗೂ ನೂಲಿನ ಕಾರ್ಖಾನೆಯ ನೇಕಾರರಿಗೂ ಸಂಘಟಿಸಿ ಕಾರ್ಖಾನೆಯನ್ನು ನಡೆಸುವ ಯೋಜನೆಯನ್ನು ಕೊಟ್ಟರು. ಇದರಿಂದ ಕಾರ್ಖಾನೆ ಯಾವುದೇ ಅಡಚಣೆಯಿಲ್ಲದೆ ನಡೆಯಿತು.

ಹೀಗೆ ಸಮಸ್ಯೆಯನ್ನು ಚೆನ್ನಾಗಿ ಕೇಳಿ ತಿಳಿದುಕೊಂಡು ಸರಿಯಾದ ಮಾರ್ಗವನ್ನು ಅಪ್ಪಾಸಾಹೇಬರು ಸೂಚಿಸುತ್ತಿದ್ದರು. ಅದು ಸಿದ್ದೇಶ್ವರ ಸಹಕಾರಿ ಬ್ಯಾಂಕಿನ ಚುನಾವಣೆ ಇರಲಿ, ಸ್ವಾಮಿ ಸಮರ್ಥ ಸಹಕಾರಿ ನೂಲಿನ ಗಿರಣಿಯ ಚುನಾವಣೆ ಇರಲಿ, ಕೃಷಿ ಉತ್ಪನ್ನ ಬಾಜಾರ ಸಮಿತಿಯ ಚುನಾವಣೆ ಇರಲಿ ಅವಿರೋಧವಾಗಿ ಅಧ್ಯಕ್ಷರ ಆಯ್ಕೆ ಆಗಬೇಕೆಂದು ಅವರು ಸದಸ್ಯರ ಮನವೊಲಿಸುತ್ತಿದ್ದರು. ಇದರಿಂದ ರೈತರ ಹಣ ಪೋಲಾಗದಂತೆ ಉಳಿಯುತ್ತಿತ್ತು. ಹೀಗೆ ಅವರು ಒಬ್ಬ ಪ್ರಾಮಾಣಿಕ ರಾಜಕಾರಣಿಯಾಗಿ ಸಮಾಜ ಸೇವೆ ಮಾಡಿದ್ದು ಗಮನಾರ್ಹ ಸಂಗತಿಯಾಗಿದೆ.

**ಸಮಾಜ ಸೇವೆಯ ಕರೆ:**

ಸಮಾಜದ ಹಿತಚಿಂತನೆಯ ದೃಷ್ಟಿಯಿಂದ ಅಪ್ಪಾಸಾಹೇಬರು ಬೇರೆ ಬೇರೆ ರೀತಿಯಲ್ಲಿ ವಿಚಾರ ನಡೆಸಿದ್ದಾರೆ. ಆಗ ಅವರಿಗೆ ಮಹತ್ವದ ತಳಹದಿಯಾಗಿ ಶಿಕ್ಷಣ ಕ್ಷೇತ್ರ ಕಾಣಿಸಿತು. ರೈತರ ಮಕ್ಕಳು ಬಡವರ ಮಕ್ಕಳು, ಕೂಲಿಕಾರರ ಮಕ್ಕಳು, ದಲಿತರ ಮಕ್ಕಳು ಹೆಚ್ಚಿನ ಶಿಕ್ಷಣ ಕಲಿಯಬೇಕಾದರೆ ಪುಣೆ, ಮುಂಬೈ, ಕೊಲ್ಹಾಪುರಗಳ ಕಡೆಗೆ ಹೋಗುವುದು ಸಾಧ್ಯವಿರಲಿಲ್ಲ... ಆದ್ದರಿಂದ ಇಲ್ಲಿಯೇ ಶಿಕ್ಷಣ ಕ್ಷೇತ್ರವನ್ನು ಬೆಳೆಸಲು ಅವರು ಪ್ರಯತ್ನಿಸಿದರು.

### ಅಣ್ಣಪ್ಪ ಕಾಡಾದಿ ಪ್ರಶಾಲೆ :

**1937**ರಲ್ಲಿ ಕೆ.ಎಲ್.ಈ. ಸಂಸ್ಥೆಯ ಸಹಯೋಗದೊಂದಿಗೆ ನಾಗಪ್ಪಣ್ಣ ಮತ್ತು ಅಪ್ಪಾಸಾಹೇಬ ಬಂಧುಗಳು ಸೇರಿ ಅಣ್ಣಪ್ಪ ಕಾಡಾದಿ ಶಾಲೆಯನ್ನು ಆರಂಭಿಸಿದರು. ಸೊಲ್ಲಾಪುರ ರೈತರ, ಕೂಲಿಕಾರ್ಮಿಕರ, ಬಡವರ ಊರು, ವ್ಯಾಪಾರಿಗಳ ಊರು. ಅವರಿಗೆ ಶಿಕ್ಷಣದಲ್ಲಿ ಆಸಕ್ತಿಯಿರಲಿಲ್ಲ. ಆಗ ಶಿಕ್ಷಕರು ಮನೆಮನೆಗಳಿಗೆ ಹೋಗಿ ಶಿಕ್ಷಣದ ಮಹತ್ವವನ್ನು ತಿಳಿಸಿ, ಮಕ್ಕಳಿಗೆ ಶಾಲೆಗೆ ಕಳಿಸುವಂತೆ ವಿನಂತಿಸಿದರು. ಶಿಕ್ಷಣದ ಅಭಿರುಚಿಯನ್ನು ಬೆಳೆಸಿದರು. ಇದರಿಂದ ಶಾಲೆಗೆ ಬರುವ ಮಕ್ಕಳ ಸಂಖ್ಯೆ ಬೆಳೆಯಿತು.

ಹಳ್ಳಿಯ ಮಕ್ಕಳು ಶಾಲೆಗೆ ಬರಲಿಲ್ಲ. ಏಕೆಂದರೆ ಅವರಿಗೆ ಪಟ್ಟಣದಲ್ಲಿ ಊಟದ ಹಾಗೂ ವಸತಿಯ ಸೌಕರ್ಯ ಇರಲಿಲ್ಲ. ಅದಕ್ಕೆ ಖರ್ಚೂ ಬಹಳವಾಗುತ್ತಿತ್ತು. ಅದಕ್ಕಾಗಿ ಕಾಡಾದಿ ಬಂಧುಗಳು ಒಂದು ಮಾರ್ಗವನ್ನು ಶೋಧಿಸಿದರು.

### ಕಾಡಾದಿ ಉಚಿತ ವಸತಿ ಗೃಹ :

ಹಳ್ಳಿಯ ರೈತರ ಮಕ್ಕಳಿಗಾಗಿ **1933**ರಲ್ಲಿ ಕಾಡಾದಿ ಅವರು ಉಚಿತ ವಸತಿ ಗೃಹವನ್ನು ಆರಂಭಿಸಿದರು. ಇದರಲ್ಲಿ ನೂರಾರು ವಿದ್ಯಾರ್ಥಿಗಳು ಪ್ರವೇಶ ಪಡೆದರು. ಅವರ ಊಟ - ತಿಂಡಿ - ಫೀ - ಪುಸ್ತಕಗಳ ವ್ಯವಸ್ಥೆಯನ್ನು ಕಾಡಾದಿ ಬಂಧುಗಳು ನೋಡಿಕೊಳ್ಳುತ್ತಿದ್ದರು. ವಿದ್ಯಾರ್ಥಿಗಳು ಗುಂಪು ಮಾಡಿಕೊಂಡು ತಮ್ಮ ಅಡಿಗೆಯನ್ನು ತಾವೇ ಸಿದ್ಧಪಡಿಸುವ, ಬಡಿಸುವ, ಉಣ್ಣುವ ಯೋಜನೆಯನ್ನು ಹಾಕಿಕೊಂಡಿದ್ದು ವಿಶೇಷ ಸಂಗತಿಯಾಗಿತ್ತು.

ಹೈಸ್ಕೂಲ್ ಶಿಕ್ಷಣ ಮುಗಿದ ನಂತರ ಮುಂದಿನ ಉನ್ನತ ಶಿಕ್ಷಣದ ಸಮಸ್ಯೆ ವಿದ್ಯಾರ್ಥಿಗಳಿಗೆ ಎದುರಾಯಿತು. ಆಗ ಕಾಡಾದಿ ಬಂಧುಗಳು ಕಾಲೇಜು ಸ್ಥಾಪನೆಯ ವಿಚಾರ ಮಾಡಿದರು.

### ಸಂಗಮೇಶ್ವರ ಕಾಲೇಜ ಸ್ಥಾಪನೆ :

**1953**ರಲ್ಲಿ ಸಂಗಮೇಶ್ವರ ಕಾಲೇಜು ಪ್ರಾರಂಭವಾಯಿತು. ಅದು ಒಂದು ಆದರ್ಶ ಸಂಸ್ಥೆಯಾಗಿ ಬೆಳೆಯ ಬೇಕೆಂಬುದು ಅಪ್ಪಾಸಾಹೇಬರ ಆಕಾಂಕ್ಷೆಯಾಗಿತ್ತು. ಅದರಂತೆ ತನು-ಮನ-ಧನದಿಂದ ಅವರು ಕಾಲೇಜನ್ನು ಬೆಳಸಿದರು. ಕಲೆ-ಶಾಸ್ತ್ರ-ವಾಣಿಜ್ಯ ವಿಭಾಗಗಳನ್ನು ಸಮೃದ್ಧವಾಗಿ ಬೆಳೆಸಿದರು. ಇಂದು ಅದು ಅನೇಕ ಶೈಕ್ಷಣಿಕ ವಿಭಾಗಗಳನ್ನು ಹೊಂದಿದ್ದು ಹೊಸ ಹೊಸ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ನೀಡುತ್ತಿದೆ. ಸಾವಿರಾರು ವಿದ್ಯಾರ್ಥಿಗಳು ಈ ಶಿಕ್ಷಣದ ಪ್ರಯೋಜನವನ್ನು ಪಡೆಯುತ್ತಿದ್ದಾರೆ.

### ಸಿದ್ದೇಶ್ವರ ಶಿಕ್ಷಣ ಸಂಸ್ಥೆ :

**1958**ರಲ್ಲಿ ಅಪ್ಪಾಸಾಹೇಬರು ಸಿದ್ಧೇಶ್ವರ ದೇವಸ್ಥಾನ ಪಂಚಕಮೀಟಿಯ ಅಧ್ಯಕ್ಷರಾದರು. ದೇವಸ್ಥಾನದ ಎಲ್ಲ ಶಾಲೆಗಳನ್ನು ವ್ಯವಸ್ಥಿತವಾಗಿ ನಡೆಸುವ ಜವಾಬ್ದಾರಿ ಹೆಗಲಿಗೆ ಬಿದ್ದಿತು. 'ನಮ್ಮ ಈ ಪ್ರಶಾಲೆ ಬಡವರಿಗಾಗಿ ಇದೆ. ಆದರೆ ನೀವು ಬಡವರಾಗಿ ಇರಬಾರದು... ಅದನ್ನು ಕಳೆದುಕೊಳ್ಳಬೇಕು ಎಂದು ಕಳಕಳಿಯಿದ ಮಾತಾಡಿದ್ದರು. ವಿದ್ಯಾರ್ಥಿಗಳು ಫೇಲಾದರೆ ಏಕೆ ಫೇಲಾದರು? ಅದರ ಕಾರಣಗಳೇನು? ಅದನ್ನು ಹೇಗೆ ಸುಧಾರಿಸಬೇಕು? ಎಂಬ ಚರ್ಚೆಯನ್ನು ಅವರು ತಪ್ಪದೆ ಮಾಡುತ್ತಿದ್ದರು. ಹೆಣ್ಣು ಮಕ್ಕಳೂ ಶಿಕ್ಷಣವನ್ನು ಪಡೆದು ಜಾಣರಾಗಬೇಕು ಇದರಿಂದ ಒಂದು ಕುಟುಂಬವೇ ಸುಧಾರಣೆ ಯಾಗಲು ಸಾಧ್ಯ ಎಂಬುದು ಅದರ ವಿಚಾರವಾಗಿತ್ತು.

### ಪತ್ರಿಕಾರಂಗ :

ಸೊಲ್ಲಾಪುರ ಭಾಗದ ಪರಿಚಯ, ಪ್ರಚಾರ ಸಮಸ್ಯೆಗಳ ತಿಳಿವಳಿಕೆ ಆಗಬೇಕಾದರೆ ಇಲ್ಲಿ ಒಂದು ಪತ್ರಿಕೆ ಬೇಕೇ ಬೇಕು ಎಂದು ಅಪ್ಪಾಸಾಹೇಬರು **1961**ರಲ್ಲಿ ಸಂಚಾರ ಪತ್ರಿಕೆಯನ್ನು ಆರಂಭಿಸಿದರು. ಇದರಿಂದ ಆ ಕಾಲದ ಗೋವಾ ಮುಕ್ತಿ ಸಂಗ್ರಾಮ, ಚೀನಿ ಆಕ್ರಮಣ, ಜಿಲ್ಲಾ ಪರಿಷತ್ತು ಅಧಿಕಾರ ವಿಕೇಂದ್ರೀಕರಣ, ಸಹಕಾರಿ ಸಕ್ಕರೆ ಕಾರ್ಖಾನೆ, ಕೃಷಿ ನೀತಿ, ಭಾರತ - ಪಾಕಿಸ್ತಾನ ಸಂಬಂಧ, ಭಾರತ ಬಲಶಾಲಿಯಾಗುವ ರೀತಿ ಮುಂತಾದ ಸಂಗತಿಗಳನ್ನು ಜನತೆಗೆ ಮುಟ್ಟಿಸುವ ಕೆಲಸವನ್ನು ಪತ್ರಿಕೆ ಸಮರ್ಥವಾಗಿ ಮಾಡಿದ್ದು ಗಮನಾರ್ಹ ಸಂಗತಿಯಾಗಿದೆ.

### ಧಾರ್ಮಿಕ ರಂಗ :

ಸಿದ್ದೇಶ್ವರ ದೇವಸ್ಥಾನ ಪಂಚಕಮೀಟಿಯ ಅಧ್ಯಕ್ಷರಾಗಿ ಅಪ್ಪಾಸಾಹೇಬರು ಅನೇಕ ಸುಧಾರಣೆಗಳನ್ನು ಮಾಡಿದರು. ಪುಸ್ತಕ ಪ್ರಕಟಣೆ, ಅಂಗಡಿಗಳ ಸುಧಾರಣೆ, ಸಿದ್ದೇಶ್ವರ ಪ್ರಶಾಲೆಯ ಕಟ್ಟಡ ವಿಸ್ತರಣೆ, ಜಾತ್ರೆಯಲ್ಲಿ

ಕೃಷಿ ಪ್ರದರ್ಶನ, ಆರೋಗ್ಯದ ಅರಿವು, ಸಿದ್ಧೇಶ್ವರ ಬೋರ್ಡಿಂಗ್, ಸಿದ್ಧೇಶ್ವರ ಕ್ಯಾನ್ಸರ್ ಆಸ್ಪತ್ರೆ ಮುಂತಾದವುಗಳನ್ನು ಸ್ಮರಿಸಬಹುದು.

**ಕಲಾಸಕ್ತಿ :**

ಅಪ್ಪಾಸಾಹೇಬರಿಗೆ ಚಿತ್ರಕಲೆ, ಸಂಗೀತಕಲೆ, ವಾಸ್ತುಶಿಲ್ಪ, ತೋಟಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಆಸಕ್ತಿ ಇತ್ತು. ಚಿತ್ರಕಲೆಯಿಂದ ಮನಸ್ಸಿನ ಅಭಿವ್ಯಕ್ತಿಯಾಗುತ್ತದೆ. ವ್ಯಕ್ತಿತ್ವ ನಿರ್ಮಾಣದಲ್ಲಿ ಚಿತ್ರ ಕಲೆ ಮಹತ್ವದ ಪಾತ್ರವಹಿಸುತ್ತದೆ. ಆದ್ದರಿಂದ ಕಲಾ ಶಿಕ್ಷಕರು ಮಕ್ಕಳಿಗೆ ಚಿತ್ರಕಲೆ ಕಲಿಸಬೇಕೆಂದು ಆಗ್ರಹಿಸುತ್ತಿದ್ದರು. ಇದರಿಂದ ಸಿದ್ಧೇಶ್ವರ ಪ್ರಶಾಲೆಯ ಮಕ್ಕಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಚಿತ್ರಕಲೆಗಾಗಿ ಪ್ರಶಸ್ತಿಗಳನ್ನು ಪಡೆದಿದ್ದರು.

ಅಪ್ಪಾಸಾಹೇಬರಿಗೆ ಸಂಗೀತದಲ್ಲಿಯೂ ಆಸಕ್ತಿ ಇತ್ತು. ಅವರಿಗೆ ಹಾರ್ಮೋನಿಯಂ, ಗಿಟಾರ್ ನುಡಿಸುವ ಹವ್ಯಾಸ ಇತ್ತು.

ಸಂಗಮೇಶ್ವರ ಕಾಲೇಜಿನ ಕಟ್ಟಡ ಹಾಗೂ ಸಿದ್ಧೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆಯ ಕಟ್ಟಡದ ನಿರ್ಮಾಣದಲ್ಲಿ ಅವರ ಮನೋವಿಶಾಲತೆ, ಭವ್ಯತೆಯ ಕಲ್ಪನೆ ಸ್ಪಷ್ಟವಾಗುತ್ತದೆ.

ಅವರು ಸದಾ ನಿಸರ್ಗ ಪ್ರಿಯರು. ಎಲ್ಲಿಯೇ ಹೋದರೂ ಅವರು ಮೊದಲು ಅಲ್ಲಿನ ಸಸಿಗಳನ್ನು, ಬಳ್ಳಿಗಳನ್ನು ಗಮನಿಸುತ್ತಿದ್ದರು. ಅಂಥ ಗಿಡ ಮರ ಬಳ್ಳಿಗಳು ನಮ್ಮಲ್ಲಿ ಏಕೆ ಇರಬಾರದು? ಎಂದು ವಿಚಾರ ಮಾಡುತ್ತಿದ್ದರು. ಮೇಲಿನ ಎಲ್ಲ ಕಟ್ಟಡಗಳ ಪರಿಸರದಲ್ಲಿ ನೂರಾರು ನಮೂನೆಯ ಗಿಡಮರಬಳ್ಳಿಗಳನ್ನು ಅವರು ನೆಡೆಸಿದ್ದಾರೆ. ಅವುಗಳಿಗೆ ಅವರದೇ ನೀರುಗೊಬ್ಬರ ಹಾಕಿರುವುದನ್ನು ಅನೇಕ ಜನರು ಕಂಡಿದ್ದಾರೆ.

ಹೀಗೆ ಅಪ್ಪಾಸಾಹೇಬರ ವ್ಯಕ್ತಿತ್ವ ಬಹುಮುಖಿಯಾಗಿದ್ದುದನ್ನೂ ವಿಶೇಷವಾಗಿ ಸಮಾಜ ಮುಖಿಯಾಗಿದ್ದುದನ್ನೂ ನಾವು ಗಮನಿಸಬಹುದಾಗಿದೆ. ಅವರು ನೀಡಿದ ಕೊನೆಯ ಸಂದೇಶ 'ಕಾಯಕವೇ ಕೈಲಾಸ'. ಯಾವತ್ತು ಕೆಲಸ ಮಾಡುತ್ತ ಇರಬೇಕು ಎಂಬುದೇ ಅವರ ಜೀವನ ಸಿದ್ಧಾಂತವಾಗಿತ್ತು. ಆದ್ದರಿಂದ ಸೊಲ್ಲಾಪುರದ ಜನರು ಅವರಿಗೆ ಕರ್ಮಯೋಗಿ ಎಂದು ಗೌರವಿಸಿದ್ದಾರೆ.

ಹೀಗೆ ಕೊನೆಯವರೆಗೂ ಸಮಾಜ ಸೇವೆ ಮಾಡುತ್ತ ಅವರು ತಮ್ಮ 83ನೇ ವಯಸ್ಸಿನಲ್ಲಿ, ಅಂದರೆ **27.2 1992 ರಂದು** ನಿಧನರಾದರು.

---

**ಶಬ್ದಾರ್ಥ :** **ಅಪ್ಪಾಸಾಹೇಬ** – ಗೌರವ ಸೂಚಕ ಪದ, **ಆದರಾತಿಥ್ಯ** – ಆದರದ ಸ್ವಾಗತ, **ಓರಗೆಯ** – ಸಮ ವಯಸ್ಸಿನ, **ಮೊಟಕುಗೊಳಿಸು** – ಅರ್ಧಕ್ಕೆ ನಿಲ್ಲಿಸು, **ನಿಭಾಯಿಸು** – ಸಂಭಾಳಿಸು, **ಸಪ್ತಾಹ** – ವಾರ, **ಪೋಲು** – ವ್ಯರ್ಥ, **ಆಸಕ್ತಿ** – ಇಚ್ಛೆ, **ಉಚಿತ** – ಪುಕ್ಕಟೆ, **ವಾಸ್ತುಶಿಲ್ಪ** – ಕಟ್ಟಡ, **ಕರ್ಮಯೋಗಿ** – ಸತತ ದುಡಿಯುವ.

## 1) ಕೆಳಗಿನ ಜಾಲಾಕೃತಿಯನ್ನು ಪೂರ್ಣ ಗೊಳಿಸಿರಿ :

**ಕೃತಿ :** i) ಅಪ್ಪಾಸಾಹೇಬರು ಚಿರಪರಿಚಿತ

ii) ಅಪ್ಪಾಸಾಹೇಹಬರ ತಂದೆ ತಾಯಿ

iii) ಅಪ್ಪಾಸಾಹೇಬರ ಪ್ರಿಯ ಆಟ

**ಕೃತಿ 2) ಮಕ್ಕಳ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಚೆಂಡಿನಿಂದ ಆರಿಸಿ ಬರೆಯಿರಿ.**

ನೀರು ಅನುಭವ ಗಾಳಿ
ಆಚಾರ, ವಿಚಾರ
ಗಿಡ ರೂಢಿ ರಸ್ತೆ
ಪರಂಪರೆ ಹುಲ್ಲು

i. ____________________
ii. ____________________
iii. ____________________
iv. ____________________
v. ____________________

**ಕೃತಿ 3) ಅಪ್ಪಾಸಾಹೇಬರು ಕಲಿತ ಶಾಲೆಗಳ ಹೆಸರುಗಳನ್ನು ಬರೆಯಿರಿ.**

**ಕೃತಿ 4) ಅಪ್ಪಾಸಾಹೇಬರು ಕಾಲೇಜ ಶಿಕ್ಷಣವನ್ನು ಏಕೆ ಬಿಟ್ಟುಬಂದರು?**

**ಕೃತಿ 5) ಅಪ್ಪಾಸಾಹೇಬರು ಮಾಡಿದ ಸಾಮಾಜಿಕ ಕೆಲಸಗಳನ್ನು ಚೆಂಡಿನಿಂದ ಆರಿಸಿ ಬರೆಯಿರಿ.**

ರಸ್ತೆ, ನಾಲೆ,
ಅಣ್ಣಪ್ಪ ಕಾಡಾದಿಪ್ರಶಾಲೆ,
ಸಂಚಾರ ಪತ್ರಿಕೆ,
ಬೀದಿದೀಪ, ನೂಲಿನಗಿರಣಿ,
ಸಕ್ಕರೆ ಕಾರ್ಖಾನೆ, ಕಾಲುವೆ,
ಗ್ರಾಹಕ ಭಂಡಾರ.

i. ____________________
ii. ____________________
iii. ____________________
iv. ____________________
v. ____________________

**ಕೃತಿ 6) ಅಪ್ಪಾಸಾಹೇಬರ ಆಸಕ್ತಿಯ ಕ್ಷೇತ್ರಗಳು.**

i. [ ]
ii. [ ]
iii. [ ]
iv. [ ]

**ಕೃತಿ 7) ಅಪ್ಪಾಸಾಹೇಬರು ನೀಡಿದ ಕೊನೆಯ ಸಂದೇಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

* * * * *

# 6 ಜೀವಂತ ಮಣ್ಣು

– ಟಿ. ಎಸ್. ಚನ್ನೇಶ

**ಟಿ.ಎಸ್. ಚನ್ನೇಶ:** ಸಂಶೋಧಕ ಹಾಗೂ ವಿಜ್ಞಾನ ಸಂವಹನಕಾರರಾದ ಇವರು ಶಿವಮೊಗ್ಗಾ ಜಿಲ್ಲೆಯ ಹೊನ್ನಾಳಿ ತಾಲೂಕಿನ ನ್ಯಾಮತಿಯಲ್ಲಿ **29 ಸಪ್ತಂಬರ 1962** ರಲ್ಲಿ ಜನಿಸಿದರು. **1987** ರಲ್ಲಿ ಮಣ್ಣು ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪೂರೈಸಿ **1994** ರಲ್ಲಿ 'ಅರಣ್ಯ ಪ್ರಭೇದಗಳಿಂದ ಮಣ್ಣಿನ ಮೇಲಾಗುವ ಪರಿಣಾಮಗಳು, ಎಂಬ ಪ್ರಬಂಧವನ್ನು ಸಲ್ಲಿಸಿ ಪಿ.ಎಚ್.ಡಿ. ಗಳಿಸಿದರು.

ಕನ್ನಡ ಸಂಸ್ಕೃತಿ, ಅನುವಾದ, ವಿಜ್ಞಾನದ ಸಾಮಾಜಿಕತೆ, ಕೃಷಿ ವಿಜ್ಞಾನ ವಿಷಯಗಳನ್ನೆತ್ತಿಕೊಂಡು **450** ಕ್ಕೂ ಹೆಚ್ಚು ಲೇಖನಗಳನ್ನು ಪ್ರಕಟಿಸಿದ್ದಾರೆ. ಅಲ್ಲದೆ **15** ಕ್ಕೂ ಹೆಚ್ಚು ವೈಜ್ಞಾನಿಕ ಸಂಶೋಧನಾ ಲೇಖನಗಳನ್ನೂ ಪ್ರಕಟಿಸಿದ್ದಾರೆ. 'ಅಲೆಕ್ಸಾಂಡರ ಗ್ರಾಹಂಬೆಲ್' 'ಅಲ್ಬರ್ಟ್ ಐನ್‌ಸ್ಟೀನ್' ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇಂಡಿಯನ್ ಇನ್ಸ್‌ಟಿಟ್ಯೂಟ ಆಫ್ ಸೈನ್ಸ್‌ನಲ್ಲಿ ವಿಜ್ಞಾನದ ಸಂವಹನಕಾರರಾಗಿ ತಮ್ಮ ಕಾರ್ಯವನ್ನು ಮುನ್ನಡೆಸುತ್ತಿದ್ದಾರೆ.

---

''ಮಣ್ಣನ್ನು ಕೆಲಸಕ್ಕೆ ಬಾರದ ವಸ್ತು''ವೆಂದು ಕೆಲವರು ಅರ್ಥೈಸಿದರೆ ಕೃಷಿ ದಾರ್ಶನಿಕ ಫುಕುವೊಕಾ ಮಣ್ಣನ್ನು ಹೀಗೆ ಅರ್ಥೈಸುತ್ತಾರೆ, ''ಒಂದು ದೇಶದ ಜನ ಮಣ್ಣನ್ನು ರಕ್ಷಿಸದಿದ್ದರೆ, ಬಡತನವನ್ನೂ ಬರಗಾಲವನ್ನೂ ನಿರಂತರವಾಗಿ ಎದುರಿಸಬೇಕಾಗುತ್ತದೆ.'' ಮಣ್ಣಿನ ಮಹತ್ವವನ್ನು ಸ್ಥೂಲವಾಗಿ ಹೇಳಲು ಈ ಮಾತನ್ನು ಹೇಳಬೇಕಾಗಿದೆ.

### ಮಣ್ಣಿನ ಹುಟ್ಟಿನ ಹಿನ್ನೆಲೆ :

ಈಗ ಭೂಮಿಯ ಮೇಲೆ ಕಾಣಬರುವ ಸಮೃದ್ಧವಾದ ಮಣ್ಣು ಈ ಬಗೆಯಲ್ಲಿ ವಿಕಾಸವಾಗಲು ಅನೇಕ ವರ್ಷಗಳೇ ಆಗಿವೆ. ಈ ಹಿಂದೆ, 4,500 ಮಿಲಿಯನ್ ವರ್ಷಗಳ ಹಿಂದೆ ಭೂಮಿ ಉಗಮವಾದಾಗ ಇಂದಿನಂತಹ ಮಣ್ಣಿನ ಪದರವನ್ನು ಹೊಂದಿದ್ದ ಭೂಮಿ ಅದಾಗಿರಲಿಲ್ಲ. ಇಂದು ನಮ್ಮ ಕಣ್ಣನ್ನು ತಂಪಾಗಿಸುತ್ತಿರುವ ಅದ್ಭುತ ಶಕ್ತಿಯ ಹಚ್ಚಡವೂ ಅದಕ್ಕಿರಲಿಲ್ಲ. ಬಿಸಿ ಉಂಡೆ ನಿಧಾನವಾಗಿ ತಂಪಾಗಿ ಕೊನೆಗೊಂದು ದಿನ ಮೊದಲ ಜೀವಿಯ ಉಗಮದೊಂದಿಗೆ, ಮಣ್ಣಿನ ಹುಟ್ಟಿಗೂ ನಾಂದಿ ಹಾಡಿತು.

ಮಣ್ಣನ್ನು ಅಗೆಯುತ್ತಾ ಭೂಮಿಯ ಆಳಕ್ಕೆ ಇಳಿದರೆ ಗಟ್ಟಿ ಮಣ್ಣು, ಗೊರಚಲು, ಕಲ್ಲು, ಬಂಡೆ ಹೀಗೆ ದೊರೆಯುತ್ತಾ ಹೋಗುತ್ತದೆ. ಹೀಗೆ ಇವೆಲ್ಲದರಿಂದಾಗಿಯೇ ಮೇಲ್ಪದರದಲ್ಲಿ ಅದ್ಭುತ ಅಂತಸತ್ವವುಳ್ಳ ಮಣ್ಣುಗಳು, ಜೀವಿಗಳು ಮೇಲ್ಮೈಯ ಹರಹು, ವಾತಾವರಣದ ಹವಾಮಾನದ ಕೆಳಗಣ ತಾಯಿಬಂಡೆಯೊಂದಿಗೆ ವರ್ತಿಸಿ ಕಾಲದ ಕ್ರಿಯೆಯಲ್ಲಿ ವಿಕಾಸಗೊಂಡಿದೆ. ಹಾಗಾಗಿ, ಈ ತಾಯಿಬಂಡೆ ಮೇಲ್ಮೈ, ಹವಾಮಾನ, ಜೀವಿಗಳು ಮತ್ತು ಕಾಲ ಇದನ್ನೇ ಮಣ್ಣಿನ ವಿಕಾಸದ ಮೂಲ ಸಾಮಗ್ರಿಗಳು ಎನ್ನುವರು.

### ಮಣ್ಣಿನ ಗುಣಗಳು :

ಮಣ್ಣಿನ ಗುಣಗಳು ಮುಖ್ಯವಾಗಿ ಸಸ್ಯಸಂಬಂಧವಾಗಿ ನೋಡುವುದಾದರೆ, ಅವನ್ನು ಭೌತಿಕವಾದ, ರಾಸಾಯನಿಕವಾದ ಹಾಗೂ ಜೈವಿಕವಾದ ಗುಣಗಳು ಎಂದು ವಿಂಗಡಿಸಬಹುದು. ಈ ಭೌತಿಕ ಗುಣಗಳು ಸಾಂದ್ರತೆ, ಬಣ್ಣ, ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ, ಮಣ್ಣಿನಲ್ಲಿರುವ ಗಾಳಿ ಮತ್ತು ರಂಧ್ರಮಯವಾದುದನ್ನು ವಿವರಿಸುತ್ತವೆ. ಅಂದರೆ ನಾವು ಮೇಲು ನೋಟಕ್ಕೆ ಅಂದುಕೊಂಡಂತೆ ಮಣ್ಣೇನೂ ಗಟ್ಟಿ ಪದಾರ್ಥವಲ್ಲ. ಅದರಲ್ಲಿ ನೀರು, ಗಾಳಿ ಇರುವಂತೆ ಸುಮಾರು ಅರ್ಧದಷ್ಟು ಭಾಗ ರಂಧ್ರಮಯವಾಗಿದೆ. ಉಳಿದ ಅರ್ಧಭಾಗದಲ್ಲಿ ಗಟ್ಟಿಯಾದ ಖನಿಜ ಪದಾರ್ಥ ಮತ್ತು ಸಾವಯವ ಪದಾರ್ಥಗಳಿವೆ. ಇವೇ ಮೂಲಭೂತವಾಗಿ ಮಣ್ಣಿನ ಗುಣನಿರ್ಧಾರದಲ್ಲಿ ಭಾಗವಹಿಸುತ್ತವೆ. ಇವುಗಳ ಆಧಾರದ ಮೇಲೆಯೇ ನೀರು ಹಿಡಿದಿಟ್ಟುಕೊಳ್ಳುವ ನಂತರ ಬೆಳೆದು ಪೋಷಣೆಗೆ ಒದಗಿಸುವ ಕ್ರಿಯೆಯನ್ನು ಅರಿಯಬಹುದಾಗಿದೆ.

### ಮಣ್ಣಿನ ರಾಸಾಯನಿಕ ಗುಣ :

ರಾಸಾಯನಿಕವಾಗಿ ಮಣ್ಣನ್ನು ಮೊದಲು ಪರೀಕ್ಷಿಸಿ ಅರಿಯುವುದೆಂದರೆ, ಮಣ್ಣಿನ ಪಿ.ಎಚ್. ಅಥವಾ

ರಸಸಾರ. ಈ ರಸಸಾರ ಅಥವಾ ಪಿ. ಎಚ್. ಮಣ್ಣಿನಲ್ಲಿರುವ ಆಮ್ಲೀಯ ಗುಣವನ್ನು ತಿಳಿಸುತ್ತದೆ. ಇದನ್ನು ತಿಳಿದುಕೊಳ್ಳುವುದು ಏಕೆ ಮುಖ್ಯವೆಂದರೆ, ಜಗತ್ತಿನ ಎಲ್ಲಾ ಚಟುವಟಿಕೆಯ ಕ್ರಿಯೆಗಳು ರಾಸಾಯನಿಕವಾಗಿ ಆಮ್ಲ ಮತ್ತು ಪ್ರತ್ಯಾಮ್ಲಗಳ ಸಂಯೋಜನಾ ಕ್ರಿಯೆಯಿಂದಲೇ ನಡೆಯುವುದು ಅಥವಾ ಇದನ್ನೇ ಅಣುಗಳ ಅಥವಾ ಪರಮಾಣುಗಳ ಮಟ್ಟದಲ್ಲಿ ಇಲೆಕ್ಟ್ರಾನ್ ವರ್ಗಾವಣೆಯಲ್ಲಿ ವಿವರಿಸುವರು. ಆದರೆ ಎಲ್ಲ ಕ್ರಿಯೆಗಳೂ ಒಂದು ರೀತಿಯಲ್ಲಿ ಆಮ್ಲ ಪ್ರತ್ಯಾಮ್ಲಗಳ ನಡುವಣ ವ್ಯವಸ್ಥಿತವಾದ ಸಂಪರ್ಕ ಕಾರ್ಯವೇ ಆಗಿವೆ.

ನಮ್ಮ ಮಣ್ಣಿನ ಚಟುವಟಿಕೆಗಳೂ ಸಹ ಇದೇ ಬಗೆಯವು. ಈ ರಸಸಾರ ಅಥವಾ ಪಿ. ಎಚ್. ಒಂದು ಗೊತ್ತಾದ ಸಂಖ್ಯೆಯಾಗಿರುತ್ತದೆ. ಆದರೆ 1 ರಿಂದ 14ರ ಒಳಗಿನ ಸಂಖ್ಯೆಯಾಗಿರುತ್ತದೆ. ಅದು 2.3 ಆಗಿರಬಹುದು. 6.8 ಆಗಿರಬಹುದು. 7.2 ಆಗಿರಬಹುದು ಅಥವಾ 8.4 ಆಗಿರಬಹುದು. ಹೀಗಾಗಿ, 1 ರಿಂದ 7ರ ವರೆಗೆ ಇರುವ ಮಣ್ಣಿನ ರಸಸಾರ ಅಥವಾ ಪಿ.ಎಚ್. ಆಮ್ಲೀಯ ಮಣ್ಣು, 7 ತಟಸ್ಥ, 7 ರಿಂದ 14ರ ವರೆಗೆ ಇರುವ ಮಣ್ಣಿನ ರಸಸಾರ ಅಥವಾ ಪಿ.ಎಚ್. ಪ್ರತ್ಯಾಮ್ಲ ಮಣ್ಣು ಎಂದು ನಿರೂಪಿಸಬಹುದು.

ಬಹುಪಾಲು ಕೃಷಿ ಬೆಳೆಗಳಿಗೆ 6 ರಿಂದ 7ರ ಒಳಗಿನ ರಸಸಾರ ಅಥವಾ ಪಿ.ಎಚ್. ಎಂದೇ ಹೇಳಬೇಕು. ಬಹುಪಾಲು ಬೆಳೆಗಳು ಈ ಬಗೆಯ ಮಣ್ಣಿನಲ್ಲಿ ಬಹಳ ಚೆನ್ನಾಗಿ ಬೆಳೆಯುತ್ತವೆ. ಮಣ್ಣಿನ ಬಹು ಮುಖ್ಯವಾದ ಜೈವಿಕ ಚಟುವಟಿಕೆಯನ್ನು ನಿರ್ಧರಿಸುವುದೂ ಈ ಗುಣವೇ. ಏಕೆಂದರೆ ಈ ತಟಸ್ಥವಾದ ವಾತಾವರಣವೇ ಅನೇಕ ಜೀವಿಗಳಿಗೆ ಉಪಯುಕ್ತವಾಗಿದೆ.

**ಮಣ್ಣಿನ ಜೈವಿಕ ಗುಣ :**

ಮಣ್ಣು ಮತ್ತು ಜೀವಿಯ ಸಂಬಂಧ ಎಷ್ಟೊಂದು ಗಾಢವಾಗಿ ಇದೆಯೆಂದರೆ ಇವೆರಡನ್ನೂ ಬೇರ್ಪಡಿಸಿ ನೋಡುವುದೇ ಕಷ್ಟವಾಗುತ್ತದೆ. ಏಕೆಂದರೆ ಇವೆರಡೂ ಅಷ್ಟು ಒಂದನ್ನೊಂದು ಅವಲಂಬಿಸಿಬಿಟ್ಟಿವೆ. ಮಣ್ಣಿನಲ್ಲಿ ಅನೇಕ ಬಗೆಯ ಜೀವಿಗಳಿವೆ. ಇಲಿ, ಹೆಗ್ಗಣದಿಂದ ಆರಂಭಗೊಂಡು ಅತೀ ಸಣ್ಣದಾದ ಹಾಗೂ ಕಣ್ಣಿಗೆ ಕಾಣದ ಸೂಕ್ಷ್ಮ ಜೀವಿಗಳು ಮಣ್ಣಿನಲ್ಲಡಗಿವೆ. ಬ್ಯಾಕ್ಟೀರಿಯಾ, ಆಲ್ಗೆ (ಹಾಸವೆ, ಪಾಚಿ) ಫಂಗೈ (ಬೂಷ್ಟು) ಮುಂತಾದವು ಮಿಲಿಯಗಟ್ಟಲೆ ಪ್ರತಿ ಗ್ರಾಮಿನಲ್ಲಿ ಕಂಡುಬರುತ್ತವೆ. ಇವುಗಳ ಅಗಾಧತೆಯನ್ನೂ ಸಹ ಮಣ್ಣಿನ ರಸಸಾರ ಅಥವಾ ಪಿ.ಎಚ್. ನಿಂದ ಅರಿಯ ಬಹುದಾಗಿದೆ. ಹೀಗೆ ಮುಖ್ಯ ಗುಣಲಕ್ಷಣಗಳೆಲ್ಲವೂ ಮಣ್ಣನ್ನು ಜೀವಂತವಾಗಿಡುವಲ್ಲಿ ಸಹಾಯವಾಗುವಂತೆ ಒಂದು ಪ್ರಮುಖ ಆವಾಸ ಸ್ಥಾನವನ್ನಾಗಿಸಿವೆ. ಹೆಚ್ಚೂ ಕಡಿಮೆ ಎಲ್ಲಾ ಜೀವಿಗಳೂ ಒಂದಲ್ಲೊಂದು ಅರ್ಥದಲ್ಲಿ ಮಣ್ಣಿನ ಸಂಬಂಧವಿಟ್ಟುಕೊಂಡೇ ಬಾಳುತ್ತವೆ.

ಭೌತಿಕ-ರಸಾಯನಿಕ ಗುಣಗಳು, ಮಣ್ಣಿನ ಜೈವಿಕ ಗುಣದ ಮೇಲೆ ನೇರ ಪ್ರಭಾವ ಬೀರುತ್ತವೆ. ಮಣ್ಣಿಗೂ ಜೀವವಿದೆ ಎಂದು ನೇರವಾಗಿ ಹೇಳಿದರೆ ಹುಬ್ಬೇರಿಸುವಂತಾಗುತ್ತದೆಯೇ? ಹಾಗೇನಿಲ್ಲ; ಬಿದ್ದ ಬೀಜ ಗರ್ಭ ಒಡೆದು ಮೊಳೆತು ಕುಡಿ ಹಾಯ್ದು, ಗಿಡವಾಗಿ ಮರವಾಗಿ ಹೂ ಬಿಟ್ಟು ಗರ್ಭಕಟ್ಟಿ, ಹಣ್ಣಾಗಿ, ಬೀಜ ಒಡೆಯುವಂತಾಗುವಂತೆ ಹಿಡಿದಿಡುವ ಗುಣದ ಮಣ್ಣನ್ನು ಜೀವವಿದೆ ಎನ್ನದೇ ಬೇರೆ ಮಾತಿಲ್ಲ. ತಾಯಿಯ ಹೊಟ್ಟೆಯಂತೆಯೇ, ಜೀವವನ್ನು ಸೃಷ್ಟಿಸಿ, ಬೆಳೆಸಿ, ಸಾಕುವ ಜವಾಬ್ದಾರಿ ಹೊತ್ತಿರುವ ಈ ಅದ್ಭುತ ಕ್ರಿಯಾಶಕ್ತಿಗೆ ಜೀವಂತವೆನ್ನುವ ಸಾಧ್ಯತೆಯಿದೆ.

ಈ ಅಗಾಧತೆಯನ್ನು ಕಾಪಾಡುವ ಕೆಲವು ಮೂಲಭೂತ ಗುಟ್ಟುಗಳೇನು? ಅವುಗಳಲ್ಲಿ ಪ್ರಮುಖವಾದುವುದೆಂದರೆ, ತಾಯ ಗರ್ಭದಂತೆಯೇ ಒಂದು ಸುರಕ್ಷಿತ ವಾತಾವರಣ ಕೊಡುವುದು. ಇವು ಮಣ್ಣು ಗಾಳಿ, ನೀರು, ಶಾಖ, ಖನಿಜಗಳ ಮತ್ತು ಸಾವಯವ ವಸ್ತುವಿನ ಹಿಡಿತದಿಂದಾಗುವ ರಚನೆಯಿಂದ ದೊರಕಲ್ಪಡುವುದೇ ಆಗಿದೆ. ಜೀವದ ಎಲ್ಲ ಆಸೆ ಆಕಾಂಕ್ಷೆಗಳನ್ನು ಪೂರೈಸುವುದು ಇದೇ. ಇದನ್ನೇ ಮಾದರಿ ರೈತ ಪದ್ಧತಿಯಲ್ಲಿ ನೀರಾವರಿ, ರಸಗೊಬ್ಬರ, ಔಷಧೋಪಚಾರ ಮುಂತಾದ ಪದಗಳಲ್ಲಿ ವಿವರಿಸಲಾಗುವುದು.

ಹೀಗೆ ಬೆಳೆದ ವಿಚಾರಗಳಲ್ಲಿ ಕೃಷಿಯ ದೃಷ್ಟಿಯಿಂದ ಮುಖ್ಯವಾದುದೆಂದರೆ, ಬೆಳೆಗಳ ಅವಶ್ಯಕತೆಗಳ ಆವಿಷ್ಕಾರ, ಇವನ್ನು ಕುತೂಹಲಿಯಾದ ಮನುಷ್ಯ ಬಿಡಿಸಿ ಬಿಡಿಸಿ ಮೂಲ ವಿಚಾರ ಗಳನ್ನೆಲ್ಲಾ ಹೆಕ್ಕಿ-ಹೆಕ್ಕಿ ಸುಮಾರು 16-20 ಮೂಲವಸ್ತುಗಳು ಜೀವಿಗಳಿಗೆ ಬೇಕು ಎಂಬ ನಿರ್ಧಾರಕ್ಕೆ ಬಂದಿದ್ದಾನೆ. ಇದೇ ಆಧುನಿಕ ಕೃಷಿ ವಿಜ್ಞಾನದ ತಳಹದಿ. ಇದೇ ಮುಂದೆ ವಾಣಿಜ್ಯ ಕ್ರಮವಾಗಿ ನೋಡುವಂತಾಗಿ ಬೆಳೆಯ ಪೈಪೋಟಿಗೆ ತರಹೇವಾರಿ ತಳಿಗಳು ಹುಟ್ಟಿ ಅದನ್ನು ಸಾಕುವ ಶ್ರಮಕ್ಕೆ ಸಹಾಯವಾಗುವಂತಾಗಿದೆ.

ಮಣ್ಣಿಗೆ ಹೀಗೆ ಅನೇಕ ವಿಧವಾದ ವಿಚಾರದಿಂದ ಅದರ ಜವಾಬ್ದಾರಿ ಹೆಚ್ಚಾಗಿ, ಅದನ್ನು ಸಂರಕ್ಷಿಸುವ ಭಾರ ಅದನ್ನು ನಿರ್ವಹಿಸುವ ರೈತನ ಮೇಲಿದೆ. ಈ ನಿರ್ವಹಣಾ ಕ್ರಮಗಳು ವಿವಿಧ ಆಯಾಮಗಳನ್ನು ಹೊಂದಿದ್ದು ಕಾಲ, ಸ್ಥಳ, ಮತ್ತು ಇತರೇ ವಾತಾವರಣದ ಲಕ್ಷಣಗಳಿಂದ ಪ್ರೇರೇಪಿತವಾಗುತ್ತದೆ. ಈ ವಿವಿಧ ಆಯಾಮಗಳು ಪ್ರಮುಖವಾಗಿ ಈ ಕೆಳಕಂಡಂತಿವೆ.

- ಮಣ್ಣಿನ ಭೌತಿಕ ಶಕ್ತಿಗುಣದ ನಿರ್ವಹಣೆ
- ಸ್ಥಿರತೆ, ರಚನೆ, ನೀರನ್ನು ಹಿಡಿದಿಟ್ಟುಕೊಳ್ಳುವುದು – ಇತ್ಯಾದಿ.
- ಮಣ್ಣಿನ ಒಟ್ಟಾರೆ ಸತ್ವವನ್ನು ಕಾಪಾಡಿಕೊಳ್ಳುವುದು – ಸಸ್ಯಗಳನ್ನು ಪೋಷಿಸುವ, ಬೆಳೆಸುವ ಶಕ್ತಿ.
- ಮಣ್ಣಿನ ಆರೋಗ್ಯದ, ದೀರ್ಘಾಯುಷ್ಯದ ಲಕ್ಷಣಗಳ ನಿರ್ವಹಣೆ.

**ಸಮಗ್ರ ಮಣ್ಣಿನ ಅಧಃಶಕ್ತಿ :**

ಈ ಮಣ್ಣಿನ ಜೈವಿಕ ವ್ಯವಸ್ಥೆಯ ವಿಚಾರಗಳು ಮಣ್ಣಿನ ಚಿತ್ರವನ್ನು ಸ್ಥೂಲವಾಗಿ ಕೊಡುವವು. ಬಗೆಬಗೆಯಾಗಿ ಮಣ್ಣನ್ನು ಜೀವಂತವಾಗಿಡುವಂತಹ ಸಾಧ್ಯತೆಯನ್ನು ತುಂಬ ಅರ್ಥಗರ್ಭಿತವಾಗಿ ಅರಿಯಬಹುದು.

ಮಣ್ಣಿನ ಚರಿತ್ರೆ ಆದಿ ಅಂತ್ಯಗಳಿಲ್ಲದ ಪುರಾಣ. ಪುರಾಣವೆಂದರೆ, ಮಿಥ್ ಎಂದು ಅರ್ಥವಿದೆ. ಆದರೆ ಮಣ್ಣಿನ ಪುರಾಣ ಆ ರೀತಿಯದ್ದಲ್ಲ. ಮಣ್ಣಿನ ಹುಟ್ಟು ಬೆಳವಣಿಗೆಯ ಸಿದ್ಧಾಂತವನ್ನು ರೂಪಿಸಿದ ವಿಜ್ಞಾನಿಯೋರ್ವನ ಮಾತಿನಂತೆ ಮಣ್ಣು ಒಂದು ನಿರಂತರವಾದ ಚಲನಾ ವ್ಯವಸ್ಥೆ.


---

**ಶಬ್ದಾರ್ಥ :**

**ವಾತಾವರಣ** – ಪರಿಸರ, **ಸಾವಯವ** – ನೈಸರ್ಗಿಕ, **ಮಾದರಿ** – ಆದರ್ಶ, **ಆವಿಷ್ಕಾರ** – ಶೋಧ, **ವಾಣಿಜ್ಯ** – ವ್ಯಾಪಾರ, **ಪೈಪೋಟಿ** – ಸ್ಪರ್ಧೆ, **ತರಹೇವಾರಿ** – ಬೇರೆಬೇರೆ ಪ್ರಕಾರದ.

ಕೆಳಗಿನ ಚಟುವಟಿಕೆಗಳನ್ನು ನಿಯಮಗಳಿಗನುಸಾರವಾಗಿ ಪೂರ್ಣಮಾಡಿರಿ:

**ಕೃತಿ 1) ಜೀವದ ಎಲ್ಲ ಆಸೆ – ಆಕಾಂಕ್ಷೆಗಳನ್ನು ಪೂರೈಸುವ ಅಂಶಗಳಾವವೆಂಬುದನ್ನು ಕೆಳಗಿನ ಜಾಲಾಕೃತಿಯಲ್ಲಿ ಪೂರ್ಣಗೊಳಿಸಿರಿ.**




**ಕೃತಿ 2) ಕೆಳಗಿನ ಸಮಾಸ ಪದಗಳನ್ನು ಬಿಡಿಸಿ ಕೃತಿ ರಚಿಸಿರಿ.**

| ಸಮಾಸದ ಪದಗಳು | ವಿಗ್ರಹ ರೂಪ | ಸಮಾಸದ ಹೆಸರು |
|---|---|---|
| ಗಾಳಿ ಮಳೆ | | |
| ಅನ್ನದಾತ | | |

**ಕೃತಿ 3) ಕೆಳಗಿನವುಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

i) ಅರಿ

ii) ಸಾಮರ್ಥ್ಯ

iii) ಬದುಕು

iv) ತಾಯಿ


**ಕೃತಿ 4) ಕೆಳಗಿನ ವಾಕ್ಯಗಳ ಪ್ರಕಾರಗಳನ್ನು ಗುರುತಿಸಿ ಬರೆಯಿರಿ.**

i) ನಾನು ಪುಸ್ತಕವನ್ನು ಓದುತ್ತೇನೆ


ii) ಇಂದು ಶಿಕ್ಷಕರು ತಡವಾಗಿ ಬರುತ್ತಾರೆ; ಆದ್ದರಿಂದ ನೀವೆಲ್ಲರೂ ಗಲಾಟೆ ಮಾಡದೆ ಓದಿರಿ.

iii) 'ನನ್ನ ಮನೆ ಬೆಳಗಾವಿಯಲ್ಲಿದೆ' ಎಂದು ಗಿರೀಶ ತಿಳಿಸಿದ.


**ಕೃತಿ 5) ಮಣ್ಣಿನ ವಿಕಾಸದ ಮೂಲ ಸಾಮಗ್ರಿಗಳನ್ನು ಕೆಳಗಿನ ಜಾಲಾಕೃತಿಯಲ್ಲಿ ಬರೆಯಿರಿ.**




**ಕೃತಿ 6) ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**



ಕೃತಿ 7) ಮಣ್ಣಿನ ಗುಣಗಳನ್ನು ಕೆಳಗಿನ ಜಾಲಾಕೃತಿಯಲ್ಲಿ ಬರೆಯಿರಿ.




ಕೃತಿ 8) ಮಣ್ಣಿನಲ್ಲಿರುವ ಸಾರತತ್ವಗಳನ್ನು ಕುರಿತು 10-12 ವಾಕ್ಯಗಳಲ್ಲಿ ನಿಮ್ಮ ಸ್ವಂತ ಅಭಿಪ್ರಾಯ ಬರೆಯಿರಿ.

ಕೃತಿ 9) ''ಮಣ್ಣಿನಿಂದಲೆ ಅನ್ನ, ಮಣ್ಣಿನಿಂದಲೆ ಚಿನ್ನ'' ಎಂಬುದನ್ನು 10-12 ವಾಕ್ಯಗಳಲ್ಲಿ ಮಂಡಿಸಿರಿ.

ಕೃತಿ 10) ಮಣ್ಣಿನಿಂದ ಮಾಡುವ ವಿವಿಧ ವಸ್ತುಗಳು ಯಾವವು ?

* * * * *

# 7. ಒಂದು ಚೀಟಿ

(ಒಂದು ಚಾಳ್. ನಾಲ್ಕಾರು ಮನೆಗಳ ಬಾಗಿಲುಗಳು ಪ್ರೇಕ್ಷಕರಿಗೆ ಕಾಣುವಂತೆ ಇವೆ. ಕಮಲಮ್ಮ, ಗಂಗಮ್ಮ, ಸಂಗಮ್ಮ, ಕಾವೇರಿ ತಮ್ಮ ತಮ್ಮ ಮನೆಗೆಲಸಗಳಲ್ಲಿ ನಿರತರಾಗಿದ್ದಾರೆ. ಒಬ್ಬ ಸುಶಿಕ್ಷಿತ ಯುವತಿ ತನ್ನ ಮನೆಗೆ ಬೀಗಹಾಕಿ ಚೆಲ್ಲುಚೆಲ್ಲಾಗಿ ಛತ್ರಿ ಬಿಚ್ಚಿ ಹೊರಗೆ ಹೊರಟಿದ್ದಾಳೆ. ಅವಳ ಹೆಸರು ಹೇಮಾ. ನಾಲ್ಕೂ ಜನ ಕೆಲಸ ಮುಗಿಸಿ ಕಟ್ಟೆಗೆ ಕುಳಿತು ಹರಟೆ ಹೊಡೆಯುತ್ತಾರೆ)

---

**ಗಂಗಮ್ಮ:** ಯಂಥಾ ಕಾಲ ಬಂತ್ರಿ. ಕಮಲಮ್ಮ, ಅವಳ ದಿಮಾಕೇನು, ಹೈಹಿಲ್ ಚಪ್ಲಿ ಏನು ಅಡ್ಡ ಬೈತಲಾ ಏನು, ಹಣಿ ಮ್ಯಾಲ ಟಿಕಳಿ ಇಲ್ಲ ! ಛೆ ! ಕಾಲ ಕೆಟ್ ಹೊಯ್ತು ನೋಡ್ರಿ...

**ಕಮಲಮ್ಮ:** ಅಲ್ರಿ ನಮಗಂತೂ ಕಸ ಅಂತ ತಿಳದಾಳ! ನೋಡ್ರಿ! ಈಗ ಆರಾಮಾಗಿ ಹೋಟಲಕ ಹೋಗ್ತಾಳ, ಪಿಜ್ಜಾಬರ್ಗರ್ ತಿಂತಾಳ, ಮಹಾರಾಣಿ ಹಂಗ ಮಾಲ್‌ನಾಗ ತಿರಿಗಿ ಬರ್‍ತಾಳ....!

**ಕಾವೇರಿ:** ಹೌದು ನೋಡ್ರಿ! ಅವಳ ವಿಷಯ ತೆಗದರ ನನಗ ತೆಲಿ ಬಿಸಿ ಆಗ್ತದ ನೋಡ್ರಿ....

**ಸಂಗಮ್ಮ:** ಅದಕ್ಕ ನಿಮ್ಮ ಹೆಸರು ಕಾವೇರಿ ಅಂತ ಇರಬೇಕು. ಅಲ್ಲೇನ್ರಿ.....!

**ಕಾವೇರಿ:** ನೋಡ್ರಿ ಸಂಗಮ್ಮ ನೀವು ನನ್ನ ಹೆಸರಿಗೆ ಬರಬ್ಯಾಡ್ರಿ, ಇಲ್ಲಾಂದ್ರ ನೀವು ಹತ್ತನೆ ಮೂರು ಸಲ ಫೇಲಾದ ವಿಷಯ ಎಲ್ಲಾರಿಗಿ ತಿಳಿಸ್ತಿನಿ ನೊಡ್ರಿ....

**ಸಂಗಮ್ಮ:** ಐ! ಅದೆಲ್ಲ ಬಿಡ್ರಿ. ಆ ವಿಷಯ ಈಗ್ಯಾಕ? ಸುಮ್ನ ಬಾಯಿ ಮುಚ್ಚಿ.....

**ಕಮಲಮ್ಮ:** ಅಲ್ಲ, ನೀವಿಬ್ರು ಇದೇನು ಸುರು ಮಾಡಿರಿ? ಇಲ್ಲಿ ನಾವೆಲ್ಲ ಸೇರಿದ್ದು ನಮ್ ನಮ್ ತಿಪ್ಪಿ ಕೆದರಾಕ ಅಲ್ಲ, ಆ ಧಿಮಾಕಿನ ಹುಡಗಿ ಸೊಕ್ಕ ಮುರಿಯಾಕ, ತಿಳಿತೇನು?

**ಕಾವೇರಿ :** ನಾನೂ ಅದೇ ಅಂತೀನಿ. ಅವಳ ಬಗ್ಗೆ ಚರ್ಚಾ ಮಾಡ್ರಿ ಅಂದ್ರ ನನಗ ತಿವಿಯಾಕ್ ಬರ್‍ತಾರ!

**ಸಂಗಮ್ಮ:** ಆಯ್ತು ಬಿಡ್ರಿ. ಇಲ್ಲಿ ನಾವೆಲ್ಲ ಒಂದಾಗಿ ಅವಳಿಗೆ ಪಾಠ ಕಲಿಸೋಣ ಅಂತೀನಿ ನಾನು .....

**ಕಮಲಮ್ಮ:** ಅಲ್ರಿ ಅವಳು ಕೆಲಸಾ ಏನ್ ಮಾಡ್ತಾಳ?

**ಗಂಗಮ್ಮ:** ಅದೇನೋ ಕಾಲ್ ಸೆಂಟರದಾಗ ಕೆಲಸಾ ಮಾಡ್ತಾಳಂತ... ಕಾಲೋ ಕೈನೋ ನನಗಂತೂ ಏನೋ ಗಡಬಡ ಅನಸ್ತದ....

**ಕಾವೇರಿ:** ಆ ಸೆಂಟರದಾಗ ಪ್ರಶ್ನೆ ಕೇಳ್ತಾರಂತ, ಅದಕ್ಕೆಲ್ಲ ಇವಳು ಉತ್ತರ ಕೊಡ್ತಾಳಂತ.

**ಗಂಗಮ್ಮ:** ಭಾರೀ ಶಾಣೆ ಉತ್ತರ ಕೊಡಾಕಿ!

**ಕಾವೇರಿ:** ಅಷ್ಟ ಅಲ್ರಿ! ಇಂಗ್ಲಂಡ್, ಅಮೇರಿಕಾ, ಜಪಾನ, ಚೈನಾದಿಂದನೂ ಪ್ರಶ್ನೆ ಕೇಳತಾರಂತ, ಅದಕ್ಕೆಲ್ಲಾ ಈಕಿ ಉತ್ತರ ಕೊಡತಾಳಂತ, ಕಲ್ತಾಳಂತ ಧಿಮಾಕ ಮಾಡ್ತಾಳ... ನಾಕ ಅಕ್ಷರ ಇಂಗ್ಲಿಷ್........

**ಸಂಗಮ್ಮ:** ನಾನೂ ನಾಲ್ಕ ಅಕ್ಷರ ಕಲ್ತಿದ್ರ ಈ ದರಿದ್ರ ಚಾಳ್‌ದಾಗ ಇರ್‍ತಿದ್ದಿಲ್ಲ....

**ಕಾವೇರಿ:** ಅಂದ್ರ ನಾವೆಲ್ಲ ಇಲ್ಲಿ ಇರಾವ್ರು ದರಿದ್ರ ಅಂತೀರೇನು?

**ಸಂಗಮ್ಮ:** ಹಂಗಲ್ಲ ಕಾವ್ರೂ, ನಾವೂ ಎಲ್ಲರೂ ಚೆನ್ನಾಗಿ ಸಾಲಿ ಕಲ್ತಿದ್ರ ಅವಳಂಗ ಹೈಹಿಲ್ ಚಪ್ಲಿ ಹಾಕ್ಕೊಂಡ್ ತಿರಗತಿದ್ವಿ ಅಂತ ಮನಸಿನಾಗ ವಿಚಾರ ಬಂತು ಅಷ್ಟ.....

**ಗಂಗಮ್ಮ:** ಮಿಂಚಿ ಹೋದ ಮಾತಿಗೆ ಚಿಂತಿಸಿ ಫಲವಿಲ್ಲ! ತಿಳಿತೇನು? ಈಗ ಅವಳ ಸೊಕ್ಕ ಹ್ಯಾಂಗ ಮುರಿಬೇಕು ಅದರ ವಿಚಾರ ಮಾಡ್ರಿ ಅಷ್ಟ !

**ಕಾವೇರಿ:** ಆಕಿ ಮತ್ತ ಏನೇನ್ ಕೆಲಸಾ ಹುಡುಕಿ ತೆಗಿರಿ, ಆಮ್ಯಾಲ ಅವಳ ವೀಕನೆಸ್ ಹಿಡಿದು ಅವಳ ಸೊಕ್ಕು ಮುರಿಭೌದು..... ಹ್ಯಾಗಿದೆ ಐಡಿಯಾ?

**ಸಂಗಮ್ಮ:** ಭಾರಿ ಐಡಿಯಾ! ತೆಲಿ ಅಂದ್ರ ನಿಮ್ಮ ತೆಲಿ ನೋಡ್ರಿ.

**ಗಂಗಮ್ಮ:** ಹೀಂಗ ನೀವು ಸುಮ್ಮ ಕಡ್ಲಿಗಿಡ ಹತ್ತಸಬ್ಯಾಡ್ರಿ, ಅವಳ ವೀಕನೆಸ್ ಹುಡುಕ್ರಿ.

**ಕಮಲಮ್ಮ:** ಸುಮ್ನ ಟೈಂ ಹಾಳ್ ಮಾಡ ಬ್ಯಾಡ್ರಿ. ವೀಕನೆಸ್ ಹುಡುಕ್ರಿ.....

**ಕಾವೇರಿ:** ಅಲ್ರಿ ಅವ್ಳು ಯಾವುದರಾಗೂ ವೀಕ್ ಇಲ್ಲ! ಕೈಕಾಲ, ಕಣ್ಣು, ಮೂಗೂ, ಕಿವಿ, ತೆಲಿ.... ಎಲ್ಲ ಗಟ್ಟಿಮುಟ್ಟಿ ಇದ್ದಾಳ.

**ಗಂಗಮ್ಮ:** ಟಣ್ ಟಣ್ ಅಂತ ಜಿಂಕಿ ಹಾಂಗ ಹಾರತಾಳ, ಅವಳೀಗಿ ಯಾವುದೂ ವೀಕನೆಸ್ ಇಲ್ಲ.

**ಸಂಗಮ್ಮ:** ಅದು ಅಲ್ರಿ! ಅವಳು ಯಾವುದಾದರೂ ವಿಷಯಕ್ಕ ಹೆದರತಾಳೇನು? ಅಂಥ ವಿಷಯ ಹುಡುಕ್ರಿ ಅಂತ......

**ಕಾವೇರಿ:** ಅಲ್ರಿ ಸಂಗಮ್ಮ, ಅವಳು ಯಾವುದಕ್ಕೂ ಹೆದರೋ ಆಸಾಮಿ ಅಲ್ಲ..... ಯಾವುದೂ ವೀಕನೆಸ್ ಇಲ್ಲ....

**ಸಂಗಮ್ಮ:** ಅವ್ವನದು ?

**ಗಂಗಮ್ಮ:** ಅಪ್ಪನದು ?

**ಕಮಲಮ್ಮ:** ಅಕ್ಕ ತಂಗೇರದು?

**ಕಾವೇರಿ:** ಊಹುಂ! ಇವರೆಲ್ಲ ಆಕಿಗಿ ಭಾಳ ಪ್ರೀತಿಲಿಂದ ಬೆಳೆಸಿ ಕಲಿಸಿ ಇಲ್ಲಿ ನೌಕರಿ ಮಾಡಾಕ ಕಳಸ್ಯಾರ ತಿಳಿತೇನು?

**ಗಂಗಮ್ಮ:** ಹೋಗ್ಲಿ.... ಯಾರಾದರೂ ಪ್ರೇಮಿ ಇದ್ದಾನೇನು? ಅದೂ ಒಂದು ವೀಕನೆಸ್ಸೇ ! ಹುಡುಕಿ ತೆಗೀರಿ ಅದನ್ನ....

**ಸಂಗಮ್ಮ:** ಇದು ಭಾರೀ ಐಡಿಯಾ ಐತಿ. ಇದರಾಗ ದಮ್ಮೂ ಐತಿ. ಈ ವೀಕನೆಸ್ ಸಿಕ್ರ ನಾವು ಗೆದ್ದಂಗ. ಅವಳ ಸೊಕ್ಕು ಮುರದಂಗ. ಇದು ಖಾತ್ರಿ ಅಂತ ತಿಳೀರಿ.

**ಕಾವೇರಿ:** ಇದು ಖಾತ್ರಿ ಆಗಬೇಕಾದರ ನಾವು ಸಿಐಡಿ ಕೆಲಸ ಮಾಡಬೇಕ ಆಗ್ತದ....

**ಸಂಗಮ್ಮ:** ಸಿಐಡಿ? ಅದೇನು ಸಿಡಿ? ನನಗ ಸಿಡಿ ಗಿಡಿ ಹತ್ತಾಕ ಬರಾಂಗಿಲ್ಲ, ಮೊನ್ನೆ ಕಸಾ ಹೊಡ್ಯಾಮುಂದ ನನ್ನ ಕಾಲು ಉಳಕ್ಯಾದ.... ಈಗs ಹೇಳ್ತಿನಿ... ಹಾಂ...

**ಕಾವೇರಿ:** ಸಂಗಮ್ಮ, ನೀವು ಎಂಥಾ ವೀಕ್ ಇದ್ದೀರಿ! ನಾನು ಸಿಐಡಿ ಅಂದ್ರ ನೀವು ಸಿಡಿ ಅಂತಿರಿ!

**ಸಂಗಮ್ಮ:** ಅದೇ ಅಂದ್ರೆನು ತಿಳಿಸಿ ಹೇಳಬಾರ್ದs....?

**ಕಾವೇರಿ:** ಸಿಐಡಿ ಅಂದ್ರ ನನಗೂ ಪೂರ್ಣ ಗೊತ್ತಿಲ್ಲ - ಆದ್ರ ಗುಪ್ತವಾಗಿ, ಯಾರಿಗೂ ತಿಳೀಲಾರದ ಹಂಗ ಮಾಹಿತಿ ಸಂಗ್ರಹ ಮಾಡೂದು ಅಂತಾರ....

**ಸಂಗಮ್ಮ:** .... ಗುಪ್ತವಾಗಿ ಅಂದ್ರ ಬ್ಯಾರೆ. ಯಾರಿಗೂ ತಿಳೀಲಾರದ ಹಂಗ ಅಂದ್ರ ಬ್ಯಾರೇ ಏನ್ರಿ?

**ಕಾವೇರಿ:** ನೋಡ್ರಿ ಸಂಗಮ್ಮ ನೀವು ನನಗ ಪೇಚಿನಾಗ ಸಿಗೋಹಂಗ ಮಾತಾಡಬ್ಯಾಡ್ರಿ.... ನಿಮ್ಮಲ್ಲಿ ಶಾಣೆತನ ಇದ್ರ ಅವಳ ವೀಕನೆಸ್ ಹುಡುಕ್ರಿ ಅಷ್ಟs..........

**ಸಂಗಮ್ಮ:** ಆಯ್ತು ಬಿಡ್ರಿ... ಅಲ್ರಿ ಕಮಲಮ್ಮ ನೀವು ಹೇಳಿದ್ರಿ ಆಕಿ ಮಾಲ್‌ನಾಗ ತಿರಿಗಿ ಬರ್ತಾಳ ಅಂತ. ಹೌದಲ್ಲೋ? ಅಲ್ಲೇ ಅವಳ ವೀಕನೆಸ್ ಇರಭೌದು ನಡಿರಿ ಹುಡುಕೋಣ...

**ಗಂಗಮ್ಮ:** ಹೌದು, ನಡೀರಿ ನಡೀರಿ ನಾವೂ ಯಾರೂ ಮಾಲ್ ನೋಡಿಲ್ಲ...

**ಕಮಲಮ್ಮ:** ನೋಡಿದಂಗೂ ಆಯ್ತು, ಅವಳ ವೀಕನೆಸ್ ಹಿಡಿದಂಗೂ ಆಯ್ತು ನಡೀರಿ....

**ಸಂಗಮ್ಮ:** ನನಗೂ ಹತ್ತಿಬತ್ತಿ ಬೇಕಾಗಿತ್ತು.... ಅಲ್ಲೇ ಕೊಂಡರಾಯ್ತು ನಡೀರಿ...

**ಕಾವೇರಿ:** **(ಸ್ವಗತ)** ಮಾಲ್‍ನಲ್ಲಿ ಹತ್ತಿಬತ್ತಿ....!

**ಸಂಗಮ್ಮ:** ಏನಂದ್ರಿ?

**ಕಾವೇರಿ:** ಏನಿಲ್ಲ ನಡೀರಿ ನಡೀರಿ.

(ಮರುದಿನ ಹೇಮಾ ಮಾಲ್‍ಗೆ ಹೊರಟಿದ್ದಾಳೆ - ಅವಳ ಹಿಂದೆ ಅವಳಿಗೆ ತಿಳಿಯದಂತೆ ಮರೆಯಾಗಿ ಸಂಗಮ್ಮ, ಗಂಗಮ್ಮ, ಕಮಲಮ್ಮ, ಕಾವೇರಿ ಹೋಗುತ್ತಾರೆ. ವಿಂಗ್‍ನ ಮರೆಯಲ್ಲಿ ಅಥವಾ ರಂಗದ ಮೇಲೆ ಕಾಲ್ಪನಿಕ ಮಾಲ್‍ನಲ್ಲಿ ವಸ್ತುಗಳನ್ನು ಖರೀದಿಸಿದಂತೆ ನಟಿಸಬೇಕು.)

**ಗಂಗಮ್ಮ:** ಅವಳಿಗೆ ಒಂಚೂರೂ ಗೊತ್ತಾಗದಂಗ ಹೋಗ್ಬೇಕು ತಿಳೀತೇನು....?

**ಸಂಗಮ್ಮ:** ಸಾವಕಾಶ ಮಾತಾಡ್ರಿ ಅವಳಿಗೆ ಕೇಳಿಸಬಾರ್ದು ತಿಳಿತೇನು?

**ಕಮಲಮ್ಮ:** ಧ್ವನಿ ಕಮ್ಮಿ ಮಾಡಿ ಮಾತಾಡ್ರಿ ಅವಳಿಗೆ ಕೇಳಿಸಬಾರ್ದು ತಿಳಿತೇನು?

**ಕಾವೇರಿ:** ಮರೆಮರೆಯಾಗಿ ನಡೀರಿ ಅವಳಿಗೆ ಕಾಣಿಸಬಾರದು ತಿಳೀತೇನು?

(ಮಾಲ್‍ನಲ್ಲಿ ಹೇಮಾ ಬರುತ್ತಾಳೆ ಅವಳ ಮುಖ ಮುಂದೆ. ಹಿಂದೆ ನಾಲ್ಕೂಜನ)

**ಕಮಲಮ್ಮ:** ಅವ್ವಾ, ಹೆಂತಾ ದೊಡ್ಡ ಅಂಗಡೀನೇ ಇದು?

(ಗೇಟ್‍ಮ್ಯಾನ್ ಸೆಲ್ಯೂಟ್ ಹೊಡೆಯುತ್ತಾನೆ. ನಾಲ್ಕೂ ಜನ ಹೌಹಾರಿ ಅವನಿಗೆ ಸೆಲ್ಯೂಟ್ ಹೊಡೆಯುತ್ತಾರೆ)

**ಗಂಗಮ್ಮ:** ಬಾಗಲಾ ತೆಗಿ ಅಪ್ಪ ನಾವು ಒಳಗ ಹೋಗಬೇಕು....

**ಕಾವೇರಿ:** ಅಲ್ರಿ ಗಂಗಮ್ಮ ಬಾಗಲಾ ತಾನೇ ತೆಗೀತಾದ, ನೀವು ಒಂದು ಹೆಜ್ಜೆ ಮುಂದ ಇಡ್ರಿ ಅಷ್ಟs

**ಗಂಗಮ್ಮ:** ಅಷ್ಟs (ಹೆಜ್ಜೆ ಮುಂದೆ ಇಡುವಳು ಗಾಜಿನ ಬಾಗಿಲು ತಾನೇ ತೆರೆಯುವುದು) ಅಯ್ಯ! ಹೌದಲ್ರಿ, ಎಂಥಾ ಜಾದೂ ಇದು!

**ಕಾವೇರಿ:** ಬಾಯಿ ಬೊಂಬಾಯಿ ಮಾಡಬ್ಯಾಡ್ರಿ ಸಾವಕಾಶ ಮಾತಾಡ್ರಿ, ನಡೀರಿ ನಡೀರಿ....

**ಸಂಗಮ್ಮ:** ಆಕಿ ಮಾಲ್‍ನಾಗ ಯಾರಿಗೆ ಭೆಟ್ಟಿ ಆಗ್ತಾಳ, ಯಾರ ಜೋಡಿ ಮಾತಾಡ್ತಾಳ, ಯಾರ ಜೋಡಿ ನಗ್ತಾಳ, ಏನೇನ್ ಖರೀದಿ ಮಾಡ್ತಾಳ ಸ್ವಲ್ಪ ನಿಗಾ ಇಡ್ರಿ, ತಿಳಿತೇನು, ನಾವು ಬಂದ ಕೆಲಸಾ?

**ಗಂಗಮ್ಮ:** ನನಗಂತೂ ದಂಗ ಹಿಡದದ. ಏನ್ ನೋಡ್ಲಿ ಏನ್ ಬಿಡ್ಲಿ ಅಂದಂಗ ಆಗ್ಯಾದ!

**ಕಮಲಮ್ಮ:** ನನಗಂತೂ ಮಂದೀನೇ ಮಂದಿ ಕಾಣಸ್ತಾರ! ಎಲ್ಲಾ ಒಂದೇ ಥರ!

**ಕಾವೇರಿ:** ಕಮಲಮ್ಮ ನಿಮ್ಮ ಚಸ್ಮಾ ಬದಲಾಸ್ರಿ.....! ನೀವು ಬರೇ ಆಕಿಮಾಲ ನಿಗಾ ಇಡ್ರಿ ಅಷ್ಟs, ತಿಳೀತೇನು?

**ಕಮಲಮ್ಮ:** ಆಯ್ತು ನಡೀರಿ... ಆಲ್ನೊಡ್ರಿ ಆಕಿ ಅಲ್ಲಿ ಏನ್ ಖರೀದಿ ಮಾಡ್ತಾಳ...

**ಗಂಗಮ್ಮ:** ಅದೇನೋ ತುಟೀಗಿ ಬಳೀತಾರಲ್ಲ ಅದು....

**ಕಾವೇರಿ:** ಅಯ್ಯ ಅದು ಲಿಪ್‍ಸ್ಟಿಕ್ ಐತಿ ಬಿಡ್ರಿ. ಮತ್ತೇನ್ ಖರೀದಿ ಮಾಡ್ತಾಳ ನಿಗಾ ಇಡ್ರಿ

**ಗಂಗಮ್ಮ:** ಬರೇ ನಿಗಾ ಇಡಾದ್ರಾಗ ಟೈಂ ಕಳದ್ರ ಹ್ಯಾಂಗ.... ಎಂತೆಂಥ ಛಂದ ಛಂದ ಡ್ರೆಸ್ ಅದಾವ!

**ಕಮಲಮ್ಮ:** ನೈಟೀ ಅದಾವ...!

**ಸಂಗಮ್ಮ:** ಭಾಂಡೀ ಅದಾವ...!

**ಕಾವೇರಿ:** ಊದಬತ್ತಿ ಅದಾವ....! ಹೌದಲ್ಲೊ... ನಿಮ್ಮ ತೆಲಿ! ಅವಳ ಮ್ಯಾಲ ನಿಗಾ ಇಡ್ರಿ ಅಂದ್ರ ನೀವು ಬ್ಯಾರೇನೇ ನಡಸೀರಿ! ನಾವು ಬಂದ ಉದ್ದೇಶ ಏನು, ನೀವು ಮಾಡ್ತಿರೋ ವಿಚಾರ ಏನು, ಹಾಂ! ನಡೀರಿ ಆಕಿ ಮ್ಯಾಲ ನಿಗಾ ಇಡ್ರಿ ಅಷ್ಟs....

**ಕಮಲಮ್ಮ:** ಆಯ್ತು ಮಾರಾಯ್ತಿ – ನಿಗಾ ಇಡ್ತೀವಿ. ಅಲ್ನೊಡ್ರಿ ಆಕಿ ಯಾವುದೋ ಡಬ್ಬಿ ಕೈಯಾಗ ಹಿಡದಂಗ ಕಾಣ್ತದ....
(ಆಗ ಉಳಿದವರು ಮಾಲ್ ನೋಡುವಲ್ಲಿ ದಂಗಾಗಿದ್ದಾರೆ)

**ಕಾವೇರಿ:** ಹೌದು, ಅದು ಪೌಡರ ಡಬ್ಬಿನ ಅದ....!

**ಕಮಲಮ್ಮ:** ಅಂಥಾ ದೊಡ್ಡ ಪೌಡರ ಡಬ್ಬಿ? ಸ್ನಾನಾ ಮಾಡ್ತಾಳೇನು ಪೌಡರಲಿಂದ?

**ಕಾವೇರಿ:** ಅದೆಲ್ಲ ಚರ್ಚಾ ಬ್ಯಾಡ... ನಿಗಾ ಇಡ್ರಿ ಅಷ್ಟs....

**ಗಂಗಮ್ಮ:** ಅಯ್ಯ, ಅಲ್ನೊಡ್ರಿ ಸ್ನೋ ಡಬ್ಬಿ!

**ಸಂಗಮ್ಮ:** ಅದೇನ್ರಿ, ಸ್ಲೀಪರ್ ಚಪ್ಪಲೀನೂ ಕೊಂಡಾಳ ಕಾಣ್ತದ, ಕಾಲಾಗ ಹಾಕ್ಕೊಂಡು ನೋಡಾಕ ಹತ್ಯಾಳ, ಹೌದಲ್ಲೋ....?

**ಕಮಲಮ್ಮ:** ಅಯ್ಯ, ಹೌದಲ್ರಿ, ಚಪ್ಪಲ ಎಷ್ಟ ಛಂದ ಅದಾವ.... ನಾವೂ ತಗೋಳೂಣು ನಡೀರಿ....

**ಕಾವೇರಿ:** ನಡೀರಿ ನಡೀರಿ! ಸ್ವಲ್ಪ ತಡೀರಿ, ಅವಳ ವೀಕನೆಸ್ ಸಿಗ್ಲಿ. ಆಮ್ಯಾಲ ಎಲ್ಲಾ ಖರೀದಿ ಮಾಡ್ರಿ. ಆಯಿತಿಲ್ಲೋ.
(ಹೇಮಾ ಹೊರಗೆ ಹೋಗುವಳು)

**ಸಂಗಮ್ಮ:** ಆಯಿತು ಎಲ್ಲಾಕತಿ ಮುಗೀತು. ಆಕಿ ಹೊರಗ ಹೋದ್ಲು ನೋಡ್ರಿ!

**ಗಂಗಮ್ಮ:** ನಡೀರಿ ನಾವೂ ಹೋಗುಣು. ಹೊಟ್ಟಿ ಚುರ್ ಅಂತೈತಿ – ಮನಿಗೆ ಹೋಗಿ ಚುರಮುರಿ ತಿನ್ನೋಣ...

**ಕಾವೇರಿ:** ಅದ್ಯಾಕ್ರೆ ಗಂಗಮ್ಮ, ಇಲ್ಲೇ ಹೊರಗ ಪಾವಭಾಜಿ ಸಿಗ್ತದ, ಎಲ್ಲಾರೂ ಸೇರಿ ತಿಂದು ಹೋಗೂಣಂತ ನಡೀರಿ.

**ಸಂಗಮ್ಮ:** ಅವ್ವ, ನಿನ್ನ ಹೊಟ್ಟಿ ತಣ್ಣಗಿರ್ಲಿ ನಡೀರಿ ಭಾಳ ಹಸಿವಿ ಆಗ್ಯಾದ...
(ಎಲ್ಲರೂ ಹೋಗುವರು)
(ಮರುದಿನ ಸಂಜೆ ಹೊತ್ತು ನಾಲ್ಕೂ ಜನರು ಹರಟೆ ಹೊಡೆಯುತ್ತಿದ್ದಾರೆ.)

**ಸಂಗಮ್ಮ:** ಕಾವೇರಿ, ನಿನ್ನ ಹೊಟ್ಟಿ ತಣ್ಣಗಿರಲೆವ್ವ. ನಿನ್ನೆ ಪಾವಭಾಜಿ ತಿನಸಿದಿ....

**ಗಂಗಮ್ಮ:** ಮತ್ತ ಸಣ್ಣ ಉಂಡಿ ಇದ್ದಾಂಗ, ಹುಳಿ ಖಾರ ವಿಚಿತ್ರ ಇತ್ತಲ್ಲ! ಅದೇನs?

**ಕಾವೇರಿ:** ಅಯ್ಯ ಅದು ಮಂಚೂರಿ ಇತ್ತ. ಅದು ಚೀನ ದೇಶದಿಂದ ಇಲ್ಲಿಗೆ ಬಂದದ....

**ಕಮಲಮ್ಮ:** ಅಂಥಾದ್ಯಲ್ಲ ತಿನಬಾರದವ್ವ. ನಂದಂತೂ ಹೊಟ್ಟಿ ಕೆಟ್ಟಿತು ನೋಡು. ನಮ್ಮ ದೇಶದ ಅನ್ನನs ತಿನಬೇಕು! ಹೌದಲ್ರಿ?

**ಸಂಗಮ್ಮ:** ಅಲ್ಲs ಆ ಮಾಲ ಎಷ್ಟ ಛಂದ ಇತ್ತಲ್ಲ! ರಾಜಾನ ಅರಮನಿ ಇದ್ದಂಗ....

**ಗಂಗಮ್ಮ:** ಝಗ ಝಗ ಲೈಟು, ತಂಪಗಾಳಿ, ಖುಷಿಲಿಂದ ನಲಿದಾಡೊ ಜನ, ಸ್ವರ್ಗ ಇದ್ದಾಂಗ ನೋಡ್ರಿ!

**ಕಾವೇರಿ:** ಅದೆಲ್ಲ ದೊಡ್ಡ ಮಂದಿ, ದೊಡ್ಡ ಮಾತು, ದುಡ್ಡ ಇದ್ದವರ ಕೆಲಸಾ! ಹೋಗ್ಲಿ ಆಕಿ
(ಹೇಮಾಳ ಮನೆಕಡೆ ಕೈ ಮಾಡಿ) ವೀಕನೆಸ್ ಏನಾರ ಸಿಕ್ತ?

**ಕಮಲಮ್ಮ:** ಏನೂ ಸಿಗಲಿಲ್ಲ....

**ಎಲ್ಲರೂ:** ಹೌದು ಏನೂ ಸಿಗಲಿಲ್ಲಲ್ಲs!

**ಗಂಗಮ್ಮ:** ಈಗೇನು ಮಾಡಾದು? ಬ್ಯಾರೆ ಏನರೆ ವಿಚಾರ ಮಾಡ್ರಿ ಅಂತೀನಿ ನಾನು....

**ಸಂಗಮ್ಮ:** ನಾಳೆ ರವಿವಾರ ಐತಿ ಎಲ್ಲಾರೂ ಸೇರಿ ಗಾರ್ಡನ್‌ಕ ಹೋಗೂಣು....

**ಕಾವೇರಿ:** ಅಲ್ರಿ ಸಂಗಮ್ಮ ನಿಮಗೇನ ತೆಲಿಗಿಲಿ ಅದನs ಇಲ್ಲ! ನಾವು ಆಕಿ ವೀಕನೆಸ್ ಹಿಡಿಬೇಕಂತೀವಿ. ನೀವು ಗಾರ್ಡನ್‌ಕ ಹೋಗಬೇಕಂತೀರಿ, ಛೆ!

**ಸಂಗಮ್ಮ:** ನಾನೂ ಅದs ಅಂತೀನಿ, ಯಾಕಂದ್ರ ಆಕಿ, ರವಿವಾರ ಗಾರ್ಡನ್‌ಕ ಹೋಗ್ತಾಳ.... ಗಾರ್ಡನ್‌ದಾಗ ಯಾಕ ಹೋಗ್ತಾಳ?

**ಗಂಗಮ್ಮ:** ಯಾರಿಗಿ ಭೆಟ್ಟಿ ಆಗ್ತಾಳ?

**ಕಮಲಮ್ಮ:** ಏನ್ ಮಾತ ಆಡ್ತಾಳ?

**ಕಾವೇರಿ:** ಇದೆಲ್ಲ ನಿಮಗ ಖಾತ್ರಿ ಅದ ಏನು? ಖಾತ್ರಿ ಇದ್ರ ಮಾತಾಡ್ರಿ. ಇಲ್ಲಾಂದ್ರ ಕೆಮ್ಮುದು ಕೊಟ್ಟು ಗುಮ್ಮುದು ತಗೊಂಡಂಗ ಆದೀತು ನೋಡ್ರಿ!

**ಕಮಲಮ್ಮ:** ಹೌದ ಎವ್ವ, ನನಗ ಮೊದಲs ಕೆಮ್ಮು ಕಾಡ್ಯೆತಿ. ಸುಂಟಿ ನೀರು ಕುಡದು ಸಾಕಾಗ್ಯೆತಿ....

**ಕಾವೇರಿ:** ಕಮಲಮ್ಮ, ನಿಮ್ಮ ಸುಂಟಿ ನೀರು ಇರಲಿ! ಈಗ ಮುಂದ ಏನ್ ಮಾಡೂದು ಹೇಳ್ರಿ.

**ಸಂಗಮ್ಮ:** ಗಾರ್ಡನ್‌ಕ ಹೋಗೂಣು, ಅವಳ ಒನಪು ಒಯ್ಯಾರ ನೋಡೂಣು. ನಮ್ಮ ಕಲ್ಪನಾ ಖರೆ ಆದ್ರೂ ಆಗಭೌದು! ಅಲ್ಲೇನ್ರಿ?

**ಎಲ್ಲರೂ:** ಹೌದು ಹೌದು! ನಮ್ಮ ಕಲ್ಪನಾ ಖರೆ ಆದ್ರೂ ಆಗಭೌದು!

**ಕಾವೇರಿ:** ನಡಿರಿ ಹಂಗಾದ್ರ ನಾಳೆ ಎಲ್ಲಾರೂ ರೆಡಿ ಇರ್ರಿ.

**ಕಮಲಮ್ಮ:** ಹಂಗs ಚೂಡಾ ಚಕ್ಕಲಿ ಡಬ್ಬಿ ತಗೊಂಡು ಹೋಗೂಣು. ಅಲ್ಲೇ ಕೂತು ತಿಂದರಾತು.

**ಕಾವೇರಿ:** ಆಯಿತು ನಡೀರಿ ಇವತ್ತಿನ ಮೀಟಿಂಗ್ ಮುಗಸ್ರಿ, ಮನ್ಯಾಗಿನ ಕಸ ಮುಸರಿ ತೊಳೀಬೇಕು. ಬಟ್ಟಿ ಒಗದು ಹಾಕಬೇಕು. ನಮ್ಮ ಕರ್ಮ ನಮಗ, ನಡೀರಿ.....
(ಎಲ್ಲರೂ ಹೊರಟು ಹೋಗುವರು)
(ಮರುದಿನ ಸಂಜೆ ಗಾರ್ಡನ್‌ನಲ್ಲಿ ನಾಲ್ಕೂ ಜನ ಸೇರಿದ್ದಾರೆ. ಹೇಮಾ ಮುಂದೆ ಮುಂದೆ, ಇವರೆಲ್ಲ ಕದ್ದುಮುಚ್ಚಿ ಹಿಂದೆ ಹಿಂದೆ ನಾಟಕೀಯವಾಗಿ ನಡೆದಿದ್ದಾರೆ).

**ಕಮಲಮ್ಮ:** ಯವ್ವಾ, ಎಂಥಾ ದೊಡ್ಡ ಗಾರ್ಡನ್ ಐತ್ರಿ!

**ಸಂಗಮ್ಮ:** ಎಂಥಾ ನಮೂನಿ ನಮೂನಿ ಗಿಡ ಅದಾವಲ್ರಿ?

**ಗಂಗಮ್ಮ:** ಆ ಹೂವಿನ ಗೊಂಚಲಾ ನೋಡ್ರಿ ಎಷ್ಟ ಛಂದದ ಅಲ್ಲಾ?

**ಕಾವೇರಿ:** ಅದೆಲ್ಲ ಬಿಡ್ರಿ ಗಂಗಮ್ಮ, ಆ ಪ್ಯಾಶನ್ ಪೋರಿ ಎಲ್ಲಿದ್ದಾಳ ನಿಗಾ ಇಡ್ರಿ.

**ಕಮಲಮ್ಮ:** ಇಲ್ಲೆ ಇದ್ಲು. ಎಲ್ಲಿ ಮಾಯ ಆದ್ಲು?

**ಸಂಗಮ್ಮ:** ಎಲ್ಲೆರೆ ಬೆಂಚಿನ ಮ್ಯಾಲ ಪ್ರಿಯಕರನ ಜತೆ ಕೂತಿರಬೇಕು ನೋಡ್ರಿ....

**ಗಂಗಮ್ಮ:** ಅಲ್ಲಿ ನೋಡ್ರಿ ದೂರ, ಮಕ್ಕಳ ಜತಿ ಲೋ ಲೋ ಟಿಮ್ಮಯ್ಯ ಆಡ್ತಾಳ ಕಾಣ್ತದ, ಅಲ್ಲ?

**ಕಮಲಮ್ಮ:** ಅವ್ವ, ಖರೇನೇ ಅಲ್ರಿ! ಮಕ್ಕಳ ಜತಿ ಏಟ ಛಂದ ಆಡ್ತಾಳ ಖಾಸಾ ಮಕ್ಕಳಿದ್ದಂಗ!

**ಗಂಗಮ್ಮ:** ಆಕಡೆ ಈಕಡೆ ನಿಗಾ ಇಡ್ರಿ. ಆಕಿಗಿ ಭೆಟ್ಟಿ ಆಗಾಕ ಯಾರರೆ ಬರ್ತಾರೇನು ನೋಡ್ರಿ!

(ಅಷ್ಟರಲ್ಲಿ ಒಬ್ಬ ಯುವಕ ಬರ್ತ್‌ಡೆ ಕೇಕ್ ಹಿಡಿದುಕೊಂಡು ಬರುತ್ತಾನೆ. ಮಕ್ಕಳಿಗೆಲ್ಲ ಬರ್ತಡೆ ಕ್ಯಾಪ ತೊಡಿಸುತ್ತಾರೆ. ಹಾಡು ಹೇಳಿ ಕೇಕ್ ಹಂಚುತ್ತಾರೆ. ಎಲ್ಲರೂ ಕುಣಿದಾಡುತ್ತಾರೆ.

ಇದೆಲ್ಲವನ್ನು ನೋಡಿ ನಾಲ್ಕೂ ಜನರು ಹೌಹಾರಿದ್ದಾರೆ. ಅಲ್ಲಿ ಏನು ನಡೆದಿದೆ ಎಂಬುದು ತಿಳಿಯದವರಂತೆ ದಂಗಾಗಿದ್ದಾರೆ)

**ಕಮಲಮ್ಮ:** ಅವ್ವ ಎಷ್ಟ ಛಂದ ಹಾಡ ಹಾಡ್ತಾವರಿ ಮಕ್ಕಳು!

**ಕಾವೇರಿ:** ಅದೆಲ್ಲ ಇರ್‍ಲಿ ಕಮಲಮ್ಮ. ಆ ಫ್ಯಾಶನ್ ಗರ್ಲ್ ಎಲ್ಲಿದ್ದಾಳ ನೋಡ್ರೀ....

**ಗಂಗಮ್ಮ:** ಆಕಾಡೆ ನೋಡ್ರಿ. ಪೈಪಲಿಂದ ಗಿಡಬಳ್ಳಿಗೆ ನೀರು ಬಿಡ್ತಾ ಇದ್ದಾಳ!

**ಸಂಗಮ್ಮ:** ನೀರು ಬಿಡ್ತಾ ಇದ್ದಾಳ? ಇದೇ ಅವಳ ನೌಕರೀನಾ?

**ಕಾವೇರಿ:** ಛಿ! ಜುಜುಬಿ ನೀರು ಬಿಡೋ ಕೆಲಸ!.....
(ಹೇಮಾ ಅಲ್ಲಿಂದ ಹೊರಟು ಹೋಗುವಳು. ಮಕ್ಕಳೆಲ್ಲ ಬೈ ಬೈ ಹೇಳುವರು)
ಹುಡುಕ್ರಿ ಎಲ್ಲಿದ್ದಾಳಂತ. ಅವಳ ವೀಕನೆಸ್ ಹಿಡೀಲೇಬೇಕು ಇವತ್ತು. ತಿಳೀತೇನು...
(ಎಲ್ಲರೂ ಹೇಮಾಳನ್ನು ಗಡಿಬಿಡಿಯಲ್ಲಿ ಹುಡುಕಾಡುತ್ತಿದ್ದಾರೆ. ಅದೇ ಸಮಯದಲ್ಲಿ ಕಾವೇರಿ ಕಾಲು ಜಾರಿ ಬೀಳುತ್ತಾಳೆ....)

**ಕಾವೇರಿ:** ಅಯ್ಯಯ್ಯೊ ಸತ್ತೇನ್ರಿ ! ನನ್ನ ಕಾಲು ಹೋಯಿತ್ರಿ. ಇನ್ನೇನು ಗತಿ. ಅಯ್ಯಯ್ಯೊ........ ಅವ್ವ........

**ಕಮಲಮ್ಮ:** ಹೆದರಬ್ಯಾಡ್ರಿ ಕಾವೇರಿ. ಎದ್ದು ನಿಲ್ರಿ ಏನೂ ಆಗಾಂಗಿಲ್ಲ!

**ಗಂಗಮ್ಮ:** ಕಾಲು ಪೇಚಬಿದ್ದಾದರಿ, ಏಳಾಕ ಆಗವಲ್ದು, ನೋವು ಭಾಳ ಆಗ್ತಾ ಇದೇರಿ... ಅಯ್ಯೊ ಕಾಪಾಡ್ರಪ್ಪ ..........ಇವಳಿಗೆ.......... (ಯಾರೂ ಕಾವೇರಿಗೆ ಕೈ ನೀಡಿ ಎತ್ತುವವರಿಲ್ಲ. ಬರೀ ನೋಡುವರು. ಅಷ್ಟರಲ್ಲಿ ಕೇಕ್ ತಂದ ಯುವಕ ಓಡಿಬರುವನು. ಕಾವೇರಿ ಕೈ ಹಿಡಿದು ಬೆಂಚ್ ಮೇಲೆ ಕುಳ್ಳಿರಿಸುವನು. ಹಸಿಯ ಬಟ್ಟೆ ಮಾಡಿ ಕಾಲಿಗೆ ಸರಿಯಾಗಿ ಕಟ್ಟುವನು, ಎರಡೂ ಕೈಗಳಿಂದ ಏನೂ ಚಿಂತೆ ಮಾಡಬೇಡಿ. ನೋವು ಕಡಿಮೆ ಆಗುವದು ಎಂದು ಸೂಚಿಸುವನು).

**ಕಮಲಮ್ಮ:** ನಿನ್ನ ಹೆಸರೇನಪ್ಪ....
(ಯುವಕ ಕಿರುನಗೆ ಬೀರುವನು. ಮಾತಿಲ್ಲ)

**ಗಂಗಮ್ಮ:** ನಿನ್ನ ಊರು ಯಾವುದಪ್ಪ....
(ಮತ್ತೆ ಅದೇ ನಗೆ ಬೀರುವನು)

**ಸಂಗಮ್ಮ:** ಆ ಹುಡುಗಿ ನಿನಗೇನಾಗಬೇಕಪ್ಪ
(ಆಗಲೂ ನಗೆ ಬೀರುವನು)

**ಕಾವೇರಿ:** ನಿನ್ನ ಉಪಕಾರ ಬಾಳ ಆತಪ್ಪ. ಬ್ಯಾನಿ ಕಡಿಮೆ ಆಗಾಕ ಹತ್ಯಾದ. ನಿನಗ ಪುಣ್ಯ ಬರ್ಲಿ. ಆ ಮಕ್ಕಳೆಲ್ಲ ಯಾರಪ್ಪ?
(ಐದು ನಿಮಿಷದಲ್ಲಿ ಬೇನೆ ಪೂರ್ಣ ಕಡಿಮೆ ಆಗುವದೆಂದು ಕೈಸನ್ನೆಯಿಂದ ಹೇಳಿ ಯುವಕ ಪುನಃ ನಗುವನು. ಕಟ್ಟಿದ ಪಟ್ಟಿಯನ್ನು ಬಿಚ್ಚುವನು. ಕಾವೇರಿಗೆ ಎದ್ದು ನಿಲ್ಲುವಂತೆ ಹೇಳುವನು. ಕಾಲು ಜಾಡಿಸುವಂತೆ ಹೇಳುವನು. ನೋವು ಮಾಯವಾಗಿದೆ. ಯುವಕ ಅಲ್ಲಿಂದ ಹೊರಟು ಹೋಗುವನು).

**ಕಮಲಮ್ಮ:** ಯಾರೋ ಏನೋ!

**ಗಂಗಮ್ಮ:** ಹೆಸರಿಲ್ಲ ಊರಿಲ್ಲ!

**ಸಂಗಮ್ಮ:** ಮಾತೂ ಇಲ್ಲ!

**ಕಾವೇರಿ:** ಇದೆಲ್ಲ ಆ ಪ್ಯಾಶನ್ ಪೋರಿಲಿಂದೇ ಆಗ್ಯಾದ. ಇದಕ್ಕೆಲ್ಲ ಕಾರಣ ಆಕೀನೇ.....

**ಕಮಲಮ್ಮ:** ಆಕಿ ಸೊಕ್ಕು ಮುರಿಲಿಕ್ಕ ಬೇಕು.

**ಗಂಗಮ್ಮ:** ಆಕಿನ ಸುಮ್ಮಕ ಬಿಡಬಾರ್ದು

**ಸಂಗಮ್ಮ:** ಏನ್ ಮಾಡಬೇಕು ಅಂತೀರಿ?

**ಕಾವೇರಿ:** ನಾನು ಅದೇ ಕೇಳೂದು. ಏನರೆ ಪ್ಲಾನ್ ಮಾಡ್ರಿ. ಆಕಿ ಸೊಕ್ಕು ಮುರಿಬೇಕು ನಮ್ಮ ಕ್ಷಮಾ ಕೇಳಬೇಕು ಆಕಿ!

**ಗಂಗಮ್ಮ:** (ಏನೋ ಯೋಚಿಸಿದಂತೆ)
ಮಾಳಿಗಿ ಮ್ಯಾಲಿಂದ ಆಕಿಮ್ಯಾಲ ಬಿಸಿ ಬಿಸಿ ನೀರು ಹಾಕಿದ್ರ ಹ್ಯಾಂಗ?

**ಸಂಗಮ್ಮ:** ಕಾಲಾಗ ಕಾಲ ಹಾಕಿ ಕೆಡವಿದರ ಹ್ಯಾಂಗ?

**ಕಮಲಮ್ಮ:** ಆಕಿ ಮೈಮ್ಯಾಲ ಜಿರಳಿ ಒಗದರ ಹ್ಯಾಂಗ?

**ಗಂಗಮ್ಮ:** ಅಯ್ಯ ಯವ್ವ ನಾ ಸತ್ತೆ!

**ಕಮಲಮ್ಮ:** ಯಾಕ್ರಿ ಏನಾತು?

**ಗಂಗಮ್ಮ:** ಜಿರಳಿ ಅಂದ್ರ ನನ್ನ ಜೀವಾ ಹಾರಿ, ಎದಿ ಡಬ ಡಬ ಬಡಕೋತದ ಯವ್ವಾ, ಅದರ ಹೆಸರ ತೆಗಿಬ್ಯಾಡ್ರಿ ನಿಮ್ ಕೈ ಜೋಡಿಸ್ತೇನಿ!

**ಕಮಲಮ್ಮ:** ಹೋಗ್ಲಿ ಜಿರಳಿ ಬಿಡ್ರಿ. ಈಗ ಮತ್ತೇನು ಮಾಡಬೇಕು? ಆಕಿ ಸೊಕ್ಕು ಮುರಿಬೇಕಾದರ? ಹೇಳ್ರಿ.

**ಕಾವೇರಿ:** (ನಿರ್ಧಾರಕ್ಕೆ ಬಂದವಳಂತೆ) ಇನ್ನು ಒಂದೇ ಪ್ಲಾನ್ ಸಾಕು. ಆಕಿ ಓಡಿ ಬಂದು ನಮ್ ಕಾಲಿಗಿ ಬಿದ್ದು ಅಳ್ತಾಳ ತಿಳೀರಿ.

**ಕಮಲಮ್ಮ:** ಅದೇನ್ ಪ್ಲಾನ್ ಬೇಗ ಹೇಳ್ರಿ, ನನ್ ಹೊಟ್ಟ್ಯಾಗ ಕಸಿವಿಸಿ ಆಗಾಕ ಹತ್ತೈದ, ಬೇಗ ಹೇಳ್ರಿ....!

**ಸಂಗಮ್ಮ:** ನನಗ ತಿಳೀತು ಬಿಡ್ರಿ. ಅದೇ ರಬ್ಬರ್ ಹಾವು ಆಕಿ, ಬಾಗಲಾಗ ಬಿಡೂದು ಅದನ್ನು ನೋಡಿ ಆಕಿ ಹೌಹಾರಿ ಹೆದರಿ ನಮ್ಮ ಕಾಲಮ್ಯಾಲ ಬಂದು ಬೀಳೂದು! ಹೌದಲ್ಲೋ?

**ಕಾವೇರಿ:** (ತಾತ್ಸಾರದಿಂದ) ಅದಲ್ರಿ, ಆಕಿ ಖರೆ ಖರೆ ಹಾವಿನ ಬಾಲ ಹಿಡದು ಹೊರಗ ಬಿಡಾಕಿ ಇದ್ದಾಳ.... ಬ್ಯಾರೆ ವಿಚಾರ ಅದ....

**ಕಮಲಮ್ಮ:** ಡೇಂಜರ್ ಪ್ಲಾನ್ ಇರಭೌದಲ್ಲ?

**ಕಾವೇರಿ:** (ಗಂಭೀರವಾಗಿ) ಹೌದು.

**ಗಂಗಮ್ಮ:** ಯಾಕೊ ನನ್ನ ಕೈ ಕಾಲು ನಡಗಾಕ ಹತ್ಯಾವ್ರಿ ಏನಾರೆ ಮಾಡ್ಲಿಕ್ ಹೋಗಿ ಏನರೆ ಆದೀತು. ನಾವು ಮಾಡಿದ ತೆಗ್ಗಿನ್ಯಾಗ ನಾವೇ ಬಿದ್ದಾಂಗ ಆದೀತು! ನೋಡ್ರಿ, ಛಂದ ವಿಚಾರ ಮಾಡ್ರಿ.

**ಕಾವೇರಿ:** ಎಲ್ಲಾ ವಿಚಾರ ಆಗೇದ. ಯಾರಿಗೂ ಏನೂ ಆಗಾಂಗಿಲ್ಲ. ಬರೇ ಒಂದು ಚೀಟಿ ಬರೆಯೋದು.

**ಕಮಲಮ್ಮ:** ಆಕಿ ಕೈಗೆ ಕೊಡೋದು

**ಸಂಗಮ್ಮ:** ಆಕಿ ಅದನ್ನ ತೆಗೆದು ನೋಡೋದು

**ಗಂಗಮ್ಮ:** ಓಡಿ ಬಂದು ನಮ್ ಕಾಲಿಗೆ ಬೀಳೋದು

**ಕಮಲಮ್ಮ:** ಅಯ್ಯ ಅದರೊಳಗ ಮಾಯ ಮಾಟ ಮಂತ್ರ ಏನರೆ ಅದ ಏನ್ರಿ? ಅದನ್ನ ನೀವು ಯಾವಾಗ ಕಲ್ತಿರಿ?

**ಕಾವೇರಿ:** ಎಲ್ಲಾರೂ ಬಾಯಿ ಮುಚ್ಚಿರಿ. ಅಂಥ ಅಂಧಶ್ರದ್ಧಾ ನಾನು ನಂಬಂಗಿಲ್ಲ. ತಿಳಿತೇನು?

**ಎಲ್ಲರೂ:** ಹೌದ್ರಿ ಹೌದ್ರಿ ನಾವೂ ಯಾರೂ ನಂಬಂಗಿಲ್ಲ ಬಿಡ್ರಿ.

**ಕಮಲಮ್ಮ:** ಹಂಗಾದ್ರ ಆ ಚೀಟಿಯೊಳಗ ಇರೂದೇನು? ನೀವS ಹೇಳ್ರಿ ಕಾವೇರಿ.

**ಕಾವೇರಿ:** ಅಲ್ಲೇ ಇರೂದು ಮಜಾ! ಈ ಭಾಗದ ಒಬ್ಬ ಗುಂಡಾದಾದಾನ ಹೆಸರೀಲೆ ಚೀಟಿ ಬರೆಯೋದು. ಅವಳ ಮನ್ಯಾಗ ಒಗಿಯೂದು.

**ಸಂಗಮ್ಮ:** ಆಕಿ ಅದನ್ನು ತೆಗೆದು ನೋಡೂದು

**ಗಂಗಮ್ಮ:** ಓಡೋದು. ಓದಿ ಹೆದರಿ ಓಡಿಬಂದು ನಮ್ ಕಾಲಿಗಿ ಬೀಳೂದು. ಆ ಗುಂಡಾ ನಿಂದ ಉಳಸ್ರಿ ಅಂತ ನಮ್ಮ ಮುಂದ ಅಳೂದು.

**ಕಮಲಮ್ಮ:** ಆವಾಗ ನಾವೇನ ಮಾಡಬೇಕ್ರಿ, ಗಂಗಮ್ಮ? ಖರೆ ಖರೆ ಗುಂಡಾ ಬಂದ್ರ ಗತಿಯೇನು?

**ಕಾವೇರಿ:** ನಿಮ್ ತೆಲಿ! ಖರೆ ಖರೆ ಗುಂಡಾ ಎಲ್ಲಿಂದ ಬರ್ತಾನ? ಇದು ನಾವೇ ಬರದ ಚೀಟಿ ಅಲ್ಲ?

**ಸಂಗಮ್ಮ:** ಅವ್ವಾ! ಹೌದು ಹೌಂದು! ನಾವः ಬರದದ್ದು !

**ಕಾವೇರಿ:** ಇನ್ನಾ ಟೈಂ ಹಾಳ್ ಮಾಡುದು ಬ್ಯಾಡ, ಪೆನ್ನ ತರ್ರಿ, ಹಾಳಿ ತರ್ರಿ, ಯಾರು ಬರೀತೀರಿ, ಚೀಟಿ?

**ಎಲ್ಲರೂ:** ನಮಗ ಒಂದೂ ಚೀಟಿ ಬರದು ಗೊತ್ತಿಲ್ಲವ್ವ. ನೀನೇ ಬರಿ.

**ಕಾವೇರಿ:** (ಉಳಿದವರು ಕಾಗದ ಪೆನ್ನು ತಂದು ಕೊಡುವರು. ಕಾವೇರಿ ಎಡಗೈಯಿಂದ ಚಿಟ್ಟಿ ಬರೆಯುವಳು. ಹರಿಯುವಳು ಮತ್ತೆ ಬರೆಯುವಳು ಮತ್ತೆ ಹರಿಯುವಳು ಇದನ್ನು ನಾಟಕೀಯ ಮಾಡಬಹುದು.) ಹಾಂ! ಅಂತೂ ಚೀಟಿ ಬರೆಯೂದು ಆಯ್ತು ಇದನ್ನ ಆಕಿ ಮನ್ಯಾಗ ಯಾರು ಒಗೆದು ಬರ್ತೀರಿ?

**ಕಮಲಮ್ಮ:** ಯವ್ವ, ನಿನ್ನೆ ಖಾರ ಕುಟ್ಟೋವಾಗ ನನ್ನ ಕಿರಿಬೆರಳಿಗೆ ಜಜ್ಜಾದ ನನ್ನಿಂದ ಆಗೂದಿಲ್ಲ.

**ಸಂಗಮ್ಮ:** ನಿನ್ನೆ ಅಂಗಳದಾಗ ಕಾಲಿಗಿ ಮುಳ್ಳ ಚುಚ್ಚಾದ, ನನಗ ಚೀಟಿ ವಗದು ಓಡಾಕ್ ಬರಂಗಿಲ್ಲವ್ವ ಕ್ಷಮಾ ಮಾಡ್ರಿ...

**ಗಂಗಮ್ಮ:** ನಾನು ಒಗೀತಿದ್ದೆ, ಆದ್ರ ನಿನ್ನೆ ಕೆಮ್ಮು ದಮ್ಮು ಸುರು ಆಗೇದ. ಚೀಟಿ ಒಗ್ಯಾಮುಂದ ಕೆಮ್ಮು ಸುರು ಆದ್ರ ಸಿಕ್ಕಿ ಬೀಳಾಂಗಿಲ್ಲ? ಅದಕ್ಕೆ ನನಗ ಆ ಕೆಲಸಾ ಹಚ್ಚಬ್ಯಾಡ್ರಿ. ಹಾಂ!

**ಕಾವೇರಿ:** (ಬೇಸರ ಪಟ್ಟುಕೊಂಡು) ಆಯಿತು ಬರೆಯೋದು ನಾನೇ, ಒಗೆಯೋದೂ ನಾನೇ ಮಾಡಬೇಕು! ಸರೀರಿ ಬಾಜೂಕ. ನಾನೇ ಒಗೀತೀನಿ (ನಾಟಕೀಯುವಾಗಿ ಚೀಟಿಯನ್ನು ಹೇಮಾಳ ಬಾಗಿಲಲ್ಲಿ ಎಸೆದು ಓಡಿ ಬರುವಳು).

(ಹೇಮಾಳ ಮನೆ. ರೇಡಿಯೋದೊಂದಿಗೆ ಯಾವುದೋ ಹಾಡನ್ನು ಗುನುಗುನಿಸುತ್ತಿದ್ದಾಳೆ. ಬಾಗಿಲಲ್ಲಿ ಬಿದ್ದ ಚೀಟಿಯ ಕಡೆ ಗಮನ ಹರಿಯುತ್ತದೆ. ಚೀಟಿ ತರುತ್ತಾಳೆ. ಬಿಡಿಸುತ್ತಾಳೆ ಮತ್ತು ನಾಟಕೀಯವಾಗಿ ಜೋರಾಗಿ ಓದುತ್ತಾಳೆ).

**ಹೇಮಾ:** ಡಿಯರ ಹೇಮಾ,

ಅಮ್ಮ ಚೀಟಿ...., ಅಮ್ಮ ಚೀಟಿ? ಓ ನಮ್ಮ ಭೇಟಿ, ಹಾಳ್ ಅಲ್ಲಾ.... ಹಾಳ್ ಅಲ್ಲಾ? ಓಹೋ ಭಾಳ ಇಲ್ಲ, ಆದರೂ ನಿನ್ನನ್ನು ಹೊತ್ತಿದ್ದೇನೆ, ಹೊತ್ತಿದ್ದೇನೆ? ಓ ನಿನ್ನನ್ನು ಸೋತಿದ್ದೇನೆ, ನಾಲ್ಕು ಮಂದಿ ಮೇಲೆ ನಡೆದಿದ್ದೇನೆ.......! ಓಹೋ ನಾಲ್ಕು ಮಂದಿಯಲ್ಲಿ ನೋಡಿದ್ದೇನೆ, ನೀನು ತನ್ನ ಆಣಿ ಆಗಬೇಕ್ಕು, ಆಣಿ ಆಗಬೇಕು? ಓಹೋ ನೀನು ರಾಣಿ ಆಗಬೇಕು, ಇವತ್ತು ಖಾತ್ರಿ ಬರಾತೇನಿ, ಖಾತ್ರಿ ಬರಾತೆನಿ? ಓಹೋ ರಾತ್ರಿ ಬರುತ್ತೇನೆ, ನಿನ್ನ ಚಾಲೂ ಕಂಡು ನಾನು ಕಳ್ಳ ಆಗಿದ್ದೆನೆ, ಚಾಲೂ ಕಂಡು ಕಳ್ಳ ಆಗಿದ್ದೆನೆ? ಓ ಹೋ ನಿನ್ನ ಚಲುವು ಕಂಡು ಮಳ್ಳ ಆಗಿದ್ದೇನೆ ವ್ಹಾವ್ಹಾ ಆಗು ಆಗು! ಚೇಳು ಕಂಚಿಗೆ ನೀನು ವನದಲ್ಲಿ ಕಲ್ಲು. ಚೇಳು ಕಂಚಿಗೆ ವನದಲ್ಲಿ ಕಲ್ಲು? ಓಹೋ ಏಳು ಗಂಟೆಗೆ ನೀನು ಮನೆಯಲ್ಲೆ ನಿಲ್ಲು! ನಿನ್ನೊಂದಿಗೆ ಅದುವೆ ಆಗಲೇ ಬೆಕ್ಕು....... ಓಹೋ ಮದುವೆ ಆಗಲೇ ಬೇಕು, ಹುಶಾರ್! ಒನ್ ಪಾಲಿಸಿ ಕಿರಿಕಿರಿ., ಒನ್ ಪಾಲಿಸಿ ಕಿರಿಕಿರಿ? ಓಹೋ, ನೋ ಪೋಲಿಸ್ ಕಿರಿಕಿರಿ. ನಿನ್ನ ಉಚ್ಚ! ಲಕ್ಷ್ಮದಾದಾ. ಅಯ್ಯೋ ದೇವರೇ! (ನಾಟಕೀಯವಾಗಿ)

ಈಗ ಏನು ಮಾಡಲಿ? ಯಾರಿಗೆ ಹೇಳೂದು? ಯಾರಿದ್ದಾರೆ ಇಲ್ಲಿ ಹಿರಿಯರು ಅಂತ, ಆಯಿತು ಇನ್ನ ನನ್ನ ಗತಿ ಮುಗೀತು! ಇಲ್ಲಿಂದ ಮನಿ ಖಾಲಿ ಮಾಡೋದೇ ಸರಿಯಾದ ದಾರಿ! ಅಥವಾ ಈ ನಾಲ್ಕೂ ಮಹಿಳೆಯರ ಸಹಾಯ ಕೇಳಲೇ?

(ಇದನ್ನು ಕೇಳಿ ಹೊರಗೆ ನಿಂತ ನಾಲ್ಕೂ ಜನ ಖುಷಿ ಪಡುತ್ತಾರೆ ಟಾಳಿಟಾಳಿ! ಎಂದು ಪರಸ್ಪರ ಟಾಳಿ ಹೊಡೆಯುತ್ತಾರೆ ಅಲ್ಲಿಂದ ತಮ್ಮ ತಮ್ಮ ಮನೆಗಳಿಗೆ ಹೋಗುತ್ತಾರೆ).

**ಹೇಮಾ:** (ಇನ್ನೊಮ್ಮೆ ಚೀಟಿ ಓದುತ್ತಾಳೆ. ಒಂದು ನಿರ್ಧಾರಕ್ಕೆ ಬರುತ್ತಾಳೆ.) ಈ ಚೀಟಿಯಿಂದಲೇ ಅವರಿಗೆ ಸರಿಯಾದ ಪಾಠ ಕಲಿಸ್ಬೇಕು.... ಎಸ್...... ಅದೇ ಸರಿಯಾದ ಮಾರ್ಗ! (ಕತ್ತಲೇ.... ಸಂಗೀತದೊಂದಿಗೆ ಬೆಳಗಾಗುತ್ತದೆ ಕಮಲಮ್ಮ ಹೊರಗೆ ಬರುತ್ತಾಳೆ. ಎದುರಿಗೆ ಚೀಟಿ ಕಾಣುತ್ತದೆ)

**ಕಮಲಮ್ಮ:** ಅಯ್ಯ! ಚೀಟಿ ನನ್ನ ಮನ್ಯಾಗ್ಯಾಕ ಬಂತು! ಈ ಮೂವರು ಭ್ರಮಾ ಹಿಡಿದವರಾಂಗ ಮಾಡಾಕ ಹತ್ಯಾರ. ಮೂವರು ಚೀಟಿ ಬರಿಯೂದು ಒಗೆಯೂದು, ಚೀಟಿ ಬರಿಯೂದು ಒಗೆಯೂದು.... (ಚೀಟಿ ಓದುತ್ತಾಳೆ).

ಲೇ ಕಮಲಮ್ಮ! ಹೆಸರು ಎಂಥಾ ಛಂದದ. ಕೆಲಸಾ ನೋಡಿದರ ಕೆಸರಿನಂಗ ಮಾಡಾಕ ಹತ್ತೀದಿ! ಮುದುಕಿ ಆದರೂ ಬುದ್ಧಿ ಬಂದಿಲ್ಲ, ದೇವರು ನಿನ್ನನ್ನು ಸುಮ್ಮನೆ ಬಿಡುವದಿಲ್ಲ! ನಿನ್ನ ಕೈ ಕಾಲು ಮುರಿಯುತ್ತಾನೆ ಹುಷಾರ್! ನಿನ್ನ ಯಮದೂತರಾವ!

**ಕಮಲಮ್ಮ:** (ನಡುಗುತ್ತಾಳೆ) ಏ ಯವ್ವಾ ಇವಯಾರ ಯಮದೂತರಾವ್! ಏ ಸಂಗಮ್ಮ! ಸಂಗಮ್ಮ (ಸಂಗಮ್ಮ ಬಾಗಿಲು ತೆರೆದು ಹೊರಗೆ ಬರುತ್ತಾಳೆ (ಬ್ರಷ್‌ನಿಂದ ಹಲ್ಲು ಉಜ್ಜುತ್ತ).

**ಸಂಗಮ್ಮ:** (ಬಾಯಲ್ಲಿ ಪೇಸ್ಟ್ ಇದೆ) ಅಯ್ಯ ಏನಾಯ್ತ ಕಮಲಮ್ಮ! (ನಾಟಕೀಯ ಮಾಡಬಹುದು).

**ಕಮಲಮ್ಮ:** ಅಲ್ಲಽ ಯಾರೋ ನನ್ನ ಮನ್ಯಾಗ ಚೀಟಿ ಒಗದಾರ! ನೀನರ ಒಗೆದಿಲ್ಲಲ್ಲ? ಯಮದೂತರಾವ್ ಅಂತ್ರಿ! ಅವನ್ಯಾರ್ರಿ? ಎಲ್ಲಿ ನೀನಽ ಒಗದಿಯೇನು?

**ಸಂಗಮ್ಮ:** ನಾನ್ಯಾಕ ಒಗೀಲಿ ಕಮಲಮ್ಮ....!

**ಕಮಲಮ್ಮ:** (ಸಂಗಮ್ಮನ ಕಾಲಬಳಿ ಚೀಟಿ ಬಿದ್ದದ್ದು ಕಾಣುತ್ತದೆ) ಅಯ್ಯ! ಸಂಗಮ್ಮ ನಿನ್ನ ಕಾಲಾಗ ನೋಡು ಏನ ಬಿದ್ದದ!

**ಸಂಗಮ್ಮ:** ಲೈಟ ಬಿಲ್ ಕಾಣ್ತದ! (ಚೀಟಿ ಎತ್ತಿಕೊಂಡು ಓದುತ್ತಾಳೆ) ಸಂಗಮ್ಮ, ನೀನೇ ನನ್ನ ಮಂಗಮ್ಮ! ನನ್ನನ್ನು ಏಕೆ ಮರೆತೆ? ನಾನೇನು ಮಾಡಿದೆ ಕೊರತೆ? ನನ್ನೊಂದಿಗೆ ತೋಟಕ್ಕೇ ಬಂದಿದ್ದಿ. ನಾನು ತಂದಿರುವ ಪಕೋಡ ಮೀನು ತಿಂದಿದ್ದಿ. ನಾಳೆ ನಾನು ನಿನ್ನ ಕಡೆ ಬರುವೆ. ಪಕೋಡ ಮೀನು ತರುವೆ. ಯಾರಿಗೂ ಹೇಳಬೇಡ ಪ್ರಿಯೆ. ನಿನ್ನ ಮಂಜು ಮಹಾರಾಜ!

ಏ ಯವ್ವಾ! ಇವ ಯಾವ ಮಹಾರಾಜನೇ ಕಮಲಮ್ಮ. ಈ ಚೀಟಿಯೊಳಗ ಬರದಿದ್ದು ಯಾವುದೂ ಖರೆ ಅಲ್ಲ! ಛೀ ನಾನಂತುಯಾವ ತೋಟಕ್ಕೂ ಹೋಗಿಲ್ಲ ಛೀ! ಛೀ!

ಮೀನಂತೂ ನಾನು ಮುಟ್ಟಾಂಗಿಲ್ಲ! ಇದೆಲ್ಲ ಅಪ್ಪಟ ಸುಳ್ ಅದ!
(ಬಿಕ್ಕಿ ಬಿಕ್ಕಿ ಅಳುವಳು)

**ಕಮಲಮ್ಮ:** ಅಯ್ಯ ಯವ್ವಾ! ಶಾಂತಳಾಗು ನೀನು ಅಂಥವಳಲ್ಲ! ನನಗ ಗೊತ್ತು.

**ಸಂಗಮ್ಮ:** ಅಲ್ರಿ ಕಮಲಮ್ಮ ಒಂದವ್ಯಾಳೆ ಈ ಚೀಟಿ ನನ್ನ ಗಂಡನ ಕೈಯ್ಯಾಗ ಸಿಕ್ಕಿದ್ದರ ನನ್ನ ಹೆಣಾನ ಹಾಕತಿದ್ರು. ನಾ ಸತ್ತರೂ ಅವರ ಸಂಶಯ ದೂರ ಆಗತಿದ್ದಿಲ್ಲ!

**ಕಮಲಮ್ಮ:** ಮತ್ತೇನು? ಇನ್ನೊಬ್ಬರ ಜೀವದ್ದು ಇವರಿಗೆ ಖಬರರೆ ಅದ ಏನು? ಈ ಕೆಲಸ ಗಂಗಮ್ಮನೇ ಮಾಡಿರಬೇಕು. ನಡಿ ಆಕಿಗಿ ಕೇಳೂಣು... (ಗಂಗಮ್ಮನ ಬಾಗಿಲು ಬಡೆಯುವರು. ಗಂಗಮ್ಮ ಬಾಗಿಲು ಹಿಡಿದು ಹೊರಗೆ ಬರುವಳು......).

**ಗಂಗಮ್ಮ:** ಯಾಕ್ರಿ ಏನಾತು?

**ಸಂಗಮ್ಮ:** ನೀನು ಇಂಥಾ ಕೆಲಸಾ ಮಾಡಬಾರದಿತ್ತು?

**ಗಂಗಮ್ಮ:** ನಾನೇನು ಮಾಡಿನಿ? ಕಸಾ ಹೊಡಿಯಾಕ ಹತ್ತೀನಿ.

**ಸಂಗಮ್ಮ:** ನಮ್ಮ ಮ್ಯಾಲಽ ಚೆಲ್ಲಾಕಲ್ಲ? ಚೆಲ್ಲಾಕಲ್ಲ? ಅದು ಬಿಡು. ಈ ಚೀಟಿ ನನ್ನ ಮನ್ಯಾಗ ಯಾಕ ಎಸಿದಿದ್ದಿ ಮೊದಲ ಹೇಳು!

**ಕಮಲಮ್ಮ:** ಇಂಥಾ ಚೀಟಿ ಎಸದು ಮಂದಿ ಜೀವಾ ತಿನಬಾರದು ತಿಳಿತೇನು?

**ಗಂಗಮ್ಮ:** ನಾನ್ಯಾಕ ಚೀಟಿ ಎಸೀಲಿ? ಈಗರೆ ಎದ್ದು ಸಿವಸಿವಾ ಅಂತ ಕಸಾಹೊಡ್ಯಾಕ ಹತ್ತೀನಿ, (ಕಸದಲ್ಲಿ ಚೀಟಿ ಕಾಣುವದು).

**ಕಮಲಮ್ಮ:** ಅಯ್ಯ! ದೇವ್ರೆ, ನಿನ್ನ ಮನ್ಯಾಗೂ ಚೀಟಿ?

**ಗಂಗಮ್ಮ:** (ಚೀಟಿ ಎತ್ತಿ ಓದುವಳು) ಗಂಗಮ್ಮ ಎಂಥಾ ಹೆಸರು! ಓಹ್ ನಿನ್ನ ಹೆಸರು ಕೇಳಿಯೇ ನಾನು ಸೋತೆ! ನೀನೇ ನನ್ನ ಪ್ರಾಣ. ನೀನಲ್ಲದೆ ಯಾರೂ ಇಲ್ಲ. ನಾವಿಬ್ಬರೂ ಹಾಲು ಬೆಲ್ಲ! ನಿನ್ನನ್ನು ಭೆಟ್ಟಿಯಾಗಲು ಇಂದು ಮಧ್ಯಾಹ್ನ ಬರುವೆ. ಯಾರಿಗೂ ಹೇಳಬೇಡ ಹುಶಾರ್! ಇತಿ ನಿನ್ನ ಹಳೆಹುಚ್ಚ ಪ್ರೇಮರಾಜ್.

(ಗಾಬರಿಯಿಂದ ಒಮ್ಮೆಲೆ ಚಾರಿಗೆ ಒಗೆದು ನೆಲಕ್ಕೆ ಕೂಡುತ್ತಾಳೆ) ಏಯವ್ವಾ! ಇದೇನು ಬಂತೆ ಶನಿ! ದೇವರು ಒಳ್ಳೆದು ಮಾಡ್ಲ. ಈ ಚೀಟಿ ನನ್ನ ಕೈಯ್ಯಾಗ ಸಿಕ್ತು. ಅವರ ಕಯ್ಯಾಗ ಸಿಕ್ಕಿದ್ರ, ಶಿವಶಿವಾ ಶಿವಶಿವಾ (ಗಲ್ಲ ಬಡೆದುಕೊಳ್ಳುವಳು) ಯಾರ್ರಿ ಈ ಹಳೇಹುಚ್ಚ?

**ಕಮಲಮ್ಮ:** (ವಿಚಾರಮಗ್ನಳಾಗಿ) ದಂ ಹಿಡೀರಿ! ಈಗ ನನಗ ಎಲ್ಲ ತಿಳಿತು! ಇದೆಲ್ಲ ಕಿತಾಪತಿ ಆ ಕಾವೇರಿದs. ಅದ ಅವಳೇ ಒಗದಾಳ, ಅವಳೇ ಒಗದಾಳ! ನಡೀರಿ ಆಕಿಕಡಿ (ಎಲ್ಲರೂ ಕಾವೇರಿಯ ಮನೆಗೆ ಹೋಗುವರು ದಡ ದಡ ಬಾಗಿಲ ಬಡೆಯುವರು).

**ಕಾವೇರಿ:** ಯಾರಿದ್ದೀರಿ? ದಂ ಹಿಡೀರಿ. ಬಂದೆ (ಎನ್ನುತ್ತ ಬಾಗಿಲು ತೆರೆಯುವಳು, ಎಲ್ಲರೂ ಒಮ್ಮೆಲೆ ಅವಳ ಮನೆಯೊಳಗೆ ನುಗ್ಗುವರು) ಯಾಕ್ರಿ? ಏನಾತು? ಭೂಕಂಪ ಏನಾರೆ ಆತೇನು?
ಎಷ್ಟ ಗಾಬರಿ ಆಗೀರಿ?!

**ಕಮಲಮ್ಮ:** ಭೂಕಂಪ ಅಲ್ಲವ್ವ ಜ್ವಾಲಾಮುಖಿ!

**ಗಂಗಮ್ಮ:** ಅಲ್ಲ ಯುದ್ಧ!

**ಸಂಗಮ್ಮ:** ಅಲ್ಲ ಮಹಾಯುದ್ದ! ಮಹಾಯುದ್ದ ನಡದದ ನಮ್ ತೆಲ್ಯಾಗ! ನೀವು ನಮ್ಮೆಲ್ಲರ ಆತ್ಮೀಯ ಗೆಳತಿ ಆಗಿ ಇಂಥಾ ಹಲ್ಕಾ ಕೆಲಸಾ ಮಾಡಬಾರದು! ತಿಳಿತೇನು?

**ಕಾವೇರಿ:** ನನಗಂತೂ ಏನೂ ತಿಳಿದಿಲ್ಲ! ಸ್ವಲ್ಪ ತಿಳಿಸಿ ಹೇಳ್ರಿ...

**ಕಮಲಮ್ಮ:** ಅವ್ವ! ಇವಳ ಕಾಲಾಗೂ ಒಂದು ಬಿದ್ದೈತಿ ಚೀಟಿ! ಅಲ್ಲಿ ನೋಡ್ರಿ!

**ಕಾವೇರಿ:** (ಏನೂ ತಿಳಿಯದೆ) ಚೀಟಿ? ಇದ್ಯಾವ ಚೀಟಿ? (ಬಿಡಿಸುತ್ತ) ನಾನೇ ಬರಿದಿದ್ದು ಇರಬೇಕು. ತಪ್ಪಿ ಇಲ್ಲೇ ಬಿದ್ದದ (ಓದುವಳು).

ಹಾಯ್ ಡಿಯರ್ ಕಾವೇರಿ! ನೀನಿಲ್ಲದೆ ನನ್ನ ಜೀವನ ಒಣಗಿದ ಕೆರಿ! ನೀನು ಕಾಲೇಜಿನಲ್ಲಿ ಇದ್ದಾಗ ನಾನು ಬಹಳ ಪ್ರೀತಿಸುತ್ತಿದ್ದೆ. ನಾವು ಸಿನಿಮಾ ನೋಡಿದ್ದು, ಸಮುದ್ರದಲ್ಲಿ ಹಡಗಿನಲ್ಲಿ ತೇಲಾಡಿದ್ದು, ಮರೆತೆಯಾ? ಎಲ್ಲರಿಗೂ ಚೀಟಿ ಬರೆಯುತ್ತಿ, ನನಗೂ ಚೀಟಿ ಬರೆಯಬಾರದೆ? ಮೊನ್ನೆ ನಾನು ನಿನ್ನನ್ನು ಮಾಲ್‌ನಲ್ಲಿ ನೋಡಿದೆ. ನಿನ್ನ ಹಿಂದೆ ಬಂದೆ. ನಿನ್ನ ಮನೆನೋಡಿದೆ. ನಾನು ನಾಳೆ ಸಂಜೆ ನಿನ್ನ ಮನೆಗೆ ಬರುವೆ. ನೀನಿಲ್ಲದೆ ನಾನು ಬದುಕಲಾರೆ ಪ್ರಿಯೆ! ನಿನ್ನ ಪ್ರೇಮದಾಸ! (ಅವಳೂ ಚೀಟಿಯೊಂದಿಗೆ ನೆಲಕ್ಕೆ ಕೂಡುವಳು, ಉಳಿದವರೂ ಕೂಡುವರು) ಇದೇನ ಯವ್ವಾ! ನನ್ನ ಹಣೆಬಾರ! ಇವ ಯಾವ ಪ್ರೇಮದಾಸ? ಎಲ್ಲಿಂದ ಬಂದ? ನಾನಂತೂ ಇಂಥಾ ಕೆಲಸ ಎಂದೂ ಮಾಡಿಲ್ಲ. ಖರೆ ಖರೆ ಹೇಳ್ತೀನಿ! ದೇವರ ಆಣಿ!

**ಸಂಗಮ್ಮ:** (ವಿಚಾರಮಗ್ನಳಾಗಿ) ಹಾಂ! ನನಗ ಈಗ ತಿಳೀತು ಎಲ್ಲ ಹಕೀಕತ್ತು? ಇದೆಲ್ಲ ಆ ಫ್ಯಾಶನ್ ಪೋರಿ ಹೇಮಾಳದ್ದೇ ಕೆಲಸ!

**ಕಾವೇರಿ:** ಹಾಂಗ ಹ್ಯಾಂಗ ಹೇಳ್ತಿ?

**ಗಂಗಮ್ಮ:** ಆಕಿ ಬಾಳ ಶಾಣ್ಯಾ ಇದ್ದಾಳ! ನಾವು ನೀವು ತಿಳಕೊಂಡಂಗ ಮಳ್ಳ ಅಲ್ಲ ಆಕಿ!

**ಕಮಲಮ್ಮ:** ಆಕೀನೇ ನಮ್ಮ ಮ್ಯಾಲ ಕಣ್ಣ ಇಟ್ಟಿರಬೇಕು ಅನಸ್ತದ ನನಗ!

**ಸಂಗಮ್ಮ:** ಈಗ ಬ್ಯಾರೆ ಮಾರ್ಗ ಇಲ್ಲ! ಬ್ಯಾರೆ ಭಾನಗಡಿ ಆಗಾಕ ಮುಂಚೆ ಆಕಿಕಡಿ ಹೋಗಿ ಕ್ಷಮಾ ಕೇಳೂಣು.

**ಕಮಲಮ್ಮ:** ಹೌದವ್ವ! ಸುಮ್ನೆ ಕಿರಿಕಿರಿ ಬ್ಯಾಡ........!

**ಗಂಗಮ್ಮ:** ನಮ್ ನಾಟಕ ಬಂದ್ ಮಾಡೂಣು!

(ನಡೀರಿ ನಡೀರಿ ಎನ್ನುತ್ತ ನಾಲ್ಲೂಜನ ಹೇಮಾಳ ಬಾಗಿಲಿಗೆ ನಿಂತು ಬಾಗಿಲು ಬಡಿಯುತ್ತಾರೆ...)

**ಕಮಲಮ್ಮ:** ಹೇಮಕ್ಕ ಬಾಗಲಾ ತಗೀರಿ!

**ಸಂಗಮ್ಮ:** ನಿಮಗಿಂತ ಸಣ್ಣವಳಿಗಿ ಅಕ್ಕ ಅಂತೀರಿ? ... ತಂಗೀ ಹೇಮೂ ಬಾಗಲಾ ತಗೀರಿ. (ನಾಟಕೀಯವಾಗಿ)

**ಗಂಗಮ್ಮ:** ಹೇಮೂ ಬೇಟಾ, ಬಾಗಲಾ ತಗಿಯಮ್ಮ!
(ಹೇಮಾ ಬಾಗಿಲು ತೆಗೆಯುವಳು) ಏನು ಬೇಕಾಗಿತ್ತು?

**ಎಲ್ಲರೂ:** ನಮ್ ತಪ್ಪು ಕ್ಷಮಾ ಮಾಡ್ರಿ! ನಾವು ಚೀಟಿಬರದು ನಿಮಗ ತ್ರಾಸ್ ಕೊಟ್ವಿ. ದಯಮಾಡಿ ಕ್ಷಮಾಮಾಡ್ರಿ.
(ಎಂದು ಕಿವಿ ಹಿಡಿದು ಕೊಳ್ಳುವರು. ಗಲ್ಲ ಗಲ್ಲ ಬಡಿದುಕೊಳ್ಳುವರು) ಇನ್ನೊಮ್ಮೆ ಹಿಂಗ ಎಂದೂ ಯಾರಿಗೂ ಮಾಡಾಂಗಿಲ್ಲ...... ದೇವರಾಣಿ.....

**ಹೇಮಾ:** ಆಗ್ಲಿ! ನಿಮ್ಮ ತಪ್ಪು ನಿಮಗ ತಿಳಿತಲ್ಲ? ಯಾರು ತಗ್ಗು ತೋಡತಾರೊ ಅವರೇ ತಗ್ಗಿನಾಗ ಬೀಳ್ತಾರ! ಸಣ್ಣ ಚೀಟಿನೂ ಒಬ್ಬರ ಜೀವನಾ ಹಾಳ ಮಾಡ್ತದ! ತಿಳಿತಲ್ಲ? ಹಾಂ! ಇದು ತೊಗೋರಿ ನೀವು ಮಾಲ್‌ನಲ್ಲಿ ಸ್ಲೀಪರ್ ಚಪ್ಪಲ್ ಚನ್ನಾಗಿವೆ ಅಂದಿದ್ದೀರಿ ಕಮಲಮ್ಮ ಇದು ನಿಮಗೆ!

ಕಾವೇರಿ ಈ ಪೆನ್ನು ಕಾಗದ ಅಂಕಲೀಪಿ ನಿಮಗೆ! ನೀವು ಚೆನ್ನಾಗಿ ಕನ್ನಡ ಬರೆಯುವದನ್ನು ಕಲಿಯಲೇಬೇಕು.....

**ಕಮಲಮ್ಮ:** ಅವ್ವ! ಎಷ್ಟ ಛಂದ ಆದಾಳ್ರಿ ಈ ಹೇಮಾ.

**ಕಾವೇರಿ:** ಅಲ್ಲ ಹೇಮಕ್ಕ! ಆ ಗಾರ್ಡನದಾಗಿನ ಹುಡಗ ಯಾರು? ನನ್ನ ಕಾಲ ಬ್ಯಾನಿ ಐದೇ ನಿಮಿಷದಾಗ ಕಮ್ಮಿ ಮಾಡ್ದ!

**ಹೇಮಾ:** ಅವನು ನನ್ನ ಅಣ್ಣ! ಬ್ಯಾಂಕಿನಲ್ಲಿ ಮ್ಯಾನೇಜರ್ ಇದ್ದಾನ. ಭಾಳ ಕಮ್ಮಿ ಮಾತಾಡತಾನ! ಅವನ ಬರ್ತ್‌ಡೇ ಅನಾಥ ಮಕ್ಕಳೊಂದಿಗೆ ಗಾರ್ಡನದಲ್ಲೇ ಮಾಡ್ತಾನ!

**ಸಂಗಮ್ಮ:** ಮತ್ತ ಆ ಗಿಡಗಳಿಗೆ ನೀವು ನೀರು ಯಾಕ ಬಿಡ್ತಾ ಇದ್ರೀ!

**ಹೇಮಾ:** ಆ ಗಿಡಗಳನ್ನು ನಮ್ಮ ತಂದೆಯ ಸ್ಮರಣಾರ್ಥ ನಾವೇ ನೆಡಿಸಿದ್ದೆವು. ಅದಕ್ಕಾಗಿ ಪ್ರತಿ ರವಿವಾರ ಆ ಗಿಡಗಳಿಗೆ ನಾನು ನೀರು ಹಾಕಲು ಹೋಗುತ್ತೇನೆ!

**ಕಮಲಮ್ಮ:** ಅವ್ವಾ, ತಪ್ಪಾತವ್ವ, ನಾವೆಲ್ಲ ನಿನ್ನ ಭಾಳ ತಪ್ಪು ತಿಳಕೊಂಡಿದ್ದೀವರಿ ಇಂದಿನ ಕಾಲದಾಗ ಎಲ್ಲಾರು ಕೆಟ್ಟವರೇ ಅಂತ ಭಾವಿಸಿದ್ದೀವಿ. ಅದು ತಪ್ಪು ಅಂತ ಈಗ ತಿಳೀತು.

**ಕಾವೇರಿ:** ನಿನ್ನಿಂದಲೇ ನಾವೆಲ್ಲ ಜೀವನ ಪಾಠ ಕಲಿತೆವು.

**ಹೇಮಾ:** (ಕೈ ಜೋಡಿಸುವಳು) (ಎಲ್ಲರೂ ಕೈ ಜೋಡಿಸುವರು) ನಮಸ್ಕಾರಮ್ಮ ನಮಸ್ಕಾರ! ಮತ್ತೆ ಭೆಟ್ಟಿ ಆಗೋಣ!

**ಎಲ್ಲರೂ:** ಹಾಗೇ ಆಗಲಮ್ಮ ನಮಸ್ಕಾರ!
(ಪರದೆ ಬೀಳುವದು)


**ಶಬ್ದಾರ್ಥ :** **ಸುಶಿಕ್ಷಿತ** – ಕಲಿತ, **ದರಿದ್ರ**–ಬಡವ, **ಮಿಂಚಿ ಹೋದ ಮಾತು**–ಮುಗಿದ ಮಾತು, **ಸೊಕ್ಕು**–ಅಹಂಕಾರ, **ಗುಪ್ತ**–ಅಡಗಿದ, **ಪೇಚಿನಲ್ಲಿ ಸಿಲುಕು**–ಸಮಸ್ಯೆಯ ಸುಳಿಯಲ್ಲಿ ಸಿಲುಕು, **ಛಂದ**–ಸುಂದರ, ಚೆಂದ, **ಖಾತ್ರಿ**–ಭರವಸೆ, **ಖಾಸಾ**–ಸ್ವಂತದ, **ಎಸೆ**–ಬೀಸಾಡು

---


**ಕೃತಿ 1) ಕೆಳಗಿನ ಜಾಲಾಕೃತಿಯನ್ನು ಪೂರ್ಣ ಮಾಡಿ ಬರೆಯಿರಿ.**





**ಕೃತಿ 2) ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**




**ಕೃತಿ 3) ಜಾಲಾಕೃತಿಯನ್ನು ಪೂರ್ಣಮಾಡಿರಿ**




**ಕೃತಿ 4) ಮಹಿಳೆಯರು ಮಾಲ್‌ನ್ನು ಕಂಡ ರೀತಿಯನ್ನು ಕೆಳಗಿನ ಕೃತಿಯಲ್ಲಿ ಬರೆಯಿರಿ.**



**ಕೃತಿ 5)** **ಕೆಳಗಿನವುಗಳಿಗೆ ಉಪಸರ್ಗಯುಕ್ತ ಪದ ಬರೆಯಿರಿ.**

i) ಚಾರ

ii) ಗಾಳಿ

iii) ಚಿತ್ರ

iv) ವನ

**ಕೃತಿ 6)** **ನೌಕರಿ ಮಾಡುವ ಹೆಣ್ಣುಮಕ್ಕಳ ಸಮಸ್ಯೆಗಳನ್ನು 10-12 ಸಾಲುಗಳಲ್ಲಿ ಬರೆಯಿರಿ.**

**ಕೃತಿ 7)** **ಹೆಣ್ಣು ಮಕ್ಕಳು ತಮ್ಮ ಸಮಸ್ಯೆಗಳನ್ನು ಹೇಗೆ ಎದುರಿಸಬೇಕು ? ನಿಮ್ಮ ಮಾತುಗಳಲ್ಲಿ ಹೇಳಿರಿ.**

**ಕೃತಿ 8)** **ಒಂದು ಚೀಟಿಯಿಂದ ಒಬ್ಬರ ಜೀವನ ಹಾಳಾಗಬಹುದು. ಹೇಗೆ ? ನಿಮ್ಮ ಮಾತುಗಳಲ್ಲಿ ಬರೆಯಿರಿ.**

**ಕೃತಿ 9)** **ಈ ಪಾಠದಲ್ಲಿ ಬಂದಿರುವ ಇಂಗ್ಲಿಷ್ ಶಬ್ದಗಳನ್ನು ಆಯ್ದು ಬರೆಯಿರಿ.**

* * * * *

# 8 ನಗೇಡಾದುದು

**- ದುರ್ಗಸಿಂಹ**

**ದುರ್ಗಸಿಂಹ:** ಪ್ರಾಚೀನ ಕನ್ನಡ ಗದ್ಯ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರಲ್ಲಿ ದುರ್ಗಸಿಂಹನು ಒಬ್ಬನು. 'ಕರ್ನಾಟಕ ಪಂಚತಂತ್ರ' ಅವನ ಗ್ರಂಥ. ಇದು ಚಂಪುವಿನ ಸಾರವನ್ನು ಅಳವಡಿಸಿಕೊಂಡಿದೆ. ಇಲ್ಲಿ ಪ್ರಾಣಿ, ಪಕ್ಷಿ ಮತ್ತು ಮನುಷ್ಯ ಇವು ಈ ಕಥೆಗಳ ಪಾತ್ರಗಳಾಗಿದ್ದು ನೀತಿಯ ತಿಳಿವನ್ನು ಪ್ರಚುರಪಡಿಸುತ್ತವೆ.

ನಾಗಶರ್ಮ ಒಬ್ಬ ಬಡಬ್ರಾಹ್ಮಣ. ತಾನು ಬೇಡಿತಂದ ಹಿಟ್ಟನ್ನು ಮಡಕೆಯಲ್ಲಿ ಸಂಗ್ರಹಿಸಿ ನೆಲವಿನಲ್ಲಿ ಇಟ್ಟಿರುತ್ತಾನೆ. ಅದನ್ನು ಮಾರಿ ಹಣ ಸಂಗ್ರಹಿಸಿ ಶ್ರೀಮಂತನಾಗುವ ಕನಸನ್ನು ಕಾಣುತ್ತಾನೆ. ಅವನು ಈ ನೆನಪಿನಲ್ಲಿ ಬಡಿಗೆಯಿಂದ ಮಡಕೆಗೆ ಹೊಡೆಯುತ್ತಾನೆ. ಮಡಕೆಯು ಒಡೆದು ಹಿಟ್ಟೆಲ್ಲಾ ತಲೆಯ ಮೇಲೆ ಚೆಲ್ಲಿ ಜನರ ನಗೇಡಾಗುತ್ತಾನೆ. ಕನಸಿನ ಗೋಪುರ ಕುಸಿದು ನಿರ್ನಾಮವಾಗುತ್ತದೆ. ಈ ವಿನೋದದ ಸಂಗತಿ ಈ ಕಥೆಯ ತಿರುಳು. ಇದನ್ನು ಪಂಚತಂತ್ರದ 'ಪರೀಕ್ಷಾ ವ್ಯಾವರ್ಣನಂ' ಎಂಬ ಭಾಗದಿಂದ ಆಯ್ದು ಸಂಪಾದಿಸಲಾಗಿದೆ.

---

ಧರ್ಮವತಿಯೆಂಬ ಪುರದೊಳ್ ನಾಗಶರ್ಮನೆಂಬ ಪಾರ್ವಂ ತನಗೆ ಯಾಚಕ ವೃತ್ತಿಯೆ ವೃತ್ತಿಯಾಗಿರ್ದು, ಪಲವು ದಿವಸಕ್ಕೊಂದು ಕೊಡಂ ತೀವಿದ ಸತ್ತುಗದ ಪುಡಿಯಂ ಪಡೆದು ಆ ಕೊಡನಂ ತನ್ನ ಪಟ್ಟಿರ್ಪಡೆಯೊಳ್ ಕಟ್ಟಿ ನೇಲ್ದಿಟ್ಟು ಮಹಳದ ಪಕ್ಷದೊಳೊಂದು ದಿವಸಂ.

ಇಂಬಾಗಿರೆ ಮುದದಿಂಪಲ  
ವುಂ ಬಣ್ಣದ ಭಕ್ಷ್ಯರಾಶಿ ವೆರಸಾಕಂಠೋ  
ಷ್ಠಂಬರಮುಂಡೊಯ್ಯನೆಪಾ  
ರ್ವಂ ಬಂದಾ ಕೊಡನ ಕೆಳಗೆ ಪಟ್ಟಿರ್ದಾಗಳ್

ಆ ನಾಗಶರ್ಮಂ ರಾಗಿಸಿ ಮೇಗಂ ನೋಡಿ ತನ್ನೊಡನೆಯ ಬಡ ಪಾರ್ವಂಗಿಂತೆಂದಂ :- ಧಾನ್ಯಮನರ್ಘಮಾದ ಕಾಲದೊಳೀ ಕೊಡಂ ತೀವಿದ ಸತ್ತುಗದ ಪುಡಿಯಂ ಪತ್ತು ಪಣವಿಂಗೆ ಮಾರಿ ಪತ್ತಾಡಂ ಕೊಳ್ವೆಂ. ಅವು ವರುಷಕ್ಕಿರ್ಮೆ ಮರಿಯಂ ಪಡೆವುವು. ಪ್ರಸವ ಪರಿವರ್ತನದಿಂ ಪಲವಾಡಕ್ಕುಂ. ಆದೊಡವಂ ಕೊಟ್ಟು ಪಯನಾವಂ ಕೊಳ್ವೆಂ. ಅವಕ್ಕೆ ಪುಟ್ಟದ ಪೋರಿಗಳಂ ತಿರ್ದಿಯಾರಂಬಗೈದು ಸಮಸ್ತ ಧಾನ್ಯಮಂ ಸಮ್ಪೂರ್ಣವಾಗಿ ಬೆಳೆದು ಆ ಧಾನ್ಯಮಂ ಮಾರಿ ಪೊನ್ನಂ ಪಡೆವೆಂ. ಈ ಪೊಳಲೊಳ್ ಸುಪ್ರದೇಶಮಪ್ಪ ಸ್ಥಾನದೊಳ್ ಸುಧಾಧವಳಿತಮಪ್ಪ ಧವಳಾಗಾರಂ ಗೋಷ್ಠಾಗಾರಂ ಮೊದಲಾಗಿ ಪಲವುಂ ಶೋಭಾವಹಂಗಳಪ್ಪ ಗೃಹಂಗಳಂ ಮಾಡಿಸುವೆಂ. ಧನಕನಕ ಸಮೃದ್ಧಿಯಿಂ ತನಗೆ ವಜ್ರದ ಕುಂಡಲಮಂ, ವಜ್ರಧಾರೆಯ ಚೆನ್ನ ಸರಪಳಿಯುಮಂ, ನವಗ್ರಹದ ವಿಚಿತ್ರ ಕಂಕಣಮುಮಂ, ನವರತ್ನದುಂಗರಂಗಳುಮಂ ಮಾಡಿಸಿಕೊಂಡು ಪಟ್ಟಾವಳಿಯನುಟ್ಟು ಕೊಂಡರಸುಮಗನಂ ಪೋಲ್ವೆಂ. ಪುರಜನಂಗಳ್ಗೆಲ್ಲಂ ಪಿರಿಯನಾಗಿರ್ಪೆನ್ನಂ ಕಂಡೊರ್ವಂ ಕುಲಮುಂ, ಶೀಲಮುಂ,  ಪೆಂಪುಂ, ಬಿಣ್ಪುಂ ಪುಣ್ಯಮುಮುಳ್ಳಾತಂ, ತನ್ನ ಮಗಳ್ ಚೆನ್ನೆಯಪ್ಪ ಕನ್ನೆಯಂ ಕುಡೆ ಮದುವೆಯಂ ಮಾಡಿಕೊಂಡು ಇಷ್ಟ ವಿಷಯಂಗಳನನುಭವಿಸುತಿರ್ಪುದುಂ; ಕೆಲದಿವಸಕ್ಕಾಕೆಗೆ ಗರ್ಭಮಾಗೆ, ಗರ್ಭಚಿಹ್ನಂಗಳನಾಂ ಕಂಡು ಬಲ್ಲ ಜೋಯಿಸನಂ ಕರೆಯಿಸಿ ಎನ್ನ ಪೆಂಡತಿಯೇನಂ ಪಡೆವಳೆಂದು ಬೆಸಗೊಂಬೆಂ. ಗಂಡುಗೂಸಂ ಪಡೆವಳೆಂದು ಪೇಳ್ದೊಡೆ, ಕೇಳ್ದಾಭಟ್ಟಂಗೆ ಮೆಚ್ಚುಗೊಟ್ಟು ಬಳಿಕ್ಕಾಕೆಯ ಸೀಮಂತಮಂ ಸಂಭ್ರಮದಿಂ ಮಾಡಿ ಶೋಭನ ಕ್ರಿಯೆಗಳೊಳ್ಳಿತ್ತಾಗೆ ಪುರಜನಂಗಳಂ ಬಂಧು ಜನಂಗಳುಮನಾಮಂತ್ರಿಸುವೆಂ: ತುಪ್ಪದ ತೊರೆಗಳ್ ಪರಿವನ್ನಂ ಪಿರಿದಪ್ಪ ಭಕ್ಷ ಭೋಜ್ಯಗಳಿಂ ಭೋಜನಂಗಳಂ ಮಾಡಿಸಿ ತದನಂತರ ನವಮಾಸಂ ನೆರೆವುದುಂ. ಎನ್ನ ಪೆಂಡತಿ ಗಂಡು ಮಗನಂ ಪೆರಲೊಡಮಪ್ಪ ಶೋಭೆಯಂ ಮಾಡಿಸಿ ಮಹಾದಾನಂಗೆಯ್ದಾ ಶಿಶುವಿಂಗೆ ಜಾತಕರ್ಮಮಂ ಸೋಮಶರ್ಮನೆಂಬ ನಾಮಕರಣಮಂ, ಅನ್ನ ಪ್ರಾಶನಮಂ ಕ್ರಮದಿಂ ಮಾಡಿ ಸುಖದಿನಿರ್ಪುದುಂ; ಆ ಬಾಲಕಂ ಬಾಲದುಡಿಗೆಗಳಂ ತೊಟ್ಟು ನಡೆಗಲ್ತೊಂದು ದಿವಸಂ ಗೋವ್ರಜಂಗಳೊಳ್ ಸೋಂಕುವುದನಾಂ.

ಕಂಡೆಲೆತೊತ್ತೆ ! ಮಗನನೀ ಪೊತ್ತಿನೊಳ್ ಪರಿಯಬಿಟ್ಟೆಯೆಂದು.
ಮುನಿದಿರದೆ ಪರಿದು ಪಿರಿದೊಂ
ದೊನಕೆಯೊಳಾನವಳ ತಲೆಯನೀ ತೆರದಿಂಪೊ
ಯ್ವೆನುತೆತ್ತಿಯಷ್ಟಿಯಂ ಕೊಂ
ಡೆನಸುಂ ಪೊಯ್ದಂ ಕಡಂಗಿ ಸತ್ವದ ಕೊಡನಂ

ಅಂತು ಪೊಯ್ಯೆ ಕೊಡನೊಡೆದು ಶ್ವೇತಚೂರ್ಣಮೆಲ್ಲಂ ತನ್ನ ಮೇಲೆ ಬೀಳ್ವುದುಂ, ನಾಗಶರ್ಮಂ ಬೂದಿವೂಸಿದ ತಪೋಧನನಂತೆಯುಂ ಪುಡಿಯೊಳ್ ಪೊರಳ್ದ ಬೆಳ್ಗತ್ತೆಯಂತೆಯುಂ, ಶ್ಲೇಷ್ಮೋತ್ಕಟ ಮಾದಂತೆಯು ಗುಳುತ್ತುಂ, ಅಳಿಗಣ್ಣರಂತೆ ಮಿಳು ಮಿಳನೆ ನೋಡುತ್ತುಂ, ಮುದದಿಂ ಪೊರಮಟ್ಟುನಿಂದ ಛಾಂದಸ ಬ್ರಾಹ್ಮಣನಂ ಕಂಡು ಗುಂಪು ನೆರದಿದೇನೆಂದು ಬೆಸಗೊಂಡೊಡಾತನೊಡನೆಯ ಪಾರ್ವಂ ತತ್ಪ್ರಪಂಚಮೆಲ್ಲಮಂ ಸವಿಸ್ತರಂ ಪೇಳ್ವುದುಂ, ಪುರಜನಂಗಳ್ ಕೇಳ್ದು ಕರುಳಂ ಪಿಡಿದು ನಗೆಯೊಳ್ ಪೊರಳ್ದರ್.

---

## ಶಬ್ದಾರ್ಥ :

**ತೀವು** – ತುಂಬು, **ಸತ್ತುಗ** – ಹುರಿದ ಹಿಟ್ಟು, **ಪಟ್ಟಿರ್ಪೆಡೆ** – ಮಲಗುವ ಸ್ಥಳ, **ನೇಲ್** – ಜೋತಾಡು, ತೂಗು, **ಇಂಬು** – ಲೇಸು, **ಮುದ** – ಸಂತೋಷ, **ಕಂಠೋಷ್ಠಂಬರಂ** – ಕುತ್ತಿಗೆಯಿಂದ ತುಟಿಯ ವರೆಗೆ, **ರಾಗಿಸಿ** – ಆಸಕ್ತನಾಗಿ, **ಅನರ್ಘ್ಯ** – ಬೆಲೆ ಹೆಚ್ಚಾಗಿ, **ತುಟ್ಟಿ, ಇರ್ಮೆ** – ಎರಡು ಬಾರಿ, **ಪ್ರಸವ ಪರಿವರ್ತನ** – ಹೆರಿಗೆಯ ಸರದಿ, **ಪಯನಾವು** – ಹಾಲು ಕೊಡುವ ಆಕಳು, **ಆರಂಬ** – ಒಕ್ಕಲುತನ, ಬೇಸಾಯ, **ತಿರ್ದು** – ಪಳಗಿಸು, ಹೂಡಲು ರೂಢಿಮಾಡು, **ಪೊಳಲ್** – ಪಟ್ಟಣ, **ಸುಧಾಧವಳಿತ** – ಸುಣ್ಣದಿಂದ ಬಿಳಿದಾದ, **ಧವಳಾಗಾರ** – ಚಂದ್ರಕಾಂತ ಶಿಲೆಗಳಿಂದ ಕಟ್ಟಿದ ಮನೆ, **ಗೋಷ್ಠಾಗಾರ** – ಕೊಟ್ಟಿಗೆ, ಗೋಶಾಲೆ, **ಶೋಭಾವಹ** – ಸುಂದರವಾಗಿ ಕಾಣುವ, **ಪಟ್ಟಾವಳಿ** – ರೇಶ್ಮೆ ಬಟ್ಟೆ, **ಪೆಂಪು** – ಘನತೆ, ವೈಭವ, **ಬಿಣ್ಪು** – ಗೌರವ, **ನೆರೆ** – ತುಂಬು, **ಗೋವ್ರಜ** – ಆಕಳುಗಳ ಹಿಂಡು, **ಯಷ್ಟಿ** – ಬಡಿಗೆ, **ಎನಸು** – ಸ್ವಲ್ಪ, **ಕಡಂಗು** – ಅವಸರಪಡು, ಆತುರಗೊಳ್ಳು, **ಶ್ಲೇಷ್ಮೋತ್ಕಟ** – ಕಫದ ಹೆಚ್ಚಳ, **ಅಳಿಗಣ್ಣ** – ಸಣ್ಣ ಕಣ್ಣುಳ್ಳವನು, **ಛಾಂದಸ** – ವೇದಶಾಸ್ತ್ರ ಬಲ್ಲ, **ಜಾತಕರ್ಮ** – ನಾಮಕರಣ ಸಮಾರಂಭ.


### ವಿಶೇಷ ವಿಚಾರ :

i. ಮಹಳ – ಭಾದ್ರಪದ ಕೃಷ್ಣಪಕ್ಷದಲ್ಲಿ ಮಾಡುವ ಶ್ರಾದ್ಧ

ii. ಸೀಮಂತ – ಕುಬುಸದ ಕಾರ್ಯಕ್ರಮ

iii. ಅಷ್ಟಶೋಭೆಗಳು – ಎಂಟು ಬಗೆಯ ಅಲಂಕಾರಗಳು : ಸುಣ್ಣ ಬಣ್ಣ, ಸಾರಣಿ, ರಂಗವಲ್ಲಿ, ತಳಿರು–ತೋರಣ, ಧ್ವಜ, ಪುಷ್ಪಗುಚ್ಛ, ಚಪ್ಪರ, ಮೇಲುಕಟ್ಟು ಹಾಕುವುದು.

### ಕೃತಿ 1 ಕೆಳಗಿನ ಜಾಲಾಕೃತಿಯನ್ನು ಪೂರ್ಣಮಾಡಿರಿ.



**ಕೃತಿ 2 ಕಂಸದಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ದುಕೊಂಡು ಕೆಳಗಿನ ವಾಕ್ಯಗಳನ್ನು ಪೂರ್ಣಮಾಡಿರಿ.**

(i) ಸತ್ತುಗದ ಪುಡಿಯಂ ಪತ್ತು ಪಣವಿಂಗೆ ಮಾರಿ............ ಕೊಳ್ವೆಂ.

(ಧಾನ್ಯಮಂ, ಪಯಸಾವಂ, ಪತ್ತಾಡಂ)

(ii) ಆ ಧಾನ್ಯಮಂ ಮಾರಿ .................. ಪಡೆವೆಂ

(ಪೊನ್ನಂ, ಧನಮಂ, ರಜತಮಂ)


(iii) ಆ ಶಿಶುವಿಂಗೆ ಜಾತಕರ್ಮಮಂ ..................... ನೆಂಬ ನಾಮಕರಣಮಂ ಅನ್ನ ಪ್ರಾಶನಮಂ ಕ್ರಮದಿಂ ಮಾಡಿ ಸುಖದಿನಿರ್ಪುದುಂ.

(ನಾಗಶರ್ಮ, ಸೋಮಶರ್ಮ, ವೀರವರ್ಮ)

(iv) ......................... ಮಿಳು ಮಿಳನೆ ನೋಡುತ್ತುಂ

(ಅಳಿಗಣ್ಣರಂತೆ, ಬೆಳ್ಳತ್ತೆಯಂತೆ, ತಪೋಧನನಂತೆ)


**ಕೃತಿ 3 ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**




**ಕೃತಿ 4 ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ.**



**ಕೃತಿ 5** **ಕೆಳಗಿನ ಜಾಲಾಕೃತಿಯನ್ನು ಪೂರ್ಣ ಮಾಡಿರಿ.**




**ಕೃತಿ 6** **ಕೆಳಗಿನ ಶಬ್ದಗಳ ಅರ್ಥಗಳನ್ನು ಕೊಟ್ಟ ಚೆಂಡಿನಿಂದ ಆಯ್ದು ಬರೆಯಿರಿ.**

i) ಪಾರ್ವ

ii) ಆವು

iii) ಪೊನ್ನು

iv) ಗೃಹ

v) ಕನ್ನೆ

vi) ಶಿಶು

vii) ಉಡಿಗೆ

viii) ಚೂರ್ಣ

**ಬಂಗಾರ**
**ಮಗು ಬ್ರಾಹ್ಮಣ**
**ಹುಡುಗಿ ಮನೆ**
**ಆಕಳು**
**ಬಟ್ಟೆ ಪುಡಿ**

**ಕೃತಿ 7 ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ.**

| | 'ಅ' ಪಟ್ಟಿ | 'ಬ' ಪಟ್ಟಿ |
|---|---|---|
| i. | ಯಾಚಕ | ತೊರೆ |
| ii. | ಸತ್ತುಗದ | ವೃತ್ತಿ |
| iii. | ನವರತ್ನದ | ಪುಡಿ |
| iv. | ತುಪ್ಪದ | ಉಂಗುರ |
| | | ತೊಡುಗೆ |

**ಕೃತಿ 8 ಕೆಳಗಿನ ಹಳಗನ್ನಡ ಶಬ್ದಗಳನ್ನು ಹೊಸಗನ್ನಡದಲ್ಲಿ ಬರೆಯಿರಿ.**

i) ಪೆಂಡತಿ

ii) ಪೊರಲ್ದ

iii) ಪುಟ್ಟಿದ

iv) ಪೋರಿ

v) ಪೋಲ್ವೆಂ

vi) ಪಿರಿಯ

vii) ಪೇಳ್ವೊಡೆ

viii) ಇರ್ಪುದು

**ಕೃತಿ 9 ಕೆಳಗಿನ ಶಬ್ದಗಳ ಸಂಧಿ ಬಿಡಿಸಿ ಹೆಸರಿಸಿರಿ.**

| ಸಂಧಿಪದ | ವಿಗ್ರಹ ರೂಪ | ಸಂಧಿಯ ಹೆಸರು |
|---|---|---|
| i) ಧವಳಾಗಾರ | | |
| ii) ಅಳಿಗಣ್ಣ | | |
| iii) ಪತ್ತಾಡು | | |
| iv) ಬಾಲದುಡಿಗೆ | | |

**ಕೃತಿ 10 ಕೆಳಗಿನ ಶಬ್ದಗಳ ಸಮಾಸ ವಿಗ್ರಹಿಸಿ ಹೆಸರಿಸಿರಿ.**

| ಸಮಾಸಪದ | ವಿಗ್ರಹ ರೂಪ | ಸಮಾಸದ ಹೆಸರು |
|---|---|---|
| ಮೆಚ್ಚುಗೊಡು | | |
| ಬೆಳ್ಳತ್ತೆ | | |
| ತಪೋಧನ | | |
| ನವಮಾಸ | | |

**ಕೃತಿ 11 ಕೆಳಗಿನ ಪದ್ಯಕ್ಕೆ ಪ್ರಸ್ತಾರ ಹಾಕಿ ಛಂದಸ್ಸು ಗುರುತಿಸಿರಿ.**

ಮುನಿದಿರದೆ ಪರಿದು ಪಿರಿದೊಂ
ದೊನಕೆಯೊಳಾನವಳ ತಲೆಯ ನೀತೆರದಿಂಪೊ
ಯ್ವೆನುತೆತ್ತಿಯಷ್ಟಿಯಂಕೊಂ
ಡೆನಸುಂ ಪೊಯ್ದಂ ಕಡಂಗಿ ಸತ್ವದ ಕೊಡನಂ

**ಕೃತಿ 12**

**(i) ನಾಗಶರ್ಮನು ಕನಸಿನಲ್ಲಿ ಕಂಡ ಆಶೆ-ಆಕಾಂಕ್ಷೆಗಳನ್ನು ಕುರಿತು 10-12 ವಾಕ್ಯಗಳಲ್ಲಿ ನಿಮ್ಮ ಮಾತುಗಳಲ್ಲಿ ಬರೆಯಿರಿ.**

**(ii) ನೀವು ಕಂಡ ಕನಸನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

* * * * *

# ಜನಪದ ಸಾಹಿತ್ಯ

## ಕನ್ನಡ ಸಾಹಿತ್ಯದ ಪರಿಚಯ

ಜನಸಾಮಾನ್ಯರು ರಚಿಸಿದ ಸಾಹಿತ್ಯ ಜನಪದ ಸಾಹಿತ್ಯ. ಇದು ಸಾವಿರಾರು ವರ್ಷಗಳಿಂದ ಎಲ್ಲ ದೇಶಗಳಲ್ಲಿ ಬೆಳೆದು ಬಂದಿದೆ. ಹಳ್ಳಿಯ ಜನ ತಮ್ಮ ಕಷ್ಟಸುಖಗಳನ್ನು, ಬಯಕೆ ಭಕ್ತಿಗಳನ್ನು ಹಾಡುಗಳಲ್ಲಿ ಹೇಳಿಕೊಳ್ಳುತ್ತಾರೆ. ಅವರು ಕಥೆಗಳನ್ನು ಕಟ್ಟುತ್ತಾರೆ, ಗಾದೆಗಳನ್ನು ಮಾಡುತ್ತಾರೆ, ಒಗಟುಗಳನ್ನು ಸೃಷ್ಟಿಸುತ್ತಾರೆ. ಜನತೆಯ ಹೃದಯದ ಆಳದಲ್ಲಿರುವ ಸಂಸ್ಕೃತಿ ಇವುಗಳಲ್ಲಿ ರೂಪ ಪಡೆಯುತ್ತದೆ. ಮನೆಯ ಹೆಣ್ಣುಮಕ್ಕಳು ಭತ್ತ ಕುಟ್ಟುತ್ತ, ರಾಗಿ ಬೀಸುತ್ತ, ಬೇರೆ ಕೆಲಸ ಮಾಡುತ್ತ ಹಾಡುಗಳನ್ನು ಹಾಡುತ್ತಾರೆ. ಮದುವೆಗಳು ಮತ್ತು ಇತರ ಶುಭಸಮಯಗಳಲ್ಲಿ ಹಾಡುತ್ತಾರೆ. ಲಾವಣಿಗಳನ್ನು ರಚಿಸುತ್ತಾರೆ. ಮನರಂಜನೆಗಾಗಿ ಕೋಲಾಟವಾಡುತ್ತ ಹಾಡುತ್ತಾರೆ; ಕಥೆಗಳನ್ನು ಹೇಳುತ್ತಾರೆ. ತೇರು, ಪೂಜೆ ಮುಂತಾದ ಸಂದರ್ಭಗಳಲ್ಲಿ ಹಾಡುಗಳನ್ನು ಹೇಳುತ್ತಾರೆ. ಜನಪದ ಸಾಹಿತ್ಯ ಜನಸಾಮಾನ್ಯರು ಬದುಕಿದ ರೀತಿಗೆ, ಯಾವ ರೀತಿ ಬದುಕಬೇಕೆಂದು ಇಟ್ಟುಕೊಂಡಿದ್ದ ಆದರ್ಶಗಳಿಗೆ, ಗುರುತಿಸಿದ ಮೌಲ್ಯಗಳಿಗೆ ಕನ್ನಡಿ. ಇದು ಒಂದು ಸಮಾಜದ ಅಮೂಲ್ಯ ಆಸ್ತಿ.

ಆಗಲೇ ಹೇಳಿದಂತೆ ಎಲ್ಲ ದೇಶಗಳಲ್ಲಿ, ಎಲ್ಲ ಭಾಷೆಗಳಲ್ಲಿ ಜನಪದ ಸಾಹಿತ್ಯವಿದೆ. ಇದರಲ್ಲಿ ಜನತೆಯ ಸಂಸ್ಕೃತಿ ಅರಳಿರುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ **400-500** ವರ್ಷಗಳ ಹಿಂದೆ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ದಾಖಲೆ ಮಾಡುವುದು, ಪ್ರಕಟಿಸುವುದು ಪ್ರಾರಂಭವಾಯಿತು. ಜನಪದ ಸಾಹಿತ್ಯವು ಒಂದು ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಚರಿತ್ರೆಯ ಅಧ್ಯಯನದಲ್ಲಿ ಬಹಳ ನೆರವಾಗುತ್ತದೆ. ಸಮುದಾಯದ ಪದ್ಧತಿಗಳು, ಮೌಲ್ಯಗಳು ಈ ಸಾಹಿತ್ಯದಲ್ಲಿ ಉಳಿದುಬರುತ್ತವೆ. ಕುಟುಂಬ ಜೀವನದ ಸ್ವರೂಪ, ಸಂಬಂಧಗಳು, ಹಬ್ಬ-ಮದುವೆ ಮೊದಲಾವುಗಳ ಆಚರಣೆಗಳು, ಇವೆಲ್ಲದರ ವಿವರಗಳು ಜಾನಪದ ಸಾಹಿತ್ಯದಲ್ಲಿ ಲಭ್ಯ. ಉದಾಹರಣೆಗೆ, ಅಣ್ಣ-ತಂಗಿಯ ನಂಟು ಕನ್ನಡ ಜನತೆಯ ಜೀವನದಲ್ಲಿ ವಿಶಿಷ್ಟವಾದುದು. ಜಾನಪದ ಹಾಡುಗಳು ಈ ಸಂಬಂಧದ ಗಾಢತೆಯನ್ನು ಮಾಧುರ್ಯವನ್ನು ಬಿಂಬಿಸುತ್ತವೆ. ಆಧುನಿಕ ನಾಗರಿಕತೆಯ ಪ್ರಭಾವಕ್ಕೆ ಒಳಗಾಗುವ ಮುನ್ನ ಸಮುದಾಯದ ಜೀವನ ರೀತಿಗಳು, ಮೌಲ್ಯಗಳು ಇವನ್ನು ಹಿಡಿದಿಟ್ಟಿರುವ ಸ್ವರ್ಣ ಪಾತ್ರೆ ಜಾನಪದ ಸಾಹಿತ್ಯ. ವಿಷಾದದ ಸಂಗತಿ ಎಂದರೆ, ಇದು ಇತ್ತೀಚಿನವರೆಗೆ ಬರಹ ರೂಪಕ್ಕೆ ಬರದಿದ್ದುದರಿಂದ ಅಮೂಲ್ಯವಾದ ಜಾನಪದ ಸಾಹಿತ್ಯ ಕಳೆದುಹೋಗಿದೆ. ಭಾರತದಲ್ಲಿ ಸುಮಾರು ಒಂದು ನೂರು ವರ್ಷಗಳಿಂದ ಇದನ್ನು ಸಂಗ್ರಹಿಸುವ ಕೆಲಸ ನಡೆಯುತ್ತಿದೆ. ಕನ್ನಡ ನಾಡಿನಲ್ಲಿ ಸುಮಾರು 75 ವರ್ಷಗಳ ಕೆಳಗೆ ಈ ಅಧ್ಯಯನ ಪ್ರಾರಂಭವಾಯಿತು.

ಕನ್ನಡ ಜನಪದ ಸಾಹಿತ್ಯದ ಸಂಗ್ರಹ ಮತ್ತು ವಿವೇಚನೆಯ ದಾರಿಯಲ್ಲಿ **1931ರ** ಹೊತ್ತಿಗೆ ಪ್ರಕಟವಾದ 'ಗರತಿಯ ಹಾಡು ಸಂಕಲನ ಮಹತ್ವದ ಹೆಜ್ಜೆಯಾಯಿತು. ಇದಕ್ಕೂ ಹಿಂದೆ ಕಳೆದ ಶತಮಾನದ ಕೊನೆಯಲ್ಲಿಯೇ ಫ್ಲೀಟರು ಸಂಗ್ರಹಿಸಿದ್ದ ಕೆಲವು ಚಾರಿತ್ರಿಕ ಲಾವಣಿಗಳು ಮತ್ತು **1919ರಲ್ಲಿ** ಮಾಸ್ತಿಯವರು ಪ್ರಕಟಿಸಿದ 'ಕನ್ನಡ ಲಾವಣಿ ಸಾಹಿತ್ಯ' ಲೇಖನ ಕೂಡ ತುಂಬಾ ಗಮನಾರ್ಹವಾದವು. **1933ರಲ್ಲಿ** ಹೊರಬಂದ "ಹುಟ್ಟಿದ ಹಳ್ಳಿ ಹಳ್ಳಿಯ ಹಾಡು" ಕೃತಿಯಂತೂ ಜನಪದದ ಅನೇಕ ಬಗೆಗಳನ್ನು ಒಳಗೊಂಡ ಶ್ರೇಷ್ಠ ಗ್ರಂಥ. ಉತ್ತರ ಕರ್ನಾಟಕದಲ್ಲಿ ಗದ್ದಗೀಮಠ ಮುಂತಾದವರ ಈ ಬಗೆಗಿನ ದುಡಿಮೆ ಬೆಲೆಯುಳ್ಳದ್ದಾಯಿತು.

**1975ರ** ಹೊತ್ತಿಗಾಗಲೇ ಕರ್ನಾಟಕದಲ್ಲಿ ಜಾನಪದ ಸಂಬಂಧದ ಚಟುವಟಿಕೆಗಳು ಹೆಚ್ಚಿನ ಲವಲವಕೆಯಲ್ಲಿವೆ. ಇತಿಹಾಸದಲ್ಲಿ ಮೊದಲ ಬಾರಿಗೆ ಅಕ್ಷರವನ್ನು ಕಲಿತ ವರ್ಗಗಳಿಂದ ಬಂದ ಜನರಿಗೆ ಸಹಜವಾಗಿಯೇ ತಮ್ಮ ಹಿರಿಯರ ಬಾಯಿಂದ ಬಾಯಿಗೆ ಹರಿದು ಬರುತ್ತಿದ್ದ ಜ್ಞಾನವನ್ನು ಬರವಣಿಗೆಯಲ್ಲಿ ಹಿಡಿದಿಡುವ ಕಾಯಕ ಹೆಚ್ಚಿನ ಪ್ರೀತಿ ಅಭಿಮಾನಗಳ ಮೂಲಕ ನಡೆಯಿತು. ಜೀಶಂಪ ಅವರಂಥ ಕೆಲವು ಶಕ್ತರು ನಾಡಿನ ಎಲ್ಲ ಕಡೆಗಳಲ್ಲೂ ಅಲೆದು ಅಪಾರ ಶ್ರಮದೊಡನೆ ಜಾನಪದದ ಸಂಗ್ರಹ, ಅಧ್ಯಯನಗಳಲ್ಲಿ ತೊಡಗಿದರು. ಈಗ ಕರ್ನಾಟಕದ ಮೂರು ವಿಶ್ವ ವಿದ್ಯಾಲಯಗಳ ಸ್ನಾತಕೋತ್ತರ ತರಗತಿಗಳಲ್ಲಿ ಜಾನಪದವು ಅಧ್ಯಯನ ಮತ್ತು ಸಂಶೋಧನೆಯ

ವಿಷಯವಾಗಿದೆ. ಈ ಚಟುವಟಿಕೆಗಳ ನಾಂದಿಯನ್ನು ಹಾಡಿದ ಮೈಸೂರು ವಿಶ್ವವಿದ್ಯಾನಿಲಯ ಭಾರತದಲ್ಲೇ ಅಪೂರ್ವವಾದ ಜಾನಪದ ವಸ್ತುಸಂಗ್ರಹಾಲಯವನ್ನು ಬೆಳಸುತ್ತಿರುವುದಲ್ಲದೆ ಜಾನಪದ ಎಂ.ಎ ತರಗತಿಗಳನ್ನು ಆರಂಭಿಸಿದ ಕೀರ್ತಿಯನ್ನೂ ಪಡೆದಿದೆ.

ಜಾನಪದದ ಪೂರ್ಣವ್ಯಾಪ್ತಿಗೆ ಒಳಗೊಳ್ಳುವ ದಿಕ್ಕಿನಲ್ಲಿ ಕನ್ನಡ ಈಗ ಅನೇಕ ಪ್ರಕಟಣೆಗಳನ್ನು ಕಾಣುತ್ತಿದೆ. ರಾಜ್ಯ, ಜಿಲ್ಲಾ, ತಾಲ್ಲೂಕು ಮಟ್ಟಗಳಲ್ಲಿ ಸಮ್ಮೇಳನಗಳು ನಡೆಯುತ್ತಿವೆ. ಜಾನಪದ ಹಲವರಿಗೆ ಲಾಭದಾಯಕ ಉದ್ಯಮವೂ ಆಗುತ್ತಿರುವ ಈಚಿನ ದಿನಗಳ ಹೊಸ ಉತ್ಸಾಹ ಸಡಗರ ಜನತೆಯ ಗತಕಾಲದ ಬದುಕಿನ ಅನೇಕಾನೇಕ ಅಲಿಖಿತ ದಾಖಲೆಗಳ ಮೊತ್ತವಾಗಿ ಬಂದಿರುವ ಜಾನಪದದಲ್ಲಿ ನೋವು, ನಲಿವು, ಅರಿವು, ಪ್ರತಿಭಟನೆ, ಮೌಢ್ಯ, ಸುಲಿಗೆಯ ತಾಳುತುದಿಗಳ ಹಲವು ಹತ್ತು ಸೂಕ್ಷ್ಮಾತಿಸೂಕ್ಷ್ಮ ಹಾಗೂ ವೈವಿಧ್ಯಪೂರ್ಣವಾದ ವಿವರಗಳಿವೆ. ಇವುಗಳನ್ನು ಸಂಗ್ರಹಿಸಿ, ವಿಂಗಡಿಸಿ ನಡೆಸುವ ಅಧ್ಯಯನವು ರೋಗರುಜಿನಗಳಿಂದ ಹೊರತಾದ ಹೊಸ ಸಾಮಾಜಿಕ ವ್ಯವಸ್ಥೆಗೆ ದಿಟ್ಟ ಬೆಂಬಲವಾಗಿ ನಿಲ್ಲುವ ದೃಷ್ಟಿಕೋನವನ್ನು ಅಗತ್ಯವಾಗಿ ಅಳವಡಿಸಿಕೊಳ್ಳಬೇಕಾಗಿದೆ. ಇಲ್ಲದಿದ್ದಲ್ಲಿ ಜನತೆಯ ಹೆಸರಿನಲ್ಲಿ ಕೆಲವರನ್ನು ಮಾತ್ರ ಸುಖವಾಗಿ ಸಾಕುತ್ತಾ ಬಂದ ಕೆಟ್ಟ ಚರಿತ್ರೆಯನ್ನು ಹೊಂದಿರುವ ಈ ದೇಶ ಕಾಲಕಾಲಕ್ಕೆ ಅನುಭವಿಸುತ್ತಾ ಬಂದ ಅನ್ಯಾಯವನ್ನು ಮತ್ತೆ ಹೊಸಹೊಸ ರೂಪಗಳಲ್ಲಿ ಎದುರುಗೊಳ್ಳಬೇಕಾಗುತ್ತದೆ.

ಜಾನಪದದ ಅನೇಕಾನೇಕ ಪದರುಗಳು ಅತ್ಯಂತ ನೂತನ ಸಂಗತಿಗಳನ್ನು ಹೊರಗೆ ಹಾಕುತ್ತವೆ: ತಾಯಿಯ ಅಗ್ಗಳಿಕೆಯನ್ನು ಒಪ್ಪುವ ಪದ್ಧತಿ, ಫಲಸಮೃದ್ಧಿ ದೇವತೆಯ ಆರಾಧನೆ, ಹೆಣ್ಣು ಪೂಜಿಸುವಿಕೆ – ಮೊದಲಾದ ಪದ್ಧತಿಗಳಿವೆ. ಗಂಡನನ್ನು ಕಳೆದುಕೊಂಡ ಹೆಣ್ಣು ಆತನ ಅಣ್ಣ ಅಥವಾ ತಮ್ಮಂದಿರ ಹೆಂಡತಿಯಾಗಿ ನಿರಾಳವಾಗಿ ಬಾಳುವ ಪದ್ಧತಿ ಇದೆ. ವಿಧವಾ ವಿವಾಹದಿಂದ ದಿಟ್ಟತನದಿಂದ ಬಾಳ್ವೆ ನಡೆಸುವ ಪ್ರಸಂಗಗಳಿವೆ. ಅಷ್ಟೇಕೆ ಜಾನಪದದ ಗರ್ಭದಲ್ಲಿ ಅನೇಕ ಸಂಸ್ಕೃತಿಗಳು ಅಡಗಿವೆ. ಮಾನವ ಜನಾಂಗಕ್ಕೆ ಸಂಬಂಧಿಸಿದ ಹಲವಾರು ಮೂಲ ಆಧಾರಗಳ ಗಣಿ ಇದು.

ಜನಪದ ಸಾಹಿತ್ಯದ ಗಾತ್ರ-ಪಾತ್ರ ತುಂಬ ದೊಡ್ಡದು. ಅದನ್ನು ಅರಿತುಕೊಳ್ಳಲು ಸರಳವಾದ ಮೂರು ಭಾಗಗಳನ್ನು ಮಾಡಿಕೊಂಡು ಓದುವುದು ಅಗತ್ಯ :

i) ಹೆಂಗಸರ ಹಾಡುಗಳು
ii) ಗಂಡಸರ ಹಾಡುಗಳು
iii) ಮಕ್ಕಳ ಹಾಡುಗಳು

**ಹೆಂಗಸರ ಹಾಡುಗಳು :**

ಹೆಣ್ಣು ಶಾರೀರಿಕ ರಚನೆಯಲ್ಲಿ ಗಂಡಿಗಿಂತ ಭಿನ್ನಳಾಗಿರುವ ಕಾರಣವೇ ದೊಡ್ಡದಾಗಿ ಅನೇಕ ರೀತಿಯ ಮಾರ್ಪಾಡುಗಳನ್ನು ತನ್ನ ಜೀವನದಲ್ಲಿ ಕಾಣಬೇಕಾಯಿತು. ಈಕೆಯ ಅನುಭವದ ವಲಯ ತೀರಾ ಚಿಕ್ಕದಾಗಿರುವ ಸತ್ಯ ನಮಗೆ ತಿಳಿದಿದೆ. ಗಂಡಿಗೆ ಇರುವಷ್ಟು ಪ್ರಮಾಣದಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಪ್ರವೇಶಿಸುವ ಅವಕಾಶ ಹೆಣ್ಣಿಗೆ ಒದಗಲಿಲ್ಲ. ಇಂತಹ ಹೆಣ್ಣು ತನ್ನ ಅನುಭವಗಳಿಗೆ ಮಾತುಗಳ ರೂಪ ನೀಡುವ ಸಂದರ್ಭ ಬಂದಾಗ ಈ ಎಲ್ಲ ಮಿತಿಗಳ ಒಳಗೂ ತನ್ನನ್ನು ಆವರಿಸಿರುವ ಸಂಗತಿಗಳನ್ನು ಅಚ್ಚುಕಟ್ಟಾಗಿ ಚಿತ್ರಿಸಿದ್ದಾಳೆ. ಹೆಣ್ಣು ದೊಡ್ಡವಳಾಗುತ್ತಿದ್ದಂತೆಯೇ ತನ್ನ ಆವರಣದಲ್ಲಿ ಹೆಚ್ಚಾಗಿ ಬಯಸುವ ತನ್ನ ತಾಯಿಯನ್ನು ನೆನೆಯುತ್ತಾಳೆ. ಮದುವೆಯಾಗಿ ಗಂಡನ ಮನೆಗೆ ಹೋದ ಮೇಲಂತೂ ಇಡೀ ತವರು ಮನಸ್ಸಿನ ಅದಮ್ಯ ಬಯಕೆಯಾಗಿ ಕಾಡುತ್ತದೆ. ತನ್ನನ್ನು ಧಾರೆಯೆರೆದು ಕೊಡುವಾಗ, ಗಂಡನ ಮನೆಗೆ ಕಳಿಸುವಾಗ ಕಣ್ಣೀರು ತುಂಬಿಕೊಂಡಿದ್ದ ತಂದೆ, ತಾಯಿ, ಅಣ್ಣ, ತಂಗಿ, ತಮ್ಮ ಮುಂತಾದವರು ಕಣ್ಣಲ್ಲಿ ಎಂದೂ ಮರೆಯದ ಚಿತ್ರವಾಗಿದ್ದಾರೆ. ತಾಯಿಯನ್ನು ಕುರಿತು ಈಕೆ ನಾನಾ ಬಗೆಯಲ್ಲಿ ಹಂಬಲಿಸುತ್ತಾಳೆ :

ಯಾರು ಇದ್ದರು ನನ್ನ ತಾಯವ್ವನ್ಹೋಲರ?
ಸಾವಿರ ಕೊಳ್ಳಿ ಒಲಿಯಾಗ । ಇದ್ದಾರ
ಜ್ಯೋತಿ ನಿನ್ನಾರು ಹೋಲಾರ?

ದೇವರ ನೆನೆದರ ತಂಗಳ ಬಿಸಿಯಾಯ್ತು
ಗಂಗಾದೇವಿ ನನ್ನ ಹಡದವ್ವ । ನೆನೆದರ

ಮಾಸಿದ ತಲೆಯು ಮಡಿಯಾಯ್ತು
ಬ್ಯಾಸಗಿ ದಿವಸಕ ಬೇವಿನ ಮರ ತಂಪ
ಭೀಮರತಿ ಎಂಬ ಹೊಳಿ ತಂಪ । ಹಡದವ್ವ
ನೀ ತಂಪ ನನ್ನ ತವರೀಗಿ

ಕಾಸೀಗೆ ಹೋಗಲಕ ಏಸೊಂದು ದಿನ ಬೇಕ
ತಾಸೊತ್ತಿನ್ಹಾದಿ ತವರೂರ । ಮನಿಯಾಗ
ಕಾಸಿ ಕುಂತಾಳ ಹಡೆದವ್ವ

ಹಾಲುಂಡ ತವರೀಗಿ ಏನೆಂದು ಹಾಡಲೆ
ಹೊಳೆದಂಡಿಲಿರುವ ಕರಕೀಯ । ಕುಡಿಯಂಗ
ಹಬ್ಬಲೆ ಅವರ ರಸಬಳ್ಳಿ

ಇಷ್ಟು ಬಗೆಬಗೆಯಲ್ಲಿ ಹಂಬಲಿಸುವ ತವರು ನಿಜಕ್ಕೂ ಈಕೆಗೆ ಅಸಾಧಾರಣವಾದ ಅನಂದವನ್ನು ನೀಡಿದೆ. ಪ್ರತಿಯೊಂದೂ ಚೆಲುವು ಮತ್ತು ಆನಂದದಾಯಕವಾದ ಸಂಗತಿಗಳಾಗಿ ಪರಿಣಮಿಸಿದೆ.

ಕುಟ್ಟುವಾಗ, ಬೀಸುವಾಗ, ಕಳೆ ಕೀಳುವಾಗ ಮುಂತಾದ ಅನೇಕ ದುಡಿಯುವ ಸಂದರ್ಭಗಳಲ್ಲಿ ಹೆಂಗಸರು ನಾನಾ ಬಗೆಯ ಪದಗಳನ್ನು ಹಾಡುತ್ತಾರೆ. ಈ ಹಾಡುವವರು ಮತ್ತು ಕೇಳುವವರಿಗೆ ತಾವು ಮಾಡುತ್ತಿರುವ ಶ್ರಮದ ಕೆಲಸ ಅರಿವಾಗುವುದೇ ಇಲ್ಲ. ಹಾಡುಗಳೂ ಕೂಡ ಮುಗಿಯುವುದಿಲ್ಲ. ದೇವರು, ಭಕ್ತಿ, ಪ್ರಕೃತಿ, ತವರಿನವರು, ರಕ್ತ ಸಂಬಂಧ, ಗೆಳೆತನ, ನೋವು ನಲಿವುಗಳೂ, ಪ್ರೇಮ, ದುರಂತಮಯ ಬದುಕು – ಇವೇ ಮೊದಲಾದ ಹಲವು ಹನ್ನೊಂದು ಸಂಗತಿಗಳನ್ನೂ ಈ ಹಾಡುಗಳು ಒಳಗೊಂಡಿವೆ. ಇಂಪಾಗಿ ಹಾಡುವ ಕಡೆಗೇ ಇಲ್ಲಿ ಹೆಚ್ಚಿನ ಒತ್ತು ಇರುತ್ತದೆ. ಅಲ್ಲಲ್ಲಿ ಹೇಳಿದ್ದನ್ನೇ ಹೇಳುವ ಸಾಲು ಮತ್ತು ಪದ ಮಕ್ಕಳನ್ನು ಹೊತ್ತು, ಹೆತ್ತು, ಸಾಕಿ, ಮುದ್ದಾಡಿದ ಈಕೆ ತನ್ನ ಅನುಭವವನ್ನು ಸುಂದರವಾಗಿ ಅನೇಕ ತ್ರಿಪದಿಗಳಲ್ಲಿ ಹಾಡಿದ್ದಾಳೆ. ಈ ಪದಗಳನ್ನು 'ಲಾಲಿ', 'ಜೋಗುಳ', 'ನಿದ್ದೆಪದ' 'ತೊಟ್ಟಲು ಪದ' ಮುಂತಾದ ಹೆಸರುಗಳಲ್ಲಿ ಕರೆಯುತ್ತಾರೆ. ಮಕ್ಕಳನ್ನು ನೋಡಿ ಆಡಿಸಿ, ಅವುಗಳ ಆಟಪಾಟಗಳಿಂದ ಆನಂದಗೊಂಡ ತಾಯಿ ತೊಟ್ಟಲು ತೂಗುತ್ತ ರಾಗವಾಗಿ ತನ್ನ ಕಂದನ ಗುಣಗಾನ ಮಾಡುತ್ತಾಳೆ :

ಆಡಿಬಾ ನನಕಂದ ಅಂಗಾಲ ತೊಳದೇನು
ತೆಂಗಿನ ಕಾಯ ತಿಳನೀರ । ತಕ್ಕೊಂಡು
ಬಂಗಾರ ಮೋರೆ ತೊಳದೇನು

ತೊಟ್ಟಿಲಾಗೊಂದು ತೊಳೆದ ಮುತ್ತನು ಕಂಡೆ
ಹೊಟ್ಟೆಮೇಲಾಗಿ ಮಲಗ್ಯಾನ । ಕಂದಯ್ಯಗ
ಮುತ್ತಿನ ದೃಷ್ಟಿ ಇಳಿಸೇನ

**ಗಂಡಸರ ಹಾಡುಗಳು :**

ಗಂಡಸರು ಕಟ್ಟಿಹಾಡಿರುವ ಪದಗಳು ಕೂಡ ತುಂಬಾ ವಿಶಿಷ್ಟವಾದುವುಗಳಾಗಿವೆ. ಕೋಲಾಟ, ಅಂಟಿಗೆ – ಪಂಟಿಗೆ, ಮೊಹರಂ ಮುಂತಾದ ಪದಗಳ ಜತೆಗೆ ರಂಗದ ಪದಗಳೂ, ಡೊಳ್ಳಿನ ಪದಗಳು – ಹೀಗೆ ಅನೇಕ ಬಗೆಗಳೂ ಕಂಡುಬರುತ್ತವೆ. ಕೆಲವು ಸಂದರ್ಭಗಳಲ್ಲಿ ಕುಣಿತ ಉಂಟು. ತಾಳಲಯ ಬದ್ಧವಾದ ಸಾಲುಗಳು ಹೆಚ್ಚಾಗಿರುತ್ತವೆ.

**ಕೋಲಾಟ :**

ಮುಖ್ಯವಾಗಿ ಮನರಂಜನೆಯನ್ನು ಒದಗಿಸುವ ಸಾಮೂಹಿಕ ಕಲೆ–ಕೋಲಾಟ. ಹಬ್ಬ – ಹರಿದಿನಗಳು ಮತ್ತು ವಿಶೇಷ ಸಂದರ್ಭಗಳಲ್ಲಿ ಕೋಲಾಟವನ್ನು ಕಾಣುತ್ತೇವೆ. ಬೇಸಿಗೆಯ ಕಾಲದಲ್ಲಿ ಬೆಳುದಿಂಗಳ ರಾತ್ರಿಗಳಲ್ಲಿ ಕೂಡ ಗೆಜ್ಜೆಯ ಕಾಲಿನ ಸದ್ದಿನೊಡನೆ ತಾಳದಮ್ಮಡಿಗಳ ಗತ್ತಿಗೆ ಅನುಗುಣವಾದ ಕೋಲಾಟದ ಕುಣಿತ ಮತ್ತು ಹಾಡುಗಳನ್ನು ಅನೇಕ ಹಳ್ಳಿಗಳು ಈಗಲೂ ಉಳಿಸಿಕೊಂಡಿವೆ. ನಡುರಾತ್ರಿ ಕಳೆದರೂ ಕೋಲಾಟ ನಡೆಯುತ್ತಲೇ ಇರುತ್ತದೆ. ಹಲವು

ಹತ್ತು ಬಗೆಯ ವೈವಿಧ್ಯಗಳನ್ನು ಕೋಲಾಟದಲ್ಲಿ ಕಾಣುತ್ತೇವೆ. ಉಯ್ಯಾಲೆ ಕೋಲು, ಬಾಗ್ಗೋಲು, ಹರಿಗೋಲು, ತೇರುಗೋಲು, ಜೋಡ್ಗೋಲು, ಜಡೆಕೋಲು, ದಂಡೆಕೋಲು, ಸುತ್ಕೋಲು, ನಿಲ್ಕೋಲು, ಕೊರವಂಜಿಕೋಲು – ಹೀಗೆ ಅನೇಕ ಬಗೆ ಉಂಟು. ಈ ಒಂದೊಂದಕ್ಕೂ ಪ್ರತ್ಯೇಕ ಕುಣಿತ, ಕೋಲು ಹೊಡೆಯುವ ವಿಧಾನ ಇದ್ದು ಪದಗಳ ಲಯಧಾಟಿಗಳು ಬದಲಾಗುತ್ತಿರುತ್ತವೆ. ಕೋಲಾಟದ ಬಗ್ಗೆ ಎಲ್ಲಿಲ್ಲದ ಹೆಮ್ಮೆ ಈ ಜನಕ್ಕೆ. ಅದರ ಮಹತ್ವ ಕುರಿತು ತಾವೇ ಹಾಡಿದ್ದಾರೆ :

ತಾಳಬೇಕು ತಕ್ಕ ವಾದ್ಯ ಬೇಕು
ಕೈಲಿ ಕೋಲು ಬೇಕು । ಕಾಲಿಗೆ ಗೆಜ್ಜೆ ಬೇಕು:
ಕುಂಟ ಕುಣಿಯಬೇಕು ಕುರುಡ ನೋಡಬೇಕು
ಮೂಗರ್ಹಾಡಬೇಕು ಕಿವುಡರ್ ಕೇಳಬೇಕು

ತಂತಮ್ಮ ಇಷ್ಟದೈವಗಳನ್ನು ಕುರಿತು ತಮಗೆ ತಿಳಿದಂತೆ ಬಣ್ಣಿಸಿ ಮುಂದೆ ಸಾಗುವುದು ಇವರ ಪದ್ಧತಿ. ತಾಳಕ್ಕೆ ತಕ್ಕ ಹಾಗೆ ಗೊತ್ತಿರುವ ಪದಗಳ ಬೆನ್ನಟ್ಟಿ ಹೋಗುವ ಗೀಳು ಜಾಸ್ತಿ :

ಬಾರ್ಹನುಮಾ ಬಾರೊ ಧೀರ್ಹನುಮಾ
ಹಾರಿ ಲಂಕೆಯ ಸುಟ್ಟ ಕರಿಹನುಮಾ

ಕುಣಿಯೊ ಕುಣಿಯೋ ಗೆಜ್ಜೆ । ಕುಣಿಯೋ ನಾಗರಗೆಜ್ಜೆ
ಮುಗಿಲಲ್ಲಿ ರಥವೇರಿ – ಮಳೇರಾಯ
ಮುಗಿಲಲ್ಲಿ ರಥವೇರಿ

ನಡಿನಡಿ ಗಿರಿಗ್ಹೋಗಾನ । ಯಾಲಕ್ಕೆ ತಿಮ್ಮನ
ಸಣ್ಣಮಾದಯ್ಯನ । ಬಾನಮ್ಮ ತೇರಿಗ್ಹೋಗಾನ
ನಾನು ಬತ್ತೀನಿ ಜಾತ್ರೇಗೇ

**ಹಂತಿಯ ಪದಗಳು :**

ಉತ್ತರ ಕರ್ನಾಟಕದಲ್ಲಿ ಸುಗ್ಗಿಯ ಕಾಲದಲ್ಲಿ ಪ್ರತಿ ಹಳ್ಳಿಗಳಲ್ಲೂ ಈ ಪದಗಳು ಕೇಳಿಬರುತ್ತವೆ. ರಾತ್ರಿಯ ಸಮಯದಲ್ಲಿ ಹಂತಿಯನ್ನು ಕಟ್ಟುವರು. ಇಡೀ ರಾತ್ರಿ ರಾಗವಾಗಿ ರೈತರು ಹಾಡುಗಳನ್ನು ಹೇಳುವರು. ಅನೇಕ ಶಿವ ಶರಣರನ್ನು ಕುರಿತ ಪದಗಳು ಉತ್ತಮ ಕಾವ್ಯದ ಅನುಭವವನ್ನೂ ನೀಡುತ್ತವೆ. ಬೇರೆ ಬೇರೆಯವರು ಒಟ್ಟಾಗಿ ಸೇರಿ ತಮ್ಮ ಕೆಲಸದಲ್ಲಿ ಭಾಗವಹಿಸುವರು. ಹಾಗೆಯೇ ಈ ಪದಗಳು ಸಾಮೂಹಿಕವಾಗಿ ಅವರಿಗೆ ತೃಪ್ತಿಯನ್ನು ನೀಡುತ್ತಿರುತ್ತವೆ :

ಶರಣರ ನೆನೆದಾರ ಸರಗೀಯ ಇಟ್ಹಾಂಗ
ಅರಳುಮಲ್ಲೀಗಿ ಮುಡಿದ್ಹಾಂಗ – ಕಲ್ಯಾಣ
ಶರಣರ ನೆನೆಯೊ ಎಲೆ ಮಾನವ

ರಾಗಿ ಬಣ್ಣದ ಕುದುರಿ ರಾಜೇಕ ದೊಡ್ಡದು
ರಾಜರೊಳು ರಾಜ ಮಳೆರಾಜ – ಬರುವಾಗ
ರಾಜೀವ ಕೈಯ ಮುಗಿದಾನ

ಹುಗ್ಗಿ ಹೋಳಿಗಿಯೊಲ್ಲ ಬೆಲ್ಲಸಕ್ಕರೆಯೊಲ್ಲ
ಹಿಗ್ಗಿನಲಿ ಉಣುವನು ನುಚ್ಚಂಬಲಿ – ಸಂಗಯ್ಯ
ಸುಗ್ಗಿಯಲಿ ಬಾನಾ ಒಯ್ಯುನು

ರೈತ ತಾನು ಬಹಳವಾಗಿ ಬಯಸುವ ದೇವರುಗಳು ಮೂರು: ಭೂಮಿ ತಾಯಿ, ಮಳೆರಾಯ ಮತ್ತು ಬಸವಣ್ಣ. ತನ್ನ ಕೆಲಸಕಾರ್ಯಗಳಲ್ಲಿ ತನಗಿಂತಲೂ ಹೆಚ್ಚು ಶ್ರಮದಿಂದ ದುಡಿಯುವ ಬಸವಣ್ಣನನ್ನು ಕಂಡರೆ ಈತನಿಗೆ ಗೌರವ.

ಹಂತಿಯ ಪದಗಳಲ್ಲಿ ಕಂಡುಬರುವ ಶಿವಶರಣರ ಕಥೆಗಳನ್ನು ಕೇಳುವುದು ಒಂದು ಬಗೆಯ ವಿಶಿಷ್ಟ ಅನುಭವ. ಲೋಕಕಲ್ಯಾಣವನ್ನು ಬಯಸಿ ಆ ದಿಕ್ಕಿನಲ್ಲಿ ಹಾತೊರೆದ ಹಿರಿಯರನ್ನು ಈ ಒಕ್ಕಲು ಮಕ್ಕಳು ಗುರುತಿಸಿ ಹಾಡಿ ಗೌರವಿಸುವ ದೊಡ್ಡ ಗುಣದವರಾಗಿದ್ದಾರೆ. ಬಸವಣ್ಣನಂತಹ ಶ್ರೇಷ್ಠ ಶಿವಶರಣನನ್ನು ಕುರಿತು ಹಾಡುವಾಗಲಂತೂ ರೈತನ ದನಿ ಆತನನ್ನು ನೆನೆದಷ್ಟೂ ಇಂಪಾಗುತ್ತಾ ಹೋಗುತ್ತದೆ. ಆತನ ಹಿರಿಯ ಕಾಯಕಗಳನ್ನು ಇವನು ಗುರುತಿಸಿದ್ದಾನೆ. ಆದ್ದರಿಂದಲೇ ಅಷ್ಟು ಬೆಲೆಯನ್ನು ಕೊಡುತ್ತಿರುವುದು:

ಕಾಯಕವ ಕಲಿಸುದಕ ನಾಯಕನು ಬಸವಯ್ಯ
ಜೀಯ ಹೊಸಮತಕೆ ಶಿವಭಕ್ತಿ – ಸಾರುದಕೆ
ರಾಯ ಜೀವಸದ ಹೊಸನುಡಿಗೆ

ಹಂತಿಯದು ಹಾಡೆಂದು ಪಂತ ಕಟ್ಟಲುಬೇಡ
ಕಂತಿ ಕರಗುವುದು ನಿಂತಲ್ಲಿ – ಬಸವಯ್ಯ
ಕುಂತು ಎದೆಯೊಳಗೆ ಹಾಡಿಸಿದ

ಎಂದು ಹಂತಿಯ ಹಾಡಿನ ಮಹತ್ವವನ್ನೂ ತಿಳಿಸುತ್ತಾನೆ.

**ಮೊಹರಂ ಹಾಡುಗಳು :**

ಇಮಾಮ್ ಹುಸೇನ್, ಇವರು ತಮ್ಮ ಅನೇಕ ಅನುಯಾಯಿಗಳ ಜತೆಗೆ ದುಷ್ಟನಾದ ಯಜೀದನ ಸೈನ್ಯವನ್ನು ''ಕರ್ಬಲಾ''ದ ಮೈದಾನದಲ್ಲಿ ಎದುರಿಸಿದರು. ನ್ಯಾಯಕ್ಕಾಗಿ ಹೋರಾಡುವ ದಾರಿಯಲ್ಲಿ ಸತ್ತರು. ಹಾಗೆ ಸತ್ತದ್ದು ಮೊಹರಂ ತಿಂಗಳಿನ ಹತ್ತನೆಯ ದಿನ. ಹುತಾತ್ಮ ಇಮಾಮರ ಆದರ್ಶದ ಯುವಕರು 'ಕರ್ಬಲಾಮೇಳ' ಕಟ್ಟುವರು. ಶಿಸ್ತಿನಿಂದ ಕುಣಿಯುತ್ತಾ ಹಾಡುತ್ತಾ ಹೋಗುವರು. ಈ ಹಾಡುಗಳನ್ನು ಕರ್ಬಲಾ ಹಾಡುಗಳೆಂದು ಕೂಡ ಕರೆಯುತ್ತಾರೆ. ಹುಸೇನರ ಹೋರಾಟದ ಚಿತ್ರ ಹಾಡುಗಳಲ್ಲಿ ಹೀಗೆ ಕಂಡುಬಂದಿದೆ :

ಲಢಾಯಿ ತಯ್ಯಾರ ಆದಾರ ಒಂಟೆಮ್ಯಾಲೆ ಸ್ವಾರಾ
ಹೊರಟು ನಿಂತಾರೋ ಕರ್ಬಲಾಭೂಮಿಗೆ ಬಂಧುಬಳಗ ಪೂರಾ
ಆರ್‍ಯಾಣದಾಗವರಾ ಕಾಣದ ಮೂರು ಹುಡುಗರು ಹೆಂಗಸರಾ
ಜಂಗ ಎದರ – ಬದರಾ ವೈರಿಯ ಮೋಸಕ ಜಯಕಾರಾ
ಶರಣು ಹೋಗದವರಾ ಸ್ವರ್ಗಕೆ ಹೋದಾರೊ ಹಜರತರಾ ॥

ಇಮಾಮರನ್ನು ಕುರಿತ ಸ್ಮರಣೆಯ ಜತೆಯಲ್ಲಿನ ಗೌರವ ಇನ್ನೂ ಮುಂದುವರಿಯುತ್ತದೆ :

ಧರ್ಮಕ ಸತ್ತವರ ಸಿಗತಾರಾ ಕೋಟಿಗೊಬ್ಬ ಜನರಾ
ಮುಸಲಮಾನ ಮಂದ್ಯಾಗ ದೊರೀತಾರ ಹುಸೇನ ಸಾಹೇಬರಾ –
ಯಜೀದನವತಾರಾ ನಡಸಿಕೊ ಅಧಿಕಾರ ಭರಪೂರ
ನೋಡಲಾಗದ ಎದುರಾಗಿ ನಿಂತಾರೊ ಹಜರತ ಹುಸೇನರಾ ॥

ಮೊಹರಂ ಪದಗಳಲ್ಲಿ ಹುಸೇನರ ಕಥೆಗೆ ಸಂಬಂಧಿಸಿದ ಮುಖ್ಯವಾದ ಹಾಡುಗಳು ಇವೆ. ಇವುಗಳ ಜತೆಗೆ ಇಸ್ಲಾಂ ಮತದ ಮಹಾಪುರುಷರ ಜೀವನ ಮೌಲ್ಯಗಳ ಸುತ್ತಲೂ ಹೆಣೆದಿರುವ ಪವಾಡದ ಕಥೆಗಳು ಕೂಡ ಕಂಡುಬರುತ್ತವೆ.

### ಡೊಳ್ಳಿನ ಹಾಡುಗಳು

ಡೊಳ್ಳಿನ ಹಾಡುಗಳು ಉತ್ತರ ಕರ್ನಾಟಕ ಮತ್ತು ಮಲೆನಾಡು ತುಂಬಾ ಪ್ರಸಿದ್ಧವಾಗಿವೆ. ಹಳ್ಳಿಯ ಉತ್ಸವಗಳಲ್ಲಿ ಡೊಳ್ಳಿನ ಧ್ವನಿಯನ್ನು ಹೇರಳವಾಗಿ ಕೇಳಬಹುದು. ಆರಂಭದಲ್ಲಿ ರೋಮಾಂಚನಕಾರಿಯಾದ ಡೊಳ್ಳಿನ ನೃತ್ಯ ನಡೆಯುತ್ತದೆ. ಅದಾದ ಮೇಲೆ ಪವನ ಗತ್ತಿಗೆ ತಕ್ಕ ಹಾಗೆ ಇಬ್ಬರು ನಿಂತು ಡೊಳ್ಳು ಬಾರಿಸುತ್ತಾರೆ. ರೂಪ, ಬಯಲು ಪ್ರದೇಶ, ಕೈಯಲ್ಲಿ ಕೈತಾಳ, ನೀಲಗಾರರ ರೀತಿಯ ವಿಶಿಷ್ಟ ನಡಿಗೆಯ ಹಾಡುಗಳೂ ಕಾಣಿಸಿಕೊಂಡು ಕಥೆ ಮುಂದುವರಿಯುತ್ತದೆ.

ಡೊಳ್ಳು ಹೊಡಿಯೋ – ಡೊಗ್ಗೀಮಗನೆ
ಡರ‍್ರಕ ಜಡಿಮಣಿ
ನಾಗರ ಹೆಡಿಮಣಿ
ಕೋಣನ ತಾಯಿ – ಕೊರವಂಚೆವ್ವಾ
ಪರಪಂಚೋ
ಪರಪಂಚೋ

ಬೀರೇ ದ್ಯಾವರ ಪದವ ಹಾಡೀರೋ
ಗೆಣೆಯರೆಲ್ಲರು ಬಂದು ಸೇರಿರೋ
ಯಾರು ನಮಗೆ ಸರಿ ಹೇಳಿರೋ
ನಮ್ಮ ಊರೇ ಭೂಮಿಗೆ ಚಂದ ಕಾಣೀರೋ

ದೇವರ ಮುಂದ ಕುಂತೀಯೊ ತಮ್ಮ
ದೇವರ ಗ್ಯಾನೊಂದಿರಬೇಕೋ
ದೇವರ ಗ್ಯಾನೊಂದಿದ್ದರೆ ಸಾಕೋ
ದೇವರು ನಿನ್ನಲ್ಲಿದ್ದಂಗೋ

ಕುರಿಗಳನ್ನು ಕಾಯುವ ತನ್ನ ಕಾಯಕದ ಬಗ್ಗೆ ಹೆಮ್ಮೆಪಡುವ ಕುರುಬನ ದಿನದಿನದ ಅನುಭವ ಅವರ ಪದಗಳಲ್ಲಿ ಕಂಡುಬಂದಿದೆ. ಆ ಬಗೆಯ ಉಲ್ಲಾಸವನ್ನು ಹೇಳುವ ಪದಗಳು ಅಪರೂಪವೇನಲ್ಲ :

ತೆಗ್ಗಿನ ಕುರಿಯ ತೆವರಿಗೆ ಹೊಡಿಯೋ
ಮಜ್ಜಿಗೆ ಕುಡಿದು ಬರತೇನೋ
ದಡ್ಡಿಯ ಕುರಿಯ ಮಡ್ಡಿಗೆ ಹೊಡಿಯೋ
ಅಂಬಲಿ ಕುಡಿದು ಬರತೇನೋ
ಇಪ್ಪತ್ತು ಮೊಳದ ಗೊಂಗಡಿಯೋ
ಒಪ್ಪತ್ತಿನಾಗ ನೇದಾನೋ
ಆರುನೂರ ಹಿಂಡು ಕುರಿಗಳನೋ
ಅರಗಳಿಗ್ಯಾಗ ಹಿಂಡ್ಯಾನೋ

### ಮಕ್ಕಳ ಹಾಡುಗಳು :

ಮಕ್ಕಳು ಯಾವ ಕಟ್ಟುಪಾಡುಗಳಿಗೂ ಬದ್ಧರಲ್ಲ. ಮನುಷ್ಯನ ಜೀವನದಲ್ಲಿ ಯಾವುದೇ ಬಗೆಯ ಚಿಂತೆ, ಪಕ್ಷಪಾತ, ಸೀಮಿತ ಆಸಕ್ತಿಗಳು ಇಲ್ಲದೆ ಬಂಧನ ಕಾಣದ ಮನಸ್ಸು ಇರುವುದು ಬಾಲ್ಯದಲ್ಲಿ ಮಾತ್ರ. ಮನೆಯಲ್ಲಿ ಬೇಕಾದವರು ಸತ್ತಿದ್ದರೆ, ಯಾವುದರೂ ಅಗಾಧವಾದ ಚಿಂತೆಯಲ್ಲಿ ತಾಯ್ತಂದೆಗಳಿದ್ದರೆ, ಕಣ್ಣೆದುರಿಗೆ ಯಾರಾದರೂ ಬೆತ್ತಲೆ ಇದ್ದರೆ – ಇಂಥ ಯಾವುದೇ ಸಂದರ್ಭದಲ್ಲಿ ಕೂಡ ಮಗು ಲೋಕದ ರೂಢಿಯ ಸಿದ್ಧ ಪ್ರತಿಕ್ರಿಯೆಗಳನ್ನು ತೋರುವುದಿಲ್ಲ. ಆದರ ಬದಲು ಎಲ್ಲದರ ಬಗ್ಗೆಯೂ ಇರುವಂತೆಯೇ ಸಾಮಾನ್ಯ ಕುತೂಹಲವಿರುತ್ತದೆ ಮಾತ್ರ. ಬೆಳೆ

ಯುವ ಮನಸ್ಸು ಮಾತು ಕಲಿಯುತ್ತಿದ್ದಂತೆಯೇ ತಾನು ಕಂಡ ಕೇಳಿದ ಎಲ್ಲ ವಿಷಯಗಳಲ್ಲೂ ಮುಗ್ಧವಾದ ಆಸಕ್ತಿಯನ್ನು ತಳೆಯುತ್ತದೆ. ಹಾಗೆಯೇ ಜೋಗುಳ ಕೇಳುವುದು ನೆನಪಿರುತ್ತದೆ. ಮಕ್ಕಳು ಹೇಳುವ ಪದಗಳು ಪರಿಚಯವಾಗುತ್ತವೆ. ಈ ಪದಗಳು ಹಿಂದಿನ ತಲೆಮಾರುಗಳನ್ನು ದಾಟಿ ಬಂದವುಗಳು. ಹೊಸ ಹೊಸವು ಕಾಲದಿಂದ ಕಾಲಕ್ಕೆ ಬೇರೆ ಬೇರೆ ಮಕ್ಕಳಿಂದ ಹಲವು ಸಲ ದೊಡ್ಡವರಿಂದಲೂ ರಚಿತವಾಗಿವೆ. ಇಲ್ಲಿ ಪ್ರಾಸಪ್ರಿಯತೆಯೇ ಹೆಚ್ಚಾಗಿದ್ದು ಅರ್ಥ ಕಡಿಮೆ. ಆದ್ದರಿಂದ ಈ ಪದಗಳನ್ನು 'ಶಿಶು ಪ್ರಾಸ'ಗಳೆಂದು ಕರೆಯಲಾಗಿದೆ. ವಸ್ತು ಮತ್ತು ರಚನೆಗಳ ದೃಷ್ಟಿಯಿಂದಲೂ ಕೂಡ ಈ ಪ್ರಾಸಗಳು ಒಂದೇ ರೀತಿ; ಹಾಗೂ ನಾದಗಳನ್ನು ಹೊಂದಿರುತ್ತವೆ :

ಒಬ್ಬೋರ ತಲೆಮ್ಯಾಲೆ
ಗುಬ್ಬಚ್ಚಿ ಕೂತದೆ
ಕಬ್ಬು ತಿನ್ನೊ ಮಕ್ಕಳೆಲ್ಲ
..................................
ಹೇಳಬ್ಯಾಡಿ

ಕಪ್ಪೆ ಕರ ಕರ
ತುಪ್ಪ ಜನಿ ಜನಿ
ಮಾವಿನ ವಾಟಿ
..................................
ಮರದಲಿ ಕ್ವಾಟಿ

ಹದ್ದಿನ ಕೈಲಿ ಸುದ್ದಿ ಕೊಟ್ಟು
..................................
ಕಾಗೆ ಕೈಲಿ ಕಂಕಣ ಕಟ್ಟಿ

ಮಾವ ಬಂದಾನ ಮದ್ಯಾಣಕ
ಕುದರಿ ಕಟ್ಟ್ಯಾನ ಕುಳಬಾನಕ
..................................
ಶಾಂವಗಿ ಉಂಡಾನ ಕತ್ತರಸಿ
ಹೂಸ ಬಿಟ್ಟಾನ ಢುಂಕಾಸಿ

ಮಾಮಾ ಮಾಮಾ ಮಾತಾಡೊ
ಮಾವಿನ ಗಿಡಕ ಜೋತಾಡೊ
..................................
ಮಾವಿನ ಘಂಟಿ ಮುರಿತು
ಮಾಮಾನ ಪ್ಯಾಂಟ ಹರೀತು

ಹೀಗೆ ಮಕ್ಕಳ ಹಾಡಿನ ಅದ್ಭುತ ಪ್ರಪಂಚವೇ ಬೆಳೆಯುತ್ತ ಹೋಗುತ್ತದೆ. ಅದು ಮಕ್ಕಳ ಮನೋಪ್ರಪಂಚದ ದರ್ಶನವನ್ನು ಮೂಡಿಸುತ್ತದೆ.

ಜನಪದ ಧಾಟಿಯಲ್ಲಿ ಬರೆದ 'ಗೋವಿನ ಹಾಡು' ಸಾಕಷ್ಟು ಜನಪ್ರಿಯತೆಯನ್ನು ಪಡೆದಿದೆ. ತಿನ್ನಲು ಹಾತೊರೆಯುವ ಹುಲಿ ಮತ್ತು ನಿಸ್ಸಹಾಯಕ ಹಸುವಿನ ಈ ಕಥೆಯನ್ನು ನಮ್ಮ ಮಾನವರ ಸಾಮಾಜಿಕ ನಡವಳಿಕೆಗೆ ಹೇಗೆ ಅಳವಡಿಸಿಕೊಳ್ಳಬೇಕು ಎನ್ನುವುದು ಮುಖ್ಯ ಸಂಗತಿಯಾಗಿದೆ. ಸುಲಿಗೆಕೋರ ಮತ್ತು ಸುಲಿಗೆಗೆ ಬಲಿಯಾಗುವ ಬಡಪಾಯಿಯ ನಡುವಣ ಸಂಬಂಧ ಇಲ್ಲಿದೆ.

ಕನ್ನಡದ ಶಿಷ್ಟಕವಿ ತನ್ನ 'ಗೋವಿನ ಹಾಡು' ಬರೆಯುವಾಗ ಸಾಕಷ್ಟು ಸರಳತೆಯನ್ನು ತಂದಿದ್ದಾನೆ. ಪ್ರಯತ್ನ ಪೂರ್ವಕವಾಗಿ ಅಡುನುಡಿಯನ್ನು ತುಂಬಲು ಯತ್ನಿಸುವ ಈತ ಪ್ರಾಸದ ಕಡೆಗೆ ಗಮನ ಕೊಟ್ಟಿದ್ದಾನೆ. ಹೊಸತಾಗಿ ಅಕ್ಷರ ಕಲಿತ ಮಕ್ಕಳಿಗೆ ತುಂಬಾ ಹಿಡಿಸುವ ಅನೇಕ ಸುಂದರವಾದ ಸಾಲುಗಳಿಗೆ ಇಲ್ಲಿ ಕೊರತೆಯಿಲ್ಲ :

ಧರಣಿ ಮಂಡಲ ಮಧ್ಯ ದೊಳಗೆ
ಮೆರೆಯುತಿಹ ಕರ್ನಾಟ ದೇಶದೊ
ಳಿರುವ ಕಾಳಿಂಗನೆಂಬಗೊಲ್ಲನ
ಪರಿಯ ನಾನೆಂತು ಪೇಳ್ವೆನು ॥

ಗಂಗೆ ಬಾರೆ ಗೌರಿ ಬಾರೆ
ತುಂಗ ಭದ್ರೆ ತಾಯಿ ಬಾರೆ
ಪುಣ್ಯಕೋಟಿ ನೀನುಬಾರೆ
ಎಂದು ಕರೆದನು ಗೊಲ್ಲನು ॥

ಇಂದು ಎನಗೆ ಆಹಾರ ಸಿಕ್ಕಿತು
ಎಂದು ಬೇಗನೆ ದುಷ್ಟವ್ಯಾಘ್ರನು
ಬಂದು ಬಳಸಿ ಅಡ್ಡಗಟ್ಟಿ
ನಿಂದನಾ ಹುಲಿರಾಯನು ॥

ಒಂದು ಬಿನ್ನಹ ಹುಲಿಯೆ ಕೇಳು
ಕಂದನಿರುವನು ದೊಡ್ಡಿಯೊಳಗೆ
ಒಂದು ನಿಮಿಷದಿ ಹಾಲು ಕೊಟ್ಟು
ಬಂದು ಸೇರುವೆನಿಲ್ಲಿಗೆ ॥

ಎಂದು ಕಥೆ ಮುಂದುವರಿಯುತ್ತದೆ. ಹುಲಿ ಸೋಲುತ್ತದೆ. ಹಸು ಗೆಲ್ಲುತ್ತದೆ. ಈ ಸಂಗತಿಯನ್ನು ಕವಿ ಇಲ್ಲಿ ನಿರೂಪಿಸಿದ್ದಾನೆ.

ಶಿಷ್ಟ ಸಾಹಿತ್ಯ ಮತ್ತು ಜನಪದ ಸಾಹಿತ್ಯ ಒಂದಕ್ಕೊಂದು ಕೊಡುವಕೊಳ್ಳುವ ಸಂಬಂಧವನ್ನು ಉಳಿಸಿಕೊಂಡಿವೆ. ಜನಪದ ಸಾಹಿತ್ಯದಲ್ಲಿ ಕಾಲಕಾಲಕ್ಕೆ ಅವಶೇಷವಾಗಿ ಉಳಿಯುತ್ತಾ ಬಂದ ಅನೇಕ ಧಾರ್ಮಿಕ ಮತ್ತು ಸಾಮಾಜಿಕವಾದ ಆಚರಣಗಳು ಕಾಣಸಿಗುತ್ತವೆ. ಜನತಾ ಸಂಸ್ಕೃತಿಯ ಸಶಕ್ತಭಾಗ ಇದು. ರಷ್ಯಾ, ಚೀನಾ ಮುಂತಾದ ದೇಶಗಳು ಈ ಜನಪದ ಗೀತೆ, ಕಥೆಗಳನ್ನು ತಂತಮ್ಮ ರಾಷ್ಟ್ರದ ಬದಲಾವಣೆಯ ದಿಕ್ಕಿನಲ್ಲಿ ತುಂಬಾ ಯಶಸ್ವಿಯಾಗಿ ಬಳಸಿಕೊಂಡವು. ಜನಪದ ಸಾಹಿತ್ಯವನ್ನು ಉದ್ದೇಶಕ್ಕೆ ಅನುಗುಣವಾಗಿ ಎಚ್ಚರಿಕೆಯಿಂದ ಬಳಸಿಕೊಳ್ಳುವುದರ ಮೂಲಕ ಅಜ್ಞಾನ ಮತ್ತು ಅನಕ್ಷರಸ್ಥ ಜನತೆಯನ್ನು ಅರ್ಥಪೂರ್ಣವಾದ ಹೊಸ ವ್ಯವಸ್ಥೆಯ ಕಡೆಗೆ ಸಾಮೂಹಿಕವಾಗಿ ಕೊಂಡೊಯ್ಯುವುದು ಸಾಧ್ಯವೆಂಬುದು ಈ ಮೂಲಕ ಮನದಟ್ಟಾಯಿತು. ಇದು ಸೂಕ್ತ ಮತ್ತು ಏಕೈಕ ಸರಳ ಮಾರ್ಗವಾಗಿದೆ. ಜನಪದ ಸಾಹಿತ್ಯದ ಹುಟ್ಟು ಮತ್ತು ವಾತಾವರಣದ ಹಿನ್ನೆಲೆಯಲ್ಲಿ ನಾವು ಅದರ ಬೆಲೆ ಕಟ್ಟಬೇಕಾಗಿದೆ. ಸಾಂಸ್ಕೃತಿಕ, ಸಾಮಾಜಿಕ, ಮಾನವ ಶಾಸ್ತ್ರೀಯ ಹಾಗೂ ಮನಶ್ಶಾಸ್ತ್ರದ ದೃಷ್ಟಿಕೋನಗಳಿಂದಲೂ ನೋಡಿ ಲಾಭದಾಯಕವಾದ ಫಲಿತಾಂಶಗಳನ್ನು ಪಡೆಯಬಹುದಾದ ಸಂಭವವಿದೆ.

ಹೊಸಗನ್ನಡ ಸಾಹಿತ್ಯದಲ್ಲಿ ನವೋದಯ ಮತ್ತು ನವ್ಯ ಬರಹಗಳನ್ನು ಜನಪದ ಸತ್ವವನ್ನು ಸಾಕಷ್ಟು ಪ್ರಮಾಣದಲ್ಲಿ ಸೇರಿಸಿಕೊಂಡು ಯಶಸ್ವಿಯಾದ ಕೃತಿಗಳನ್ನು ರಚಿಸಿದ್ದಾರೆ. ಬೇಂದ್ರೆ, ಮಧುರಚೆನ್ನ, ಆನಂದಕಂದರು ನವೋದಯ ಕವಿಗಳಲ್ಲಿ ಈ ಜಾಡನ್ನು ಹಿಡಿದ ಮುಖ್ಯರು. ಅಡಿಗ, ನರಸಿಂಹಸ್ವಾಮಿ, ರಾಜರತ್ನಂ, ಕಣವಿ ಮುಂತಾದ ಕವಿಗಳು ಕೂಡ ಆಡುನುಡಿಯ ಬನಿ, ವಿವಿಧ ಜನಪದಮಟ್ಟಿನ ಲಯಗಳು ಹಾಗೂ ನಾಟಕೀಯವಾದ ಅಂಶಗಳನ್ನು ಬೇರೆ ಬೇರೆಯ ಘಟ್ಟಗಳಲ್ಲಿ ಬಳಸಿಕೊಳ್ಳುವುದರ ಮೂಲಕ ತಮ್ಮ ಕಾವ್ಯದ ಸೊಗಸನ್ನು ಹೆಚ್ಚಿಸಿಕೊಂಡರು. ಆಧುನಿಕವಾಗಿ ಕೂಡ ಕಂಬಾರ, ಪಾಟೀಲ, ಲಂಕೇಶ ಮುಂತಾದವರು ಕಾವ್ಯ ಮತ್ತು ನಾಟಕಗಳನ್ನು ಜನಪದದ ಭಾಷೆ, ಹಾಡುಗಾರಿಕೆ, ತಂತ್ರಗಳನ್ನು ಅಳವಡಿಸಿಕೊಂಡು ಜೀವಂತವಾದ ಬರಹಗಳನ್ನು ನೀಡುತ್ತಿದ್ದಾರೆ. ಜನತೆಯನ್ನು ಮುಟ್ಟುವ ಜೀವನನಿಷ್ಠ ಸಾಹಿತ್ಯ ಬರಬೇಕಾದ ನಮ್ಮ ಪರಿಸರದಲ್ಲಿ ಮುಂದೆಯೂ ಈ ಬಗೆಗಿನ ಜಾನಪದ ಪ್ರೇರಣೆಯು ಹೆಚ್ಚು ಲಾಭದಾಯಕವಾಗಿ ಪರಿಣಮಿಸುತ್ತದೆ.

ಹೆಣ್ಣಾದ ಕಾರಣಕ್ಕೆ ಕಡಿಮೆಯಲ್ಲ; ಗಂಡಾದ ಕಾರಣಕ್ಕೆ ಕೋಡುಗಳೇನು ಮೂಡಿನಿಲ್ಲುವುದಿಲ್ಲ – ಎನ್ನುವ ದಿಟ್ಟ ಮನೋಭಾವ ಜನಪದದಲ್ಲಿದೆ ಇತಿಹಾಸದ ಉದ್ದಕ್ಕೂ ಒಂದೇಸಮನೆ ಮೂಲೆಪಾಲಾದ ಹೆಂಗಸರು ಜಾನಪದದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಂಡಿರುವುದು ಅತ್ಯಂತ ಮಹತ್ವದ ಸಂಗತಿ.

ಜಾನಪದದ ಅನೇಕಾನೇಕ ಪದರುಗಳು ಅತ್ಯಂತ ನೂತನ ಸಂಗತಿಗಳನ್ನು ಹೊರಗೆ ಹಾಕುತ್ತವೆ: ತಾಯಿಯ ಅಗ್ಗಳಿಕೆಯನ್ನು ಒಪ್ಪುವ ಪದ್ಧತಿ, ಫಲಸಮೃದ್ಧಿ ದೇವತೆಯ ಆರಾಧನೆ, ಬೆತ್ತಲೆ ಹೆಣ್ಣು ಪೂಜಿಸುವಿಕೆ – ಮೊದಲಾದ ಪದ್ಧತಿಗಳಿವೆ. ಗಂಡನನ್ನು ಕಳೆದುಕೊಂಡ ಹೆಣ್ಣು ಆತನ ಅಣ್ಣ ಅಥವಾ ತಮ್ಮಂದಿರ ಹೆಂಡತಿಯಾಗಿ ನಿರಾಳವಾಗಿ ಬಾಳುವ ಪದ್ಧತಿ ಇದೆ. ವಿಧವಾ ವಿವಾಹ ಹಾಗೂ ಒಲ್ಲದ ಗಂಡನನ್ನು ಬಿಟ್ಟು ಒಲಿದವನ ಕೂಡ ದಿಟ್ಟತನದಿಂದ ಬಾಳ್ವೆ ನಡೆಸುವ ಪ್ರಸಂಗಗಳಿವೆ. ಅಷ್ಟೇಕೆ ಜಾನಪದದ ಗರ್ಭದಲ್ಲಿ ಅನೇಕ ಸಂಸ್ಕೃತಿಗಳು ಅಡಗಿವೆ. ಮಾನವ ಜನಾಂಗಕ್ಕೆ ಸಂಬಂಧಿಸಿದ ಹಲವಾರು ಮೂಲ ಆಧಾರಗಳ ಗಣಿ ಇದು.

### ಶಿಷ್ಟ ಕವಿಗಳ ಸಂಬಂಧ

ಬಾಯಿಂದ ಬಾಯಿಗೆ ಹರಿಯುತ್ತಾ, ಬೆಳವಣಿಗೆ ಕಾಣುತ್ತಾ ಬರುತ್ತಿರುವ ಜನಪದ ಸಾಹಿತ್ಯ ಬರವಣಿಗೆಯನ್ನು ಕಾಣುತ್ತಿರಲಿಲ್ಲ. ಆದರೆ ಕಾಲದಿಂದ ಕಾಲಕ್ಕೆ ಶಿಷ್ಟಕವಿಗಳು ಇದನ್ನು ಇನ್ನಿಲ್ಲದಂತೆ ಗೇಲಿ ಮಾಡುತ್ತಲೇ ಬಂದಿದ್ದಾರೆ. ಅಕ್ಷರ ಕಲಿತ ಪಂಡಿತ ಜನ ಕೇಳುವ ಕೃತಿ ಇದಲ್ಲ ಎಂದು ಮಧುರ ಕವಿ ಹೇಳುತ್ತಾನೆ :

ಪಂಡಿತರುಂ, ವಿವಿಧ ಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್
ಕಂಡರ್ ಕೇಳ್ವಡೆ ಗೊರವರ
ದುಂಡುಚಿಯೇ ಬೀದಿವರೆಯೆ ಬೀರನ ಕಥೆಯೇ

ರಾಜ ಮತ್ತು ರಾಜನ ಅಸ್ಥಾನದಲ್ಲಿದ್ದ ವಿದ್ವಾಂಸರುಗಳು ಕಾವ್ಯದ ಬಗ್ಗೆ ತಮ್ಮ ಈ ನಿಲುವನ್ನು ಹೇಳುತ್ತಿದ್ದರೆ, ಈ ಸಮಾಜ ನಡೆದು ಬಂದ ದಾರಿಯನ್ನು ಗಮನಿಸಿದ ಯಾರೂ ಆಶ್ಚರ್ಯಪಡಲಾರರು. ಆದರೆ ಕವಿರಾಜ ಮಾರ್ಗದಲ್ಲಿ ಹೆಸರಿಸಲಾಗಿರುವ ಚತ್ತಾಣ, ಬೆದಂಡೆಗಬ್ಬ ಮುಂತಾದುವುಗಳು ಜನಪದ ಸಾಹಿತ್ಯದ ಪ್ರಕಾರಗಳೇ ಆಗಿವೆ. ಓವನಿಕೆ, ಒನಕೆವಾಡು, ಧವಲ, ಗೊಂದಲಿಗರ ಹಾಡು ಮತ್ತು ಎಕ್ಕಲಗಾಣಗಳ ಪ್ರಸ್ತಾಪ ಬೇರೆಬೇರೆ ಕಾವ್ಯಗಳಲ್ಲಿ ಕಂಡುಬಂದಿವೆ.

## ಹಳಗನ್ನಡ ಸಾಹಿತ್ಯ :

### ಕನ್ನಡ ಭಾಷೆ ಎಷ್ಟು ಹಳೆಯದು?

ಕನ್ನಡ ಭಾಷೆಗೆ 24 ಶತಮಾನಗಳ ಚರಿತ್ರೆ ಇದೆ. ಪ್ರಾಚೀನ ಗ್ರೀಕ್ ಪ್ರಹಸನ ಒಂದರಲ್ಲಿ ಕೆಲವು ಕನ್ನಡ ಪದಗಳಿವೆ ಎಂದು ಕೆಲವು ತಜ್ಞರು ಭಾವಿಸುತ್ತಾರೆ. ಪ್ರಾಚೀನ ಗ್ರೀಸಿಗೂ ಕನ್ನಡ ನಾಡಿಗೂ ವ್ಯಾಪಾರದ ಸಂಬಂಧವಿತ್ತು. ಇಲ್ಲಿನ ಮಾತುಗಳು ಅಲ್ಲಿಗೆ ಹೋಗಿದ್ದರೆ, ಅಲ್ಲಿನ ಮಾತುಗಳು ಇಲ್ಲಿಗೆ ಬಂದಿದ್ದರೆ ಆಶ್ಚರ್ಯವಲ್ಲ. ಈಜಿಪ್ಟಿನ ಖ್ಯಾತ ಭೂಗೋಳಜ್ಞ ಟಾಲೆಮಿಯ ಗ್ರಂಥದಲ್ಲಿ ಕೆಲವು ಊರುಗಳ ಹೆಸರುಗಳನ್ನು ಹೇಳಿದೆ; ಇವುಗಳಲ್ಲಿ ಕೆಲವು ಕರ್ನಾಟಕದ ಊರುಗಳೆಂದು ತಜ್ಞರು ಊಹಿಸುತ್ತಾರೆ. ಅವನು ಹೆಸರಿಸಿದ 'ಮೊಡೊಗೌಲ' ಮುದ್ಗಲ್ಲು, 'ಬನೌಸೀ' ಬನವಾಸಿ, 'ಪೆಟ್ಟಿಗಲ' ಪಟ್ಟದಕಲ್ಲು ಇತ್ಯಾದಿಯಾಗಿ ತಜ್ಞರು ವಿವರಿಸುತ್ತಾರೆ.

ಕನ್ನಡ ಭಾಷೆಯಲ್ಲಿ ನಮಗೆ ಬರಹ ಮೊದಲು ಕಾಣಸಿಗುವುದು ಹಲ್ಮಿಡಿ ಶಾಸನದಲ್ಲಿ. ಇದರ ಕಾಲ ಸುಮಾರು ಕ್ರಿ.ಶ. 450 ಎಂದು ವಿದ್ವಾಂಸರು ತೀರ್ಮಾನಿಸಿದ್ದಾರೆ.

### ನಂತರ ಬಂದದ್ದು ಬಾದಾಮಿ ಶಾಸನ :

ಕನ್ನಡ ನಾಡಿನ ಶಾಸನ ಸಾಹಿತ್ಯ ಅಮೂಲ್ಯವಾದದ್ದು. ಹಿಂದೆ ರಾಜರುಗಳು, ಪಾಳೇಗಾರರು ದಾನಧರ್ಮ ಮಾಡಿದಾಗ ಕಲ್ಲಿನ ಮೇಲೆ ಅಥವಾ ತಾಮ್ರದ ಮೇಲೆ ವಿವರಗಳನ್ನು ಬರೆಸುತ್ತಿದ್ದರು. ಅವುಗಳಿಂದ ಈಗ ಕನ್ನಡ ನಾಡಿನ ಚರಿತ್ರೆ, ಕನ್ನಡ ಭಾಷೆ, ಕನ್ನಡ ಸಾಹಿತ್ಯ ಇವುಗಳಿಗೆ ಸಂಬಂಧಿಸಿದ ಹಾಗೆ ಮುಖ್ಯವಾದ ಮಾಹಿತಿ ಲಭ್ಯವಾಗುತ್ತದೆ.

ನಮಗೆ ಲಭ್ಯವಾಗುವ ಮೊದಲ ಸಾಹಿತ್ಯ ಕೃತಿ 'ಕವಿರಾಜಮಾರ್ಗ' (10ನೇ ಶತಮಾನ). ಇದನ್ನು ರಾಷ್ಟ್ರಕೂಟ ವಂಶದ ರಾಜ ನೃಪತುಂಗನ ಆಸ್ಥಾನದ ಶ್ರೀವಿಜಯ ಎಂಬ ಕವಿ ರಚಿಸಿದನು. ಇದರಲ್ಲಿ ಆವರೆಗೆ ಸೃಷ್ಟಿಯಾಗಿದ್ದ ಕನ್ನಡ ಕಾವ್ಯದ ವಿಷಯದ ಬಗ್ಗೆ ಒಂದಿಷ್ಟು ಮಾಹಿತಿ ದೊರೆಯುತ್ತದೆ. ಕವೀಶ್ವರ, ಪಂಡಿತ, ಚಂದ್ರ ಮತ್ತು ಲೋಕಪಾಲ ಮೊದಲಾದ ಕವಿಗಳೂ ವಿಮಲೋದಯ, ನಾಗಾರ್ಜುನ, ಜಯಬಂಧು ದುರ್ವಿನೀತ ಮೊದಲಾದ ಗದ್ಯ ಬರಹಗಾರರೂ ಆಗಲೇ ಸಾಹಿತ್ಯ ರಚನೆ ಮಾಡಿದ್ದರು. ಇವರ ಹೆಸರುಗಳು 'ಕವಿರಾಜಮಾರ್ಗ'ದಲ್ಲಿ ದೊರೆಯುತ್ತವೆ. ಆದರೆ ಇವರು ಬರೆದ ಯಾವ ಕೃತಿಯೂ ಸಿಕ್ಕಿಲ್ಲ.

'ಕವಿರಾಜಮಾರ್ಗ' ಕಾವ್ಯಮೀಮಾಂಸೆಯ ಕೃತಿಯಾಯಿತು. ಸೃಜನಶೀಲ ಸಾಹಿತ್ಯದ ಮೊದಲಕೃತಿ ಎಂದರೆ 'ವಡ್ಡಾರಾಧನೆ'. 10ನೆಯ ಶತಮಾನದ ಪೂರ್ವಾರ್ಧದಲ್ಲಿ ಇದನ್ನು ಶಿವಕೋಟ್ಯಾಚಾರ್ಯ ಎನ್ನುವಾತ ಬರೆದ ಎಂದು ವಿದ್ವಾಂಸರ ಭಾವನೆ. ಇದು ಜೈನಧರ್ಮಕ್ಕೆ ಸಂಬಂಧಿಸಿದ 19 ಕಥೆಗಳ ಸಂಗ್ರಹ. ಎಲ್ಲ ಕಥೆಗಳ ಉದ್ದೇಶವೂ ಜೈನ ಧರ್ಮದತ್ತ ಓದುವವರ ಮನಸ್ಸನ್ನು ತಿರುಗಿಸುವುದು.

ಬಹು ದೇಶಗಳಲ್ಲಿ ಧರ್ಮಕ್ಕೂ ಸಾಹಿತ್ಯಕ್ಕೂ ನಂಟು. ಮೊದಲು ಮನುಷ್ಯನು ಭಾಷೆಯನ್ನು ದೇವರನ್ನು ಸಂತೋಷ ಪಡಿಸಲು ಬಳಸುತ್ತಾನೆ. ಕನ್ನಡದಲ್ಲಿ ಆದದ್ದು ಹೀಗೆಯೇ. ಹತ್ತನೆಯ ಶತಮಾನದಲ್ಲಿ ಪಂಪ ಎನ್ನುವ ಜೈನ ಕವಿ ಎರಡು ಮಹಾಕಾವ್ಯಗಳನ್ನು ಬರೆದ, 'ಆದಿ ಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯ'. ಮೊದಲನೆಯದು ಮುಖ್ಯವಾಗಿ ಮೊದಲನೆಯ ತೀರ್ಥಂಕರ ಆದಿನಾಥನ ಕಥೆ. ಎರಡನೆಯದು ಮಹಾಭಾರತದ ಕಥೆ (ಇದನ್ನು 'ಪಂಪಭಾರತ' ಎಂದೇ ಸಾಮಾನ್ಯವಾಗಿ ಕರೆಯುತ್ತಾರೆ.)

ಪಂಪನಿಂದ ಪ್ರಾರಂಭವಾದ ಸಾಹಿತ್ಯ ಯುಗವನ್ನು 'ಅಭಿಜಾತಯುಗ' ಎಂದು ಕರೆಯುತ್ತಾರೆ. ಪಂಪ ನಮ್ಮ 'ಆದಿಕವಿ', ಮೊದಲನೆಯ ಕವಿ. ಈ ಕಾಲದಲ್ಲಿ ಕವಿಗಳು ಜೈನಧರ್ಮವನ್ನು ಜನರ ಹೃದಯಕ್ಕೆ ಮುಟ್ಟಿಸುವ ಕಾವ್ಯಗಳನ್ನು ಬರೆದರು.

ಮಹಾಭಾರತದ ಕಥೆಯನ್ನು ಸಂಪೂರ್ಣವಾಗಿ ಅಥವಾ ಅದರ ಒಂದು ಮಹತ್ವದ ಘಟನೆಯನ್ನು ಆರಿಸಿಕೊಂಡು ಹೇಳಿದರು. ರನ್ನನು ಎರಡನೆಯ ತೀರ್ಥಂಕರ ಅಜಿತನಾಥನ ಕಥೆಯನ್ನು ಹೇಳುವ 'ಅಜಿತ ಪುರಾಣ' ಮಹಾಕಾವ್ಯವನ್ನೂ, ಮಹಾಭಾರತ ಯುದ್ಧದಲ್ಲಿ ಭೀಮ-ದುರ್ಯೋಧನರ ಗದಾಯುದ್ಧ ಪ್ರಸಂಗವನ್ನು ಕುರಿತ 'ಸಾಹಸಭೀಮವಿಜಯ'ವನ್ನೂ ಬರೆದನು. ರನ್ನನ ಭಾಷೆ ಎಷ್ಟು ಶಕ್ತಿಯುತವಾದದ್ದು ಎಂದರೆ ಇವನನ್ನು 'ಶಕ್ತಿಕವಿ ರನ್ನ' ಎಂದು ಕರೆಯುವುದುಂಟು. ಕವಿಗಳು ಸಾಮಾನ್ಯವಾಗಿ ಚಂಪೂ ಕೃತಿಗಳನ್ನು ಬರೆದರು. ಇವುಗಳಲ್ಲಿ ಪದ್ಯ ಮತ್ತು ಗದ್ಯ ಎರಡರ ಭಾಗಗಳೂ ಇವೆ.

ಅಭಿಜಾತ ಯುಗದಲ್ಲಿ ಪಂಪ ಮತ್ತು ರನ್ನರಲ್ಲದೆ ಅನೇಕ ಕವಿಗಳು ಕಾವ್ಯರಚನೆ ಮಾಡಿದರು. ಗದ್ಯ ಸಾಹಿತ್ಯವನ್ನು ಈ ಯುಗದಲ್ಲಿ ಕಾಣುತ್ತೇವೆ. ಕಲ್ಲಿನ ಮತ್ತು ತಾಮ್ರದ ಶಾಸನಗಳಲ್ಲಿ ಹಳೆಯ ಕನ್ನಡ ಗದ್ಯದ ಮೊದಲ ಮಾದರಿಗಳು ನಮಗೆ ಲಭ್ಯವಾಗುತ್ತವೆ.

ಬಹುಮಂದಿ ರಾಜರು ಬೇರೆ ಬೇರೆ ರಾಜ್ಯಗಳನ್ನು ಆಳುತ್ತಿದ್ದ ಈ ಯುಗದಲ್ಲಿ ಯುದ್ಧಗಳಾಗುತ್ತಿದ್ದವು. ಶೌರ್ಯವು ಮುಖ್ಯವಾಯಿತು. ಒಂದು ಮೌಲ್ಯವಾಯಿತು. ಕೆಲವರು ವಿಮರ್ಶಕರು ಈ ಯುಗವನ್ನು ವೀರಯುಗ ಎಂದೇ ಕರೆಯುತ್ತಾರೆ. ಕವಿಗಳು ರಾಜಾಶ್ರಯದಲ್ಲಿದ್ದರು. ಈ ಕಾಲದಲ್ಲಿ ಸಾಹಿತ್ಯಕ್ಕೆ ಸಮಾಜದಲ್ಲಿ ಒಂದು ಗೌರವದ ಸ್ಥಾನ ಲಭ್ಯವಾಯಿತು.

* * * * *

## ನಡುಗನ್ನಡ ಸಾಹಿತ್ಯ:

ಈ ಕಾಲದಲ್ಲಿ ಬಹುಮಟ್ಟಿಗೆ ಶಿವಶರಣರು ವಚನಗಳನ್ನು ರಚಿಸಿದರು. 12ನೇ ಶತಮಾನದಲ್ಲಿ ಬಂದ ವಚನ ಸಾಹಿತ್ಯವು ಪ್ರಪಂಚದ ಸಾಹಿತ್ಯ ಚರಿತ್ರೆಯಲ್ಲಿಯೇ ವಿಶಿಷ್ಟವಾದ ರಚನೆ, ಇದರ ಉದ್ದೇಶ ವೀರಶೈವ ಲಿಂಗಾಯತ ಧರ್ಮವನ್ನು ಎಲ್ಲ ಜನರಿಗೆ-ವಿದ್ವಾಂಸರಿಗೆ, ಜನಸಾಮಾನ್ಯರಿಗೆ, ಮೇಲಿನ ಜಾತಿಯವರು ಎನ್ನಿಸಿಕೊಂಡವರಿಗೆ, ಕೆಳಗಿನ ಜಾತಿಯವರು ಎನ್ನಿಸಿಕೊಂಡವರಿಗೆ - ಕೊಂಡೊಯ್ಯುವುದು. ಅಲ್ಲದೆ ಸದಾಚಾರವನ್ನೂ ಶುದ್ಧ ಜೀವನವನ್ನೂ ಎತ್ತಿ ಹಿಡಿಯುವುದು. ಎಲ್ಲ ಶಿವಭಕ್ತರ ಸಮಾನತೆಯನ್ನು ಸಾರುವುದು. ಜಾತಿ ಪದ್ಧತಿಯನ್ನು ವಿರೋಧಿಸುವುದು. ವಚನಕಾರರ. ಆತ್ಮಿಕ ಅನುಭವ ವಚನಗಳ ಹಿಂದಿರುವ ಉತ್ಕಟ ಭಾವನೆ, ಸ್ವಂತ ಅನುಭವದ ಪ್ರಾಮಾಣಿಕತೆ, ಭಾಷೆಯ ಸೊಗಸು, ಪ್ರತಿಮೆಗಳು ಇವುಗಳಿಂದಾಗಿ ಅವು ಉತ್ತಮ ಸಾಹಿತ್ಯವೂ ಆಗಿವೆ.

ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲುಬೇಡ.
ಇದೇ ಅಂತರಂಗ ಶುದ್ಧಿ.
ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮ ದೇವರನೊಲಿಸುವ ಪರಿ ।

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯ
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆ ತೆರೆಗಳಿಗಂಜಿದೊಡೆಂತಯ್ಯ
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕೆ ನಾಚಿದೊಡೆಂತಯ್ಯ
ಲೋಕದಲ್ಲಿ ಹುಟ್ಟಿದ ಬಳಿಕ
ಸ್ತುತಿ ನಿಂದೆಗಳು ಬಂದರೆ
ಮನದಲ್ಲಿ ಕೋಪವ ತಾಳದೆ

ಸಮಾಧಾನಿಯಾಗಿರಬೇಕು ಚನ್ನಮಲ್ಲಿ ಕಾರ್ಜುನ
ಎಂಬ ಅದ್ಭುತ ಜೀವನ ಸಿದ್ಧಾಂತವನ್ನು ಅಕ್ಕಮಹಾದೇವಿ ನೀಡಿದ್ದಾಳೆ.

ಹೆಣ್ಣು ಹೆಣ್ಣಲ್ಲ ಹೆಣ್ಣು ರಕ್ಕಸಿ ಅಲ್ಲ
ಹೆಣ್ಣು ಮಾಯೆ ಅಲ್ಲ

ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದು ಸಿದ್ಧರಾಮನು ಸಮಾನತೆಯ ತತ್ವವನ್ನು ನಿರೂಪಿಸಿದ್ದಾನೆ.

ಈ ಯುಗದಲ್ಲಿ ಹಲವು ಕಾವ್ಯಗಳೂ ರಚಿತವಾದವು. ಹರಿಹರ, ರಾಘವಾಂಕ ಮೊದಲಾದವರು ಪ್ರಮುಖ ಕವಿಗಳು, ಇವರು ಮಹಾನ್ ಶಿವಶರಣರ ಕಥೆಗಳನ್ನು ಹೇಳಿದರು. ರಾಘವಾಂಕನು ಸತ್ಯ ಹರಿಶ್ಚಂದ್ರನ ಕಥೆಯನ್ನು ಹೇಳಿದ. ಈ ಕವಿಗಳು ಚಂಪೂ ಮಾಧ್ಯಮವನ್ನು ಬಿಟ್ಟರು. ಹರಿಹರನು 'ರಗಳೆ' ಎನ್ನುವ ಹೊಸ ಪ್ರಕಾರವನ್ನು ಬಳಸಿದ. ರಾಘವಾಂಕನ 'ಹರಿಶ್ಚಂದ್ರ ಕಾವ್ಯ' ಷಟ್ಪದಿಯಲ್ಲಿ ಇದೆ.

ಈ ಕಾಲದಲ್ಲಿ ಕೆಲವರು ಬಹು ಹಿರಿಯ ಕವಿಗಳು ಇನ್ನು ಕೆಲವರು ಒಳ್ಳೆಯ ಕವಿಗಳು ಕೃತಿ ರಚನೆ ಮಾಡಿದರು. ಈ ಕವಿಗಳಲ್ಲಿ ಇಬ್ಬರನ್ನು ಹೆಸರಿಸಬಹುದು. ಒಬ್ಬ, 'ಕುಮಾರವ್ಯಾಸ'ನೆಂದು ಪ್ರಸಿದ್ಧನಾದ ಗದುಗಿನ ನಾರಣಪ್ಪ. ಗದುಗಿನ ವೀರ ನಾರಾಯಣ ಇವನ ಆರಾಧ್ಯದೈವ. ಇವನ ಕಾಲ 1450 ಸುಮಾರಿನದು ಎಂದು ಸಾಮಾನ್ಯವಾಗಿ ಸ್ವೀಕೃತವಾಗಿದೆ.

ಇವನು ಮಹಾಭಾರತದ ಹತ್ತು ಪರ್ವಗಳ ಕಥೆಯನ್ನು ಷಟ್ಪದಿಯಲ್ಲಿ ಹೇಳಿದ. ಇವನಿಗೆ ಶ್ರೀಕೃಷ್ಣನೇ ಮಹಾಭಾರತದ ನಾಯಕ; ಅವನ ದಿವ್ಯಮಹಿಮೆಯನ್ನು ಎತ್ತಿ ತೋರುವುದೇ ಕವಿಯ ಆಶಯ. ಮಹಾಭಾರತದಲ್ಲಿ ನಡೆಯುವುದೆಲ್ಲ ಕೃಷ್ಣನ ಸಂಕಲ್ಪದಂತೆಯೇ. ಇಷ್ಟಾದರೂ ಇಲ್ಲಿಯ ಪಾತ್ರಗಳು ಕೃಷ್ಣನ ಕೈಗೊಂಬೆಗಳು ಎನ್ನಿಸುವುದಿಲ್ಲ. ಮಹಾಕಾವ್ಯಗಳ ನಾಯಕರು ಸಾಮಾನ್ಯವಾಗಿ ಬಹು ಗಂಭೀರರು. ಕುಮಾರವ್ಯಾಸನ ಕೃಷ್ಣ ಸರಸಿ; ತನ್ನನೆ ಹಾಸ್ಯ ಮಾಡಿಕೊಳ್ಳಬಲ್ಲ. ಇತರರನ್ನು ಹಾಸ್ಯ ಮಾಡಬಲ್ಲ, ಗಂಭೀರವಾಗಿ ಚಿಂತನೆ ಮಾಡಬಲ್ಲ. ಕುಮಾರವ್ಯಾಸನ ಪಾತ್ರಗಳು ಜೀವಂತವಾದ ಮರುಷ್ಯರು. ಈ ಕವಿಗೆ ನಾಟಕೀಯತೆಯ ಶಕ್ತಿ ಇದೆ. ಸನ್ನಿವೇಶಗಳನ್ನು ಪಾತ್ರಗಳ ಘರ್ಷಣೆಯನ್ನು, ನಾಟಕದಲ್ಲಿ ನಾವು ಕಾಣುವಂತೆ ತೋರಿಸಬಲ್ಲ. ಭಾಷೆಯ ಚಕ್ರವರ್ತಿ ಇವನು. ಪ್ರೀತಿಯಿಂದ ಪಾತ್ರಗಳು ಮಾತನಾಡುವಾಗ ಮಾತು ಅಂತಃಕರಣಮಯವಾಗುತ್ತದೆ, ಕೋಮಲವಾಗುತ್ತದೆ.

ಕೋಪದಿಂದ ಮಾತನಾಡಿದಾಗ ಕಿಡಿಗಳು ಉದುರುದಂತೆ ಭಾಸವಾಗುತ್ತದೆ. ಎಲ್ಲ ಸನ್ನಿವೇಶಗಳಲ್ಲೂ ಪಾತ್ರಗಳ ಸ್ವಭಾವಗಳಿಗೆ-ಕೃಷ್ಣ, ಭೀಷ್ಮ, ಯುಧಿಷ್ಠಿರ, ಭೀಮ, ದುರ್ಯೋಧನ, ದ್ರೌಪದಿ ಎಲ್ಲರ ಸ್ವಭಾವಗಳಿಗೆ – ಉಚಿತವಾದ ಭಾಷೆ, ವಸಂತ ಋತುವನ್ನು ವರ್ಣಿಸಲಿ, ದ್ರೌಪದಿಯ ಸೌಂದರ್ಯವನ್ನು ವರ್ಣಿಸಲಿ, ಭೀಮನ ಕೋಪವನ್ನು ವರ್ಣಿಸಲಿ, ಕೋಪಗೊಂಡ ಸುಂದರಿ ಊರ್ವಶಿಯ ಸುಮನೋಹರ ಭಯಂಕರ ರೂಪವನ್ನು ವರ್ಣಿಸಲಿ, ಅದು ಕಣ್ಣಿಗೆ ಕಟ್ಟುತ್ತದೆ. ಯಾವ ಭಾಷೆಗಾದರೂ ಕೀರ್ತಿ ತರುವ ಮಹಾಕವಿ ಕುಮಾರವ್ಯಾಸ.

ಈ ಯುಗದ ಮತ್ತೊಬ್ಬ ಶ್ರೇಷ್ಠ ಕವಿ, ಕುಮಾರವ್ಯಾಸನ ಸಮಕಾಲೀನವಾದ ಚಾಮರಸ. ಇವನ ಕಾವ್ಯ 'ಪ್ರಭುಲಿಂಗಲೀಲೆ'ಯ ನಾಯಕ ಅಲ್ಲಮಪ್ರಭು. ಇಲ್ಲಿ ಅಲ್ಲಮಪ್ರಭು ಮಹಾನ್ ವ್ಯಕ್ತಿ. ಶೀಲದಲ್ಲಿ ಬಂಡೆಯಂತೆ ಗಟ್ಟಿ. ಅವನಲ್ಲಿ ಶಿವನ ಒಂದು ಅಂಶವೇ ಉಂಟು. ಮಾಯಾದೇವಿ ಎನ್ನುವ ಅಸಾಮಾನ್ಯ ಸುಂದರಿಯ ಬಳಿ ಇದ್ದೂ ಅವನ ಮನಸ್ಸು ಎಳ್ಳಷ್ಟೂ ವಿಚಲಿತವಾಗುವುದಿಲ್ಲ. ಚಾಮರಸನ ಭಾಷೆ ಸರಳ: ಅವನದು ಮಹಾಕವಿಯ ಸರಳತೆ. ಇಂಥ ಸರಳ ಭಾಷೆಯಲ್ಲಿಯೇ ಅವನು ಒಂದು ದೃಶ್ಯವನ್ನು ಹೇಗೆ ಸೆರೆ ಹಿಡಿಯಬಲ್ಲ ಎನ್ನುವುದನ್ನು ಮಾಯಾದೇವಿಯ ನೃತ್ಯದ ವರ್ಣನೆಯಲ್ಲಿ ನೋಡಬಹುದು. ಚಾಮರಸನ ಕಾವ್ಯದಲ್ಲಿ ಜ್ಞಾನ ನಿರಹಂಕಾರಗಳು ಮನುಷ್ಯದಲ್ಲಿ ಒಟ್ಟಿಗೆ ಬೆಳಗುತ್ತವೆ, ಅಜ್ಞಾನ, ಮೋಹ, ಅಹಂಕಾರಗಳು ಒಟ್ಟಿಗೆ ಸೇರಿದರೆ ಮನುಷ್ಯನಿಗೆ ಸದ್ಗತಿ ಇಲ್ಲ.

ಹರಿದಾಸರು ತಮ್ಮನ್ನು ಶ್ರೀಹರಿಯ ಸೇವಕರು ಎಂದು ಕರೆದುಕೊಂಡರು. ಇವರೆಲ್ಲ ಸಾಮಾನ್ಯವಾಗಿ ಮಧ್ವಾಚಾರ್ಯರು ಬೋಧಿಸಿದ ದ್ವೈತಮತವನ್ನು ಅನುಸರಿಸಿದವರು. ಭಗವಂತನನ್ನು ಒಲಿಸಿಕೊಳ್ಳಲು ಹೆಚ್ಚು ಜ್ಞಾನ ವಿಲ್ಲದಿದ್ದರೂ ಚಿಂತೆ ಇಲ್ಲ, ಬೇರೇನು ಇಲ್ಲದಿದ್ದರೂ ಚಿಂತೆ ಇಲ್ಲ, ಶುದ್ಧ ಭಕ್ತಿ, ಸದಾಚಾರ ಇವು ಮುಖ್ಯ ಎಂದು ಬೋಧಿಸಿದರು. ಸಾಮಾನ್ಯವಾಗಿ ಇವರು ಪ್ರತಿದಿನ ಮನೆಮನೆಗೆ ಹೋಗಿ ದಾನ ಬೇಡುವರು. ನಡೆಯುತ್ತಲೇ, ಮನೆಗಳ ಮುಂದೆ ನಿಂತಂತೆಯೇ ಹಾಡುಗಳನ್ನು ಹಾಡುತ್ತಿದ್ದರು. ಇವುಗಳಲ್ಲಿ ಅವರು ಧರ್ಮಬೋಧನೆ ಮಾಡುತ್ತಿದ್ದರು, ವೇದಗಳು – ಉಪನಿಷತ್ತುಗಳು ಮತ್ತು ಭಗವದ್ಗೀತೆಯ ಸಾರವನ್ನು ಹೇಳುತ್ತಿದ್ದರು. ಭಾಷೆ ಸುಲಭವಾಗಿದ್ದು, ದಾಸರು ಹಾಡುಗಳನ್ನು ಹಾಡುತ್ತಿದ್ದುದರಿಂದ ಅವರು ಕೊಟ್ಟ ತಿಳಿವಳಿಕೆ, ಮಾಡಿದ ಉಪದೇಶ ಜನರ ಮನಸ್ಸಿಗೆ ನಾಟುತ್ತಿದ್ದವು.

ಇಲ್ಲಿ ಕನಕದಾಸರ ಒಂದು ಹಾಡನ್ನು ನೋಡೋಣ :

ಕುಲಕುಲಕುಲವೆನ್ನುತಿಹರು
ಕುಲವಾವುದು ಸತ್ಯಸುಖವುಳ್ಳ ಜನರಿಗೆ ॥

ಕೆಸರೊಳು ತಾವರೆ ಪುಟ್ಟಲು ಅದ ತಂದು ॥
ಬಿಸಜನಾಭನಿಗರ್ಪಿಸಲಿಲ್ಲವೆ ॥

ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು ।
ವಸುಧೆಯೊಳಗೆ ಭೂಸುರರುಣಲಿಲ್ಲವೆ ॥

ಮೃಗಗಳ ಮೈಯ್ಯಲಿ ಪುಟ್ಟದ ಕಸ್ತೂರಿಯ
ತೆಗೆದು ಪೂಸುವರು ದ್ವಿಜರೆಲ್ಲರು ।
ಬಗೆಯಿಂದ ನಾರಾಯಣ ನಾವಕುಲ
ಅಗಜವಲ್ಲಭ ನ್ಯಾತರ ಕುಲದವನು – ॥

ಆತ್ಮಯಾವ ಕುಲ ಜೀವಯಾವ ಕುಲ
ತತ್ವೇಂದ್ರಿಯಗಳ ಕುಲ ಪೇಳಿರಯ್ಯ ।
ಆತಮಹಾತ್ಮನು ನೆಲೆಯಾದಿಕೇಶವ
ಆತನೊಲಿದ ಮೇಲೆ ಯಾತರ ಕುಲವಯ್ಯ ।
ಎಂದು ಅವರು ಜನಮನವನ್ನು ಎಚ್ಚರಿಸುವ ಕೆಲಸ ಮಾಡಿದರು.

ಕಣ್ಣು ನಾಲಿಗೆ ಮನವು ತನ್ನದೆಂದೆನಬೇಡ
ಅನ್ಯರು ಕೊಂದರೆನಬೇಡ ಇವು ಮೂರು
ತನ್ನ ಕೊಲ್ಲುವವು ಸರ್ವಜ್ಞ

ಇಂಥ ಮೂರು ಮೂರು ಪಂಕ್ತಿಗಳ 'ತ್ರಿಪದಿ'ಗಳನ್ನು ಸರ್ವಜ್ಞನು ರಚಿಸಿದ. ತ್ರಿಪದಿಗಳ ಸಾಮ್ರಾಟ ಎನಿಸಿದ.

ಮುಂದೆ ಸುಮಾರು ಎರಡು ನೂರು ವರ್ಷಗಳ ಕಾಲ ಕನ್ನಡ ಸಾಹಿತ್ಯದಲ್ಲಿ ಮಹಾನ್ ಕವಿಗಳು ಬರಲಿಲ್ಲ ಎನ್ನಬೇಕು. ದಾಸಸಾಹಿತ್ಯ ಪರಂಪರೆ ಮುಂದುವರೆಯಿತು. ವಚನ ಸಾಹಿತ್ಯ ಪರಂಪರೆಯೂ ಮುಂದುವರೆಯಿತು. ಆದರೂ ಹದಿನೇಳನೆಯ ಶತಮಾನದ ಪೂರ್ವಾರ್ಧದನಂತರ ಇನ್ನೂರು ವರ್ಷಗಳ ಕಾಲ ಅಂತಹ ಶ್ರೇಷ್ಠ ಸಾಹಿತ್ಯವೇನೂ ರಚನೆಯಾಗಲಿಲ್ಲ.

## ಹೊಸಗನ್ನಡ ಸಾಹಿತ್ಯ :


18ನೆಯ ಶತಮಾನದಲ್ಲಿ ಭಾರತದಲ್ಲಿ ಇಂಗ್ಲಿಷರ ಆಡಳಿತದ ಪ್ರದೇಶ ವಿಸ್ತಾರವಾಯಿತು. ರಾಜ್ಯದ ಕೆಲವು ಭಾಗ ಗಳು ಇಂಗ್ಲಿಷರು, ಮರಾಠರು ಮತ್ತು ಹೈದರಾಬಾದಿನ ನಿಜಾಮ ಇವರಿಗೆ ಸೇರಿದವು.

ಭಾರತದಲ್ಲಿ ಬೇರೆ ಪ್ರದೇಶಗಳಲ್ಲಿ ಇಂಗ್ಲೀಷ್ ವಿದ್ಯಾಭ್ಯಾಸ ಬೇರೂರಿತು. ಶಾಲಾಕಾಲೇಜುಗಳು ಪ್ರಾರಂಭ ವಾದವು. ಇಂಗ್ಲಿಷ್ ಸಾಹಿತ್ಯ ಮತ್ತು ಚರಿತ್ರೆ ಮತ್ತು ವಿಚಾರ ರೀತಿಗಳ ಪ್ರಭಾವ ಬೆಳೆಯಿತು.

ಇದರಿಂದ ಮತ್ತು ಬೇರೆ ಹಲವು ಕಾರಣಗಳಿಂದಾಗಿ ಜನಜೀವನದ ರೀತಿ ಬದಲಾಯಿತು, ಜನರು ಯೋಚಿಸುವ ರೀತಿ ಬದಲಾಯಿತು, ಸಾಹಿತ್ಯದ ಮೇಲೂ ಇದರ ಪರಿಣಾಮವಾಯಿತು. ಆಧುನಿಕ ಕನ್ನಡ ಸಾಹಿತ್ಯ ಯುಗವು ಪ್ರಾರಂಭವಾಯಿತು. ಹೊಸಗನ್ನಡ ಸಾಹಿತ್ಯದ ಪ್ರಕಾರಗಳನ್ನು ಪಠ್ಯದಲ್ಲಿ ಅಳವಡಿಸಿ ಕೊಂಡಿರುವದರಿಂದ ಈ ಭಾಗ ಇಲ್ಲಿಗೆ ಮುಕ್ತಾಯಗೊಳ್ಳುತ್ತದೆ.

**ಪಾಠವನ್ನು ಓದಿ ಕೆಳಗಿನ ಚಟುವಟಿಕೆಗಳನ್ನು ಪೂರ್ಣ ಮಾಡಿರಿ.**

**ಕೃತಿ 1 ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**



**ಕೃತಿ 2) ಕೆಳಗಿನ ವೃತ್ತದಲ್ಲಿರುವ ಅಕ್ಷರಗಳನ್ನು ಆಯ್ದು ಅರ್ಥ ಕೊಡುವ ಶಬ್ದಗಳನ್ನು ಬರೆಯಿರಿ.**

ಜ ಯ ಶ್ರೀ

ವ್ಯ ರು ತೆ ಷ್ಣ

ಯ ವಿ ಜ ಯ ನ

ಮಾ ಕ ಜ ಕೃ ಕಾ ಭಾ ಹಿ

ಸಾ ಕ್ಷೆ ಹ ಲ್ಲಿ ಸು

ಯ ಸಾ ಡಿ

**ಕೃತಿ 3 ವಾಕ್ಯ ಪ್ರಯೋಗ ಬದಲಾವಣೆ ಮಾಡಿ ಬರೆಯಿರಿ.**

i) ತೊಟ್ಟಿಲನ್ನು ತಾಯಿಯು ತೂಗುತ್ತಾಳೆ.

ವಾಕ್ಯ ಪ್ರಯೋಗ

ii) ಮನರಂಜನೆಯನ್ನು ಮಕ್ಕಳು ನೀಡುತ್ತಾರೆ

ವಾಕ್ಯ ಪ್ರಯೋಗ

**ಕೃತಿ 4 ಕೆಳಗಿನ ಕೃತಿಗಳನ್ನು ಕ್ರಮವಾಗಿ ಬರೆಯಿರಿ.**

i) ವಚನ ಸಾಹಿತ್ಯ ಹುಲುಸಾಗಿ ಬೆಳೆಯಿತು

ii) 'ಕವಿರಾಜಮಾರ್ಗ' ಕಾವ್ಯಮೀಮಾಂಸೆಯ ಕೃತಿ


iii) ಕನ್ನಡ ನಾಡಿನ ಶಾಸನ ಸಾಹಿತ್ಯ

iv) ಜನಸಾಮಾನ್ಯರು ರಚಿಸಿದ ಜನಪದ ಸಾಹಿತ್ಯ


**ಕೃತಿ 5 ಹೊಂದಿಸಿ ಬರೆಯಿರಿ.**

| "ಅ" | "ಬ" |
|---|---|
| i) ಶ್ರೀವಿಜಯ | ಅ) ಶಿವಕೋಟ್ಯಾಚಾರ್ಯ |
| ii) ರನ್ನ | ಬ) ಕವಿರಾಜ ಮಾರ್ಗ |
| iii) ವಡ್ಡಾರಾಧನೆ | ಕ) ಆದಿಪುರಾಣ |
| iv) ಪಂಪ | ಡ) ಸಾಹಸಭೀಮ ವಿಜಯ |
| | ಇ) ಕುಮಾರವ್ಯಾಸ ಭಾರತ |

**ಕೃತಿ 6** **ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ**




**ಕೃತಿ 7** **ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**




**ಕೃತಿ 8** **ಕೆಳಗಿನ ಜಾಲಾಕೃತಿಗಳನ್ನು ಪೂರ್ಣಮಾಡಿರಿ.**

(i) ಪಂಪನು ಬರೆದ ಎರಡು ಮಹಾಕಾವ್ಯಗಳು (i) ______ (ii) ______

(ii) ಇಬ್ಬರು ಪ್ರಮುಖ ಹರಿದಾಸರು (i) ______ (ii) ______

(iii) ಪಾಠದಲ್ಲಿ ಉಲ್ಲೇಖಿತರಾದ ಮೂವರು ಹಳೆಗನ್ನಡ ಕವಿಗಳು (i) ______ (ii) ______ (iii) ______

**ಕೃತಿ 9** **ಕನ್ನಡ ಜನಪದ ಸಾಹಿತ್ಯವು ಬೆಳೆದು ಬಂದ ಬಗೆಯನ್ನು 10-12 ವಾಕ್ಯಗಳಿಗೆ ಮೀರದಂತೆ ನಿಮ್ಮ ಮಾತುಗಳಲ್ಲಿ ಮಂಡಿಸಿರಿ.**

# I ಸಂಧಿಗಳು

ಎರಡು ಅಕ್ಷರಗಳು ಕಾಲವಿಳಂಬವಿಲ್ಲದೆ, ಅರ್ಥಗೆಡದಂತೆ ಪರಸ್ಪರ ಕೂಡಿಕೊಳ್ಳುವುದೆ ಸಂಧಿ, ಸಂಧಿಕಾರ್ಯ ನಡೆಯುವಾಗ ಲೋಪ, ಆಗಮ, ಆದೇಶಗಳೆಂಬ ಮೂರು ಕ್ರಿಯೆಗಳು ನಡೆಯುತ್ತವೆ.

**ಉದಾ :** ಊರು + ಅಲ್ಲಿ = ಊರಲ್ಲಿ
ಹೊಲ + ಅನ್ನು = ಹೊಲವನ್ನು
ಚಳಿ + ಕಾಲ = ಚಳಿಗಾಲ

**ಸಂಧಿ ಪ್ರಕಾರಗಳು**

- **ಕನ್ನಡ ಸಂಧಿಗಳು**
  - **ಸ್ವರ ಸಂಧಿಗಳು**
  - **ವ್ಯಂಜನ ಸಂಧಿಗಳು**
- **ಸಂಸ್ಕೃತ ಸಂಧಿಗಳು**

**ಸ್ವರ ಸಂಧಿಗಳು:** ಸ್ವರದ ಮುಂದೆ ಸ್ವರವು ಬಂದಾಗ ನಡೆಯುವ ಸಂಧಿ ಸ್ವರಸಂಧಿಯೆನಿಸುವುದು. ಇವುಗಳಲ್ಲಿ ಲೋಪ, ಆಗಮ ಕ್ರಿಯೆಗಳು ನಡೆಯುತ್ತವೆ.

1) **ಲೋಪಸಂಧಿ**

2) **ಆಗಮ ಸಂಧಿಗಳು**

**1) ಲೋಪಸಂಧಿ :** ಪೂರ್ವಪದಾಂತ್ಯ ಸ್ವರಕ್ಕೆ ಉತ್ತರ ಪದಾದಿಯ ಸ್ವರ ಎದುರಾದಾಗ ಪೂರ್ವಪದಾಂತ್ಯ ಸ್ವರಕ್ಕೆ ಆ ಲೋಪ ಉಂಟಾಗುವುದು

ಉದಾ ಊರು + ಅನ್ನು = ಊರನ್ನು
ಅವನು + ಅನ್ನು = ಅವನನ್ನು
ಅಲ್ಲಿ + ಅಲ್ಲಿ = ಅಲ್ಲಲ್ಲಿ

**2) ಆಗಮ ಸಂಧಿಗಳು :**

i) **ಯಕಾರಾಗಮ ಸಂಧಿ**

ii) **ವಕಾರಗಮ ಸಂಧಿ**

**i) ಯಕಾರಾಗಮ ಸಂಧಿ : ಆ, ಇ, ಈ ಎ, ಏ, ಐ ಸ್ವರಗಳ ಮುಂದೆ ಸ್ವರವು ಬಂದರೆ ಯಕಾರಾಗಮವಾಗುವುದು**

**ಉದಾ :** ಕಾ + ಅದೆ = ಕಾಯದೆ
ಹಿಡಿ + ಎಂದು = ಹಿಡಿಯೆಂದು
ಮಳೆ +ಅಲ್ಲಿ = ಮಳೆಯಲ್ಲಿ
ಬೇ + ಇಸು = ಬೇಯಿಸು
ಮೈ + ಅನ್ನು = ಮೈಯನ್ನು

ii) **ವಕಾರಾಗಮ ಸಂಧಿ:** ಉ, ಊ, ಒ,ಓ ಸ್ವರಗಳ ಮುಂದೆ ಸ್ವರವು ಬಂದರೆ ವಕಾರಾಗಮ ಸಂಧಿಯಾಗುವುದು.

**ಉದಾ :** ಹಸು + ಇನ = ಹಸುವಿನ

ಹೂ + ಎಲ್ಲಿ = ಹೂವೆಲ್ಲಿ

ಗೋ + ಇನ = ಗೋವಿನ

**ವ್ಯಂಜನ ಸಂಧಿ :** ವ್ಯಂಜನಕ್ಕೆ ವ್ಯಂಜನ ಸೇರಿ, ಸ್ವರಕ್ಕೆ ವ್ಯಂಜನ ಸೇರಿ ಆಗುವ ಸಂಧಿಗೆ ವ್ಯಂಜನ ಸಂಧಿ ಎಂದು ಕರೆಯುವರು. ಇಲ್ಲಿ ಆದೇಶ ಕ್ರಿಯೆ ನಡೆಯುತ್ತದೆ.

i) **ಗದಬಾದೇಶ ಸಂಧಿ**

ii) **ವಕಾರಾದೇಶ ಸಂಧಿ**

i) **ಗದಬಾದೇಶ ಸಂಧಿ :** ಸಂಧಿಯಾಗುವಾಗ ಉತ್ತರ ಪದಾದಿಯ ಕತಪಗಳಿಗೆ ಕ್ರಮವಾಗಿ ಗದಬಗಳು ಆದೇಶವಾಗುತ್ತವೆ.

**ಉದಾ :** ಅಡಿ + ಕಲ್ಲು = ಅಡಿಗಲ್ಲು

ಕೆಳ + ತುಟಿ = ಕೆಳದುಟಿ

ಕಣ್ + ಪನಿ = ಕಂಬನಿ

ii) **ವಕಾರಾದೇಶ ಸಂಧಿ :** ಸಂಧಿಯಾಗುವಾಗ ಉತ್ತರ ಪದಾದಿಯ ಪಬಮಗಳಿಗೆ 'ವ' ಆದೇಶವಾಗುತ್ತದೆ.

**ಉದಾ :** ಕೆನೆ + ಪಾಲು = ಕೆನೆವಾಲು

ಎಲೆ + ಮನೆ = ಎಲೆವನೆ

ನೆರೆ + ಬೀದಿ = ನೆರೆವೀದಿ

**ಸಂಸ್ಕೃತ ಸಂಧಿಗಳು :**

1) **ಸ್ವರ ಸಂಧಿಗಳು**

2) **ವ್ಯಂಜನ ಸಂಧಿಗಳು**

1) **ಸ್ವರ ಸಂಧಿಗಳು**

i) **ಸವರ್ಣದೀರ್ಘಸಂಧಿ**

ii) **ಗುಣಸಂಧಿ**

iii) **ವೃದ್ಧಿಸಂಧಿ**

iv) **ಯಣ್‌ಸಂಧಿ**

i) **ಸವರ್ಣದೀರ್ಘಸಂಧಿ :** ಎರಡು ಸವರ್ಣ ಸ್ವರಗಳು ಪರಸ್ಪರ ಸೇರಿದಾಗ ಒಂದೇ ದೀರ್ಘ ಸ್ವರ ಆದೇಶವಾಗಿ ಬರುವುದಕ್ಕೆ ಸವರ್ಣ ದೀರ್ಘ ಸಂಧಿಯೆಂದು ಕರೆಯುವರು.

**ಉದಾ :** ಸುರ + ಅಸುರ = ಸುರಾಸುರ

ಶುಭ + ಆಶಯ = ಶುಭಾಶಯ

ಕವಿ + ಇಂದ್ರ = -ಕವೀಂದ್ರ

ii) **ಗುಣಸಂಧಿ :** ಅ ಆ ಕಾರಗಳಿಗೆ ಇ ಈ ಕಾರಗಳು ಎದುರಾದರೆ ಅವುಗಳ ಸ್ಥಾನದಲ್ಲಿ 'ಏಕಾರವೂ, ಉ ಊಕಾರಗಳು ಎದುರಾದರೆ ಅವುಗಳ ಸ್ಥಾನದಲ್ಲಿ 'ಓ ಕಾರವೂ, ಋ ಕಾರವೂ ಎದುರಾದರೆ ಅರ್ ಕಾರವೂ ಆದೇಶವಾಗಿ ಬರುವುದಕ್ಕೆ ಗುಣಸಂಧಿ ಎಂದು ಹೆಸರು.

**ಉದಾ :** ಮಾನವ + ಇಂದ್ರ = ಮಾನವೇಂದ್ರ

ಉಮಾ + ಈಶ = ಉಮೇಶ

ಚಂದ್ರ + ಉದಯ = ಚಂದ್ರೋದಯ

ರಾಜ + ಋಷಿ = ರಾಜರ್ಷಿ

**iii) ವೃದ್ಧಿಸಂಧಿ :** ಅ ಆ ಕಾರಗಳಿಗೆ ಏ ಐ ಕಾರಗಳು ಎದುರಾದರೆ ಅವೆರಡರ ಸ್ಥಾನದಲ್ಲಿ 'ಐ' ಕಾರವು ಓ ಔ ಕಾರಗಳು ಎದುರಾದರೆ ಅವುಗಳ – ಸ್ಥಾನದಲ್ಲಿ ಔ ಕಾರವು ಆದೇಶವಾಗಿ ಬರುವದಕ್ಕೆ ವೃದ್ಧಿಸಂಧಿ ಎಂದು ಕರೆಯುವರು.

**ಉದಾ :** ಲೋಕ + ಏಕ = ಲೋಕೈಕ

ಅಷ್ಟ + ಐಶ್ವರ್ಯ = ಅಷ್ಟೈಶ್ವರ್ಯ

ವನ + ಔಷದ = ವನೌಷದ

ಪರಮ+ಔದಾರ್ಯ = ಪರಮೌದಾರ್ಯ

**iv) ಯಣ್‌ಸಂಧಿ :** ಇ ಈ ಉ ಊ ಋ ಕಾರಗಳಿಗೆ ಅ ಸವರ್ಣ ಸ್ವರ – ಎದುರಾದರೆ ಇ ಈ ಕಾರಗಳಿಗೆ 'ಯ' ಕಾರವೂ, ಉ ಊಕಾರಗಳಿಗೆ 'ವ' ಕಾರವೂ, ಋ ಕಾರಕ್ಕೆ 'ರ್' ಕಾರವೂ ಆದೇಶಗಳಾಗಿ ಬರುತ್ತವೆ – ಇದಕ್ಕೆ ಯಣ್‌ಸಂಧಿ ಎಂದು ಕರೆಯುವರು.

. **ಉದಾ :** ಪ್ರತಿ + ಉತ್ತರ = ಪ್ರತ್ಯುತ್ತರ

ಮನು + ಅಂತರ = ಮನ್ವಂತರ

ಗುರು + ಅಜ್ಞೆ = ಗುರ್ವಾಜ್ಞೆ

ಪಿತೃ + ಆರ್ಜಿತ = ಪಿತ್ರಾರ್ಜಿತ

## 2) ವ್ಯಂಜನ ಸಂಧಿಗಳು :

i) ಜಶ್ತ್ವಸಂಧಿ

ii) ಶ್ಚುತ್ವಸಂಧಿ

iii) ಷ್ಟುತ್ವಸಂಧಿ

iv) ಛತ್ವಸಂಧಿ

v) ಅನುನಾಸಿಕಸಂಧಿ

vi) ವಿಸರ್ಗಸಂಧಿ

**i) ಜಶ್ತ್ವ ಸಂಧಿ:** ಪೂರ್ವಪದದ ಕೊನೆಯಲ್ಲಿರುವ ಕ, ಚ, ಟ, ತ, ಪಗಳಿಗೆ ಕ್ರಮವಾಗಿ ಗ, ಜ, ಡ, ದ ಬ ಗಳು ಆದೇಶವಾಗಿ ಬಂದು ಸಂಧಿಕಾರ್ಯ ನಡೆಯುವದು. ಈ ಸಂಧಿಗೆ ಜಶ್ತ್ವಸಂಧಿ ಎಂದು ಹೆಸರು.

**ಉದಾ :** ವಾಕ್ + ಈಶ = ವಾಗೀಶ

ಅಜ್ + ಅಂತ = ಅಜಂತ

ಸತ್ + ಉದ್ದೇಶ = ಸದುದ್ದೇಶ

ಷಟ್ + ಆನನ = ಷಡಾನನ

ಅಪ್+ಜ = ಅಬ್ಜ

ii) **ಶ್ಚುತ್ವಸಂಧಿ :** ಪೂರ್ವಪದದ ಕೊನೆಯಲ್ಲಿ 'ಸ' ಆಗಲೀ 'ತ' ವರ್ಗದ ಯಾವುದಾದರೂ ವರ್ಣವಾಗಲೀ ಇದ್ದರೆ ಆ ವರ್ಣಗಳಿಗೆ 'ಶ' ಅಥವಾ 'ಚ' ವರ್ಗದ ಯಾವುದಾದರೂ ವರ್ಣ ಎದುರಾದರೆ 'ಸ' ಕಾರಕ್ಕೆ 'ಶ' ಕಾರವೂ, 'ತ' ಕಾರಕ್ಕೆ 'ಚ' ಕಾರವೂ ಆದೇಶವಾಗಿ ಬರುವುದು. ಈ ಸಂಧಿಗೆ ಶ್ಚುತ್ವಸಂಧಿ ಎಂದು ಹೆಸರು.

**ಉದಾ :** ಮನಸ್ + ಶುದ್ಧಿ = ಮನಶ್ಶುದ್ಧಿ

ಸತ್ + ಚಿತ್ರ = ಸಚ್ಚಿತ್ರ

ಚಲತ್ + ಚಿತ್ರ = ಚಲಚ್ಚಿತ್ರ

iii) **ಷ್ಟುತ್ವಸಂಧಿ :** 'ಸ' ಮತ್ತು 'ತ' ವರ್ಗಗಳಿಗೆ, ಷಕಾರ, ಟ ವರ್ಗಗಳು ಪರವಾದರೆ ಸಕಾರಕ್ಕೆ ಷ ಕಾರವೂ, ತ ವರ್ಗಕ್ಕೆ ಟ ಕಾರವೂ ಆದೇಶವಾಗಿ ಬರುವುದು. ಈ ಸಂಧಿಗೆ ಷ್ಟುತ್ವಸಂಧಿ ಎಂದು ಹೆಸರು.

**ಉದಾ :** ಧನುಸ್ + ಟಂಕಾರ = ಧನುಷ್ಟಂಕಾರ

ಬೃಹತ್ + ಟೀಕೆ = ಬೃಹಟ್ಟೀಕೆ

iv) **ಛತ್ವಸಂಧಿ :** ಪೂರ್ವಪದಾಂತ ವರ್ಗೀಯ ವ್ಯಂಜನಗಳ ಮುಂದೆ ಯ, ರ, ಲ, ವ, ಶ ಗಳು ಬಂದರೆ 'ಛ' ಆದೇಶವಾಗಿ ಬರುವುದು. ಈ ಸಂಧಿಗೆ ಛತ್ವಸಂಧಿ ಎಂದು ಹೆಸರು.

ಉದಾ : ವಿದ್ಯುತ್ + ಶಕ್ತಿ = ವಿದ್ಯುಚ್ಛಕ್ತಿ (ಶ ಕ್ಕೆ ಛ)

ಉತ್ + ಶ್ವಾಸ = ಉಚ್ಛ್ವಾಸ (ಶಕ್ಕೆ ಛ)

ಸತ್ + ಶಿಷ್ಯ = ಸಚ್ಛಿಷ್ಯ (ಶಕ್ಕೆ ಛ)

v) **ಅನುನಾಸಿಕಸಂಧಿ:** ಪೂರ್ವಪದಾಂತ ವರ್ಗದ ಪ್ರಥಮಾಕ್ಷರಗಳಿಗೆ ಯಾವ ಅನುನಾಸಿಕ ಅಕ್ಷರ ಎದುರಾದರೂ ಅವುಗಳಿಗೆ (ಕ, ಚ, ಟ, ತ, ಪ) ಕ್ರಮವಾಗಿ ಙ, ಞ, ಣ, ನ, ಮ ಗಳು ಆದೇಶವಾಗಿ ಬರುತ್ತವೆ. ಈ ಸಂಧಿಗೆ ಅನುನಾಸಿಕ ಸಂಧಿ – ಎಂದು ಹೆಸರು.

**ಉದಾ :** ಷಟ್ + ಮುಖ = ಷಣ್ಮುಖ

ಚಿತ್ + ಮಯ = ಚಿನ್ಮಯ

ವಾಕ್ + ಮಯ = ವಾಙ್ಮಯ

ಚಿತ್ + ಮೂರ್ತಿ = ಚಿನ್ಮೂರ್ತಿ

ದಿಕ್ + ಮೂಢ = ದಿಙ್ಮೂಢ

vi) **ವಿಸರ್ಗಸಂಧಿ :** ಪೂರ್ವಪದಾಂತ ರೇಫ (ರ್) ಗಳ ಮುಂದೆ ಕ, ಖ, ಪ, ಫ ಗಳು ಬಂದರೆ ರೇಫಕ್ಕೆ ವಿಸರ್ಗದ ಆದೇಶವಾಗುವುದು. ಪೂರ್ವಪದಾಂತ 'ಅಸ್' ನಿಂದ ಅಂತ್ಯವಾಗುವ ಶಬ್ದಗಳ ಮುಂದೆ ಮೃದು ವ್ಯಂಜನಗಳು ಬಂದರೆ 'ಓ' – ಆದೇಶವಾಗಿ ಬರುತ್ತದೆ. ಇದಕ್ಕೆ ವಿಸರ್ಗ ಸಂಧಿ ಎಂದು ಹೆಸರು.

**ಉದಾ :** ಅಂತರ್ + ಕರಣ = ಅಂತಃ ಕರಣ

ಪುನರ್ + ಪರೀಕ್ಷೆ = ಪುನಃ ಪರೀಕ್ಷೆ

ಮನಸ್ + ಖೇದ = ಮನಃ ಖೇದ

ತಪಸ್ + ಫಲ = ತಪಃ ಫಲ

ರಜಸ್ + ಗುಣ = ರಜೋಗುಣ

ತಪಸ್ + ಮಹಿಮೆ = ತಪೋಮಹಿಮೆ

ವಯಸ್ + ವೃದ್ಧ = ವಯೋವೃದ್ಧ

* * * * *

# II ಸಮಾಸಗಳು

ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಕಾಲವಿಳಂಬವಿಲ್ಲದೆ, ಅರ್ಥಗೆಡದಂತೆ ಪರಸ್ಪರ ಸೇರಿಕೊಂಡು ಒಂದು ಪದವಾಗುವುದೇ ಸಮಾಸ.

**ಉದಾ :** ಅರಸನ + ಮನೆ = ಅರಮನೆ

ಗುಡುಗೂ + ಮಿಂಚೂ + ಸಿಡಿಲೂ = ಗುಡುಗು ಮಿಂಚು ಸಿಡಿಲು

ಸಮಾಸದಲ್ಲಿ ಎರಡು ಪ್ರಕಾರಗಳು

**1) ಕನ್ನಡ ಸಮಾಸಗಳು**

**2) ಸಂಸ್ಕೃತ ಸಮಾಸಗಳು**

**1) ಕನ್ನಡ ಸಮಾಸಗಳು**

**(i) ಗಮಕ ಸಮಾಸ**

**(ii) ಕ್ರಿಯಾಸಮಾಸ**

**(iii) ಅರಿಸಮಾಸ**

**(i) ಗಮಕ ಸಮಾಸ :** ಗಮಕ ಎಂದರೆ ತಿಳಿದು, ಸ್ಪಷ್ಟಪಡಿಸು, ಇದರಲ್ಲಿ ಸರ್ವನಾಮ, ಗುಣವಾಚಕ ಕೃದಂತ ಮತ್ತು ಸಂಖ್ಯಾವಾಚಕ ಪೂರ್ವಪದವಾಗಿದ್ದು, ಉತ್ತರ ಪದ ಪ್ರಧಾನವಾಗಿರುವ ಸಮಾಸಕ್ಕೆ ಗಮಕ ಸಮಾಸವೆನ್ನುವರು. ಇದು ಕರ್ಮಧಾರಯದ ಒಂದು ಪ್ರಭೇದ.

**ಉದಾ :**

| | | |
|---|---|---|
| ಓದುವವನು + ಹುಡುಗ | = | ಓದುವ ಹುಡುಗ |
| ಅವನು + ಮನುಷ್ಯ | = | ಆಮನುಷ್ಯ |
| ಹಿರಿಯ + ಮಗ | = | ಹಿರಿಮಗ |

**(ii) ಕ್ರಿಯಾಸಮಾಸ :** ಪೂರ್ವ ಪದವು ಕೃದಂತವಾಗಿದ್ದು, ಉತ್ತರಪದ ಕ್ರಿಯಾಸೂಚಿಯಾಗಿರುತ್ತದೆ.

**ಉದಾ :**

| | | |
|---|---|---|
| ಮನವನ್ನು + ಸೋಲು | = | ಮನಸೋಲು |
| ಶಿರವನ್ನು + ಬಾಗು | = | ಶಿರಬಾಗು |
| ಬಿಲ್ಲನ್ನು + ಎತ್ತು | = | ಬಿಲ್ಲೆತ್ತು |

**(iii) ಅರಿಸಮಾಸ :** ಕನ್ನಡ – ಸಂಸ್ಕೃತ ಪದಗಳನ್ನು ಸೇರಿಸಿ ಸಮಾಸ ಮಾಡುವುದೇ ಅರಿಸಮಾಸ.

**ಉದಾ :**

| | | |
|---|---|---|
| ಮಂಗಳ + ಆರತಿ | = | ಮಂಗಳಾರತಿ |
| ಪೂ + ಮಾಲೆ | = | ಪೂಮಾಲೆ |
| ಅರಸು + ಕುಮಾರ | = | ಅರಸುಕುಮಾರ |
| ಭೂಮಿ + ತಾಯಿ | = | ಭೂತಾಯಿ |

*ಸಂಸ್ಕೃತ ಸಮಾಸಗಳನ್ನು ಮುಂದಿನ ವರ್ಗದಲ್ಲಿ ಕಲಿಯೋಣ.

# III ನುಡಿಗಟ್ಟುಗಳು

ಧ್ವನಿಪೂರ್ಣಮಾತು, ಎರಡು ಅಥವಾ - ಹಲವು ನುಡಿಗಳ ಒಂದು ಕಟ್ಟು, ವಿಶಿಷ್ಟ ಅರ್ಥವನ್ನು ಧ್ವನಿಸುವುದು.

**ಉದಾ :** ಮೂಕವಿಸ್ಮಿತನಾಗು
ವಿಷಕಾರು -
ಗಳಸ್ಯಕಂಠಸ್ಯ -
ಗರಿಗೆದರು -
ಟೋಪ್ಪಿಗೆಹಾಕು -

# IV ಗಾದೆಮಾತುಗಳು

ನಮ್ಮ ಹಿರಿಯರು ತಮ್ಮ ಅನುಭವದಿಂದ ರೂಪಿಸಿದ ಅರ್ಥಪೂರ್ಣ ಮಾತುಗಳಿಗೆ ಗಾದೆಗಳೆಂದು ಕರೆಯುತ್ತಾರೆ. 'ವೇದ ಸುಳ್ಳಾದರೂ ಗಾದೆಸುಳ್ಳಾಗದು' ಎಂಬ ಮಾತು ಗಾದೆಯ ಮಹತ್ವವನ್ನು ಸೂಚಿಸುತ್ತದೆ.

**ಉದಾ :** i) ಅತಿ ಆಶೆ ಗತಿಗೆಡಿಸಿತು
ii) ಊಟಬಲ್ಲವನಿಗೆ ರೋಗವಿಲ್ಲ; ಮಾತುಬಲ್ಲವನಿಗೆ ಜಗಳವಿಲ್ಲ.
iii) ಆಳಾಗಿ ದುಡಿ ಅರಸಾಗಿ ಉಣ್ಣು
iv) ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು.
v) ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು

# V ಕೃದಂತಗಳು

ಧಾತುಗಳಿಗೆ ಕೃತ್ ಪ್ರತ್ಯಯಗಳು ಸೇರಿ ಕೃದಂತಗಳೆನಿಸುವವು. ಧಾತು ಎಂದರೆ ಕ್ರಿಯಾಪದದ ಮೂಲರೂಪ ಇಕೆ, ಇಗೆ, ಉದು, ಉವ, ಕ, ಗೆ, ಟ, ತ, ದ, ಪು, ಮೆ, ವ, ವಳಿ, ವಣಿಗೆ ಮುಂತಾದ ಕೃತ್ ಪ್ರತ್ಯಯಗಳು ಸೇರಿ ಕೃದಂತಗಳೆನಿಸುವವು.

**ಉದಾ :**

| | | |
|---|---|---|
| ನಂಬು + ಇಕೆ | = | ನಂಬಿಕೆ |
| ಹಾಸು + ಇಗೆ | = | ಹಾಸಿಗೆ |
| ನೋಡು + ಉದು | = | ನೋಡುವುದು |
| ನುಡಿ + ಉವ | = | ನುಡಿಯುವ |
| ಹುಳ + ಕ | = | ಹುಳಕ |
| ನಂಬು + ಗೆ | = | ನಂಬಿಗೆ |
| ಕೂಡು + ಟ | = | ಕೂಟ |
| ಸೆಳೆ + ತ | = | ಸೆಳೆತ |
| ಪಡೆ + ದ | = | ಪಡೆದ |
| ಹೊಳೆ + ಪು | = | ಹೊಳಪು |

| | | |
|---|---|---|
| ಜಾಣ + ಮೆ | = | ಜಾಣ್ಮೆ |
| ನುಡಿ + ವ | = | ನುಡಿವ |
| ಹಿಡು + ವಳಿ | = | ಹಿಡುವಳಿ |
| ಬರೆ + ವಣಿಗೆ | = | ಬರವಣಿಗೆ |

## VI ತದ್ಧಿತಾಂತಗಳು

ನಾಮಪದಗಳ ಮುಂದೆ ಅಡಿಗ, ಇಕ, ಇಗ, ಓಸುಗ, ಕಾರ, ಗಾರ, ಗಿತ್ತಿ, ತನ, ತನಕ, ತಿ, ವಂತ, ವೋಲ್, ವೋಲು ಮುಂತಾದ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತಗಳೆನಿಸುವವು.

| | | | |
|---|---|---|---|
| **ಉದಾ :** | ಹಾವು + ಅಡಿಗ | = | ಹಾವಾಡಿಗ |
| | ಕರಿ + ಇಕ | = | ಕರಿಕ |
| | ಲೆಕ್ಕ + ಇಗ | = | ಲೆಕ್ಕಿಗ |
| | ನಾಡಿನ + ಓಸುಗ | = | ನಾಡಿಗೋಸುಗ |
| | ಓಲೆ + ಕಾರ | = | ಓಲೆಕಾರ |
| | ಕನಸು + ಗಾರ | = | ಕನಸುಗಾರ |
| | ಹೂವಾಡ + ಗಿತ್ತಿ | = | ಹೂವಾಡಗಿತ್ತಿ |
| | ಸಿರಿ + ತನ | = | ಸಿರಿತನ |
| | ಮನೆ + ತನಕ | = | ಮನೆತನಕ |
| | ಗೌಡ + ತಿ | = | ಗೌಡತಿ |
| | ಗುಣ + ವಂತ | = | ಗುಣವಂತ |
| | ರಾಮನ + ವೋಲ್ | = | ರಾಮನವೋಲ್ |
| | ಸೀತೆಯ + ವೋಲು | = | ಸೀತೆಯವೋಲು |

## VII ಉಪಸರ್ಗಯುಕ್ತಪದ

ಉಪಸರ್ಗವೆಂದರೆ ತದ್ಧಿತ ಮತ್ತು ಕೃತ್ ಪ್ರತ್ಯಯಗಳಂತೆಯೇ ಇದೂ ಕೂಡ ಪ್ರತ್ಯಯ ಮೂಲ ಪದ ಅಥವಾ ಧಾತುಗಳ ಆದಿಯಲ್ಲಿ ಅ, ಉಪ, ಸು, ವಿ, ದುರ್, ನಿರ್, ಸತ್, ಅಪ, ಆ, ಪ್ರ – ಮುಂತಾದ ಉಪಸರ್ಗಗಳು ಸೇರಿ ಉಪಸರ್ಗಯುಕ್ತ ಪದಗಳು ನಿರ್ಮಾಣವಾಗುತ್ತವೆ.

| | | | |
|---|---|---|---|
| **ಉದಾ :** | ಅ + ಜ್ಞಾನ | = | ಅಜ್ಞಾನ |
| | ಉಪ + ದಿಕ್ಕು | = | ಉಪದಿಕ್ಕು |
| | ಸು + ವಿದ್ಯೆ | = | ಸುವಿದ್ಯೆ |
| | ವಿ + ಹಾರ | = | ವಿಹಾರ |
| | ದುರ್ + ಅಹಂಕಾರ | = | ದುರಹಂಕಾರ |
| | ನಿರ್ + ಜನ | = | ನಿರ್ಜನ |
| | ಸತ್ + ಭಕ್ತಿ | = | ಸದ್ಭಕ್ತಿ |
| | ಅಪ + ಜಯ | = | ಅಪಜಯ |
| | ಆ + ಹಾರ | = | ಆಹಾರ |
| | ಪ್ರ + ಯತ್ನ | = | ಪ್ರಯತ್ನ |

# ಛಂದಸ್ಸು

ಪದ್ಯದಲ್ಲಿ ಪ್ರವಹಿಸುವ ಲಯದ ಅಭ್ಯಾಸವೇ ಛಂದಸ್ಸು. ಇದು ಪ್ರಾಸ, ಯತಿ, ಗಣಗಳನ್ನು ಒಳಗೊಂಡಿರುತ್ತದೆ.

**ಪ್ರಾಸ :** ಪದ್ಯದ ಪ್ರತಿಪಾದದ ಮೊದಲ ಮತ್ತು ಎರಡನೆಯ ಸ್ವರಗಳ ನಡುವೆ ಒಂದೇ ವಿಧದ ಅಕ್ಷರ ಬರುವುದೇ ಪ್ರಾಸ. ಅಂತ್ಯಪ್ರಾಸಕ್ಕೆ ಒಂದು ಉದಾ : ತುಂಬಿವಿಂಡಿನಂತೆ ಪಾಡಿ ಜಕ್ಕವಕ್ಕಿಯಂತೆ ಕೂಡಿ.

**ಯತಿ:** ಪದ್ಯವನ್ನು ಓದುವಾಗ ಒಂದೆಡೆ ನಿಂತು ಉಸಿರು ತೆಗೆದುಕೊಳ್ಳುವ ತಾಣಕ್ಕೆ **ಯತಿ** ಎಂದು ಕರೆಯುವರು. ಯತಿಯೆಂದರೆ ಉಸಿರು ತಾಣ.

**ಗಣ:** ಗಣ ಎಂದರೆ ಗುಂಪು ಎಂದರ್ಥವಾಗುವುದು. ಇದರಲ್ಲಿ ಮೂರು ಪ್ರಕಾರಗಳು

1) ಅಕ್ಷರ ಗಣ
2) ಮಾತ್ರಾಗಣ
3) ಅಂಶಗಣ

1) **ಅಕ್ಷರಗಣ :** ಸಂಸ್ಕೃತ ಮೂಲದ ಛಂದೋಬಂಧಗಳಲ್ಲಿ ಮೂರು ಮೂರು ಅಕ್ಷರಗಳ ಗಣಗಳನ್ನು – ವಿಂಗಡಿಸಿದ್ದಾರೆ. 'ಯಮಾತಾರಾಜಭಾನಸಲಗಂ' ಎಂಬ ಸೂತ್ರದ ಸಹಾಯದಿಂದ ಈ ಎಂಟು ಬಗೆಗಳನ್ನು ನೆನಪಿಟ್ಟುಕೊಳ್ಳಬಹುದು. ಖ್ಯಾತ ಕರ್ನಾಟಕ ವೃತ್ತಗಳು ಈ ಗಣದಲ್ಲಿ ಗುರುತಿಸಲ್ಪಡುತ್ತವೆ.

| | | | |
|---|---|---|---|
| U _ _<br>ಯಮಾತಾ | ಯಗಣ | U _ U<br>ಜಭಾನ | ಜಗಣ |
| _ _ _<br>ಮಾತಾರಾ | ಮಗಣ | _ U U<br>ಭಾನಸ | ಭಗಣ |
| _ _ U<br>ತಾರಾಜ | ತಗಣ | U...U...U<br>ನಸಲ | ನಗಣ |
| _ U _<br>ರಾಜಭಾ | ರಗಣ | U...U —<br>ಸಲಗಂ | ಸಗಣ |

**ಖ್ಯಾತಕರ್ನಾಟಕ ವೃತ್ತಗಳು :**

ಉತ್ಪಲಮಾಲಾ, ಚಂಪಕಮಾಲಾ, ಶಾರ್ದೂಲ ವಿಕ್ರೀಡಿತ, ಮತ್ತೇಭವಿಕ್ರೀಡಿತ, ಸ್ರಗ್ಧರಾ ಮತ್ತು ಮಹಾಸ್ರಗ್ಧರಾ ವೃತ್ತಗಳೆಂಬ ಆರು ವೃತ್ತಗಳು ಪ್ರಸಿದ್ಧವಾಗಿವೆ.

**i) ಉತ್ಪಲ ಮಾಲಾ :** ಇದು ಪ್ರತಿ ಪಾದದಲ್ಲಿ 20 ಅಕ್ಷರಗಳಿಂದ ಕೂಡಿದ್ದು, ಭಗಣ, ರಗಣ, ನಗಣ, ಭಗಣ, ಭಗಣ, ರಗಣ, ಒಂದು ಲಘು ಮತ್ತು ಒಂದು ಗುರುವಿನಿಂದ ಕೂಡಿರುತ್ತದೆ.

**ಉದಾ :** ಪಂಕಜಮುಂ ಸುಹೃದ್ವದನ ಪಂಕಜ ಮುಂಮುಗಿವನ್ನಮುಗ್ರತೇ.

**ಲಕ್ಷಣ ಸೂತ್ರ :** ಉತ್ಪಲಮಾಲೆಯೆಪ್ಪುದು ಭರಂನಭಭಂರಲಗಂ ನೆಗಲ್ದಿರಲ್.

**ii) ಚಂಪಕ ಮಾಲಾ :** ಇದು ಪ್ರತಿ ಪಾದದಲ್ಲಿ 21 ಅಕ್ಷರಗಳಿಂದ ಕೂಡಿದ್ದು, ನಗಣ, ಜಗಣ, ಭಗಣ, ಜಗಣ, ಜಗಣ ಜಗಣ ಮತ್ತು ರಗಣಗಳಿಂದ ಕೂಡಿರುತ್ತದೆ.

**ಉದಾ–** ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನೊಂದೆ ಚಿತ್ತದಿಂ.

**ಲಕ್ಷಣ ಸೂತ್ರ :**

ನಜಭಜಜಂಜರಂ ಬಗೆಗೊಳುತ್ತಿರೆ ಚಂಪಕ ಮಾಲೆಯೆಂದಪರ್

**2) ಮಾತ್ರಾಗಣ :** ಪ್ರಾಕೃತ ಮೂಲದ ಛಂದೋರೂಪಗಳು ಮಾತ್ರೆಗಳನ್ನು ಆಧರಿಸಿ ಗಣವಿಂಗಡಿಸುವುದಕ್ಕೆ ಮಾತ್ರಾಗಣ ಎಂದು ಕರೆಯುವರು. ಇದರಲ್ಲಿ ಕಂದಪದ್ಯ, ರಗಳೆ, ಷಟ್ಪದಿಗಳು ಬರುತ್ತವೆ.

**ಉದಾ :** U U U ಮೂರು ಮಾತ್ರೆಯ ಗಣ
– – ನಾಲ್ಕು ಮಾತ್ರೆಯಗಣ
U U U U U ಐದು ಮಾತ್ರೆಯ ಗಣ

**ಕಂದ ಪದ್ಯ :** ನಾಲ್ಕು ಪಾದಗಳಿಂದ ಕೂಡಿದ ಪದ್ಯವಿದು. ಒಂದನೆಯ ಮತ್ತು ಮೂರನೆಯ ಸಾಲುಗಳು ಸಮಾನವಾಗಿದ್ದು ನಾಲ್ಕು ಮಾತ್ರೆಯ ಮೂರು ಗಣಗಳು ಬರುತ್ತವೆ – ಎರಡನೆಯ ಮತ್ತು ನಾಲ್ಕನೆಯ ಸಾಲುಗಳು ಸಮಾನವಾಗಿದ್ದು ನಾಲ್ಕು ಮಾತ್ರೆಯ ಐದು ಗಣಗಳು ಬರುತ್ತವೆ.

**ಉದಾ :** ಮದ ಗಜ ಸಂಕುಳದಿಂಶ್ವಾ
ಪದದಿಂದಂ ಗಿರಿ ಗುಹಾಳಿಯಿಂದಧಿಕ ಭಯ
ಪ್ರದಮೆನಿಪ ಘೋರಕಾಂತಾ
ರದೊಳೆ ಮಹಾಭೀರುವೆಂಬ ಜಂಬುಕನಿರ್ಕುಂ

**3) ಅಂಶಗಣ :** ದ್ರಾವಿಡ ಮೂಲದ ಛಂದೋರೂಪಗಳಲ್ಲಿ ಅಂಶಗಳನ್ನು ಅನುಲಕ್ಷಿಸಿ ಗಣವಿಂಗಡಿಸುವದು. ತ್ರಿಪದಿಗಳು ಅಂಶಗಣ ಪ್ರಧಾನವಾಗಿವೆ.

**ಉದಾ :** ಸತ್ಯರಾ ಒಡನಾಟ ಮತ್ತೆ ಸಕ್ಕರೆ ತುಪ್ಪ
ಸತ್ಯವಿಲ್ಲದವರ ಒಡನಾಟ ಬೇಲಿಯಾ
ಓತಿಯಂತಿಹುದು ಸರ್ವಜ್ಞ

ಅಂಶಗಣದಲ್ಲಿ ಬ್ರಹ್ಮ, ವಿಷ್ಣು ರುದ್ರಗಣಗಳೆಂದು ಮೂರು ವಿಧ.

**ಬ್ರಹ್ಮಗಣ** ಇದು ಎರಡು ಅಂಶಗಳಿಂದ ಕೂಡಿರುತ್ತದೆ. ಇದರಲ್ಲಿ ನಾಲ್ಕು ಪ್ರಕಾರಗಳಿವೆ.

**ಉದಾ :** –, –, ಬ್ರಹ್ಮಂ

**ವಿಷ್ಣುಗಣ** ಇದು ಮೂರು ಅಂಶಗಳಿಂದ ಕೂಡಿದ್ದು, ಇದರಲ್ಲಿ ಎಂಟು ಪ್ರಕಾರಗಳಿವೆ.

**ಉದಾ :** U, U, U, U ಮುರಹರ

**ರುದ್ರಗಣ** ಇದು ನಾಲ್ಕು ಅಂಶಗಳಿಂದ ಕೂಡಿದ್ದು ಇದರಲ್ಲಿ ಹದಿನಾರು ಪ್ರಕಾರಗಳಿವೆ.

**ಉದಾ :** –, –, –, – ಗಂಗಾ ಧೀಶಂ

**i) ತ್ರಿಪದಿ:** ಇದು ಮೂರು ಪಾದಗಳಿಂದ ಕೂಡಿದ್ದು, ಇದರಲ್ಲಿ ಒಟ್ಟು ಹನ್ನೊಂದು ಗಣಗಳಿರುತ್ತವೆ. ಆರು ಮತ್ತು ಹತ್ತನೆಯ ಗಣಗಳು ಬ್ರಹ್ಮಗಣಗಳಾಗಿದ್ದು, ಉಳಿದ ಗಣಗಳು ವಿಷ್ಣುಗಣ ಗಳಾಗಿರುತ್ತವೆ.

**ಉದಾ :** ನಿಂದೆಯನು ನುಡಿದರೂ ನಂದ ಸಜ್ಜನ ಲೇಸು
ಹೊಂದಿ ಸಾಸಿರವ ಕೊಡುತಿರ್ಪ ದುರ್ಜನರ
ದಂದುಗವೆ ಬೇಡ ಸರ್ವಜ್ಞ.

**ii) ಸಾಂಗತ್ಯ :** ಇದು ನಾಲ್ಕು ಸಾಲುಗಳಿಂದ ಕೂಡಿದ್ದು, ಒಂದು ಮತ್ತು ಮೂರನೆಯ ಪಾದಗಳು ಸಮಾನವಾಗಿದ್ದು ಪ್ರತಿಪಾದದಲ್ಲಿ ನಾಲ್ಕು ವಿಷ್ಣುಗಣಗಳು ಬರುತ್ತವೆ. ಎರಡು ಮತ್ತು ನಾಲ್ಕನೆಯ ಪಾದಗಳು ಸಮಾನವಾಗಿದ್ದು ಪ್ರತಿಪಾದದಲ್ಲಿ ಮೊದಲು ಎರಡು ವಿಷ್ಣುಗಣಗಳು ಬಳಿಕ ಒಂದು ಬ್ರಹ್ಮಗಣ ಬರುತ್ತದೆ.

**ಉದಾ :** ಪರಂಪರಂಜ್ಯೋತಿ ಕೋಟಿಚಂದ್ರಾದಿತ್ಯ
ಕಿರಣ ಸುಜ್ಞಾನ ಪ್ರಕಾಶ
ಸುರರಮಕುಟಮಣಿವಂದಿತ ಚರಣಾಬ್ಜ
ಶರಣಾಗು ಪ್ರಥಮ ಜಿನೇಶ

# 1. ಬ್ಲಾಗ್ ಲೇಖನ

ಕನ್ನಡ ಭಾಷೆಯನ್ನು ಸರಿಯಾಗಿ ಬರೆಯುವಂತೆ, ಸಂದರ್ಭಕ್ಕೆ ತಕ್ಕಂತೆ ಪದಗಳನ್ನು ಬಳಸುವ ಮತ್ತು ಮಾತನಾಡುವ ಕೌಶಲ್ಯವನ್ನು ಹೆಚ್ಚಿಸಲಾಗುತ್ತದೆ. ಪತ್ರಲೇಖನ ಪತ್ರಿಕಾವರದಿ, ಕಾರ್ಯಕ್ರಮ ನಿರೂಪಣೆ, ಬ್ಲಾಗ್ ಲೇಖನ, ಅನುವಾದ, ಗದ್ಯ ವಿಸ್ತರಣೆ ಮುಂತಾದ ಅಂಶಗಳಿಂದ ಭಾಷೆ, ಬರವಣಿಗೆ ಅಭಿವೃದ್ಧಿ ಯಾಗುವದು. ಕೌಶಲ್ಯ ಹೆಚ್ಚಿಸಿದಂತಾಗುವದು.

1. ಬ್ಲಾಗ್ ಎಂದರೇನು?
2. ಬ್ಲಾಗ್‌ನ ಇತಿಹಾಸ
3. ಬ್ಲಾಗದ ಪ್ರಯೋಜನಗಳು

## 1) ಬ್ಲಾಗ್ ಎಂದರೇನು ?

ಬ್ಲಾಗ್ ಎಂದರೆ ಒಂದು ಮಾಹಿತಿ ನೀಡುವ ವೆಬ್‌ಸೈಟ್. ಇದರಲ್ಲಿ ವ್ಯಕ್ತಿಯು ತನ್ನ ಅನುಭವಗಳನ್ನು ಪ್ರಸಿದ್ಧಗೊಳಿಸುತ್ತಾನೆ. ಅದು ಪ್ರಪಂಚದಲ್ಲಿ ಬೇಕಾದವರು ನೋಡಬಹುದು. ಮೊದಲು ಬ್ಲಾಗ್ ಒಬ್ಬನೇ ವ್ಯಕ್ತಿಯ ಅನುಭವಗಳ ಅಭಿವ್ಯಕ್ತಿಯಾಗಿತ್ತು. ನಂತರ ಸಣ್ಣ ಸಣ್ಣ ಗುಂಪುಗಳು ಪ್ರಾಸಂಗಿಕವಾದ ಸಂಗತಿಗಳನ್ನು ಇದರಲ್ಲಿ ಚರ್ಚಿಸ ತೊಡಗಿದರು. ಅನಂತರ ಲೇಖಕರ ಬ್ಲಾಗ್‌ಗಳು ಉದಯವಾದವು. ಅನೇಕ ಲೇಖಕರ ಲೇಖನಗಳು, ಕೃತಿಗಳು, ವರ್ತಮಾನ ಪತ್ರಗಳಿಂದ, ಪ್ರಸಾರ ಮಾಧ್ಯಮಗಳಿಂದ, ವಿಶ್ವವಿದ್ಯಾಲಯದ ವಿಚಾರ ಪ್ರವಾಹಗಳಿಂದ ವಿಚಾರಗಳು ಬ್ಲಾಗ್‌ನಲ್ಲಿ ಸೇರಿಕೊಂಡವು.

## 2) ಬ್ಲಾಗ್‌ನ ಇತಿಹಾಸ :

ಜೋರ್ನ್ ಬರ್ಜರ್ ಇವನು **17 ಡಿಸೆಂಬರ್ 1997** ರಂದು 'Weblog` ಎಂಬ ಪದವನ್ನು ಬಳಸಿದನು. ಪೀಟರ್ ಮೆಮೋಜ ಅದನ್ನು **1999** ರಲ್ಲಿ ಬ್ಲಾಗ್ ಎಂದು ಕರೆದನು. ಬ್ಲಾಗ್‌ನಿಂದಾಗಿ ಹೆಚ್ಚಿನ ತಾಂತ್ರಿಕ ಅನುಭವವಿಲ್ಲದವರೂ ತಮ್ಮ ಅನುಭವಗಳನ್ನು ಪೋಸ್ಟ್ ಮಾಡಲು ಸುಲಭವಾಯಿತು. ಇದು ಮುಂದೆ ಸಾಮೂಹಿಕ ನೆಟ್‌ವರ್ಕ್ ಸೇವೆಯ ಒಂದು ಪ್ರಕಾರವಾಗಿ ಬಳಕೆಗೆ ಬಂದಿತು. ಬ್ಲಾಗರ್‌ಗಳು ತಮ್ಮ ಅನುಭವಗಳನ್ನು ಪೋಸ್ಟ್ ಮಾಡುವುದರೊಂದಿಗೆ ಇತರ ಬ್ಲಾಗರ್‌ಗಳ ಜೊತೆಗೂ ಸಾಮಾಜಿಕ ಸಂಬಂಧವನ್ನು ಬೆಳೆಸಲು ಸಾಧ್ಯವಾಯಿತು. ಹೆಚ್ಚಿನ ಬ್ಲಾಗ್‌ಗಳು ಪಠ್ಯರೂಪದಲ್ಲಿರುತ್ತವೆ. ತನಗೆ ಅನಿಸಿದ, ತಿಳಿದ, ಸಂಗತಿಯನ್ನು ಬೇಕಾದವರು ಬ್ಲಾಗ್‌ನಲ್ಲಿ ಬರೆಯಬಹುದು. ಮುಂದೆ ಅದರಲ್ಲಿ ಭಾವಚಿತ್ರ, ಫ್ಹಿಡಿಯೋ, ಸಂಗೀತ ಮತ್ತು ಧ್ವನಿಗೆ ಒತ್ತು ನೀಡಿದವು. **2011ರಲ್ಲಿ 15 ಕೋಟಿ 60 ಲಕ್ಷದಷ್ಟು** ಬ್ಲಾಗ್‌ಗಳು ಅಸ್ತಿತ್ವದಲ್ಲಿದ್ದವು.

## 3) ಬ್ಲಾಗ್‌ದ ಪ್ರಯೋಜನಗಳು :

ಇಂದಿನ ಕಾಲದಲ್ಲಿ ಬ್ಲಾಗ್ ಬಹಳ ಪ್ರಯೋಜನಕಾರಿಯಾಗಿದೆ. ಹೆಚ್ಚಿನ ತಂತ್ರಜ್ಞಾನದ ಅಗತ್ಯವಿಲ್ಲದೆ ಇದನ್ನು ಬೇಕಾದವರು ಬಳಸಬಹುದು. ತಮ್ಮ ದಿನನಿತ್ಯದ ಅನುಭವಗಳನ್ನು ಅಪ್‌ಲೋಡ್ ಮಾಡಬಹುದು. ಇದೊಂದು ವೈಯಕ್ತಿಕ ಮತ್ತು ಸಾಮೂಹಿಕ ನೆಟ್‌ವರ್ಕ್ ಸೇವೆಯಾದುದರಿಂದ ಸಾಮಾಜಿಕ ಜಾಗೃತಿಗೂ ಬಳಸಿ ಕೊಳ್ಳಬಹುದು. ಇದರಲ್ಲಿ ರಾಜಕಾರಣದಿಂದ ಹಿಡಿದು ಕ್ರಿಡೆ, ಶಿಕ್ಷಣ, ಕಲೆ ಮುಂತಾದ ವಿಷಯಗಳ ವೃತ್ತಾಂತವನ್ನು ತಿಳಿದುಕೊಳ್ಳಬಹುದಾಗಿದೆ. ಕೆಲವು ವೈಯಕ್ತಿಕ ಆನ್‌ಲೈನ್ ಡೈರಿಗಳಂತೆಯೂ ಇದನ್ನು ಬಳಸಬಹುದು. ವಿಶಿಷ್ಟ ವ್ಯಕ್ತಿಯ ವಿಶಿಷ್ಟ ಕಂಪನಿಯ ಆನ್‌ಲೈನ್ ಬ್ರಾಂಡ್‌ಗಳಂತೆಯೂ ಕೆಲಸ ಮಾಡುತ್ತವೆ. ಆದ್ದರಿಂದ ಬ್ಲಾಗ್‌ಗಳು ಜ್ಞಾನದ ಸಾಧನಗಳೆಂದು ಹೇಳಬಹುದು. ಇದರಿಂದ ಜ್ಞಾನವನ್ನು ಪಡೆಯುವುದೂ ಸಾಧ್ಯ, ಜ್ಞಾನವನ್ನು ಪ್ರಸಾರ ಮಾಡುವುದೂ ಸಾಧ್ಯವೆಂದು ಹೇಳಬಹುದು.

i. ವೈಯ್ಯಕ್ತಿಕ ಆನ್‌ಲೈನ್ ದಿನಚರಿ
ii. ವಿಶೇಷ ಅನುಭವದ ನಿರೂಪಣೆ
iii. ಕೃತಿಯೊಂದರ ಪರಿಚಯ / ವಿಮರ್ಶೆ / ಟೀಕೆ
iv. ವ್ಯವಹಾರದ ಬ್ಲಾಗ್
v. ವ್ಯವಸಾಯಿಕ ಬ್ಲಾಗ್
vi. ಮಾಧ್ಯಮ ಸಂಬಂಧಿ ಬ್ಲಾಗ್
vii. ಚರ್ಚೆ - ಪ್ರತಿಚರ್ಚೆಯ ಬ್ಲಾಗ್

ಹೀಗೆ ಅನೇಕ ಸಂಗತಿಗಳನ್ನು ಅನೇಕ ಬ್ಲಾಗ್‌ಗಳ ಮೂಲಕ ತಿಳಿದುಕೊಳ್ಳಬಹುದಾಗಿದೆ. ಅದರಲ್ಲಿ ಸಾರ ಸಂಗ್ರಹ, ಸಾರಸಂಗ್ರಹ ವಿಸ್ತರಣೆ, ಭಾಷಣದ ಸಿದ್ಧತೆ, ಪತ್ರಿಕಾ ವರದಿಯ ಲೇಖನ, ಸ್ವ-ಪರಿಚಯ ಮಾದರಿ, ನಿಬಂಧ ಲೇಖನದ ಮಾದರಿ ಇತ್ಯಾದಿಗಳನ್ನು ಮಾಹಿತಿಗಾಗಿ ಇಲ್ಲಿ ಕೊಡಲಾಗಿದೆ.

## i ಪತ್ರ ಲೇಖನ

ಇಂದಿನ ದಿನಗಳಲ್ಲಿ ಹೊಸ ಬಳಕೆ ಹೆಚ್ಚಾಗಿರುವದು, ಇದರಿಂದ ಪತ್ರಲೇಖನ ಪದ್ಧತಿಯು ಹಿಂದುಳಿಯುತ್ತಿದೆ. ಪತ್ರದ ಮುಖಾಂತರ ನಡೆಯುವ, ವಿಶ್ವಾಸ, ಪ್ರೀತಿ, ಮಮತೆ ಆಚಾರ, ವಿಚಾರ, ಮುಂತಾದವು ಮೊಬೈಲ್ ಮೂಲಕವೇ ನಡೆಯುತ್ತಿವೆ. ಆದರೆ ಪತ್ರದ ಮುಖಾಂತರ ಇವೆಲ್ಲವೂ ನಡೆದರೆ ಉತ್ತಮವಾಗುವದು. ಗೌಪ್ಯ ಮತ್ತು ಗಾಢವಾಗಿ ಉಳಿಯುವವು. ಇಷ್ಟೆಲ್ಲಾ ಆದರೂ ಔಪಚಾರಿಕ/ಕಛೇರಿಯ ವ್ಯವಹಾರಕ್ಕಾಗಿ ಪತ್ರಲೇಖನ ಬೇಕೇ ಬೇಕು.

### ಔಪಚಾರಿಕ

### ಮುಖ್ಯ ಅಂಶಗಳು

i) ಪತ್ರ ಬರೆಯುವಾಗ ಪ್ರಾರಂಭದಲ್ಲಿ ಎಡಬದಿಗೆ ಇವರಿಂದ / ಎಂದು ವಿಳಾಸ ಬರೆಯಬೇಕು. ಎಡ ಬದಿಯಲ್ಲಿ ಇವರಿಗೆ, ಎಂದು ವಿಳಾಸ ಬರೆಯಬೇಕು. (ಹುದ್ದೆ ಸಹಿತ)

ii) ವಿಷಯ ಬರೆಯಬೇಕು. ನಂತರ ಸಂಬೋಧನಾತ್ಮಕ ಪದದ ಬಳಕೆ ಮಾಡಬೇಕು.

iii) ಪತ್ರವು ಯಾವುದರ ಕುರಿತಾಗಿ ಇರುತ್ತದೆ ಅದರ ವಿಷಯ ಸ್ಪಷ್ಟವಾಗಿರಬೇಕು.

iv) ಪತ್ರದ ಕೊನೆಗೆ ಎಡಬದಿಯಲ್ಲಿ

ಇಂದ
ಸವಿತಾ. ಜಿ. ಬಿ.
ಸಾಧನಕೇರಿ ಧಾರವಾಡ

### ಅನೌಪಚಾರಿಕ

### ಅಂಶಗಳು

i) ಪತ್ರ ಬರೆಯುವಾಗ ಎಡಬದಿಗೆ ತಮ್ಮ ವಿಳಾಸ ಬರೆಯಬೇಕು.

ii) ಪತ್ರದ ಪ್ರಾರಂಭದಲ್ಲಿ ವ್ಯಕ್ತಿಗೆ ತಕ್ಕಂತಹ ಸಂಬೋಧನಾ ಪದ ಬಳಸಬೇಕು.

iii) ವ್ಯಕ್ತಿಯ ಕ್ಷೇಮ ಸಮಾಚಾರ ಕುರಿತು ತಮ್ಮ ಭಾವನೆಗಳನ್ನು ಮಂಡಿಸಬೇಕು.

iv) ಸಂಬಂಧಗಳನ್ನು ಹೆಚ್ಚಿಸುವ ವರ್ಣನಾತೀತ ಪದಗಳನ್ನು ಬಳಸುವದು. ಇದರಲ್ಲಿ ವಿಷಯ ಬರೆಯುವ ಅವಶ್ಯಕತೆ ಇರುವುದಿಲ್ಲ.

# ಪತ್ರದ ನಮೂನೆ-I (ಅನೌಪಚಾರಿಕ)

ಮಯೂರವರ್ಮ
'ಲಕ್ಷ್ಮೀನಿವಾಸ'
ಕೆ. ಎಚ್,ಬಿ. ಕಾಲನಿ, ಗದಗ ರಸ್ತೆ,
ದಾವಣಗೆರೆ 415861
6 ನವ್ಹೆಂಬರ 2018

**ಅಕ್ಕರೆಯ ಅಕ್ಕನಿಗೆ,**

ನಿನ್ನ ಪ್ರೀತಿಯ ತಮ್ಮ ಮಯೂರ ಮಾಡುವ ಅನಂತ ಪ್ರಣಾಮಗಳು. ಮನೆಯಲ್ಲಿ ತಾವೆಲ್ಲ ಕ್ಷೇಮವಾಗಿರುವಿರೆಂದು ಭಾವಿಸಿದ್ದೇನೆ. ನಾನು ನನ್ನ ಅಭ್ಯಾಸ ಆರೋಗ್ಯದೊಂದಿಗೆ ಕ್ಷೇಮವಾಗಿದ್ದೇನೆ. ಹಿಂದೊಮ್ಮೆ ನಾವು ಬೆಟ್ಟಿಯಾದಾಗ ನಿಮ್ಮೂರಲ್ಲಿ ವಿದ್ಯುತ್ ಕೊರತೆಯ ಕುರಿತಾಗಿ ಹೇಳಿದ್ದು ಮತ್ತು ಅದರ ಬಗ್ಗೆ ಚಿಂತೆ ವ್ಯಕ್ತಪಡಿಸಿದ್ದು ನನಗೆ ನೆನಪಿದೆ. ಆದರೆ ಆ ಸಮಸ್ಯೆಯಿಂದ ಹೊರ ಬರಲು ಒಂದು ಉನ್ನತ ಉಪಾಯದ ಕುರಿತು ತಿಳಿಸಲು ಈ ಪತ್ರ ಬರೆಯುತ್ತಿದ್ದೇನೆ.

ಮೊನ್ನೆ ನಮ್ಮ ವಸತಿಗೃಹಕ್ಕೆ M.S.E.B. ಅಧಿಕಾರಿಯೊಬ್ಬರು ಬೆಟ್ಟಿಕೊಟ್ಟು ವಿದ್ಯುತ್ ಕೊರತೆಯ ಸಮಸ್ಯೆಗೆ ಪರಿಹಾರ ಕುರಿತು ಸರಳವಾದ ಉಪಾಯಗಳನ್ನು ಹೇಳಿದರು. ಇಸ್ತ್ರಿ ಮಾಡುವಾಗ ಇದ್ದಿಲು ಇಸ್ತ್ರಿ ಬಳಸುವುದು, ಕೆಲಸವಿದ್ದ ಕೋಣೆಗಳಲ್ಲಿ ಮಾತ್ರ ವಿದ್ಯುತ್ ದೀಪ ಬಳಸುವದು, ಅನಾವಶ್ಯಕ ಎಲ್ಲಾ ಕೋಣೆಗಳಲ್ಲಿ ದೀಪ ಹಚ್ಚಬಾರದು. ಅವಶ್ಯಕವಿದ್ದಷ್ಟು T.V. ಕಂಪ್ಯೂಟರ ಉಪಯೋಗಿಸುವದು. ಸಾಮಾನ್ಯ ಬಲ್ಬಗಳ ಬದಲಾಗಿ LED ಬಲ್ಬಗಳನ್ನು ಉರಿಸುವದು. ವಿದ್ಯುತ್ ಮೇಲೆ ನೀರು ಕಾಯಿಸುವ ಬದಲಾಗಿ ಸೋಲಾರವಾಟರ ಹೀಟರ ಉಪಯೋಗಿಸುವದು. ಅಡುಗೆ ಮಾಡಲು ಅಡುಗೆ ಅನಿಲ ಉಪಯೋಗಿಸುವದು. ಅಭ್ಯಾಸಕ್ಕಾಗಿ ದೊಡ್ಡ ವಿದ್ಯುತ್ ಬಲ್ಬ ಬದಲಾಗಿ ಸಮೀಪದಲ್ಲಿ ಸಣ್ಣ ಲ್ಯಾಂಪ (ಟೇಬಲ್ ಲ್ಯಾಂಪ ಬಳಸುವದು. ನಳದ ನೀರು ಸರಾಗವಾಗಿ ಬರುತ್ತಿದ್ದರೆ, ಕರೆಂಟಮೋಟರ ಬಳಸಬಾರದು. ಇತ್ಯಾದಿಗಳ ಮಾಹಿತಿ ಒದಗಿಸಿದರು. ಆದ್ದರಿಂದ ಈ ನಿಯಮಗಳನ್ನು ಪಾಲಿಸಿ ನಾವು ವಿದ್ಯುತ್ ಕೊರತೆಯನ್ನು ನಿವಾರಿಸಿಕೊಂಡು ಚೆನ್ನಾಗಿ ಬಾಳಬಹುದು.

ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಮನೆಯಲ್ಲಿ ಎಲ್ಲರಿಗೂ ನನ್ನ ನಮಸ್ಕಾರ ತಿಳಿಸಿರಿ. ಮತ್ತೆ ಪತ್ರ ಬರೆಯಿರಿ.

ಧನ್ಯವಾದಗಳೊಂದಿಗೆ,

ಇವರಿಂದ
ಅಶೋಕ
ನಾರಾಯಣ ನಿವಾಸ, ಕೆ.ಎಚ್.ಬಿ. ಕಾಲನಿ ಚಿತ್ರದುರ್ಗ ರಸ್ತೆ
ಬೆಂಗಳೂರು 586114

# ಪತ್ರದ ನಮೂನೆ- II (ಔಪಚಾರಿಕ)

ಗೆ,
ಜಗದೀಶ. ಜಿ. ಎಚ್.
K.S.E.B. ಮುಖ್ಯ
ಇಂಜಿನೀಯರರು ವಿಭಾಗ A, ಬೆಂಗಳೂರು.

**ವಿಷಯ :-** ಜಲವಿದ್ಯುತ್ ಕೊರತೆಗೆ ಕಾರಣ, ಉಳಿತಾಯ ಕುರಿತು ಜಾಗೃತಿ ಮೂಡಿಸಿದ್ದಕ್ಕಾಗಿ ಅಭಿನಂದನೆ ಸಲ್ಲಿಸುವ ಕುರಿತು.

**ಮಾನ್ಯರೆ,**

ನಾನು ತಾವು ಪ್ರತಿನಿಧಿಸುವ ಕಾಲನಿಯ ನಾಗರಿಕನಾಗಿದ್ದು ಈ ಪತ್ರ ಬರೆಯಲು ಅತ್ಯಂತ ಆನಂದವೆನಿಸುತ್ತಿದೆ. ತಾವು ಹೇಳಿದ ''ವಿದ್ಯುತ್ ಕೊರತೆಗೆ ಕಾರಣ ಮತ್ತು ಉಳಿತಾಯದ ಉಪಾಯಗಳು'' ಎನ್ನುವ ಮಾತು ನಮ್ಮ ಕಾಲನಿಯ ನಿವಾಸಿಗಳ ಮೇಲೆ ಬಹಳಷ್ಟು ಪರಿಣಾಮ ಬೀರಿದೆ. ನೀವು ಹೇಳಿದ ಎಲ್ಲ ಉಪಾಯಗಳನ್ನು ನೂರಕ್ಕೆ ಎಪ್ಪತ್ತರಷ್ಟು ಜನ ಪಾಲಿಸುತ್ತಿದ್ದಾರೆ. ಮೊದಲಿದ್ದ ವಾಟರ ಹೀಟರ ಬದಲಾಗಿ ಎಲ್ಲ ಮಾಳಿಗೆ ಮೇಲೆ ಸೋಲಾರ ಪ್ಲೇಟಗಳು ಕಾಣುತ್ತಿವೆ. ವಿದ್ಯುತ್ ಒಲೆಗಳ ಬದಲಾಗಿ ಅಡುಗೆ ಅನಿಲ ಬಳಸುತ್ತಿದ್ದಾರೆ. ದಾರಿದೀಪಗಳನ್ನೂ ಸಹ, ಹುಣ್ಣಿಮೆ ಚಂದಿರನಿರುವಾಗ ಬಳಸುವದನ್ನು ನಿಲ್ಲಿಸಿದ್ದಾರೆ. ಮನೆ ಮನೆಗಳಲ್ಲಿ ಕೇವಲ ರಾತ್ರಿ ವೇಳೆ 2 ಗಂಟೆಗಳ ಕಾಲ ಮಾತ್ರ T.V. ಧ್ವನಿ ಕೇಳಿ ಬರುತ್ತಿದೆ. ಒಟ್ಟಿನಲ್ಲಿ ನೀವು ಹೇಳಿದ ಸೂಚನೆಗಳನ್ನು ಜನರು ಪಾಲಿಸುತ್ತಿರುವರು. ಆದ್ದರಿಂದ ತಮಗೆ ವೈಯಕ್ತಿಕವಾಗಿ ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಧನ್ಯವಾದಗಳೊಂದಿಗೆ,

ಇವರಿಂದ
ರವಿಚಂದ್ರ
ಮಹೇಶ

ಕೃಷ್ಣ ನಿವಾಸ, ಕೆ. ಎಚ್,ಬಿ. ಕಾಲನಿ, ಹುಬ್ಬಳ್ಳಿ ರಸ್ತೆ,
ದೇವದುರ್ಗ 415861

ಶಾಲೆಯಲ್ಲಿ ಶೈಕ್ಷಣಿಕ ಪ್ರವಾಸ ಕೈಗೊಂಡಿದ್ದರಿಂದ ಪ್ರವಾಸದ ಮಾಹಿತಿಯನ್ನು ನೀಡುತ್ತಾ ಪ್ರವಾಸಕ್ಕಾಗಿ ಹಣ ಕಳಿಸಿ ಕೊಡುವಂತೆ ತಂದೆಯವರಿಗೆ / ಅಣ್ಣನಿಗೆ ಒಂದು ಪತ್ರ ಬರೆಯಿರಿ.

ಅಥವಾ

ಪ್ರಾಚೀನ ಶಿಲಾ ಮೂರ್ತಿಗಳು ಮತ್ತು ಸ್ಮಾರಕಗಳನ್ನು ಸಂರಕ್ಷಿಸಿ ಅವುಗಳ ವಿಕಾಸ ಮಾಡಿದ್ದಕ್ಕಾಗಿ ಕರ್ನಾಟಕ ಪ್ರಾಚ್ಯವಸ್ತು ಶಿಲಾ ಸ್ಮಾರಕ ರಕ್ಷಣಾ ಮಂಡಳಿಗೆ ಒಂದು ಅಭಿನಂದನ ಪತ್ರ ಬರೆಯಿರಿ.

## ii) ಸಾರ ಸಂಗ್ರಹ ವಿಸ್ತರಣೆ

ಸಾರ ಸಂಗ್ರಹ ವಿಸ್ತರಣೆ ಎಂದರೆ ಸ್ವಲ್ಪದರಲ್ಲಿ ಕೊಟ್ಟಂತಹ ಯಾವುದೇ ವಿಷಯದ ಗದ್ಯಖಂಡವನ್ನು ವಿವಿಧ ಹೊಸ ಪದಗಳ ಜೋಡಣೆ ಮತ್ತು ತಾರ್ಕಿಕ ವಿಚಾರಗಳಿಂದ, ಪಡೆನುಡಿಗಳಿಂದ, ವರ್ಣನಾತ್ಮಕ ವಾಕ್ಯಗಳಿಂದ ವಿಸ್ತರಿಸಿ ಬರೆಯುವದು. ಅದರಲ್ಲಿ ಈ ಅಂಶಗಳು ಅಡಕವಾಗಿರುತ್ತವೆ.

* ವಿಷಯಕ್ಕೆ ತಕ್ಕಂತೆ ತಾರ್ಕಿಕ ವಿವರಣೆ
* ವಿಷಯದ ಬಗೆಗೆ ಮನಸೆಳೆಯುವ ವರ್ಣನೆ
* ಅವಶ್ಯಕತೆ ಇದ್ದಲ್ಲಿ ಅಲಂಕಾರಿಕ ಶಬ್ದಗಳ ಬಳಕೆ

ಕಿತ್ತೂರು ರಾಣಿ ಚೆನ್ನಮ್ಮ ಬಾಲ್ಯದಲ್ಲಿಯೇ ಶೂರಳಾಗಿದ್ದಳು, ಅವಳು ತಂದೆಯ ಜೊತೆಯಾಗಿಯೆ ಗಂಡು ಮಗನಂತೆ ಬೆಳೆದಳು. ಅವಳನ್ನು ಮಲ್ಲಸರ್ಜ ದೇಸಾಯಿಗೆ ಕೊಟ್ಟು ವಿವಾಹ ಮಾಡಲಾಯಿತು. ಆತ ತೀರಿದ ನಂತರ ಮಲ್ಲಸರ್ಜನ ಎರಡನೇಯ ಪತ್ನಿಯ ಮಗ ಶಿವಲಿಂಗ ಸರ್ಜನಿಗೆ ಪಟ್ಟಕಟ್ಟಲಾಯಿತು. ಆತನು ಅಕಾಲಿಕ ಮರಣಕ್ಕೆ ಈಡಾದನು. ಚೆನ್ನಮ್ಮಾಜಿ ದತ್ತು ಸ್ವೀಕಾರಕ್ಕಾಗಿ ಬ್ರಿಟಿಷ ಅಧಿಕಾರಿಗೆ ಪತ್ರ ಬರೆದಿದ್ದಳು, ಉತ್ತರ ಬರದ ಕಾರಣ ತಾನೇ ರಾಜ್ಯಭಾರ ವಹಿಸಿಕೊಂಡಳು, ಅವಳನ್ನು ಬ್ರಿಟಿಷರು ಬೈಲಹೊಂಗಲ ಕಾರಾಗೃಹದಲ್ಲಿ ಇಟ್ಟರು.

**ಸಾರ ಸಂಗ್ರಹ ವಿಸ್ತರಣೆಯ ಮಾದರಿ :-**

ಕಿತ್ತೂರು ರಾಣಿ ಚೆನ್ನಮಾಜಿಯು ಬಾಲ್ಯದಲ್ಲಿಯೇ ಚುರುಕುತನ ದಿಟ್ಟತನ, ಶೌರ್ಯ ಇತ್ಯಾದಿ ಗುಣಗಳು ಕಂಡು ಬಂದವು. 'ಹುಲಿಯ ಹೊಟ್ಟೆಯಿಂದ ಹುಲಿಯೇ ಹುಟ್ಟುವುದು'' ಎನ್ನುವಂತೆ, ಅವಳ ತಂದೆ ರಾಜಮನೆತನದ ಎಲ್ಲ ವಿದ್ಯೆಯನ್ನು ಕಲಿಸಿಕೊಟ್ಟರು. ಕುದುರೆ ಸವಾರಿಯಂತೂ ಹೇಳತೀರದು. ಅವಳ ಶೂರತನವನ್ನು ಜಾನಪದ ಕವಿ ''ತಂದೆಯ ಜೊತೆಗೂಡಿ ಕಾಡಿಗೆ ಹೋಗ್ಯಾಳ ತುಂಬಿದ ಹೊಳಿ ದಾಟ್ಯಾಳ ಈಸಾಡಿ' ಎಂದು ವರ್ಣಿಸಿದ್ದಾನೆ.

ಟಿಪ್ಪು ಸುಲ್ತಾನನ ಸಮಕಾಲೀನನಾದ ಕಿತ್ತೂರಿನ ಅರಸು ಮಲ್ಲಸರ್ಜನಿಗೆ ಚೆನ್ನಮ್ಮಾಜಿಯನ್ನು ವಿವಾಹ ಮಾಡಿ ಕೊಡಲಾಯಿತು. ಕೆಲಕಾಲದ ನಂತರ ಮಲ್ಲಸರ್ಜ ಅರಸು ಅನಾರೋಗ್ಯಕ್ಕೆ ತುತ್ತಾಗಿ ಮರಣಹೊಂದಿದ. ಆತನ ಎರಡನೆಯ ಪತ್ನಿಯ ಮಗ ಶಿವಲಿಂಗಸರ್ಜನಿಗೆ ಪಟ್ಟಕಟ್ಟಲಾಯಿತು. ಸುತ್ತಲಿನ ಅರಸರ ಕಪಟ, ಮೋಸಗಾರಿಕೆಗೆ ಒಳಗಾಗಿ ಆತನು ತೀರಿಕೊಂಡನು. ನಂತರ ಚೆನ್ನಾಮ್ಮಾಜಿ ಇನ್ನೊಬ್ಬನ ದತ್ತು ಸ್ವೀಕಾರಕ್ಕೆ ಅನುಮತಿ ನೀಡುವಂತೆ ಬ್ರಿಟಿಷ ಸರಕಾರಕ್ಕೆ ಪತ್ರ ಬರೆದಳು. ಆದರೆ ವಂಚಕರಾದ ಬ್ರಿಟಿಷ ಅಧಿಕಾರಿಗಳು, ಅದಕ್ಕೆ ಅನುಮತಿ ಕೊಡಲಿಲ್ಲ.

ಸ್ವತ: ಚೆನ್ನಮ್ಮಾಜಿಯೇ ಅಧಿಕಾರ ವಹಿಸಿಕೊಂಡಳು. ಧಾರವಾಡ ಜಿಲ್ಲೆಯ ಜಿಲ್ಲಾಧಿಕಾರಿ ಥ್ಯಾಕರೆ ಕಿತ್ತೂರಿಗೆ ಬಂದು ಅವರ ಆಡಳಿತ ಕಛೇರಿಗೆ ಬೀಗ ಹಾಕಿಸಿದ. ತನ್ನ ಅನುಮತಿ ಇಲ್ಲದೆ ಹೇಳಿ ಸುತ್ತಲಿನ ಭಾಗಗಳಿಂದ ಸೈನ್ಯ ಕರೆಯಿಸಿ ಇವರ ಮೇಲೆ ಯುದ್ಧ ಸಾರಿದ. ಕಿತ್ತೂರು ಕೋಟೆಗೆ ಬಂದು ಏನೇನೋ ಮಾತನಾಡತೊಡಗಿದನು. ಸಿಟ್ಟಿಗೆದ್ದ ಚೆನ್ನಮ್ಮಾಜಿ ಯುದ್ಧ ಮಾಡಲು ಮೀನಮೇಷ ಮಾಡಲಿಲ್ಲ. ಶೂರ ಸೈನಿಕನಾದ ಅಮಟೂರು ಬಾಳಪ್ಪನಿಗೆ ಸನ್ನೆ ಮಾಡಿದಾಗ ಬಾಳಪ್ಪನ ಗುಂಡಿನ ಏಟಿನಿಂದ ಥ್ಯಾಕರೆ ನೆಲಕ್ಕೆ ಉರುಳಿಬಿದ್ದನು.

**ನಿಮಗೆ ಕೊಟ್ಟ ಸಾರ ಸಂಗ್ರಹವನ್ನು ವಿಸ್ತರಿಸಿ ಬರೆಯಿರಿ.**

ಹನ್ನೆರಡನೆಯ ಶತಮಾನದ ಶ್ರೇಷ್ಠ ದಾರ್ಶನಿಕ ಬಸವಣ್ಣ. ಇವರು ಬಿಜಾಪೂರದ ಈಗಿನ ವಿಜಯಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನ ಇಂಗಳೇಶ್ವರ ಗ್ರಾಮದಲ್ಲಿ ಜನಿಸಿದರು. ತಂದೆಮಾದರಸ ತಾಯಿ ಮಾದಲಾಂಬಿಕೆ. ಗುರುಗಳು ಜಾತವೇದ ಮುನಿಗಳು. ಬಸವಣ್ಣನವರು ಚಿಕ್ಕಂದಿನಿಂದಲೇ ವಚನಗಳ ರಚನೆಯಲ್ಲಿ ತೊಡಗಿದರು. ಇವರ ವಚನಾಂಕಿತ ಕೂಡಲ ಸಂಗಮದೇವ. ಸಮಾಜದಲ್ಲಿ ಬೇರು ಬಿಟ್ಟಿರುವ ಜಾತೀಯತೆ, ಮೂಢನಂಬಿಕೆಗಳನ್ನು ಹೋಗಲಾಡಿಸಲು ಹೋರಾಡಿದರು. ಜಗತ್ತಿಗೆ ಕಾಯಕದ ಮಹತ್ವವನ್ನು ಸಾರಿದರು. ವರ್ಗ–ವರ್ಣ ಬೇದಭಾವ ಹೋಗಲಾಡಿಸಿ ಸಮಾನತೆಯ ಸಂದೇಶವನ್ನು ಸಾರಿ ಜಗಜ್ಯೋತಿಯಾಗಿ ಬೆಳಗಿದರು.

## iii. ಭಾಷಣ ತಯಾರಿಕೆ

''ಜಾಣನಿಗೆ ಮಾತಿನ ಪೆಟ್ಟು ಕೋಣನಿಗೆ ದೊಣ್ಣೆ ಪೆಟ್ಟು'' ನಾಣ್ಣುಡಿಯನ್ನು ವಿಸ್ತರಿಸಿ ಬರೆಯಿರಿ.

- ಬೀದಿ ನಾಟಕಗಳು
- ಪ್ರಾಯೋಗಿಕತೆಗಳು
- ಭೂತ–ದೆವ್ವಗಳು ಬರುವಿಕೆ
- ಪಶು ಬಲಿ ಕೊಡುವದು
- ಕಥೆಗಳನ್ನು ಹೇಳುವುದು

ಮುಂತಾದ ಅಂಶಗಳನ್ನು ಬಳಸಿ ಭಾಷಣ ತಯಾರಿಸಿರಿ.

**ಮಾದರಿಯ ಭಾಷಣ :** ''ಅಂಧ ಶ್ರದ್ಧೆ ನಿರ್ಮೂಲನೆ''

- ಭಾಷಣದ ಪ್ರಾರಂಭ

ಈ ಶುಭದಿನದ ಶುಭಗಳಿಗೆಯಲ್ಲಿ ನಡೆದಿರತಕ್ಕಂತಹ ಭಾಷಣ ಸ್ಪರ್ಧೆಯ ಸಮಾರಂಭದ ಅಧ್ಯಕ್ಷರೇ, ಅತಿಥಿಗಳೇ, ಗುರು ವೃಂದವೇ, ಹಾಗೂ ನನ್ನ ಸಹೋದರ ಸಹೋದರಿಯರೇ. ನಾನು ಈಗ ಅಂಧಶ್ರದ್ಧೆ ನಿರ್ಮೂಲನೆ''

ಕುರಿತು ಒಂದೆರೆಡು ಮಾತುಗಳನ್ನಾಡಬಯಸುತ್ತೇನೆ.

ಅಂಧಶ್ರದ್ಧೆ ಎನ್ನುವುದು ಸಮಾಜದಲ್ಲಿ ಮೊದಲಿನಿಂದಲೂ ನಡೆದು ಬಂದ ಒಂದು ಸಂಗತಿಯಾಗಿದೆ. ಇಂದಿಗೂ ಸಹ ಸಮಾಜದಲ್ಲಿಯ ಜನ ಅವುಗಳನ್ನು ಕಣ್ಣಿದ್ದು ಕುರುಡರಂತೆ, ಬುದ್ಧಿ ಇದ್ದು ದಡ್ಡರಂತೆ ನಂಬಿಕೆ ಇಟ್ಟು ಆಚರಿಸುತ್ತಿದ್ದಾರೆ.

ಅವುಗಳನ್ನು ಹೊಡೆದೋಡಿಸುವ ಸಲುವಾಗಿ ಹಲವಾರು ಅಂಧಶ್ರದ್ಧೆ ನಿರ್ಮೂಲನೆಯ ಸಂಘಗಳು, ಬಸವ ಪ್ರಮಥರು ಶ್ರಮವಹಿಸುತ್ತಿದ್ದಾರೆ. ಗ್ರಾಮ ಗ್ರಾಮಗಳಿಗೆ ತಿರುಗಾಡಿ ಬೀದಿ ನಾಟಕಗಳನ್ನು ಮಾಡಿ ತೋರಿಸುತ್ತಿದ್ದಾರೆ. ಮೈಯಲ್ಲಿ ದೆವ್ವಗಳು ಬರುವ ಪದ್ಧತಿ ಅವುಗಳು ಬಿಟ್ಟು ಹೋಗುವ ರೀತಿ ಮುಂತಾದವುಗಳ ಮನವರಿಕೆ ಮಾಡುತ್ತಾರೆ.

ಪ್ರಾಯೋಗಿಕವಾಗಿ ಹೇಳುವುದಾದರೆ ನಾನು ನಿನ್ನೆ ಶಾಲೆಗೆ ಬರುವಾಗ ಒಬ್ಬ ತಾಯಿ ತನ್ನ ಮಗನನ್ನು ಬಾಬಾನ ಕಡೆಗೆ ಕರೆದೊಯ್ಯುತ್ತಿದ್ದಳು. ಇವತ್ತು ಅದೇ ವೇಳೆಗೆ ಆ ತಾಯಿ ಮಗು ಸಮೇತ ಬೆಟ್ಟಿಯಾದಳು. ನಾನು ಅವಳನ್ನು ಕೇಳಿದಾಗ ನಡೆದದ್ದು ಇಷ್ಟು. ನಾನು ನನ್ನ ಮಗನಿಗೆ ನಿತ್ಯ ಜಳಕ ಮಾಡಿಸಿ ದೇವರಿಗೆ ನಮಸ್ಕರಿಸಲು ಹೇಳಿ ಗಂಗಾಳದಲ್ಲಿ ಹಾಲು ಕುಡಿಯಲು ಕೊಡುತ್ತಿದ್ದೆ. ಎಂಟು ದಿನಗಳ ಹಿಂದೆ ಕುಡಿಯುವ ಹಾಲಿನಲ್ಲಿ ರಕ್ತ ಕಂಡು ಬಂದಿತ್ತು. ಐದು ದಿನ ಬಾಬಾ ತಮ್ಮ ಹತ್ತಿರ ಬರಲು ಹೇಳಿದ್ದಾರೆ. ಮಂತ್ರದ ತಾಯಿತ ಕೊಡುತ್ತೇನೆ ಎಂದಿದ್ದಾರೆ ಎಂದಳು. ನಾನು ನನ್ನ ಮಾತು ಕೇಳು ತಾಯಿ ಮಗುವಿನ ಜಳಕವಾದ ಬಳಿಕ ಜಗುಲಿಗೆ ಕರೆದೊಯ್ದು ನಮಸ್ಕರಿಸಲು ಮಾತ್ರ ಹೇಳು. ಹಣೆಯ ಮೇಲೆ ಯಾವ ಕುಂಕುಮ, ಭಂಡಾರ ಪ್ರಸಾದ ಹಚ್ಚದೇ ಹಾಲು ಕುಡಿಯಲು ಕೊಡು ಎಲ್ಲಾ ಸರಿ ಹೋಗುತ್ತೆ, ಎಂದೆ. ತಾಯಿ ನನ್ನ ಮಾತು ಕೇಳಿ ತಿರುಗಿ ಹೋದಳು (ಅಂದರೆ ಹಾಲಿನಲ್ಲಿ ಬಂದದ್ದು ರಕ್ತವಲ್ಲ ಹಣೆಯ ಮೇಲಿನ ಕುಂಕುಮ).

ಜಾತ್ರೆ ಉತ್ಸವಗಳಲ್ಲಿ, ಜೋರಾಗಿ ನಡೆಯುವ ಕರ್ಕಶ ವಾದ್ಯಗಳಿಂದ ಕೆಲವರು ಮತ್ತೆ ವಾದ್ಯಗಳ ಧ್ವನಿಯನ್ನು ಹೆಚ್ಚಿಸಲು ಹೇಳುವರು, ಅವಳು ವಾದ್ಯಗಳನ್ನು ನಿಲ್ಲಿಸಿ ಎಂದು ಚೀರುವಳು.

ಅವರು ಬಡಿಯುವ ಡೊಳ್ಳಿನ ಗುಣಿ ಬಡಿತಕ್ಕೆ ಯಾವುದೇ ಹೆಸರು ಹೇಳುವಳು, ಎಲ್ಲಿಂದಲೋ ಬಂದೆ ಎಂದು ಹೇಳುವಳು, ಏನೇನೋ ಬೇಡುವಳು. (ಅಂದರೆ-ನಾನು ಮೊನ್ನೆಸತ್ತ ರಾಮಪ್ಪ, ಹಳ್ಳದ ದಂಡೆಯಿಂದ ಬಂದೆ. ನನಗೆ ಬಾಳೆಹಣ್ಣು ಚಪಾತಿ, ತಂಬಾಕು ಬೀಡಿ ಬೇಕೆಂದು, ಹೇಳುವದು.) ಅವಳನ್ನು ಮನೆಗೆ ಕರೆದೊಯ್ಯುವರು.

ಜನರ ನಂಬಿಕೆಗಳಲ್ಲಿ ಮೂರು ಬಗೆಗಳು. ನಂಬಿಕೆ, ಮೂಢನಂಬಿಕೆ, ಹೇರಿದ ನಂಬಿಕೆ, ಸತ್ಯದ ದೇವರುಗಳಿಗೆ ಅಲ್ಲಿಗೆ ಹೋಗಬೇಕೆನ್ನವುದು ನಂಬಿಕೆ, ದೇವರ ಮುಂದೆ ನಿಂತು ಅದು ಇದು ಬೇಡಿಕೊಳ್ಳುವದು, ಹರಕೆ ಹೊರುವದು ಮೂಢನಂಭಿಕೆ. ಅಲ್ಲಿರುವ ಪೂಜಾರಿ, ಸ್ವಾಮಿಗಳು, ಹರಕೆ ಹೀಗೆ ಇರಬೇಕು ಅದನ್ನು ತೀರಿಸಲೇಬೇಕೆಂದು ಹೇಳುವದು. ಹೇರಿದ (ಕಡ್ಡಾಯದ) ನಂಬಿಕೆ. ಪೂಜಾರಿಗಳ ಹೇಳಿಕೆಯಂತೆ 3-ತಿಂಗಳಿನ ಕೋಣ, 6 ತಿಂಗಳಿನ ಕುರಿಮರಿ 5 ಕೋಳಿ, 2 ಹುಂಜ ಮುಂತಾದವುಗಳನ್ನು ಬಲಿ ಕೊಡಲು ಹೇಳುವರು. ಇದರಿಂದ ಹಲವು ನಿಷ್ಪಾಪ ಪಶುಗಳು ದೇವರ ಹೆಸರಲ್ಲಿ ಬಲಿಯಾಗುತ್ತವೆ.

ಉದಾ - ನಾವು ಹನ್ನೊಂದನೆ ತರಗತಿ ಪಾಸಾಗಲು ಒಂದು ಕುರಿಮರಿ ಬಲಿ ಕೊಟ್ಟು ಅಭ್ಯಾಸ ಮಾಡದೆ ಪರೀಕ್ಷೆಗೆ ಹೋದರೆ ಪಶು ಬಲಿ ತೆಗೆದುಕೊಂಡ ದೇವರು ಪೇಪರ ಬರೆಯುವುದಿಲ್ಲ.

ಅಂಧಶ್ರದ್ಧೆ ನಿರ್ಮೂಲನೆ ಕುರಿತು ಕೆಲವು ಸತ್ಯದ ಕಥೆಗಳನ್ನು ಸಾಮಾಜಿಕ ಗುಂಪಿನ ಜನರಿಗೆ ಹೇಳುವುದು. ಇವೆಲ್ಲ ಕಡಿಮೆ ಆಗಲೆಂದು ತಮ್ಮೆಲ್ಲರನ್ನು ವಿನಂತಿಸಿಕೊಳ್ಳುತ್ತ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ. ಜೈ ಭಾರತಾಂಬೆ.

**ಉದಾ : ಈ ಭಾಷಣ ನೀವೇ ತಯಾರಿಸಿರಿ :**

''ಸಮಾಜದಲ್ಲಿ ಹಬ್ಬ-ಹರಿದಿನಗಳ ಆವಶ್ಯಕತೆ'' ಎಂಬುದನ್ನು ಕುರಿತು ಕೆಳಗಿನ ಅಂಶಗಳ ಆಧಾರದಿಂದ ಭಾಷಣ ತಯಾರಿಸಿರಿ.

- ★ **ದೇಶದಲ್ಲಿಯ ದೊಡ್ಡ ಹಬ್ಬಗಳು**
- ★ **ಅವುಗಳ ಆಚರಣೆಯ ಅವಶ್ಯಕತೆ**

★ ಅವುಗಳಿಂದ ಸಮಾಜದಲ್ಲಿ ಬೆಳೆಯುವ ಸಂಸ್ಕೃತಿ.

★ ಸರ್ವಧರ್ಮ ಸಮಭಾವ.

## iv. ವರದಿ ಲೇಖನ

ಊರಲ್ಲಿಯೇ ಆಗಲಿ ಅಥವಾ ಶಾಲೆಯಲ್ಲಿ ಆಗಲಿ ನಡೆದಂತಹ ಯಾವುದೇ ಕಾರ್ಯಕ್ರಮ ಜರುಗಿದ ನಂತರ ಅಥವಾ ಜರುಗುವಕ್ಕಿಂತ ಮುಂಚೆ ಎಲ್ಲರಿಗೂ ಗೊತ್ತಾಗುವಂತೆ ದಿನಪತ್ರಿಕೆಯಲ್ಲಿ ಪ್ರಸಾರ ಪಡಿಸುವದೇ ವರದಿ ಲೇಖನ ವಾಗಿದೆ. ಇದನ್ನು ತಯಾರಿಸುವಾಗ ಕೆಲವು ಅಂಶಗಳನ್ನು ಗಮನಕ್ಕೆ ತಂದುಕೊಳ್ಳಬೇಕು.

★ ನಿಮಗೆ ಕೊಟ್ಟ ವಿಷಯ/ಅಂಶಕ್ಕೆ ತಕ್ಕಂತೆ ಆಕರ್ಷಕ ತಲೆಬರಹವಿರಬೇಕು.

★ ವರ್ಣನಾತೀತವಾದ ಪದಗಳ ಬಳಕೆಯಾಗಬೇಕು.

★ ಓದುಗರ ಮನ ಸೆಳಯುವ ವಿಚಾರಕ್ಕೆ ಗುರಿಪಡಿಸುವಂತಹ ವಾಕ್ಯಗಳ ಬಳಕೆ ಮಾಡಬೇಕು.

★ ನಡೆದ/ನಡೆಯಲಿರುವ ಕಾರ್ಯಕ್ರಮದ ದಿನಾಂಕ, ವೇಳೆ ಸ್ಥಳ ಸ್ಪಷ್ಟವಾಗಿರಬೇಕು.

## ವರದಿ ಲೇಖನದ ಮಾದರಿ

ನಿಮ್ಮ ಶಾಲೆಯಲ್ಲಿ ಜರುಗಿದ ಕನ್ನಡ/ಮರಾಠಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕುರಿತು ವರ್ತಮಾನ ಪತ್ರಿಕೆಯಲ್ಲಿ ಕೆಳಗಿನ ಅಂಶಗಳ ಸಹಾಯದಿಂದ ಒಂದು ವರದಿ ಬರೆಯಿರಿ.

★ ಕಾರ್ಯಕ್ರಮ ನಡೆದ ವಾರ, ದಿನಾಂಕ, ವೇಳೆ

★ ಉದ್ಘಾಟಕರು ಯಾರು? ಅವರ ಪರಿಚಯ

★ ಯಾವ ಯಾವ ಕಾರ್ಯಕ್ರಮಗಳು ನಡೆದವು

★ ವಿದ್ಯಾರ್ಥಿಗಳು ಮಾಡಿದ ತಯಾರಿ

★ ಕಾರ್ಯಕ್ರಮದ ವಂದನಾರ್ಪಣೆ

ಗೋಕಾಕ 18 ಡಿಸೆಂಬರ-2018 **ಗಡಿನಾಡಿನಲ್ಲಿ ಭಾಷಾಬಾಂಧವ್ಯ ಬೆಳಸಿದ ಸಾಂಸ್ಕೃತಿಕ ಕಾರ್ಯಕ್ರಮ**

**ಕೇಸರಿ ವಾರ್ತೆ:** ಗಡಿನಾಡಿನಲ್ಲಿರುವ ಕನ್ನಡ - ಮರಾಠಿ ಮಾಧ್ಯಮದ ಬಹುದೊಡ್ಡ ಶಾಲೆ ಪೀಪಲ್ಸ್ ಎಜ್ಯುಕೇಶನ ಸೊಸಾಯಟಿ ಕೆ.ಎಮ್ ಹೈಸ್ಕೂಲ ಮತ್ತು ಜ್ಯೂನಿಯರ ಕಾಲೇಜು ಗೋಕಾಕದ ಶಾಲಾ ಆವರಣದಲ್ಲಿ ಕನ್ನಡ - ಮರಾಠಿ ಬಾಷಾ ಬಾಂಧವ್ಯ ಬೆಳೆಸುವ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಸಮಾರಂಭ ವಿಜೃಂಭಣೆಯಿಂದ ಜರುಗಿತು. ಗುರುವಾರ ದಿನಾಂಕ 18/12/2018 ರಂದು ಶಾಲಾ ಆವರಣದಲ್ಲಿ ನಾಲ್ಕು ಭಾಷೆಗಳನ್ನು ಬಲ್ಲಂತಹ ತಾಲ್ಲೂಕಿನ ವಿಧಾನ ಸಭೆಯ ಸದಸ್ಯರು ಕೆಂಪು ಹಳದಿ ಬಣ್ಣದ ರಿಬ್ಬನ್ ಕತ್ತರಿಸಿ ಕಾರ್ಯಕ್ರಮ ಉದ್ಘಾಟಿಸಿದರು. ಮಹಾರಾಷ್ಟ್ರದ ಮರಾಠಿಯ ಈ ಕಾರ್ಯಕ್ರಮದಲ್ಲಿ ಕನ್ನಡ ಮರಾಠಿ ಮಿಶ್ರಿತ ಹಾಸ್ಯನಾಟಕ "ಮರಾಠಿ ಗಂಡ ಕನ್ನಡದ ಹೆಂಡತಿ" ದ್ವಿಭಾಷಿಕರಿಂದ ಕರತಾಡನ ಪಡೆಯಿತು. ಮರಾಠಿಯ ಲಾವಣಿ, ಕನ್ನಡದ ಭರತನಾಟ್ಯ ವೇಷಭೂಷಣ, ಶಿವರಾಯ, ಬಸವಣ್ಣ, ಮುಂತಾದವರ ಮೇಲಿನ ಹಾಡುಗಳನ್ನು ಕನ್ನಡ ಮರಾಠಿ ಭಾಷೆಯ ಸಹೋದರ - ಸಹೋದರಿಯರು ನೆರೆವೇರಿಸಿದರು. ಶಾಲಾಸಂಸ್ಥೆಯ ಅದ್ಯಕ್ಷರಾದ ಖ್ಯಾತ ಧನ್ವಂತರಿ ಡಾ|| ಮೋದಿಯವರು ತಮ್ಮ ವಾಕ್‌ಚಾತುರ್ಯದಿಂದ ಮಕ್ಕಳನ್ನು ಹೊಗಳಿ ವಂದನಾರ್ಪಣೆ ಮಾಡಿದರು.

**ಈ ವರದಿ ತಯಾರಿಸಿರಿ**

ಪರಿಸರ ಮಾಲಿನ್ಯ ಕಾಪಾಡುವಲ್ಲಿ ಕೈಗಾರಿಕೆಗಳು ಕೈಕೊಂಡಿರುವ ಕ್ರಮಗಳನ್ನು ಶಾಲಾ ಕೈಬರಹ ಪತ್ರಿಕೆಗಾಗಿ ಈ ಅಂಶಗಳಿಂದ ಒಂದು ವರದಿ ತಯಾರಿಸಿರಿ.

- **ಬೆಟ್ಟಿಕೊಟ್ಟ ಕೈಗಾರಿಕೆ**
- **ನಿಮ್ಮ ಶಾಲೆ / ಊರಿಂದ ದೂರ**
- **ಬೇಕಾಗುವ ಕಚ್ಚಾ ವಸ್ತು / ಮತ್ತು ಕೆಲಸಗಾರರ ಸಂಖ್ಯೆ**
- **ಪರಿಸರ ಮಾಲಿನ್ಯ ಕಾಪಾಡುವುದಕ್ಕೆ ಕೈಕೊಂಡಿರುವ ಕ್ರಮಗಳು**
- **ನಿಮ್ಮ ಅಭಿಪ್ರಾಯ**

## v. ಸ್ವ-ಪರಿಚಯ ಪತ್ರ - Biodata

ಬ್ಯಾಂಕ, ಪೋಸ್ಟ ಆಫೀಸ, ಶಾಲಾ ಕಾಲೇಜುಗಳಲ್ಲಿ ಇತರ ಯಾವದೇ ಇಲಾಖೆಗಳಲ್ಲಿ, ವಿವಿಧ ಹುದ್ದೆಗಳಿಗೆ ಅರ್ಜಿ ಅವ್ಹಾನಿಸಿದಾಗ ಅವರಿಗೆ ನಮ್ಮ ಪೂರ್ಣ ಮಾಹಿತಿ ಕೊಡುವುದೇ ಸ್ವಪರಿಚಯ ಪತ್ರವಾಗಿರುವದು.

## ಮಾದರಿಗಾಗಿ ಸ್ವಪರಿಚಯ ಪತ್ರ

ನಿಮ್ಮೂರಿನ ಸಾರ್ವಜನಿಕ ಗ್ರಂಥಾಲಯದ ಮೇಲ್ವಿಚಾರಕ/ಗ್ರಂಥಪಾಲ ಹುದ್ದೆಗಾಗಿ ಅರ್ಜಿ ಕರೆದಿರುವರು ನೀವು ಮುಂದಿನ ಅಂಶಗಳ ಸಹಾಯದಿಂದ ನಿಮ್ಮ ಸ್ವ-ಪರಿಚಯ ಪತ್ರ ಸಲ್ಲಿಸಿರಿ.

- ಪೂರ್ಣ ಹೆಸರು (ಅಂಕ ಪಟ್ಟಿಯಲ್ಲಿದ್ದಂತೆ)
- ಜನ್ಮದಿನಾಂಕ
- ಹತ್ತನೆಯ ತರಗತಿ ಪಾಸಾದ ವರ್ಷ. ಪ್ರತಿಶತ ಗುಣಗಳು (ಅದನ್ನು ಲಗತ್ತಿಸಿ)
- ಗ್ರಂಥಾಲಯದಲ್ಲಿ ಪುಸ್ತಕಗಳನ್ನು ವಿಭಾಗಿಸಿಡುವದನ್ನು ನೋಡಿದ್ದೀರಾ
- ಕಂಪ್ಯೂಟರ ತರಬೇತಿ ಆಗಿದೆಯೆ? ಆಗಿದ್ದರೆ ಅದನ್ನು ಲಗತ್ತಿಸಿರಿ.
- ಯಾವ ಯಾವ ಆಟ ಆಡುವದರಲ್ಲಿ ಆಸಕ್ತಿ ಇದೆ
- ಯಾವದಾದರೂ ಶಿಷ್ಯವೇತನ ಪಾಸಾಗಿದ್ದೀರಾ/ಅಥವಾ ಶಿಷ್ಯವೇತನ ಪಡೆದಿದ್ದೀರಾ
- ಎಷ್ಟು ಭಾಷೆಗಳನ್ನು ಓದಲು, ಬರೆಯಲು, ಮಾತನಾಡಲು ಬಲ್ಲಿರಿ

## 2. ನಿಬಂಧ ಲೇಖನ

ನಿಬಂಧ ಲೇಖನವು ಯಾವುದೇ ವಿಷಯದ ಮೂಲ, ಬೆಳವಣಿಗೆ, ವಿಸ್ತಾರ, ಓದಿದ ಪುಸ್ತಕ, ಕೇಳಿದ ಆತ್ಮಕಥನ ಮುಂತಾದ ವಿಷಯಗಳ ಕುರಿತಾಗಿ ಇರುತ್ತದೆ. ಇದರಲ್ಲಿಯ ಮುಖ್ಯ ಅಂಶಗಳು :

- ತಲೆಬರಹ
- ಪ್ರಸ್ತಾವನೆ
- ವಿಷಯ ವಸ್ತುವಿನ ಕಲ್ಪನೆ
- ವಿಷಯ ವಿವರಣೆ
- ಉಪಸಂಹಾರ

## ನಿಬಂಧ ಲೇಖನ ಮಾದರಿ

### ★ ಗ್ರಂಥಾಲಯಗಳ ಮಹತ್ವ ★

ಗ್ರಂಥಾಲಯಗಳಲ್ಲಿ ಮುಖ್ಯವಾಗಿ ಸಾರ್ವಜನಿಕ ಮತ್ತು ಶಾಲೆಯ ಗ್ರಂಥಾಲಯಗಳೆಂದು ಎರಡು ಬಗೆಗಳು. ಶಾಲಾ ಗ್ರಂಥಾಲಯಗಳಲ್ಲಿ ಪಠ್ಯ ಹಾಗೂ ಪಠ್ಯೇತರ ಪುಸ್ತಕಗಳು ಇರುತ್ತವೆ. ಇವು ಮಕ್ಕಳಿಗೆ ಜ್ಞಾನ, ಮನರಂಜನೆ ಎರಡನ್ನೂ ನೀಡುತ್ತವೆ. ಸಾರ್ವಜನಿಕ ಗ್ರಂಥಾಲಯಗಳಲ್ಲಿ ವಯಸ್ಸಿಗನುಗುಣವಾದ ಪುಸ್ತಕ / ಗ್ರಂಥಗಳು ಇರುತ್ತವೆ.

ಗ್ರಂಥಾಲಯಗಳಲ್ಲಿ ಲಭ್ಯವಾಗುವ ಪುಸ್ತಕಗಳಲ್ಲಿ ಕಥೆ, ಕಾದಂಬರಿ, ನಾಟಕ, ಹಾಸ್ಯ, ಕಾವ್ಯ, ಜಾನಪದ ಕಥೆ, ಹಾಡು ಮುಂತಾದವುಗಳು ಇರುತ್ತವೆ. ಅಲ್ಲದೆ ನಾಣ್ಣುಡಿ, ಗಾದೆ ಮಾತು ಸುವಿಚಾರ ಮುಂತಾದವುಗಳ ಪುಸ್ತಕಗಳು ಲಭ್ಯವಿರುತ್ತವೆ.

ಗ್ರಂಥಾಲಯಗಳಲ್ಲಿ ದೊರೆಯುವ ಪ್ರತಿಯೊಂದು ಪುಸ್ತಕವು ಮಾನವ ಜೀವನಕ್ಕೆ ಬಹುಮೂಲ್ಯವಾದ ಕಾಣಿಕೆಯಾಗಿದೆ. ಅವುಗಳು ಮಾನವನ ಸಂಸ್ಕೃತಿ, ಸಂಸ್ಕಾರಗಳನ್ನು ಪರಿಚಯಿಸುತ್ತವೆ. ಆಚಾರ – ವಿಚಾರಗಳನ್ನು ಒಡಮೂಡಿಸುತ್ತವೆ. ಮನವನ್ನು ರಂಜಿಸುತ್ತವೆ, ಜೀವನ ಮಾರ್ಗವನ್ನು ಕಲಿಸುತ್ತವೆ. ಮಾತನಾಡುವ ಕಲೆಯನ್ನು ಕಲಿಸುತ್ತವೆ. ಮಹಾಕಾವ್ಯಗಳು ಹಿಂದಿನ ಜನರ ಜೀವನವನ್ನು ತಿಳಿಸುತ್ತವೆ. ಅವರ ಪ್ರಾಮಾಣಿಕತೆ, ಸತ್ಯ, ನ್ಯಾಯ, ನೀತಿ, ಧರ್ಮ ಮುಂತಾದವುಗಳನ್ನು ಕಾವ್ಯಗಳಿಂದ ತಿಳಿದುಕೊಳ್ಳಬಹುದು. ಉದಾ : ಹರಿಶ್ಚಂದ್ರ ಕಾವ್ಯ, ಭಗವದ್ಗೀತೆ, ಕುರಾನ್, ಬೈಬಲ ಮುಂತಾದವು.

ಖ್ಯಾತ ಕವಿಗಳು ಗಾದೆಮಾತುಗಳನ್ನು ವಿವರಿಸುವಾಗ ''ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂದು ಹೇಳುತ್ತಾರೆ. ಉದಾ : ಕೈ ಕೆಸರಾದರೆ ಬಾಯಿ ಮೊಸರು, ದುಡಿತವೇ ದುಡ್ಡಿನ ತಾಯಿ, ಜಾಣನಿಗೆ ಮಾತಿನ ಪೆಟ್ಟು, ಕೋಣನಿಗೆ ಲತ್ತೆ ಪೆಟ್ಟು; ಎದ್ದು ಓದುವವನು ಬುದ್ಧಿಗಾಗಿ; ಬಿದ್ದು ಓದುವವನು ನಿದ್ದೆಗಾಗಿ; ಮುಂತಾದ ಗಾದೆ ಮಾತುಗಳಿವೆ.

ಒಟ್ಟಿನಲ್ಲಿ ಹೇಳಬೇಕಾದರೆ ಗ್ರಂಥಾಲಯಗಳಲ್ಲಿ, ದೊರೆಯುವ ವಿವಿಧ ಪ್ರಕಾರದ ಪುಸ್ತಕಗಳು ವಿವಿಧ ಬಗೆಯಲ್ಲಿ ಮಾನವನ ಜೀವನಕ್ಕೆ ಜ್ಞಾನ, ತಿಳುವಳಿಕೆ, ನೀತಿ, ಜೀವನ ಕೌಶಲ್ಯಗಳನ್ನು ಕಲಿಸುವಂತಾಗಿವೆ. ಆದ್ದರಿಂದ ಇವುಗಳು ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರದ ಜನತೆಯ ''ಆತ್ಮ'' ಗಳಾಗಿವೆ ಎಂದು ಹೇಳಬಹುದು. ಇವು ಪ್ರತಿ ಗ್ರಾಮಗಳಲ್ಲಿ ಪ್ರತಿ ಶಾಲೆಗಳಲ್ಲಿ ಇರಲೇಬೇಕೆನ್ನುವುದು ನನ್ನ ಅನಿಸಿಕೆ.

# 3. ಪ್ರಶ್ನೆ ನಿರ್ಮಿತಿಯ ಕೌಶಲ್ಯ

ಈ ಕೌಶಲ್ಯವು ಮಕ್ಕಳಲ್ಲಿ ಆತುರ ಮತ್ತು ಉತ್ಸುಕತೆಯನ್ನು ಹುಟ್ಟಿಸುವ ಕೌಶಲ್ಯವಾಗಿದೆ. ಇದರಲ್ಲಿ ಕಥೆ, ಸಾರಾಂಶ, ಪರಿಹಾರ, ನೀತಿ ಮುಂತಾದ ವಿಷಯಗಳನ್ನು ಕುರಿತಾಗಿ ಗದ್ಯಖಂಡವನ್ನು ಕೊಟ್ಟಾಗ ಅದನ್ನು ಓದಿ ಒಂದು ಅಂಕದ ಪ್ರಶ್ನೆಗಳನ್ನು ತಯಾರಿಸುವುದಾಗಿವೆ.

### ಪ್ರಶ್ನಾವಳಿಯ ಮಾದರಿ

ಒಂದು ದಿನ ರಾಮ ರಹಿಮರು ಮಲ್ಲಪ್ಪ ಎಂಬ ರೈತನ ತೋಟಕ್ಕೆ ಹೋದರು. ಅಲ್ಲಿಯ ಬೆಳೆಗಳ ಮಾಹಿತಿ ಪಡೆದುಕೊಡರು. ಮಲ್ಲಪ್ಪನ ತೋಟದಲ್ಲಿ, ಧಾನ್ಯಗಳ ಬೆಳೆ ಇರಲಿಲ್ಲ. ಹಣ್ಣಿನ ಗಿಡಗಳೇ ಹೆಚ್ಚಾಗಿದ್ದವು. ತೋಟದಲ್ಲಿ ಎರಡು ಎಕರೆ ದ್ರಾಕ್ಷೆ, ನಾಲ್ಕು ಎಕರೆ ದಾಳಿಂಬೆ ಒಂದು ಎಕರೆ ಬಾರಿಕಾಯಿ, ಎರಡು ಎಕರೆ ಬಾಳೆ ಒಂದು ಎಕರೆಯಲ್ಲಿ ಚಿಕ್ಕ ಮಾವಿನಮರಗಳು ಇತ್ಯಾದಿಗಳು ಇದ್ದವು. ಉಳಿದ ಭೂಮಿಯಲ್ಲಿ ಆತ ಸರಕಾರದ ಅನುಮತಿಯ ಪ್ರಕಾರ ನೀಲಗಿರಿ, ಸಾಗವಾನಿ, ಶ್ರೀಗಂಧ ಮುಂತಾದ ಬೆಲೆ ಬಾಳುವ ಕಟ್ಟಿಗೆಯ ಗಿಡಗಳನ್ನು ನೆಟ್ಟಿದ್ದನು. ಈ ಎಲ್ಲಾ ಬೆಳೆಗಳಿಗೆ ಆತ ಆಧುನಿಕ ಪದ್ಧತಿಯ ನೀರಾವರಿಯಾದ ''ಹನಿ ನೀರಾವರಿ'' ಯನ್ನು ಅಳವಡಿಸಿದ್ದಾನೆ. ಬೆಲೆ ಬಾಳುವ ಕಟ್ಟಿಗೆಯ ಗಿಡವಾದ ಶ್ರೀಗಂಧದ 50 ಗಿಡಗಳನ್ನು ತಲಾ 2000 ರೂಪಾಯಿಗೆ ಒಂದರಂತೆ ಸರಕಾರಕ್ಕೆ ಒಪ್ಪಿಸಿದ್ದಾನೆ.

ಪ್ರಶ್ನೆಗಳು :

1) ಮಲ್ಲಪ್ಪನ ತೋಟಕ್ಕೆ ಹೋದವರು ಯಾರು ಯಾರು?
2) ಮಲ್ಲಪ್ಪನ ತೋಟದಲ್ಲಿ ಯಾವ ಬೆಳೆ ಹೆಚ್ಚಾಗಿದ್ದವು?
3) ಹೊಲದಲ್ಲಿ ದಾಳಿಂಬೆ ಮತ್ತು ಬಾಳೆಗಿಡ ಎಷ್ಟೆಷ್ಟು ಎಕರೆ ಇದ್ದವು?
4) ಸರಕಾರದ ಅನುಮತಿಯ ಪ್ರಕಾರ ಯಾವ ಗಿಡಗಳನ್ನು ನೆಟ್ಟಿದ್ದನು?
5) ಶ್ರೀಗಂಧದ ಗಿಡಗಳಿಂದ ಮಲ್ಲಪ್ಪ ಎಷ್ಟು ಹಣ ಗಳಿಸಿದನು?
6) ರಾಮು, ರಹಿಮರು ಮಲ್ಲಪ್ಪನ ತೋಟಕ್ಕೆ ಏಕೆ ಹೋಗಿದ್ದರು?

# 4. ಕಾರ್ಯಕ್ರಮ ನಿರೂಪಣೆ

ಯಾವುದೇ ಒಂದು ನಿಯೋಜಿತ ಕಾರ್ಯಕ್ರಮವನ್ನು ಆರಂಭಿಸುವ ಪೂರ್ವದಲ್ಲಿ ಆ ಕಾರ್ಯಕ್ರಮದ ಉದ್ದೇಶ, ಧ್ಯೇಯ, ಧೋರಣೆಗಳನ್ನು ನಾಲ್ಕು ಮಾತುಗಳಲ್ಲಿ ಹೇಳಿ ಕಾರ್ಯಕ್ರಮ ಆರಂಭಿಸುವುದಕ್ಕೆ ನಿರೂಪಣೆ ಎನ್ನುತ್ತಾರೆ.

## i. ಪ್ರಾರ್ಥನೆ/ದೀಪ ಪ್ರಜ್ವಲನೆ

ಕಾರ್ಯಕ್ರಮದ ಮುಂಚೆ ಮಕ್ಕಳಿಂದ ಪ್ರಾರ್ಥನೆ ಗೀತೆಯನ್ನು ಹಾಡಿಸಲಾಗುತ್ತದೆ. ಅದರ ನಂತರ ದೀಪ ಬೆಳಗಿಸುವ ಕಾರ್ಯಕ್ರಮವನ್ನು ಅತಿಥಿಗಳಿಂದ ಮಾಡಿಸಲಾಗುತ್ತದೆ.

## ii. ಸ್ವಾಗತ/ಸ್ವಾಗತಗೀತೆ

ಆ ನಂತರ ಅತಿಥಿಗಳ ಸ್ವಾಗತವನ್ನು ಹಾಗೂ ಸ್ವಾಗತಗೀತೆಯನ್ನು ಹಾಡಿ ಎಲ್ಲರಿಗೂ ಸ್ವಾಗತ ಮಾಡಬೇಕು.

## iii. ಪ್ರಸ್ತಾವನೆ

ಪ್ರಸ್ತಾವನೆಯಲ್ಲಿ ಕಾರ್ಯಕ್ರಮ ಸಂಯೋಜಕರು ಆ ಕಾರ್ಯಕ್ರಮದ ಬಗ್ಗೆ ಅಗತ್ಯದ ಮಾಹಿತಿಯನ್ನು ನೀಡುವರು.

## iv. ಅತಿಥಿ/ಗಣ್ಯರು/ಅಧ್ಯಕ್ಷರು ಇವರ ಪರಿಚಯ

ಕಾರ್ಯಕ್ರಮದಲ್ಲಿ ಉಪಸ್ಥಿತರಿರುವ ಮುಖ್ಯ ವ್ಯಕ್ತಿಗಳ ಪರಿಚಯವನ್ನು ಶ್ರೋತೃಗಳಿಗೆ ನೀಡುವುದು.

## v. ಅತಿಥಿ, ಗಣ್ಯರು/ಅಧ್ಯಕ್ಷರು ಇವರ ಸತ್ಕಾರ

ಆ ನಂತರ ಅತಿಥಿಗಳ, ಗಣ್ಯರ, ಅಧ್ಯಕ್ಷರ ಸತ್ಕಾರವನ್ನು ಶಾಲು - ಶ್ರೀಫಲ - ಪುಷ್ಪಗುಚ್ಛ - ಗ್ರಂಥ - ಸಸಿ - ಸ್ಮರಣಿಕೆ ನೀಡಿ ಮಾಡಬಹುದು.

## vi. ಬಹುಮಾನ ವಿತರಣೆ/ಪುಸ್ತಕ ಬಿಡುಗಡೆ ಇತ್ಯಾದಿ

ಕಾರ್ಯಕ್ರಮ ಯಾವುದೇ ಆಗಿರಬಹದು. ಆ ಕಾರ್ಯಕ್ರಮ ಇಲ್ಲಿ ನಡೆಸಲಾಗುತ್ತದೆ. ಉದಾ : ಬಹುಮಾನ ವಿತರಣೆ, ಪುಸ್ತಕ ಬಿಡುಗಡೆ, ಸಂಗೀತ ಸಭೆ, ಸಾಹಿತ್ಯ ಗೋಷ್ಠಿ ಇತ್ಯಾದಿ.

## vii. ಅತಿಥಿಗಳ ಭಾಷಣ

ಆ ನಂತರ ಅತಿಥಿಗಳು ಭಾಷಣ ಮಾಡುವರು.

## viii. ಅಧ್ಯಕ್ಷರ ಭಾಷಣ

ಅತಿಥಿಗಳ ನಂತರ ಅಧ್ಯಕ್ಷರು ಭಾಷಣ ಮಾಡುವರು.

## ix. ವಂದನಾರ್ಪಣೆ

ಅಧ್ಯಕ್ಷರ ಭಾಷಣದ ನಂತರ ಬೇರೆಯವರು ಮಾತನಾಡಬಾರದು. ವಂದನಾರ್ಪಣೆ ಸಲ್ಲಿಸಬೇಕು. ಇದರಲ್ಲಿ ಅಲ್ಲಿ ನೆರೆದ ಎಲ್ಲರಿಗೂ ಆಭಾರ ಸಲ್ಲಿಸುವುದು, ಕೃತಜ್ಞತೆ ಸಲ್ಲಿಸುವುದು ಕಾರ್ಯಕ್ರಮದ ಕೊನೆಯ ಕೆಲಸ.

## x. ಸಾಂಸ್ಕೃತಿಕ ಕಾರ್ಯಕ್ರಮಗಳು

ಈ ಕಾರ್ಯಕ್ರಮದ ನಂತರ ಎರಡನೆಯ ಭಾಗದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು, ಅಂದರೆ ಸಂಗೀತ, ನೃತ್ಯ, ನಾಟಕ, ಚಿತ್ರಕಲೆ ಇತ್ಯಾದಿ ಯಾವುದೇ ಕಾರ್ಯಕ್ರಮಗಳಿದ್ದರೆ ಅವುಗಳನ್ನು ಸಾದರ ಪಡಿಸಬಹುದು.

## xi. ರಾಷ್ಟ್ರಗೀತೆ

ಕಾರ್ಯಕ್ರಮದ ಕೊನೆಯಲ್ಲಿ ರಾಷ್ಟ್ರಗೀತೆಯನ್ನು ಹಾಡಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಗುವುದು.

**ಸೂಚನೆ**

ಇದೆಲ್ಲ ಕಾರ್ಯಕ್ರಮದ ಪಟ್ಟಿಯನ್ನು ಕೈಯಲ್ಲಿ ಹಿಡಿದು ಕಾರ್ಯಕ್ರಮವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುವವರಿಗೆ ಸೂತ್ರಸಂಚಾಲಕ ಎಂದು ಕರೆಯುತ್ತಾರೆ. ಸೂತ್ರ ಸಂಚಾಲಕ ಸಮಾಧಾನದಿಂದ, ಜಾಣತನದಿಂದ, ಪ್ರತಿಭೆಯಿಂದ ಕಾರ್ಯಕ್ರಮವನ್ನು ಬೇಸರವಾಗದಂತೆ, ರಸಪೂರ್ಣವಾಗಿ ನಡೆಸಿಕೊಂಡು ಹೋಗುವನು. ಇದನ್ನು ವಿದ್ಯಾರ್ಥಿದಿಸೆಯಲ್ಲಿ ವಿದ್ಯಾರ್ಥಿಗಳು ಕಲಿಯಬೇಕು.

# 5. ಅನುವಾದ

ಅನುವಾದವು ಇಂದಿನ ಮಹತ್ವದ ಸಂಗತಿಯಾಗಿದೆ. ಅನುವಾದದಿಂದ ಪ್ರಪಂಚದ ಜ್ಞಾನವನ್ನು ಪ್ರತಿಯೊಬ್ಬರಿಗೂ ನೀಡಬಹುದಾಗಿದೆ. ಅನುವಾದ ಎಂದರೆ ಒಂದು ಭಾಷೆಯ ಜ್ಞಾನವನ್ನು, ವಿವರವನ್ನು, ಸಂಗತಿಗಳನ್ನು ಅರ್ಥಕೆಡದಂತೆ ಸಹಜ ಶೈಲಿಯಲ್ಲಿ ಇನ್ನೊಂದು ಭಾಷೆಗೆ ಭಾಷಾಂತರಿಸುವುದು. ಅನುವಾದ ಒಂದು ಕಲೆ. ಅನುವಾದಕನಿಗೆ ಎರಡೂ ಭಾಷೆಗಳ ಸರಿಯಾದ ತಿಳುವಳಿಕೆಯಿರಬೇಕು. ಅನುವಾದದಿಂದ ರಾಷ್ಟ್ರೀಯ ಐಕ್ಯತೆ ಬೆಳೆಯುತ್ತದೆ.

ಅನುವಾದದಲ್ಲಿ ರೂಪಾಂತರ, ಭಾವಾಂತರ ಹಾಗೂ ಭಾಷಾಂತರ ಎಂಬ ಮೂರು ಮುಖ್ಯ ಪ್ರಕಾರಗಳಿವೆ. ಸಾಹಿತ್ಯ ದಲ್ಲಿ ಕಥೆ, ಕಾದಂಬರಿ, ನಾಟಕ, ಕಾವ್ಯ, ಪ್ರಬಂಧ ಹೀಗೆ ಅನೇಕ ರೂಪಗಳಿವೆ. ಅನುವಾದ ಮಾಡುವಾಗ ಒಂದು ಭಾಷೆಯ ಕತೆಯನ್ನು ಇನ್ನೊಂದು ಭಾಷೆಯ ನಾಟಕವಾಗಿ ಅನುವಾದಿಸಿದರೆ ಅದನ್ನು ರೂಪಾಂತರ ಎನ್ನುತ್ತೇವೆ. ಭಾವಾಂತರದಲ್ಲಿ ಒಂದು ಕೃತಿಯ ಲೇಖಕನ ಭಾವನೆಗಳನ್ನು ಕೆಡಿಸದಂತೆ ಇನ್ನೊಂದು ಭಾಷೆಗೆ ಅನುವಾದಿಸುವುದು ಭಾವಾಂತರ ಅನು ವಾದವಾಗುತ್ತದೆ. ಭಾಷಾಂತರ ಒಂದು ಭಾಷೆಯ ಕೃತಿಯನ್ನು ಇನ್ನೊಂದು ಭಾಷೆಗೆ ಅನುವಾದ ಮಾಡುವುದಾಗಿದೆ.

| | | | | | | |
|---|---|---|---|---|---|---|
| **ಉದಾ :** | ನಿಧಾನ | – | Slow | ಜಲಪಾತ | – | Water falls |
| | ಮೃದು | – | Soft | ಆತ್ಮವಿಶ್ವಾಸ | – | Self confidance |
| | ಸಿಹಿ | – | Sweet | ಸಹಕಾರ | – | Co-operation |
| | ನಗು | – | Smile | ನಾಯಕತ್ವ | – | Leadership |
| | ಸಂಸ್ಕೃತಿ | – | Culture | ಬಿರುಗಾಳಿ | – | Tempest |


ಹೊಸ ವರ್ಷದ ಶುಭಾಶಯಗಳು.
Happy New Year
ದಿನಾಲು ಸ್ವಚ್ಛವಾದ ಬಟ್ಟೆಗಳನ್ನು ಧರಿಸಬೇಕು.
Wear Clean Clothes every day.
ದಯಮಾಡಿ ನನಗೆ ನಿಮ್ಮ ಹೆಸರು ಮತ್ತು ವಿಳಾಸ ಹೇಳಿರಿ.
Please tell me your name and address.
ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ.
Don't steal Don't kill Don`t tell lie











































- पाठ्यपुस्तक मंडळाची वैशिष्ट्यपूर्ण पाठ्येत्तर प्रकाशने.
- नामवंत लेखक, कवी, विचारवंत यांच्या साहित्याचा समावेश.
- शालेय स्तरावर पूरक वाचनासाठी उपयुक्त.

पुस्तक मागणीसाठी www.ebalbharati.in, www.balbharati.in संकेत स्थळावर भेट द्या.

**साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.**

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५




ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

कन्नड युवकभारती इयत्ता ११ वी

₹ 98.00